ಭಾನುವಾರ, ಆಗಸ್ಟ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 228 | ಪುಟ 20
www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತಾನ್ಯಾಗೆ ಕಿರೀಟ
ಕರ್ನಾಟಕದ ತಾನ್ಯಾ ಹೇಮಂತ್ ಅವರು ಉತ್ತರ ಮರಿಯಾನಾದಲ್ಲಿ ನಡೆದ ಸೈಪಾನ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು

ಮುದ್ದು ಕೃಷ್ಣ
ಗೋಕುಲಾಷ್ಟಮಿ ಅಂಗವಾಗಿ ರಾಯಚೂರಿನಲ್ಲಿ ಶನಿವಾರ ಮಗುವೊಂದು ಕೃಷ್ಣನ ವೇಷ ಧರಿಸಿ ಸಂಭ್ರಮಿಸಿತು

ಮುಂಚೂಣಿಯಲ್ಲಿ ಥಾವರಚಂದ್ ಗೆಹಲೋತ್? 7 | ಧರ್ಮಸ್ಥಳ: ದೂರುದಾರನ ವಿಚಾರಣೆ 5

ಬಿಆರ್‌ಟಿಗೆ ಒತ್ತುವರಿ ಸಂಕಟ

ಅರಣ್ಯ ಒತ್ತುವರಿ ; ಸುತ್ತೂರು ಮಠ, ರಾಮಕೃಷ್ಣ ಆಶ್ರಮಕ್ಕೂ ನೋಟಿಸ್

• ಬಾಲಚಂದ್ರ ಎಚ್.

ಚಾಮರಾಜನಗರ: ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅರಣ್ಯ ಭೂಮಿ ಅತಿಕ್ರಮಣ ತೆರವಿಗೆ ಹಲವು ದಶಕಗಳ ನಂತರ ಮುಂದಾಗಿರುವ ಅರಣ್ಯ ಇಲಾಖೆಯು ಪ್ರಮುಖ ಧಾರ್ಮಿಕ ಸಂಸ್ಥೆಗಳು, ಉದ್ಯಮಿಗಳು ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ಒತ್ತುವರಿ ತೆರವು ನೋಟಿಸ್ ಅಸ್ತ್ರ ಪ್ರಯೋಗಿಸಿದೆ. ಈ ಕ್ರಮವು ಮಳೆಗಾಲದ ತಣ್ಣನೆಯ ವಾತಾವರಣದಲ್ಲೂ ಒತ್ತುವರಿದಾರರು ಹಾಗೂ ಆಡಳಿತವರ್ಗದವರಿಗೆ 'ಬಿಸಿ' ಮುಟ್ಟಿಸಿದೆ.

ಒಳನೋಟ

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 34 (ಎ) ಉಲ್ಲಂಘನೆ ಮಾಡಿದ ಆರೋಪದ ಮೇಲೆ ಯಳಂದೂರು ವನ್ಯಜೀವಿ ವಿಭಾಗದ ಅಧಿಕಾರಿಗಳು ಒತ್ತುವರಿ ತೆರವು ನೋಟಿಸ್ ನೀಡಿದ್ದು, ಕೆಲವೆಡೆ ಒತ್ತುವರಿ ತೆರವು ಕಾರ್ಯಾಚರಣೆಯೂ ಆರಂಭವಾಗಿದೆ. ಇದರ ಬೆನ್ನಲ್ಲೇ ಹುಲಿಗಳ ಆವಾಸಸ್ಥಾನದೊಳಗೆ ನಿಯಮ ಬಾಹಿರವಾಗಿ ರೆಸಾರ್ಟ್, ಹೋಂ ಸ್ಟೇ ಸಹಿತ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವವರು ಕಾನೂನು ಕ್ರಮ ಎದುರಿಸುವ ಸನ್ನಿವೇಶ ನಿರ್ಮಾಣವಾಗಿದೆ.

ಬಿಆರ್‌ಟಿ ಮೀಸಲು ಅರಣ್ಯ ವ್ಯಾಪ್ತಿಗೊಳಪಡುವ ಸರ್ವೆ ನಂಬರ್ 2 ಹಾಗೂ 3ರಲ್ಲಿ ಇರುವ 35 ಎಕರೆ 6 ಗುಂಟೆ ಅರಣ್ಯ ಭೂಮಿಯ ಪೈಕಿ 13 ಎಕರೆಗೂ ಹೆಚ್ಚು ಒತ್ತುವರಿ ಆರೋಪದ ಹಿನ್ನೆಲೆಯಲ್ಲಿ ಮೈಸೂರಿನ ಸುತ್ತೂರು ಮಠ, ರಾಮಕೃಷ್ಣ ಆಶ್ರಮ ಮತ್ತು ಉದ್ಯಮಿಗಳಾದ ವೆಂಕಟಸತ್ಯ ಸುಬ್ರಹ್ಮಣ್ಯ ಗುಪ್ತ ಹಾಗೂ ಎಂ.ಪಿ.ಶ್ಯಾಮ್, ಡಿ.ವಿ.ಆರ್ಮ್‌ಸ್ಟ್ರಾಂಗ್, ಆರ್.ವಿಜಯಲಕ್ಷ್ಮಿ, ತುಳಸಮ್ಮ ಸೇರಿದಂತೆ ಹಲವರಿಗೆ ನೋಟಿಸ್ ನೀಡಲಾಗಿದೆ.

ಬಿಆರ್‌ಟಿ ಅರಣ್ಯದೊಳಗೆ ಅರಣ್ಯ ಭೂಮಿ ಒತ್ತುವರಿ, ಅನರ್ಹರಿಗೆ ವಿವಿಧ ಯೋಜನೆ ಅಡಿ ಕಂದಾಯ ಭೂಮಿ ಹಂಚಿಕೆ, ನಿಯಮಬಾಹಿರವಾಗಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಬಿಳಿಗಿರಿರಂಗನ ಬೆಟ್ಟದ ಸ್ಥಳೀಯರು ನೀಡಿದ ದೂರಿನ ಮೇಲೆ, ಜಂಟಿ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ 2018ರ ಮಾರ್ಚ್ 8ರಂದು, ಅಂದರೆ ಎಂಟು ವರ್ಷಗಳ ಹಿಂದೆ ಅಂದಿನ ಉಪ ಲೋಕಾಯುಕ್ತ ಸುಭಾಶ್ ಬಿ.ಅಡಿ ನೀಡಿದ್ದ ಆದೇಶದಂತೆ ಜಂಟಿ ಸರ್ವೆ ನಡೆಸಿ ಒತ್ತುವರಿಯಾದ ಭೂಮಿಯನ್ನು ಗುರುತಿಸಿರುವ ಅರಣ್ಯ ಇಲಾಖೆ ತೆರವು ಕಾರ್ಯಾಚರಣೆ ನಡೆಸುತ್ತಿದೆ.

'ಬಿಆರ್‌ಟಿ ಅರಣ್ಯದೊಳಗೆ ಒತ್ತುವರಿ ತೆರವುಗೊಳಿಸಬೇಕು, ಅರಣ್ಯ ಹಾಗೂ ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸಿ ನಿಯಮಬಾಹಿರವಾಗಿ ಹಂಚಿಕೆ ಮಾಡಿರುವ ಅರಣ್ಯ ಭೂಮಿಯನ್ನು ಪತ್ತೆಹಚ್ಚಬೇಕು, ರೆಸಾರ್ಟ್‌ಗಳ ನಿರ್ಮಾಣಕ್ಕೆ ತಡೆ ಒಡ್ಡಬೇಕು' ಎಂದು 2018ರ ಫೆ.27ರಂದು ಉಪ ಲೋಕಾಯುಕ್ತರು ಸೂಚನೆ ನೀಡಿದ್ದರು.

▶6

ಬಿಆರ್‌ಟಿ ಅರಣ್ಯದೊಳಗೆ ಈಚೆಗೆ ನಡೆದ ಒತ್ತುವರಿ ತೆರವು ಕಾರ್ಯಾಚರಣೆ

ಯಾವ ಸರ್ವೆ ನಂಬರ್: ಎಷ್ಟು ಒತ್ತುವರಿ?

ಬಿಆರ್‌ಟಿ ಅರಣ್ಯದ ಸರ್ವೆ ನಂಬರ್ 1, 2 ಹಾಗೂ 3ರಲ್ಲಿರುವ ಜಮೀನಿನ ಜಂಟಿ ಸರ್ವೆ ಅ.1, 2021ರಲ್ಲಿ ಹಾಗೂ ಸರ್ವೆ ನಂಬರ್ 4ರಲ್ಲಿರುವ ಭೂಮಿಯ ಸರ್ವೆ 6 ತಿಂಗಳ ಹಿಂದೆ ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ನಡೆದಿದೆ. ಸರ್ವೆ ನಂಬರ್ 1ರಲ್ಲಿರುವ 5.20 ಎಕರೆ ಜಮೀನು ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸೇರಿದ್ದು, ಅದರಲ್ಲಿ 1.33 ಎಕರೆ ಒತ್ತುವರಿಯಾಗಿದೆ. ಸರ್ವೆ ನಂ 2ರಲ್ಲಿ ಮೀಸಲು ಅರಣ್ಯಕ್ಕೆ ಸೇರಿರುವ 21.36 ಎಕರೆಯ ಪೈಕಿ 4.8 ಎಕರೆ ಒತ್ತುವರಿಯಾಗಿದೆ. ಸರ್ವೆ ನಂಬರ್ 3ರಲ್ಲಿ 13.10 ಎಕರೆ ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ 6.25 ಎಕರೆ ಒತ್ತುವರಿಯಾಗಿದೆ. ಸರ್ವೆ ನಂಬರ್ 4ರಲ್ಲಿ ಎಷ್ಟು ಪ್ರಮಾಣದ ಭೂಮಿ ಒತ್ತುವರಿಯಾಗಿದೆ ಎಂಬ ಮಾಹಿತಿ ಜಂಟಿ ಸರ್ವೆಯ ವರದಿಯಲ್ಲಿದೆ. ಇದು ಇನ್ನೂ ಜಿಲ್ಲಾಧಿಕಾರಿಯಿಂದ ಅಂಗೀಕಾರವಾಗಿಲ್ಲ.

> **ಬಿಆರ್‌ಟಿಯ ಸರ್ವೆ ನಂಬರ್ 4ರಲ್ಲಿ ಅರಣ್ಯ-ಕಂದಾಯ ಇಲಾಖೆ ಅಧಿಕಾರಿಗಳು ನಡೆಸಿದ ಜಂಟಿ ಸರ್ವೆ ವರದಿಯನ್ನು ಪರಿಶೀಲಿಸಲಾಗುತ್ತಿದೆ. ಆದಿವಾಸಿಗಳಿಗೆ ತೊಂದರೆಯಾಗದಂತೆ ಅನುಷ್ಠಾನಗೊಳಿಸಲಾಗುವುದು.**
> **ಸಿ.ಟಿ.ಶಿಲ್ಪಾನಾಗ್,** ಜಿಲ್ಲಾಧಿಕಾರಿ

ಐವರ ಸಜೀವದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ನಗರ್ತಪೇಟೆಯ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಶನಿವಾರ ಮುಂಜಾನೆ ಸಂಭವಿಸಿದ ಅಗ್ನಿ ದುರಂತದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿ ಐವರು ಸಜೀವ ದಹನವಾಗಿದ್ದಾರೆ.

ರಾಜಸ್ಥಾನದ ಮದನ್ ಕುಮಾರ್ (36), ಅವರ ಪತ್ನಿ ಸಂಗೀತಾ (33), ಅವರ ಮಕ್ಕಳಾದ ಮಿಥೇಶ್ (8), ವಿಹಾನ್ (5) ಮತ್ತು ಕಾರ್ಮಿಕ ಸುರೇಶ್ (30) ಅವರು ಮೃತಪಟ್ಟವರು.

ಮುಂಜಾನೆ 3.30ರ ಸುಮಾರಿಗೆ ನೆಲ ಅಂತಸ್ತಿನಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲಿ ವ್ಯಾಪಿಸಿತ್ತು. ಎರಡು ಹಾಗೂ ನಾಲ್ಕನೇ ಮಹಡಿಯಲ್ಲಿದ್ದ 17 ಮಂದಿ ಬೇರೊಂದು ಕಟ್ಟಡಕ್ಕೆ ಜಿಗಿದು ಪಾರಾಗಿದ್ದಾರೆ.

ನೆಲ ಅಂತಸ್ತಿನಲ್ಲಿ ಫ್ಲೋರ್ ಮ್ಯಾಟ್, ಬಟ್ಟೆ ಹಾಗೂ ಪ್ಲಾಸ್ಟಿಕ್ ತುಂಬಿದ್ದ ಮಳಿಗೆಯಲ್ಲಿ ಕಾಣಿಸಿಕೊಂಡ ಬೆಂಕಿ ಬೇಗನೇ ಇಡೀ ಕಟ್ಟಡಕ್ಕೆ ವ್ಯಾಪಿಸಿತು. 12 ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿ ಮೃತದೇಹಗಳನ್ನು ಹೊರಕ್ಕೆ ತರಲಾಯಿತು ಎಂದು ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ತಿಳಿಸಿದರು.

'ಗೋದಾಮಿಗೆ ಪರವಾನಗಿ ಪಡೆದುಕೊಳ್ಳಲಾಗಿತ್ತೇ ಇಲ್ಲವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಅವೈಜ್ಞಾನಿಕ ವಿನ್ಯಾಸದಲ್ಲಿ ಕಟ್ಟಡ ನಿರ್ಮಿಸಿರುವುದು ಕಂಡುಬಂದಿದೆ. ಸಂಬಂಧಿಸಿದವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಇನ್ನೊಂದು ಸುದ್ದಿ ▶5E

ಚಂದ್ರಶೇಖರನಾಥ ಸ್ವಾಮೀಜಿ ನಿಧನ

ಪ್ರಜಾವಾಣಿ ವಾರ್ತೆ



ಕೆಂಗೇರಿ (ಬೆಂಗಳೂರು): ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಸಂಸ್ಥಾಪಕ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ (81) ಅವರು ಕೆಂಗೇರಿ ಮಠದಲ್ಲಿ ಶುಕ್ರವಾರ ಮಧ್ಯರಾತ್ರಿ ನಿಧನರಾದರು.

2021ರಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಚಂದ್ರಶೇಖರನಾಥ ಸ್ವಾಮೀಜಿ, ಇತ್ತೀಚೆಗೆ ಚೇತರಿಸಿಕೊಂಡು, ಆಸ್ಪತ್ರೆಯಿಂದ ಮಠಕ್ಕೆ ಬಂದಿದ್ದರು.

ಮಠದ ಉತ್ತರಾಧಿಕಾರಿ ನಿಶ್ಚಲಾನಂದನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಕೆಂಗೇರಿಯಲ್ಲಿರುವ ಮಠದ ಆವರಣದಲ್ಲಿ ನಾಥ ಸಂಪ್ರದಾಯದಂತೆ ಚಂದ್ರಶೇಖರನಾಥ ಸ್ವಾಮೀಜಿಯವರ ಅಂತ್ಯಸಂಸ್ಕಾರ ಶನಿವಾರ ಸಂಜೆ ನೆರವೇರಿತು.

2003ರಲ್ಲಿ ಒಕ್ಕಲಿಗರ ಪರ್ಯಾಯ ಮಠವಾಗಿ ರೂಪುಗೊಂಡ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಗುರುಜ್ಞಾನ ಕೇಂದ್ರ ಟ್ರಸ್ಟ್ ಮೂಲಕ ಬಡ, ದಲಿತ ವಿದ್ಯಾರ್ಥಿಗಳಿಗೆ ಶಿಕ್ಷಣ, ಅನ್ನ ದಾಸೋಹ ಕಾಯಕ ನಡೆಸುತ್ತಿದ್ದರು. ಮಠದ ಮೂಲಕ ವೈದ್ಯಕೀಯ ಮಹಾವಿದ್ಯಾಲಯ ತೆರೆಯುವ ಆಸೆ ಹೊಂದಿದ್ದರು.

▶7

ಯುದ್ಧ ಸ್ಥಗಿತ: ನಿರ್ಧಾರಕ್ಕೆ ಬಾರದ ಟ್ರಂಪ್–ಪುಟಿನ್

ವ್ಲಾದಿಮಿರ್ ಪುಟಿನ್ ಮತ್ತು ಟ್ರಂಪ್

ಅಲಾಸ್ಕ (ಎಪಿ): ಉಕ್ರೇನ್–ರಷ್ಯಾ ಯುದ್ಧವನ್ನು ಅಂತ್ಯಗೊಳಿಸುವ ಸಲುವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಡುವೆ ನಡೆದ ಸಭೆಯಲ್ಲಿ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. 'ಒಮ್ಮತಕ್ಕೆ ಬಾರದ ಹೊರತು ಯಾವುದೇ ಒಪ್ಪಂದ ಮಾಡಿಕೊಳ್ಳುವುದು ಸಾಧ್ಯವಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

'ಉಕ್ರೇನ್ ವಿಚಾರದಲ್ಲಿ ನಮ್ಮ ಮಧ್ಯೆ ಕೆಲವು ವಿಚಾರಗಳಲ್ಲಿ ಸಹಮತ ಮೂಡಿದೆ. ಆದರೆ, ಇದನ್ನು ಐರೋಪ್ಯ ದೇಶಗಳು ಹಾಳು ಮಾಡಬಾರದು' ಎಂದು ಪುಟಿನ್ ಪ್ರತಿಕ್ರಿಯಿಸಿದ್ದಾರೆ. 'ಸೋಮವಾರ ತಮ್ಮನ್ನು ಭೇಟಿಯಾಗುವಂತೆ ಟ್ರಂಪ್ ಆಹ್ವಾನ ನೀಡಿದ್ದಾರೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

▶8

ಚಿನಕುರುಳಿ ಪ್ರಕಾಶ್ ಶೆಟ್ಟಿ



SHAMANUR EDUCATION TRUST ®

SMT. PUSHPA SHAMANUR MAHALINGAPPA

PU Science College, Davangere & Bathi (Separate Boys & Girls Campus)

23 years of Excellence

SPSM'S Sensational Success Result Continuously in NEET

NEET - 2025 RESULT

1st College — PREKSHA M — 607/720

2 — SACHIN K — 601/720

3 — AKSHAY M — 595/720

NEET - 2024 RESULT

OMKAR — 675

CHANNABASAVA — NEET MARKS 650

NEHA R S — NEET MARKS 632

BHAVANA 593	MD. MATIN 590	KRUTHIKA K G 581	HARSHINI P 574	KARIBASAPPA G 564	SHIVARAJ R R 557	DEEPAK 555	PRUTHVI HOMBALE 548	JEEVAN M 547	BHARATH 544
AMRUTHRAJ 541	ARPITHA 541	REKHA V P 538	POOJA B G 531	CHIRAG J 525	ANAND 513	VIVEK B G 512	SANGAMESH 511	GOWRI 510	BHAGYASHREE PATIL 509
ABHILASH 508	GAGAN M R 508	PALLAVI R 505	PRAJWAL HIREMATH 503	RAJU 495	DARSHAN 495	DHRUVA 494	CHANNAVEERAIAH 490	PALLAVI T N 488	VEDANT PATIL 486
MADHUPRIYA 484	PRUTHVI YALLATTI 480	RAKSHITHA K R 477	BORAMMA 477	SIDDESH G S 473	YASHWANTH Y 467	KAVANA H V 465	TEJASWINI P 463	LOHITH M D 457	VAISHNAVI P 449
POOJA K 448	ARUN KUMAR M 446	CHINMAY H S 442	AFTAB S 442	VIKAS J B 439	CHIRANTHAN K R 438	MAMATHA 433	RAVISHANKAR M V 430	SINCHANA 429	SINCHANA N 429
RAJESHWARI 425	NISCHITHA J PATIL 424	MANOJ 424	VAISHNAVI T 414	DHANUSH Y 413	DARSHAN T G 412	MAHESH K 410	SAMARTH N H 401	MD AKMAL ZAKI 400	MANY MORE....

Admissions open for NEET LONG TERM - 2026

Special offer for NEET LONG - TERM Students for the Academic Year 2025-2026

Marks	Coaching Fee	Hostel Fee	NEET Score
400+	Free	Free	720/720
350+	Free	Applicable	50 Lakhs Cash Rewards

400+ Marks 100% Scholarship Including Hostel

#5335, 1st Main, Swami Vivekananda Badavane, Near BIET College, Davangere - 577004 / Bathi

Mob: 8296315876 / 9035289011/ 9035289012 / 8970068800

‘ಮುರ್ಮುಗೂ ದೇಗುಲ ಪ್ರವೇಶ ನಿರ್ಬಂಧ’

‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಕಾಳೇಗೌಡ ನಾಗವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂ ಧರ್ಮದಲ್ಲಿ ಈಗಲೂ ಜಾತಿ–ಲಿಂಗ ಭೇದವಿದೆ. ದಲಿತ ಮಹಿಳೆ ಎಂಬ ಕಾರಣಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೂ ಕೆಲ ದೇವಸ್ಥಾನಗಳಲ್ಲಿ ಪ್ರವೇಶಕ್ಕೆ ಅವಕಾಶ ನೀಡುತ್ತಿಲ್ಲ’ ಎಂದು ಸಾಹಿತಿ ಕಾಳೇಗೌಡ ನಾಗವಾರ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಮಾತನಾಡಿದರು.

ದೇವಸ್ಥಾನಗಳಲ್ಲಿ ವಿಧಿಸಲಾಗುತ್ತಿರುವ ನಿರ್ಬಂಧಗಳ ಬಗ್ಗೆ ಪ್ರಸ್ತಾಪಿಸಿದ ಅವರು, ‘ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದರೂ, ಅವರು ಪಾರ್ಸಿ ಹಾಗೂ ವಿಧವೆ ಎಂಬ ಕಾರಣಕ್ಕೆ ದೇವಸ್ಥಾನದೊಳಗೆ ಸೇರಿಸಿಕೊಳ್ಳಲಿಲ್ಲ. ಹಿಂದೂ ದೇವಾಲಯಗಳ ಪ್ರವೇಶದ ವೇಳೆ ರಾಜೀವ್ ಗಾಂಧಿ ಅವರಿಗೂ ಇದೇ ಅನುಭವವಾಗಿತ್ತು’ ಎಂದರು.

‘ಅಮೆರಿಕದ ಮಹಿಳೆಯೊಬ್ಬರು ಉಡುಪಿಯ ಪ್ರಾಧ್ಯಾಪಕರನ್ನು ವಿವಾಹವಾಗಿದ್ದರು. ಆ ಮಹಿಳೆ ಹಿಂದೂ ಧರ್ಮದ ಮೇಲೆ ಪ್ರೀತಿ ಹಾಗೂ ಗೌರವ ಹೊಂದಿದ್ದರು. ಒಡಿಶಾದ ಲಿಂಗರಾಜ ದೇವಸ್ಥಾನ ನೋಡಲು ತೆರಳಿದ್ದ ಅವರು, ಭಾರತೀಯ ನಾರಿಯಂತೆ ಉಡುಪು ಧರಿಸಿದ್ದರು. ಅವರನ್ನು ದೇವಸ್ಥಾನದ ಪ್ರವೇಶ ದ್ವಾರದಲ್ಲಿಯೇ ತಡೆಯಲಾಯಿತು. ಇದಕ್ಕೆ ಕಾರಣ ಅವರ ಬಣ್ಣ ಮತ್ತು ಧರ್ಮ. ಪುರೋಹಿತರಿಗೆ ಎಷ್ಟೇ ಮನವರಿಕೆ ಮಾಡಿಸಿದರೂ ಅವರು ಪ್ರವೇಶಕ್ಕೆ ಅವಕಾಶ ನೀಡಲಿಲ್ಲ’ ಎಂದು ಸ್ಮರಿಸಿಕೊಂಡರು.

ತಮ್ಮ ವಿವಾಹದ ಬಗ್ಗೆ ಪ್ರಸ್ತಾಪಿಸಿದ ಅವರು, ‘ನನ್ನ ಮದುವೆ ಅತ್ಯಂತ ಸರಳವಾಗಿ ನಡೆಯಿತು. ದಲಿತ ವ್ಯಕ್ತಿಯೇ ನಮಗೆ ಪ್ರಮಾಣ ವಚನ ಬೋಧಿಸಿದರು. ಅದ್ದೂರಿ ವಿವಾಹವಾಗಿ ಸಾಲ ಮಾಡಿಕೊಳ್ಳಬಾರದು. ಅದೇ ಹಣವನ್ನು ಶಿಕ್ಷಣ, ಆರೋಗ್ಯ ಸೇರಿದಂತೆ ಅಗತ್ಯಗಳಿಗೆ ಬಳಕೆ ಮಾಡಿಕೊಳ್ಳಬೇಕು’ ಎಂದು ಅವರು ಹೇಳಿದರು.

ಇದಕ್ಕೂ ಮೊದಲು ಪ್ರಾಸ್ತಾವಿಕ ಮಾತುಗಳನ್ನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಗಾಯಿತ್ರಿ ಕೆ.ಎಂ., ಸ್ನಾತಕೋತ್ತರ ಪದವಿಯಲ್ಲಿ ಕಾಳೇಗೌಡ ನಾಗವಾರ ಅವರು ತಮಗೆ ಪ್ರಾಧ್ಯಾಪಕರಾಗಿದ್ದರು ಎಂದು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಕಾಳೇಗೌಡ ನಾಗವಾರ ಅವರನ್ನು ಕೆ.ಎಂ. ಗಾಯಿತ್ರಿ ಗೌರವಿಸಿದರು ಪ್ರಜಾವಾಣಿ ಚಿತ್ರ

‘ಡಿಕೆಶಿ, ಜಾರ್ಜ್ ಮುನಿಸು’

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಬಗ್ಗೆ ಪ್ರಸ್ತಾಪಿಸಿದ ಕಾಳೇಗೌಡ ನಾಗವಾರ, ‘ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ, ಉಮಾಶ್ರೀ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ನಾನು ಕೂಡ ಇದ್ದೆ. ಹಿರಿತನ ಮತ್ತು ಅರ್ಹತೆ ಪರಿಗಣಿಸಿ ಸಾಧಕರನ್ನು ಆಯ್ಕೆ ಮಾಡುವಂತೆ ಸಿದ್ದರಾಮಯ್ಯ ಸೂಚನೆ ನೀಡಿದ್ದರು. ಆ ವೇಳೆ, ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಮತ್ತು ಕೆ.ಜೆ. ಜಾರ್ಜ್ ಅವರು ತಾವು ಶಿಫಾರಸು ಮಾಡಿದ್ದ ಹೆಸರನ್ನು ಪರಿಗಣಿಸಿಲ್ಲವೆಂದು ಮುನಿಸಿಕೊಂಡಿದ್ದರು. ಆಯ್ಕೆಗೆ ಅನುಸರಿಸಿದ ಮಾನದಂಡಗಳ ಬಗ್ಗೆ ವಿವರಿಸಲಾಯಿತು’ ಎಂದು ಸ್ಮರಿಸಿಕೊಂಡರು.

6 ವಲಯಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು

ವಿವಿಧೆಡೆ ಸಾಮೂಹಿಕ ಸ್ವಚ್ಛತಾ ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರ ಸೂಚನೆಯಂತೆ, ‘ಸ್ವಚ್ಛ ಬೆಂಗಳೂರಿಗೆ ಸಾಮೂಹಿಕ ಸ್ವಚ್ಛತಾ ಕಾರ್ಯ’ವನ್ನು ನಗರದ ಆರು ವಲಯಗಳಲ್ಲಿ ಶನಿವಾರ ನಡೆಸಲಾಯಿತು.

ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳ ನೇತೃತ್ವದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಯಿತು. ಜೆಸಿಬಿ, ಟ್ರ್ಯಾಕ್ಟರ್ ಹಾಗೂ ಸಿಬ್ಬಂದಿ ನಿಯೋಜನೆ ಮಾಡಿಕೊಂಡು, ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪೂರ್ವ ವಲಯ: ರಸ್ತೆ ಮಾರ್ಗದಲ್ಲಿ ಹಾಳಾಗಿರುವ ಸ್ಲ್ಯಾಬ್‌ಗಳನ್ನು ಮರು ಅಳವಡಿಕೆ ಮಾಡಲಾಯಿತು. ತ್ಯಾಜ್ಯ, ಪಾದಚಾರಿ ಮಾರ್ಗದಲ್ಲಿ ಅಡ್ಡಲಾಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲಾಯಿತು. ಹೊಸೂರು ಮುಖ್ಯರಸ್ತೆ ಆನೆಪಾಳ್ಯ ಜಂಕ್ಷನ್‌ನಿಂದ ರೆಸಿಡೆನ್ಸಿ ರಸ್ತೆಯವರೆಗೆ ಎರಡೂ ಬದಿ ಸೇರಿದಂತೆ 4.4 ಕಿ.ಮೀ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಸರ್ವಜ್ಞನಗರ ವಿಭಾಗದ ಕಮ್ಮನಹಳ್ಳಿ ಮುಖ್ಯರಸ್ತೆ, ಕಮ್ಮನಹಳ್ಳಿ ಮುಖ್ಯ ರಸ್ತೆ, ಸುಬ್ಬಯ್ಯ ಪಾಳ್ಯದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಗಿದೆ.

ಪಶ್ಚಿಮ ವಲಯ: ರಾಜಾಜಿನಗರದ ಎರಡನೇ ಹಾಗೂ ಮೂರನೇ ಅಡ್ಡರಸ್ತೆ, ತಿಮ್ಮಯ್ಯ ರಸ್ತೆಯಲ್ಲಿನ ಪಾದಚಾರಿ ಮಾರ್ಗದಲ್ಲಿನ ಅಡೆತಡೆಗಳನ್ನು ತೆರವುಗೊಳಿಸಲಾಯಿತು. ರಾಜಾಜಿನಗರದ ವಾರ್ಡ್ 106ರ ಕೈಗಾರಿಕೆ ಪ್ರದೇಶ, ವಾರ್ಡ್ 47ರ ನಂದಿನಿ ಲೇಔಟ್, ಮಲ್ಲೇಶ್ವರ ವಿಭಾಗದ ವಾರ್ಡ್ 45 ಹಾಗೂ 65ರ ಪ್ರದೇಶದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.

ದಕ್ಷಿಣ ವಲಯ: ವಿಜಯನಗರ ವಿಭಾಗದ ದೀಪಾಂಜಲಿ ನಗರ, ಮಡಿವಾಳ ಮಾರುಕಟ್ಟೆ ರಸ್ತೆ ಪ್ರದೇಶದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು. ಕೆಂಪಾಂಬುಧಿ ಕೆರೆ ಹಾಗೂ ಜಯನಗರ 9ನೇ ಬ್ಲಾಕ್ ರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿ, ನಾಮಫಲಕಗಳನ್ನು ತೆರವುಗೊಳಿಸಲಾಯಿತು.

ಯಲಹಂಕ ವಲಯ: ಥಣಿಸಂದ್ರ ಮುಖ್ಯರಸ್ತೆ, ರಮಣಶ್ರೀ ಕ್ಯಾಲಿಫೋರ್ನಿಯ ರೆಸಾರ್ಟ್‌ನಿಂದ ಅಟ್ಟೂರು, ಅನಂತಪುರ ಮುಖ್ಯರಸ್ತೆ ವರೆಗೆ ಹಾಗೂ ಜಕ್ಕೂರು ಲೇಔಟ್ ಪ್ರದೇಶದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಕೋಪ್ಟಾ ಕಾಯ್ದೆ ಉಲ್ಲಂಘನೆ, ಪ್ಲಾಸ್ಟಿಕ್ ಮರು ಬಳಕೆ ಕುರಿತಂತೆ ಮಳಿಗೆಗಳನ್ನು ಪರಿಶೀಲನೆ ನಡೆಸಲಾಯಿತು.

ರಾಜರಾಜೇಶ್ವರಿನಗರ ವಲಯ: ಕೆಂಗೇರಿ ವಿಭಾಗದ ಕೆಂಗೇರಿ ಬಸ್ ನಿಲ್ದಾಣ, ಮೈಸೂರು ರಸ್ತೆಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಿ, ಕೆಂಗೇರಿ ಕೆರೆಯ ಬಳಿಯ ಪಾದಚಾರಿ ಮಾರ್ಗದ ಪಕ್ಕದಲ್ಲಿ ಸಸಿಗಳನ್ನು ನೆಡಲಾಯಿತು.

ಬೊಮ್ಮನಹಳ್ಳಿ ವಲಯ: ಬೇಗೂರಿನ ಮೈಕೋ ಲೇಔಟ್‌ನಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ಕೈಗೊಂಡು ರಸ್ತೆ ಬದಿಯಿರುವ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಅಶೋಕನಗರದಲ್ಲಿ ಪಾದಚಾರಿ ಮಾರ್ಗವನ್ನು ಬಿಬಿಎಂಪಿ ಸಿಬ್ಬಂದಿ ಸ್ವಚ್ಛಗೊಳಿಸಿದರು

‘ನೋಂದಣಿ ವಿವರ ಸಲ್ಲಿಸದೆ ತೆರಿಗೆ ವಂಚನೆಗೆ ದಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘₹30 ಲಕ್ಷ ಹೆಚ್ಚಿನ ಮೌಲ್ಯದ ಆಸ್ತಿಗಳ ನೋಂದಣಿ ಪ್ರಕರಣಗಳಲ್ಲಿ ಖರೀದಿದಾರರು ಮತ್ತು ಮಾರಾಟಗಾರರ ವಿವರಗಳನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿದ್ದರೂ, ರಾಜ್ಯದ 33 ಉಪ ನೋಂದಣಾಧಿಕಾರಿಗಳು ವರದಿ ಸಲ್ಲಿಸುತ್ತಿಲ್ಲ. ತೆರಿಗೆ ತಪ್ಪಿಸಲು ಇದು ದಾರಿಮಾಡಿಕೊಡುತ್ತಿದೆ’ ಎಂದು ಆದಾಯ ತೆರಿಗೆ ಇಲಾಖೆಯು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದೆ.

ತೆರಿಗೆ ವ್ಯಾಪ್ತಿಯನ್ನು ಹೆಚ್ಚಿಸಲು ಮತ್ತು ಆದಾಯ ತೆರಿಗೆ ಪಾವತಿದಾರರ, ತೆರಿಗೆ ವಿವರಗಳನ್ನು ಪರಿಶೀಲಿಸಲು ಆದಾಯ ತೆರಿಗೆ ಇಲಾಖೆಯು ಈ ಕ್ರಮವನ್ನು ಜಾರಿಗೆ ತಂದಿತ್ತು. ಈ ಪ್ರಕಾರ ಪ್ರತಿ ಉಪ ನೋಂದಣಾಧಿಕಾರಿಗಳೂ ತಮ್ಮ ವ್ಯಾಪ್ತಿಯಲ್ಲಿ ನೋಂದಣಿಯಾಗುವ ಆಸ್ತಿಗಳ ಮೌಲ್ಯ ₹30 ಲಕ್ಷ ದಾಟಿದರೆ, ಅದರ ವಿವರವನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಿತ್ತು.

ರಾಜ್ಯದ ಕೆಲ ಉಪ ನೋಂದಣಾಧಿಕಾರಿಗಳು ಈ ವಿವರ ಸಲ್ಲಿಸದೇ ಇರುವ ಬಗ್ಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದಾಯ ತೆರಿಗೆ ಇಲಾಖೆ ಈ ಹಿಂದೆಯೂ ಪತ್ರ ಬರೆದಿತ್ತು.

ಈಗ ಮತ್ತೆ ಪತ್ರ ಬರೆದಿರುವ ಇಲಾಖೆ, ಉಪ ನೋಂದಣಾಧಿಕಾರಿಗಳ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಬೆಂಗಳೂರು ನಗರ ವ್ಯಾಪ್ತಿಯ ರಾಜಾಜಿನಗರ, ಬ್ಯಾಟರಾಯನಪುರ, ಬಸವನಗುಡಿ, ಗಾಂಧಿನಗರ, ಯಲಹಂಕ, ಜೆ.ಪಿ. ನಗರ, ಮಹದೇವಪುರ, ಹೆಬ್ಬಾಳ, ಬನಶಂಕರಿ, ನಾಗರಬಾವಿ ಉಪ ನೋಂದಣಾಧಿಕಾರಿಗಳನ್ನು ಇಲಾಖೆಯು ಪತ್ರದಲ್ಲಿ ಉಲ್ಲೇಖಿಸಿದೆ. ಜತೆಗೆ ಇತರ ಜಿಲ್ಲೆಗಳ ಗುಬ್ಬಿ, ಪಾವಗಡ, ಮಧುಗಿರಿ, ಸೋಮವಾರಪೇಟೆ, ನೆಲಮಂಗಲ, ಚಿಕ್ಕನಾಯಕನಹಳ್ಳಿ, ಚಿಂತಾಮಣಿ, ಮಾಲೂರು, ದೊಡ್ಡಬಳ್ಳಾಪುರ, ಮೈಸೂರು ದಕ್ಷಿಣ, ಮೈಸೂರು ಪೂರ್ವ, ಮುಳಬಾಗಿಲು, ಬಂಗಾರಪೇಟೆ, ಕುಶಾಲನಗರ, ತರೀಕೆರೆ, ಅತ್ತಿಬೆಲೆ ಉಪ ನೋಂದಣಾಧಿಕಾರಿಗಳು ಈ ವರದಿ ಸಲ್ಲಿಸಿಲ್ಲ ಎಂದು ಪತ್ರದಲ್ಲಿ ವಿವರಿಸಿದೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ : ಸವಾರ ಸ್ಥಳದಲ್ಲೇ ಸಾವು

ಆನೇಕಲ್: ತಾಲ್ಲೂಕಿನ ಚಂದಾಪುರ ಕೆರೆ ಸಮೀಪ ಶನಿವಾರ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹೀಲಲಿಗೆ ಜಯರಾಮರೆಡ್ಡಿ (58) ಮೃತರು. ಅವರು ಆರ್‌ಜೆಎಸ್ ಪಾಲಿಟೆಕ್ನಿಕ್‌ನಲ್ಲಿ ಕೆಲಸ ಮಾಡುತ್ತಿದ್ದು, ಶನಿವಾರ ಹೀಲಲಿಗೆಯಿಂದ ಚಂದಾಪುರದತ್ತ ಬರುವ ವೇಳೆ ಟಿಪ್ಪರ್ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಟಿಪ್ಪರ್ ಕೆಳಗೆ ಸಿಲುಕಿ ಅವರು ಮೃತಪಟ್ಟಿದ್ದಾರೆ. ಬೈಕ್ ನಜ್ಜುಗುಜ್ಜಾಗಿದೆ. ಸೂರ್ಯಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಫಾರಿ ವಾಹನ ಕ್ಯಾಮೆರಾ ಕಿಂಡಿಗೆ ಜಾಲರಿ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಸಫಾರಿ ವಾಹನಗಳ ಕ್ಯಾಮೆರಾ ಕಿಂಡಿಗೆ ಜಾಲರಿ ಅಳವಡಿಸಲಾಗಿದೆ.

ಶುಕ್ರವಾರ ಸಫಾರಿಗೆ ತೆರಳಿದ್ದ ಬಾಲಕನೊಬ್ಬನ ಕೈಯನ್ನು ಚಿರತೆ ಪರಚಿ ಗಾಯಗೊಳಿಸಿದ ಘಟನೆಯಿಂದ ಎಚ್ಚೆತ್ತುಕೊಂಡ ಸಿಬ್ಬಂದಿ ಎಸಿ ರಹಿತ 20 ವಾಹನಗಳ ಕಿಂಡಿಗಳಿಗೆ ಜಾಲರಿ ಅಳವಡಿಸಿದ್ದಾರೆ. ಈ ಬಗ್ಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಕೆಐಎಡಿಬಿ ವಿರುದ್ಧ ರೈತರು ಪ್ರತಿಭಟನೆ ನಡೆಸಿದರು

ಕೆಐಎಡಿಬಿ ದರ ನಿಗದಿ ಸಭೆಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ನೆಲಮಂಗಲ: ತಾಲ್ಲೂಕಿನ ಕೊಡಿಗೆಹಳ್ಳಿ, ಬಳ್ಳಗೆರೆ, ಕೆಂಚನಪುರ ಗ್ರಾಮಗಳ ಫಲವತ್ತಾದ ಕೃಷಿ ಜಮೀನುಗಳನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದನ್ನು ವಿರೋಧಿಸಿ ರೈತರು ಕೊಡಿಗೆಹಳ್ಳಿಯಲ್ಲಿ ಪ್ರತಿಭಟಿಸಿದರು.

‘ಸ್ವಾಧೀನಕ್ಕೆ ದರ ನಿಗದಿ ಮಾಡಲು ಕೆಐಎಡಿಬಿ ಕರೆದಿರುವ ಸಭೆಯನ್ನು ಬಹಿಷ್ಕರಿಸುತ್ತೇವೆ’ ಎಂದು ಪ್ರತಿಭಟನಕಾರರು ಒಕ್ಕೊರಲಿನಿಂದ ತೀರ್ಮಾನ ತೆಗೆದುಕೊಂಡರು.

‘ಈ ಪ್ರದೇಶದಲ್ಲಿ ಪ್ರಾಣಿ ಪಕ್ಷಿಗಳಿವೆ, ಕೆರೆ– ಕುಂಟೆಗಳಿವೆ, ಅರಣ್ಯ ಭೂಮಿ, ಫಲವತ್ತಾದ ಕೃಷಿ ಭೂಮಿ, ಹಿರಿಯರ ಸಮಾಧಿಗಳಿವೆ. ಗ್ರಾಮ ಸಭೆಯಲ್ಲಿ ರೈತರೊಂದಿಗೆ ಚರ್ಚೆ, ಸಮಾಲೋಚನೆ ನಡೆಸದೆ ಭೂ ಸ್ವಾಧೀನ ಮಾಡಲು ಮುಂದಾಗುವ ಮೂಲಕ ಸರ್ಕಾರವು ಜನರ ಹಕ್ಕನ್ನು ಕಸಿದುಕೊಳ್ಳುತ್ತಿದೆ’ ಎಂದು ಪ್ರಗತಿಪರ ರೈತ ಬಳ್ಳಗೆರೆ ರುದ್ರೇಶ್ ಹೇಳಿದರು.

‘ಬರಡು ಭೂಮಿ ಎಂದು ಪರಿಗಣಿಸಿ ಭೂ ಸ್ವಾಧೀನಕ್ಕೆ ಮುಂದಾಗಿರುವುದು ಬೇಸರ ತಂದಿದೆ. ಈ ಪ್ರದೇಶದಲ್ಲಿ ಮಳೆಯ ಪ್ರಮಾಣ ಉತ್ತಮವಾಗಿದೆ. ಅಂತರ್ಜಲದ ಮಟ್ಟ ಕೂಡ ಚೆನ್ನಾಗಿದೆ. ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಭೂ ಸ್ವಾಧೀನದ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ತೀರ್ಮಾನ ರಾಜ್ಯದ ಉಳಿದ ಪ್ರದೇಶಗಳಿಗೂ ಅನ್ವಯ ಮಾಡಬೇಕು’ ಎಂದು ಜಿ.ಬೈರೇಗೌಡ ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಸದಸ್ಯ ನರಸಿಂಹಮೂರ್ತಿ, ಯಶೋದಾ ರಮೇಶ್, ಹರಿ ಶ್ರೀಕಂಠಾಚಾರ್, ಪಂಚಾಯಿತಿ ಮಾಜಿ ಸದಸ್ಯ ದೇವರಾಜ್, ಗಂಗಹನುಮಯ್ಯ, ಕುಮಾರ್, ಎನ್.ಬೈರೇಗೌಡ, ಕೃಷ್ಣಮೂರ್ತಿ, ಅಶ್ವಥ್ ನಾರಾಯಣ್, ಹನುಮಂತರಾಜು, ರಾಮಣ್ಣ, ನಾರಾಯಣ ಗೌಡ, ಟಿ.ನರಸಿಂಹರಾಜು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.



ಸೂರ್ಯೋದಯ: 6:08 ಸೂರ್ಯಾಸ್ತ : 6:40 | ಚಂದ್ರೋದಯ: ರಾ. 12:00 ಚಂದ್ರಾಸ್ತ: ಮ. 12:26 | ಶನಿವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 19°
ಭಾನುವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ | ಸೋಮವಾರ 27° : 20° | ಮಂಗಳವಾರ 27° : 19° | ಬುಧವಾರ 26° : 19°
ಭಾನುವಾರ ● ಆಗಸ್ಟ್ 17, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.

‘ಇವಿಎಂ ದುರ್ಬಳಕೆ ಪ್ರಜಾಪ್ರಭುತ್ವಕ್ಕೆ ಮಾರಕ’

ಪಾರದರ್ಶಕ ಚುನಾವಣಾ ವ್ಯವಸ್ಥೆಗೆ ‘ವೋಟ್ ಫಾರ್ ಡೆಮಾಕ್ರಸಿ’ ಸಂಸ್ಥೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಇವಿಎಂ, ವಿವಿಪ್ಯಾಟ್‌ನ ವಿಧಿವಿಜ್ಞಾನ ಲೆಕ್ಕ ಪರಿಶೋಧನೆ ಮಾಡಲಿ
- ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಬಿಡುಗಡೆಗೆ ಆಗ್ರಹ

‘ಚುನಾವಣಾ ಆಯೋಗದ ಆಯುಧೀಕರಣ: ವೋಟ್ ಫಾರ್ ಡೆಮಾಕ್ರಸಿ’ ಸಂಸ್ಥೆಯ ಸದಸ್ಯರೊಂದಿಗೆ ದುಂಡು ಮೇಜಿನ ಸಂವಾದದಲ್ಲಿ ಮಾಧವ್ ದೇಶಪಾಂಡೆ, ಎಂ.ಜಿ. ದೇವಸಹಾಯಂ, ತೀಸ್ತಾ ಸೆಟಲ್ವಾಡ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಎಲೆಕ್ಟ್ರಾನಿಕ್ ವೋಟಿಂಗ್ ಮಷಿನ್‌ನ (ಇವಿಎಂ) ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಮತಕಳವು ಮಾಡಲಾಗುತ್ತಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಪಾರದರ್ಶಕ ಚುನಾವಣಾ ವ್ಯವಸ್ಥೆ ಜಾರಿಗೆ ತರುವ ಮೂಲಕ ಈ ಅಕ್ರಮವನ್ನು ತಡೆಗಟ್ಟಬೇಕು...’

ಇದು ವೋಟ್ ಫಾರ್ ಡೆಮಾಕ್ರಸಿ ಸಂಸ್ಥೆಯ ಸದಸ್ಯರೊಂದಿಗೆ ‘ಎದ್ದೇಳು ಕರ್ನಾಟಕ’ ಸಂಘಟನೆ ಶನಿವಾರ ಆಯೋಜಿಸಿದ್ದ ದುಂಡುಮೇಜಿನ ಸಂವಾದದಲ್ಲಿ ಮೂಡಿ ಬಂದ ಅಭಿಪ್ರಾಯ.

ಚುನಾವಣಾ ಚಿಂತಕರಾದ ಎಂ.ಜಿ. ದೇವಸಹಾಯಂ, ಮಾಧವ್ ದೇಶಪಾಂಡೆ, ತೀಸ್ತಾ ಸೆಟಲ್ವಾಡ್ ವಿಚಾರ ಮಂಡಿಸಿದರು. ಮಹಾರಾಷ್ಟ್ರದಲ್ಲಿ ಹೇಗೆ ಮತಕಳವು ನಡೆದಿದೆ ಎಂಬುದರ ಅಂಕಿ-ಅಂಶಗಳನ್ನು ನೀಡಿದರು.

‘2024ರಲ್ಲಿ ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣೆ ನಡೆದಾಗ ಸಂಜೆ 5 ಗಂಟೆಗೆ ಶೇ 58.22ರಷ್ಟು ಮತದಾನವಾಗಿತ್ತು. ಆದರೆ, ಶೇ 66.05 ರಷ್ಟು ಮತದಾನವಾಗಿದೆ ಎಂದು ಮಧ್ಯರಾತ್ರಿ ಘೋಷಿಸಲಾಯಿತು. ಹೆಚ್ಚುವರಿಯಾಗಿ 48 ಲಕ್ಷ ಮತಗಳು ಎಲ್ಲಿಂದ ಸೇರ್ಪಡೆಯಾದವು’ ಎಂದು ಪ್ರಶ್ನಿಸಿದರು.

‘ಮತ ಎಣಿಕೆ ನಡೆದಾಗ ಅಲ್ಲಿ ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಗಳು 3 ಸಾವಿರದ ಒಳಗಿನ ಮತಗಳ ಅಂತರದಿಂದ 25 ಕ್ಷೇತ್ರಗಳಲ್ಲಿ, 5,000 ಅಂತರದಲ್ಲಿ 39 ಕ್ಷೇತ್ರಗಳಲ್ಲಿ ಹಾಗೂ 10 ಸಾವಿರದೊಳಗಿನ ಅಂತರದಲ್ಲಿ 69 ಕ್ಷೇತ್ರಗಳಲ್ಲಿ ಗೆದ್ದಿದ್ದರು. ಇದೆಲ್ಲ ಮತದಾನದ ದಿನದಂದು ರಾತ್ರೋರಾತ್ರಿ ಶೇ 7.83ರಷ್ಟು ಹೆಚ್ಚುವರಿ ಮತ ಸೇರ್ಪಡೆಯಿಂದ ಪಡೆದ ಗೆಲುವು’ ಎಂದು ಪ್ರತಿಪಾದಿಸಿದರು.

‘ಲೋಕಸಭೆ ಚುನಾವಣೆಗೆ ಹೋಲಿಸಿದರೆ, ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಮತದಾರರ ಸಂಖ್ಯೆ ಒಮ್ಮೆಲೇ ಹೇಗೆ ಹೆಚ್ಚಳವಾಯಿತು ಎಂಬುದರ ಬಗ್ಗೆ ಚುನಾವಣಾಧಿಕಾರಿ ಉತ್ತರಿಸಿಲ್ಲ. ಈಗ ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯ ಹೆಸರಲ್ಲಿ ಯಾರನ್ನು ಪಟ್ಟಿಯಿಂದ ಕಿತ್ತು ಹಾಕುತ್ತಿದ್ದಾರೆ ಎಂದು ಗಮನಿಸಿದರೆ ಮಹಾರಾಷ್ಟ್ರದಲ್ಲಿ ನಡೆದ ಚುನಾವಣಾ ಆಯೋಗದ ಆಯುಧೀಕರಣ ಬಿಹಾರದಲ್ಲಿಯೂ ನಡೆಯಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಬಿಜೆಪಿ ಮತ್ತು ಅದರ ಮೈತ್ರಿಯನ್ನು ಬೆಂಬಲಿಸದ ಸಮುದಾಯಗಳ ಮತದಾರರನ್ನೇ ಮತದಾರರ ಪಟ್ಟಿಯಿಂದ ಬಿಜೆಪಿ ತೆಗೆದು ಹಾಕುತ್ತಿದೆ’ ಎಂದು ಆರೋಪಿಸಿದರು.

‘ರಾಜ್ಯಗಳ ಚುನಾವಣೆಯನ್ನು ಆಯಾ ರಾಜ್ಯಗಳ ಚುನಾವಣಾ ಆಯೋಗವೇ ನಡೆಸಬೇಕು. ಇವಿಎಂ, ವಿವಿಪ್ಯಾಟ್ ಮತ್ತು ಮತದಾರರ ಪಟ್ಟಿಗಳನ್ನು ತಕ್ಷಣ ವಿಧಿವಿಜ್ಞಾನ ಲೆಕ್ಕ ಪರಿಶೋಧನೆಗೆ ಒಳಪಡಿಸಬೇಕು. ಯಂತ್ರಗಳನ್ನು, ಅದರಲ್ಲಿರುವ ಓದಬಹುದಾದ ರೋಲ್ ಅನ್ನು, ಫಾರ್ಮ್ 17ಎ/17ಸಿಯನ್ನು ಹಾಗೂ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು. ನಿರ್ಬಂಧಿತ ನಿಯಮ 93ಕ್ಕೆ ತಿದ್ದುಪಡಿ ತರುವ ಮೂಲಕ ಪಾರದರ್ಶಕತೆ ಮತ್ತು ಸುರಕ್ಷತೆಯನ್ನು ಮರುಸ್ಥಾಪಿಸಬೇಕು’ ಎಂದು ಬೇಡಿಕೆ ಮಂಡಿಸಿದರು.

ವಿದೇಶ ಅಧ್ಯಯನ ಎಕ್ಸ್‌ಪೊ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ ಅಭಿವೃದ್ಧಿ ನಿಗಮದ (ಕೆವಿಟಿಎಸ್‌ಡಿ) ವಿದೇಶಿ ಅಧ್ಯಯನ ಯೋಜನೆ ಅಡಿಯಲ್ಲಿ ಐದು ಸಾವಿರಕ್ಕೂ ಹೆಚ್ಚು ಆಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಇದೇ 17ರಂದು (ಭಾನುವಾರ) ಬೆಂಗಳೂರಿನ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ವಿದೇಶಿ ಅಧ್ಯಯನ ಎಕ್ಸ್‌ಪೊ ಆಯೋಜಿಸಲಾಗಿದೆ. ಈ ಎಕ್ಸ್‌ಪೊದಲ್ಲಿ 60ಕ್ಕೂ ಹೆಚ್ಚು ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳು ಪಾಲ್ಗೊಳ್ಳಲಿವೆ. ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸುವ ಮೂಲಕ ವಿದೇಶಿ ವಿಶ್ವವಿದ್ಯಾಲಯಗಳಲ್ಲಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವ ಡಾ. ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ.

ಆಸಕ್ತರು http://studyabroad.ksdckarnataka.com ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಸುದ್ದಿ 2 ನಿಮಿಷ

ನೈಸ್ ಕಂಪನಿ ದೌರ್ಜನ್ಯ ಖಂಡಿಸಿ ಪ್ರತಿಭಟನೆ 21ರಂದು

ಬೆಂಗಳೂರು: ನೈಸ್ ಕಂಪನಿಯ ದೌರ್ಜನ್ಯ ಖಂಡಿಸಿ ಇದೇ 21ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ಪ್ರಾಂತ ರೈತ ಸಂಘ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ‘ಕಳಂಕಿತ ನೈಸ್ ಕಂಪನಿಯು ಯಾವುದೇ ರೀತಿಯ ಕಾಮಗಾರಿಗಳು ನಡೆಸದಂತೆ ಸರ್ಕಾರ ನಿರ್ಬಂಧಿಸಬೇಕು. ಬಿಎಂಐಸಿ ಯೋಜನೆಯಲ್ಲಿ ನೈಸ್ ಕಂಪನಿಯ ಪಾಲುದಾರಿಕೆಯನ್ನು ರದ್ದುಗೊಳಿಸಬೇಕು. ನೈಸ್ ಕಂಪನಿಯ ಭೂ ಸ್ವಾಧೀನ ಹಾಗೂ ರಸ್ತೆ ನಿರ್ಮಾಣದ ಹಗರಣಗಳ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ರೈತರ ಒಪ್ಪಿಗೆ ಇಲ್ಲದ, ರೈತರ ಗಮನಕ್ಕೂ ಬಾರದಂತೆ ಭೂ ಸ್ವಾಧೀನ ಮಾಡಿಕೊಂಡಿರುವ ಎಲ್ಲ ಪ್ರಕರಣಗಳನ್ನು ರದ್ದುಪಡಿಸಬೇಕು. ನೈಸ್ ಅಕ್ರಮದ ಕುರಿತು ಸದನ ಸಮಿತಿ ಮತ್ತು ಸಂಪುಟ ಉಪಸಮಿತಿಗಳ ಶಿಫಾರಸುಗಳನ್ನು ಜಾರಿಗೊಳಿಸಬೇಕು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹಾಗೂ ನೈಸ್ ಕಂಪನಿಯ ಅಕ್ರಮ ಮೈತ್ರಿಯಿಂದ ಹಗಲು ದರೋಡೆ ಮಾಡಿರುವ ಎಲ್ಲ ಹೆಚ್ಚುವರಿ ಭೂಮಿಯನ್ನು ವಾಪಸ್ ಪಡೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಭೂ ಸ್ವಾಧೀನ ಪ್ರಕಟಣೆ ಹಾಗೂ ಕೋರ್ಟ್ ತೀರ್ಪುಗಳ ಹೆಸರಿನಲ್ಲಿ ರೈತರ ಮೇಲಿನ ನೈಸ್ ಕಂಪನಿಯ ದಬ್ಬಾಳಿಕೆ ಹಾಗೂ ದೌರ್ಜನ್ಯವನ್ನು ನಿಲ್ಲಿಸಬೇಕು. ಟೋಲ್ ಸಂಗ್ರಹಿಸುತ್ತಿರುವ ರಸ್ತೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಒಪ್ಪಂದದಂತೆ ಹೆಚ್ಚಿನ ಪರಿಹಾರ ಹಾಗೂ ನಿವೇಶನಗಳನ್ನು ನೀಡಬೇಕು’ ಎಂದರು.

ಧರ್ಮಸ್ಥಳ ಚಲೊ ಅಭಿಯಾನ ಕಾರು ಯಾತ್ರೆಗೆ ಚಾಲನೆ

ಯಲಹಂಕ: ಯಲಹಂಕ ಬಿಜೆಪಿ ಮುಖಂಡರು ಹಮ್ಮಿಕೊಂಡಿದ್ದ ‘ಧರ್ಮಸ್ಥಳ ಚಲೊ ಅಭಿಯಾನ’ ಕಾರು ಯಾತ್ರೆಗೆ ಸಿಂಗನಾಯಕನಹಳ್ಳಿಯಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಬೆಳಿಗ್ಗೆ 6ಕ್ಕೆ ವಾಹನಕ್ಕೆ ಪೂಜೆ ನೆರವೇರಿಸುವ ಮೂಲಕ ಯಾತ್ರೆಗೆ ಚಾಲನೆ ನೀಡಿದ ಶಾಸಕ ವಿಶ್ವನಾಥ್ ಮಾತನಾಡಿ, ‘ಕೆಲವು ವ್ಯಕ್ತಿಗಳು ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪ ಪ್ರಚಾರ ಮಾಡುವ ಮೂಲಕ ಷಡ್ಯಂತ್ರ ನಡೆಸುತ್ತಿದ್ದಾರೆ. ಇದರ ಹಿಂದೆ ಎಡಪಂಥೀಯರ ಕೈವಾಡವಿದೆ. ನಾವೆಲ್ಲರೂ ಸದಾ ಧರ್ಮಸ್ಥಳದ ಬೆಂಬಲಕ್ಕಿದ್ದೇವೆ ಎಂಬ ಸಂದೇಶ ಸಾರಲು ನೂರಾರು ಕಾರುಗಳ ಮೂಲಕ ಯಾತ್ರೆಯನ್ನು ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಸತೀಶ್ ಕಡತನಮಲೆ, ಡಿ.ಜಿ. ಅಪ್ಪಯ್ಯಣ್ಣ, ಟಿ. ಮುನಿರೆಡ್ಡಿ, ಎಸ್.ಜಿ. ನರಸಿಂಹಮೂರ್ತಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ. ಪ್ರಶಾಂತ್‌ರೆಡ್ಡಿ, ಎಂ. ಮೋಹನ್‌ಕುಮಾರ್ ಉಪಸ್ಥಿತರಿದ್ದರು.

ಎ.ಆರ್.ಗೋವಿಂದಸ್ವಾಮಿ ನೇಮಕ

ಪ್ರಜಾವಾಣಿ ವಾರ್ತೆ


ಎ.ಆರ್. ಗೋವಿಂದಸ್ವಾಮಿ

ಬೆಂಗಳೂರು: ರಾಷ್ಟ್ರೀಯ ಬಂಜಾರ ಪ್ರೊಫೆಸರ್‌ಗಳ ಸಂಘದ ರಾಜ್ಯ ಘಟಕ ಅಧ್ಯಕ್ಷರಾಗಿ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ ನೇಮಕಗೊಂಡಿದ್ದಾರೆ.

ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ, ಈ ಆಯ್ಕೆ ಮಾಡಲಾಗಿದೆ ಎಂದು ಸಂಘದ ರಾಷ್ಟ್ರೀಯ ಅಧ್ಯಕ್ಷ ಗೋವರ್ಧನ್ ಬಂಜಾರ ತಿಳಿಸಿದ್ದಾರೆ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/ಸಿ.ಆರ್/24/2025–26 ದಿನಾಂಕ: 16–08–2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಇಂಡೆಂಟ್ ಸಂಖ್ಯೆ: **DMA/2025-26/BR/WORK_INDENT47688/Call-2.**

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **01.09.2025 ಸಂಜೆ 5.30 ಗಂಟೆಯವರೆಗೆ** ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03.09.2025 ಬೆಳಿಗ್ಗೆ 11.00 ಗಂಟೆಗೆ.** ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/2347/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂ(ವಿ)/ಪ್ರ(ಕಾ)ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/ಎಫ್–180(2)/25–26/2310–11 ದಿನಾಂಕ:14.08.2025

ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಅ.ಇಂ/ಟಿಆರ್(ಒಪಿ)/ದಕ್ಷಿಣ–ವೃತ್ತ/ಇಇ(ಓ)/ಎಇಇ–1/24–25/ಇ.ಪಿ.ಆರ್–15, ಕರೆ–8,** ದಿನಾಂಕ: 01.10.2024 ಕಾರ್ಯಾಚರಣೆ ವೃತ್ತ–ದಕ್ಷಿಣ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಹಿರಂಡನಹಳ್ಳಿ ಲೇಕ್ ಹತ್ತಿರ ಹಾದು ಹೋಗಿರುವ 66ಕೆವಿ ಡಿಜಿ–3 ಮತ್ತು ಡಿಜಿ–4 ಜೋಡಿ ಮಾರ್ಗದ ಟವರ್ ಸಂಖ್ಯೆ 70 ಮತ್ತು 72ರ ನಡುವೆ 01 ಸಂಖ್ಯೆ ಡಿಎ+03, ಕವಿಪ್ರನಿನಿ, ವಿನ್ಯಾಸದ ಎನ್‌ಬಿಟಿ, ಮಧ್ಯಂತರ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್ ಲಿಂಕ್ ‘E Procurement KPTCL’ ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:18.08.2025** ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/–ಅಧೀಕ್ಷಕ ಇಂಜಿನಿಯರ್(ವಿದ್ಯುತ್),
ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ, ಕವಿಪ್ರನಿನಿ,
ಕಛೇರಿ ಸಂಕೀರ್ಣ, ಆನಂದ್‌ರಾವ್ ವೃತ್ತ, ಬೆಂಗಳೂರು–560009.

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101. ದೂರವಾಣಿ ಸಂಖ್ಯೆ: 08152–222570, ಇ–ಮೇಲ್ ವಿಳಾಸ: eepredkolar1@gmail.com

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: 06/2025–26 ದಿ: 11.08.2025

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-I & II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಏಕ–ಲಕೋಟೆ ಪದ್ಧತಿಯಲ್ಲಿ **(Single Cover System)** ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ ಕೋಲಾರ, ಮಾಲೂರು, ಬಂಗಾರಪೇಟೆ, ಕೆಜಿಎಫ್, ಮುಳಬಾಗಿಲು & ಶ್ರೀನಿವಾಸಪುರ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು **41 ಸಂಖ್ಯೆ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಟೆಂಡರಗಿಟ್ಟ ಮೊತ್ತ ಸರಾಸರಿ ರೂ. 3.60 ಲಕ್ಷ ರಿಂದ 43.53 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಇ–ಟೆಂಡರಗಳಲ್ಲಿ ಭಾಗವಹಿಸಲು ಕೋರಲಾಗಿದೆ.** ಕೆಪಿಪಿಪಿ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ **ಭರ್ತಿ ಮಾಡಿದ ಫಾರಂಗಳನ್ನು ಆರೋಹಿಸಲು ಸಲ್ಲಿಸುವ ಕೊನೆಯ ದಿನಾಂಕ: 11.08.2025 ರಿಂದ 26.08.2025 ರ ಸಂಜೆ 4.00 ರವರೆಗೆ 2) ಟೆಂಡರಗಳನ್ನು ಕೆ.ಪಿ.ಪಿ–ಪ್ರೋಟಾಲ್‌ನಲ್ಲಿ ತೆರೆಯುವ ದಿನಾಂಕ: 28.08.2025 ರಂದು ಬೆಳಗ್ಗೆ 11.00 ಗಂಟೆಗೆಂದು ನಿಗದಿ ಪಡಿಸಲಾಗಿದೆ.** ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ **ಕೆಪಿಪಿಪಿ ಸಹಾಯವಾಣಿ ದೂರವಾಣಿ ಸಂಖ್ಯೆ: 91 8046010000 & +91 8022631200, 080–22230960 & 22234115. ಅನ್ನು ಸಂಪರ್ಕಿಸಲು ಕೋರಲಾಗಿದೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:233/ಕೆಎಸ್‌ಎಂಸಿಎ/2025–26

ಶಿಕ್ಷಣ ನೀತಿ: ಸಮಗ್ರ ಅನುಷ್ಠಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಶಿಕ್ಷಣ ನೀತಿ ಆಯೋಗದ ವರದಿಯನ್ನು ಪೂರ್ತಿಯಾಗಿ ಅನುಷ್ಠಾನಗೊಳಿಸಬೇಕು. ಶಿಕ್ಷಣ ಕ್ಷೇತ್ರದ ಹಿತದೃಷ್ಟಿಯಿಂದ ಈ ವರದಿ ಸಮಗ್ರವಾಗಿ ಜಾರಿಗೆ ಬರುವುದು ಮುಖ್ಯ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ. ‘ಆಧುನಿಕ ಸಮಾಜವು ತಂದೊಡ್ಡುವ ಸವಾಲುಗಳನ್ನು ಎದುರಿಸುವ ಸ್ಥೈರ್ಯವನ್ನು ಹೊಸ ತಲೆಮಾರಿನಲ್ಲಿ ತುಂಬಲು, ಸಶಕ್ತ ವಾಗಿರುವ ರಾಜ್ಯ ಶಿಕ್ಷಣ ನೀತಿಯನ್ನು ಪೂರ್ತಿಯಾಗಿ ಅಳವಡಿಸಿಕೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿನ ಸಮಸ್ಯೆಗಳು ಹಾಗೂ ಶಿಕ್ಷಣದ ಪ್ರಸ್ತುತ ಸನ್ನಿವೇಶವನ್ನು ರಾಜ್ಯ ಶಿಕ್ಷಣ ನೀತಿ ಆಯೋಗವು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿ, ಪರಿಹಾರೋಪಾಯಗಳನ್ನು ಶಿಫಾರಸು ಮಾಡಿದೆ. ಇದನ್ನು ಅನುಷ್ಠಾನ ಮಾಡುವುದರಿಂದ ಮುಂದಿನ 10 ವರ್ಷಗಳಲ್ಲಿ ರಾಜ್ಯದ ಶಿಕ್ಷಣ ಕ್ಷೇತ್ರವು ಆಮೂಲಾಗ್ರವಾಗಿ ಬದಲಾಗಲಿದೆ’ ಎಂದು ತಿಳಿಸಿದ್ದಾರೆ.

‘ವರದಿಯಲ್ಲಿ ರಾಜ್ಯಕ್ಕೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ದ್ವಿಭಾಷಾ ನೀತಿಯನ್ನು ಶಿಫಾರಸು ಮಾಡಿರುವುದು ಅತ್ಯಂತ ಸಮಯೋಚಿತ. ಭಾಷಾ ಪ್ರಾವೀಣ್ಯತೆ ಹೆಚ್ಚಿಸಲು ಮತ್ತು ಬೋಧನಾ ವಿಭಾಗದ ಗುಣಮಟ್ಟವನ್ನು ಉನ್ನತೀಕರಿಸಲು, ಭಾಷಾ ಬೋಧನೆ, ತರಬೇತಿ ಕೇಂದ್ರ ಮತ್ತು ಜ್ಞಾನ, ಅನುವಾದ ಕೇಂದ್ರಗಳ ಸ್ಥಾಪನೆಗೆ ವರದಿ ಒತ್ತಾಯಿಸಿರುವುದು ಐತಿಹಾಸಿಕ ನಿಲುವು. ಸರ್ಕಾರ ಈ ವರದಿಯನ್ನು ಒಪ್ಪುವ ಮೂಲಕ ಭಾಷೆಯ ಬೆಳವಣಿಗೆಗೆ ಕೈಜೋಡಿಸಬೇಕು’ ಎಂದು ಹೇಳಿದ್ದಾರೆ.

‘ಇಂಗ್ಲಿಷೇತರ ಭಾಷೆಗಳನ್ನು ಕಡೆಗಣಿಸಿಲ್ಲ’

ರಾಜ್ಯ ಶಿಕ್ಷಣ ನೀತಿ ಆಯೋಗವು ದ್ವಿಭಾಷಾ ನೀತಿಯನ್ನು ಶಿಫಾರಸು ಮಾಡುವಾಗ ಕನ್ನಡ, ಇಂಗ್ಲಿಷೇತರ ಭಾಷೆಗಳನ್ನು ಕಡೆಗಣಿಸಿಲ್ಲದಿರುವುದು ಮಹತ್ವದ ಸಂಗತಿ ಎಂದು ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.

‘ಈ ವರದಿಯಂತೆ ರಾಜ್ಯ ಭಾಷೆಯಾದ ಕನ್ನಡವು ಮೊದಲನೆಯ ಅಥವಾ ಎರಡನೆಯ ಭಾಷೆಯಾಗಿ ಕಡ್ಡಾಯವಾಗಿ ಉಳಿಯಲಿದೆ. ಆಸಕ್ತ ವಿದ್ಯಾರ್ಥಿಗಳು ಮೂರನೇ ಭಾಷೆಯಾಗಿಯೂ ತಾವು ಇಚ್ಛಿಸುವ ಭಾಷೆಯನ್ನು ಕಲಿಯಲು ಅವಕಾಶ ಕಲ್ಪಿಸಿರುವುದು, ಇವತ್ತಿನ ಸಂಕೀರ್ಣ ಭಾಷಾ ಪರಿಸರದಲ್ಲಿ ಅನುಷ್ಠಾನ ಯೋಗ್ಯವಾಗಿದೆ’ ಎಂದು ತಿಳಿಸಿದ್ದಾರೆ.

‘ತ್ರಿಭಾಷಾ ಸೂತ್ರವು ಹಿಂದಿಯ ಯಜಮಾನಿಕೆಯನ್ನು ಬಲವಂತವಾಗಿ ಹೇರುವ ಸೂತ್ರವೇ ಹೊರತು, ಅರಿವಿನ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಉತ್ತಮಗೊಳಿಸಲು ಯಾವುದೇ ಸಹಾಯವಾಗಿಲ್ಲ. ಇದನ್ನು ಸಂಶೋಧನೆಗಳೇ ದೃಢಪಡಿಸಿವೆ’ ಎಂದಿದ್ದಾರೆ.

ನೀನಾಸಂ ಕಲೆಗಳ ಸಂಗಡ ಮಾತುಕತೆ ಅ.1ರಿಂದ

ಶಿವಮೊಗ್ಗ: ಸಾಗರ ತಾಲ್ಲೂಕಿನ ಹೆಗ್ಗೋಡಿನ ನೀನಾಸಂ ವತಿಯಿಂದ ಅ.1ರಿಂದ 5ರವರೆಗೆ ‘ಕಲೆಗಳ ಸಂಗಡ ಮಾತುಕತೆ’ ಕಾರ್ಯಕ್ರಮ ಆಯೋಜಿಸಲಾಗಿದೆ. ನೋಂದಣಿಗಾಗಿ ಸಂಪರ್ಕಿಸಿ: www.ninasam.org

ಜಯನಗರ ಪ್ರಾದೇಶಿಕ ಸಾರಿಗೆ ಕಚೇರಿಯ ನೂತನ ಕಟ್ಟಡವನ್ನು ರಾಮಲಿಂಗಾರೆಡ್ಡಿ ಅಂಜನಾಪುರದಲ್ಲಿ ಉದ್ಘಾಟಿಸಿದರು

ಅಂಜನಾಪುರಕ್ಕೆ ಆರ್‌ಟಿಒ ಕಚೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ (ಜಯನಗರ) ಪ್ರಾದೇಶಿಕ ಸಾರಿಗೆ ಕಚೇರಿಯನ್ನು ಅಂಜನಾಪುರದಲ್ಲಿ ನಿರ್ಮಿಸಲಾಗಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಹೊಸ ಕಚೇರಿಯನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶನಿವಾರ ಉದ್ಘಾಟಿಸಿದರು.

ಬೆಂಗಳೂರು ದಕ್ಷಿಣ ಕೆಎ-05, ಜಯನಗರ ಕಚೇರಿಯು 1981ರಲ್ಲಿ ಪ್ರಾರಂಭವಾಗಿತ್ತು. 2011ರಿಂದ ಜಯನಗರ ಬಿಎಂಟಿಸಿ ಬಸ್ ನಿಲ್ದಾಣದ ಕಾಂಪ್ಲೆಕ್ಸ್‌ನಲ್ಲಿ ಕಚೇರಿ ಕಾರ್ಯ ನಿರ್ವಹಿಸುತ್ತಿತ್ತು. ಇದೀಗ ಅಂಜನಾಪುರದಲ್ಲಿ ಇಲಾಖೆ ಸ್ವಂತ ಕಟ್ಟಡ ನಿರ್ಮಿಸಿದ್ದು, ಅಲ್ಲಿಯೇ ಕಚೇರಿ ಕಾರ್ಯಗಳು ನಡೆಯಲಿವೆ. ದಾಖಲೆಗಳನ್ನು ಸ್ಥಳಾಂತರ ಮಾಡಲಾಗುತ್ತಿದ್ದು, ಒಂದು ತಿಂಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಹೊಸ ಕಟ್ಟಡದಲ್ಲಿ ಕಚೇರಿ ಕಾರ್ಯ ನಿರ್ವಹಿಸಲಿದೆ. 3 ಅಂತಸ್ತಿನ ಕಟ್ಟಡವು 38,793 ಚದರಡಿ ವಿಸ್ತೀರ್ಣ ಹೊಂದಿದ್ದು, ₹11.25 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದರು.

ಶಾಸಕ ಕೃಷ್ಣಪ್ಪ, ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಉಮಾಶಂಕರ್ ಬಿ.ಪಿ., ಜ್ಞಾನೇಂದ್ರ ಕುಮಾರ್, ಪುರುಷೋತ್ತಮ್, ಓಂಕಾರೇಶ್ವರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ರಮೇಶ್ ವಿ.ಪಿ, ದೀಪಕ್, ಶ್ರೀನಿವಾಸ್, ಶ್ರೀನಿವಾಸ್ ಪ್ರಸಾದ್ ಉಪಸ್ಥಿತರಿದ್ದರು.

18.54 ಲಕ್ಷ ವಾಹನ ನೋಂದಣಿ: ಬೆಂಗಳೂರು ದಕ್ಷಿಣ (ಜಯನಗರ) ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಇದುವರೆಗೆ 18,54,982 ವಾಹನಗಳು ನೋಂದಣಿಯಾಗಿವೆ. ಈ ಕಚೇರಿ ವ್ಯಾಪ್ತಿಯಲ್ಲಿ 70 ವಾಹನ ತರಬೇತಿ ಶಾಲೆಗಳು, 36 ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಸುರಂಗ ರಸ್ತೆ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಮತ್ತು ಕೆರೆಗಳ ಬಫರ್ ವಲಯ ತಿದ್ದುಪಡಿ ಮಸೂದೆ ವಿರೋಧಿಸಿ ಬೆಂಗಳೂರು ಟೌನ್‌ಹಾಲ್ ಸಂಘಟನೆ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ‘ನಮ್ಮ ನಗರ, ನಮ್ಮ ಹಕ್ಕು, ನಮ್ಮ ಆಯ್ಕೆ’ ಎಂಬ ಘೋಷ ವಾಕ್ಯದೊಂದಿಗೆ ಸಂಘಟನೆಯ ನೂರಾರು ಸದಸ್ಯರು ಪ್ರತಿಭಟನೆ ನಡೆಸಿದರು.

‘ನಗರಕ್ಕೆ ಸುರಂಗ ರಸ್ತೆ ಬೇಡ, ಸಾರ್ವಜನಿಕ ಸಾರಿಗೆ ಬೇಕು, ಬಫರ್ ವಲಯ ತಿದ್ದುಪಡಿ ಬೇಡ, 74ನೇ ತಿದ್ದುಪಡಿ ಅನುಷ್ಠಾನ ಬೇಕು ಹಾಗೂ ಕೆರೆ, ಕಾಲುವೆಗಳು ಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಸುರಂಗ ರಸ್ತೆಯ ಪ್ರಯಾಣ ಶುಲ್ಕ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಿಂತ ದುಬಾರಿಯಾಗುತ್ತದೆ. ಹಾಗಾಗಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮೂಲಸೌಕರ್ಯ ಯೋಜನೆಗಳನ್ನು ಮೊದಲು ಪೂರ್ಣಗೊಳಿಸಬೇಕು. ಸುರಂಗ ರಸ್ತೆಯಿಂದ ಲಾಲ್‌ಬಾಗ್ ಒಳಗೊಂಡಂತೆ ಹಲವಾರು ಸ್ಥಳಗಳಿಗೆ ಧಕ್ಕೆ ಉಂಟಾಗುತ್ತದೆ. ಮರಗಳನ್ನು ಕಡಿಯುವುದರಿಂದ ಶುದ್ಧ ಗಾಳಿ ಮತ್ತು ನೀರು ಸಿಗುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮರಗಳನ್ನು ಉಳಿಸುವುದು, ಸೈಕಲ್ ಪಥಗಳ ಪ್ರಚಾರ ಮತ್ತು ಸೈಕ್ಲಿಂಗ್ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ, ಕಚೇರಿ ಮತ್ತು ಕಂಪನಿಗಳಿಗೆ ಬಸ್ ಮತ್ತು ಕ್ಯಾಬ್ ಸೌಲಭ್ಯ ಒದಗಿಸಬೇಕು. ಅಪಾರ್ಟ್‌ಮೆಂಟ್‌ಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಜಾರಿಗೊಳಿಸಬೇಕು. ಪ್ರತಿ ಫ್ಲ್ಯಾಟ್‌ಗೆ ಒಂದು ಮರ ಹಾಗೂ ವಿಲ್ಲಾಗೆ ಐದು ಮರಗಳನ್ನು ಬೆಳೆಸಬೇಕು’ ಎಂದು ಸಲಹೆ ನೀಡಿದರು.

ಪ್ರತಿಭಟನೆಯಲ್ಲಿ ನಟ ಪ್ರಕಾಶ್ ಬೆಳವಾಡಿ, ಸಾರ್ವಜನಿಕ ಸಾರಿಗೆಯ ಪ್ರಚಾರಕ ರಾಜ್‌ಕುಮಾರ್ ದುಗರ್, ಬೆಂಗಳೂರಿನ ನಾಗರಿಕರ ಕಾರ್ಯಸೂಚಿಯ ಸಂದೀಪ್ ಅನಿರುದ್ಧನ್, ಸಿವಿಕ್ ಬೆಂಗಳೂರಿನ ಕಾತ್ಯಾಯಿನಿ ಚಾಮರಾಜ್, ಪ್ರಿಯಾ ಚೆಟ್ಟಿ ರಾಜಗೋಪಾಲ್ ಪಾಲ್ಗೊಂಡಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಂಗಳೂರು ಟೌನ್‌ಹಾಲ್ ಸಂಘಟನೆ ಸದಸ್ಯರು ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಶ್ರಾವಣ ಮಾಸದ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ
ಬೆಂಗಳೂರಿನಲ್ಲಿ ಮಹಾ ರುದ್ರಾಕ್ಷ ಭವ್ಯ ಪ್ರದರ್ಶನ ಮತ್ತು ಮಾರಾಟ | ಆ. 10 ರಿಂದ ಆ. 18ರ ವರೆಗೆ ಮಾತ್ರ

ಬೆಂಗಳೂರು: ನಗರದ ಹೊಟೇಲ್ Hotel Le Foliage By TGI, ಮೆಟ್ರೋ ಪಿಲ್ಲರ್ EP-No.08 ಎದುರಿಗೆ, # 51, 46ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, (sangeetha gadgets ಪಕ್ಕದಲ್ಲಿ) ಬೆಂಗಳೂರು, ಆಗಸ್ಟ್ 10 ರಿಂದ 18 ರವರೆಗೆ ಶ್ರಾವಣ ಮಾಸದ ಪ್ರಯುಕ್ತ ಪ್ರದರ್ಶನ ಹಾಗೂ ಮಾರಾಟ, ಈ ಶ್ರಾವಣ ಮಾಸದಲ್ಲಿ ರುದ್ರಾಕ್ಷಿಯನ್ನು ಧರಿಸುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ಹೈದ್ರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಸಸ್ಯಾಹಾರಿ ಹಾಗೂ ಮಾಂಸಹಾರಿಗಳು ಧರಿಸಬಹುದು. ಮಳಿಗೆಯು ಬೆಳಗ್ಗೆ 10.30 ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ ಎಂದು ತಿಳಿಸಿದ್ದಾರೆ. ಸಂಪರ್ಕಿಸಿ: **7097296666**

ಕೊನೆಯ 2 ದಿನಗಳು ಮಾತ್ರ
ADVT

FARNAZ

ಆರೋಗ್ಯ ಸಂಪರ್ಕ ಕಾರ್ಯಕರ್ತೆಯರ ವೇತನ ಗೊಂದಲ ಬಗೆಹರಿಸುವ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆರೋಗ್ಯ ಸಂಪರ್ಕ ಕಾರ್ಯಕರ್ತೆಯರ ವೇತನ ಗೊಂದಲವನ್ನು ಅಧಿಕಾರಿಗಳ ಜತೆ ಚರ್ಚಿಸಿ, ಬಗೆಹರಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭರವಸೆ ನೀಡಿದರು.

ಬಿಬಿಎಂಪಿ ಆರೋಗ್ಯ ಸಂಪರ್ಕ ಕಾರ್ಯಕರ್ತೆಯರ ಸಂಘದ ಸದಸ್ಯರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

‘ಆರೋಗ್ಯ ಕಾರ್ಯಕರ್ತೆಯರ ವೇತನ ಪಾವತಿ ಜವಾಬ್ದಾರಿ ಕುರಿತು ಚರ್ಚಿಸಲು ನಿಮ್ಮಲ್ಲಿ ಐದು ಜನರ ನಿಯೋಗದೊಂದಿಗೆ ಇನ್ನೊಮ್ಮೆ ನನ್ನನ್ನು ಭೇಟಿ ಮಾಡಿ. ನಿಮ್ಮ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಿ ಬಗೆಹರಿಸಲಾಗುವುದು’ ಎಂದು ತಿಳಿಸಿದರು.

‘ಬಿಬಿಎಂಪಿ ಗುತ್ತಿಗೆದಾರರಿಂದ ನಿಮಗೆ ವೇತನ ಪಾವತಿ ಆಗುವುದಿಲ್ಲ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವನ್ನು (ಬಿಎಸ್‌ಡಬ್ಲ್ಯುಎಂಎಲ್) ಬೆಂಗಳೂರು ನಗರದ ಕಸ ನಿರ್ವಹಣೆಗೆಂದು ಸ್ಥಾಪಿಸಲಾಗಿದೆ. ಇದನ್ನು ಗುತ್ತಿಗೆದಾರರು ನಿರ್ವಹಣೆ ಮಾಡುವುದಿಲ್ಲ. ಇದರ ಮುಖ್ಯಸ್ಥರಾಗಿ ಐಎಎಸ್ ಅಧಿಕಾರಿಯೇ ಇರುತ್ತಾರೆ’ ಎಂದರು.

‘2017ರಲ್ಲಿ ಎನ್‌ಎಚ್‌ಯುಎಂ ವತಿಯಿಂದ ಆಶಾ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಂಡ ಕಾರಣಕ್ಕೆ ಆರೋಗ್ಯ ಸಂಪರ್ಕ ಕಾರ್ಯಕರ್ತೆಯರನ್ನು ಘನತ್ಯಾಜ್ಯ ನಿರ್ವಹಣಾ ವಿಭಾಗಕ್ಕೆ ವರ್ಗಾವಣೆ ಮಾಡಲಾಯಿತು. ಈಗ ಬಿಎಸ್‌ಡಬ್ಲ್ಯುಎಂಎಲ್‌ನಿಂದ ವೇತನ ಪಾವತಿ ಎಂದು ತಿಳಿಸಿರುತ್ತಾರೆ. 30 ವರ್ಷಗಳಿಂದ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳೆಯರಿಗೆ ಬಿಬಿಎಂಪಿಯಿಂದಲೇ ವೇತನ ಪಾವತಿ ವ್ಯವಸ್ಥೆ ಮಾಡಬೇಕು’ ಎಂದು ಸಂಘದ ಸದಸ್ಯರು ಮನವಿ ಮಾಡಿದರು.

ಚಿಟಿಕೆ ಸುದ್ದಿ

ಜಾತಿ ತಿದ್ದಿದ್ದ ಮುಖ್ಯ ಶಿಕ್ಷಕ ಅಮಾನತು

ಮನೋಹರ ಪತ್ತಾರ

ಯಾದಗಿರಿ: ವಿದ್ಯಾರ್ಥಿನಿಯ ಶಾಲಾ ದಾಖಲಾತಿ ಜಾತಿ ಕಾಲಂ ತಿದ್ದಿದ್ದ ಆರೋಪದಡಿ ಸುರಪುರ ತಾಲ್ಲೂಕಿನ ಕರಡಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪ್ರಭಾರ ಮುಖ್ಯ ಶಿಕ್ಷಕ ಮನೋಹರ ಪತ್ತಾರ ಅವರನ್ನು ಡಿಡಿಪಿಐ ಅಮಾನತುಗೊಳಿಸಿದ್ದಾರೆ.

ಪೋಷಕರಿಂದ ಹಣ ಪಡೆದ ಮನೋಹರ, ಜಾತಿ ಕಾಲಂ ವೈಟ್‌ನರ್ ಹಚ್ಚಿದ್ದು, ಮೂಲಜಾತಿ ಬದಲಿಗೆ 'ತಳವಾರ' ಎಂದು ಬರೆದಿದ್ದರು ಎಂದು ದೂರು ದಾಖಲಾಗಿತ್ತು.

ಬೆಂಕಿ: ಬಾಲಕ ಸಾವು

ಧಾರವಾಡ: ಇಲ್ಲಿನ ಸಂತೋಷನಗರದ ಮನೆಯೊಂದರಲ್ಲಿ ಕುಪ್ಪಡಿಗೆಗೆ (ಕೆಂಡದ ಕುಡಿಕೆ) ಥಿನ್ನರ್ ಕ್ಯಾನ್ ಉರುಳಿ ಬೆಂಕಿ ಹೊತ್ತಿಕೊಂಡಿದ್ದು, ಬಾಲಕ ಅಗಸ್ತ್ಯ (4) ಮೃತಪಟ್ಟಿದ್ದಾನೆ. ಬಾಲಕನ ತಂದೆ ಚಂದ್ರಕಾಂತ್ ಮಾಶಾಳ ಅವರಿಗೆ ಗಾಯವಾಗಿದೆ.

'ಚಂದ್ರಕಾಂತ ಅವರು ಖಾಸಗಿ ಕಂಪನಿ ಉದ್ಯೋಗಿ. ಪತ್ನಿ ಸುಶ್ಮಿತಾ, ಮತ್ತೊಂದು ಮಗು ಇನ್ನೊಂದು ಕೊಠಡಿಯಲ್ಲಿ ಇದ್ದರು. ಅವಘಡದಲ್ಲಿ ಸುಶ್ಮಿತಾ ಅವರ ತಾಯಿ ಸುವರ್ಣಾ ಅವರಿಗೂ ಗಾಯಗಳಾದವು. ಬೆಂಕಿಯಿಂದ ಇತರೆ ವಸ್ತುಗಳು ಸುಟ್ಟಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಡ್ಡಪಲ್ಲಕ್ಕಿ ಮೆರವಣಿಗೆಗೆ ಸಮ್ಮತಿ

ರಂಭಾಪುರಿ ಪೀಠದ ಶ್ರೀಗಳು

ಬಸವಕಲ್ಯಾಣ (ಬೀದರ್ ಜಿಲ್ಲೆ): 'ದಸರಾ ದರ್ಬಾರ್'ನಲ್ಲಿ ತೆರೆದ ವಾಹನದಲ್ಲಿ ಅಡ್ಡ ಪಲ್ಲಕ್ಕಿ ಮೆರವಣಿಗೆ ನಡೆಸಲು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ಒಪ್ಪಿದ್ದಾರೆ.

ಈ ಸಂಬಂಧ ಶನಿವಾರ ಪ್ರಕಟಣೆ ನೀಡಿರುವ ಸ್ವಾಮೀಜಿ, 'ಕಾರ್ಯಕ್ರಮದ ಗೌರವ ಅಧ್ಯಕ್ಷರೂ ಆಗಿರುವ ಹಾರಕೂಡ ಚನ್ನವೀರ ಶಿವಾಚಾರ್ಯರು ಭಕ್ತರ ಹೆಗಲ ಮೇಲೆ ಪಲ್ಲಕ್ಕಿ ಹೋರುವ ವಿಚಾರವನ್ನು ಒಪ್ಪದೆ ಕಾರ್ಯಕ್ರಮದಿಂದ ದೂರ ಉಳಿಯುವುದಾಗಿ ನಿರ್ಧಾರ ಪ್ರಕಟಿಸಿದ್ದರು. ಈ ಕಾರಣಕ್ಕೆ ಸ್ಪಷ್ಟೀಕರಣ ನೀಡಲಾಗುತ್ತಿದೆ' ಎಂದಿದ್ದಾರೆ.

'ತೆರೆದ ವಾಹನದಲ್ಲಿ ಅಡ್ಡಪಲ್ಲಕ್ಕಿ ಇಟ್ಟು ಮೆರವಣಿಗೆ ನಡೆಸಲಾಗುವುದು. ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ದಸರಾ ದರ್ಬಾರ್ ನಡೆಯಲಿದ್ದು, ನಿಗದಿತ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲಿವೆ' ಎಂದು ಅವರು ತಿಳಿಸಿದ್ದಾರೆ.

30ಕ್ಕೂ ಹೆಚ್ಚು ಜನರ ಮೇಲೆ ಬೀದಿ ನಾಯಿ ದಾಳಿ

ಕುಕನೂರು (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ತಳಕಲ್, ತಳಬಾಳ ಗ್ರಾಮಗಳಲ್ಲಿ ಶನಿವಾರ ಬೀದಿ ನಾಯಿ ದಾಳಿ ಮಾಡಿದ್ದು, 30ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ.

ತಳಕಲ್‌ನಲ್ಲಿ ಶಾಲೆಯ ಆವರಣದಲ್ಲಿ ಆಟವಾಡುತ್ತಿದ್ದ 8 ವರ್ಷದ ಬಾಲಕ ಯಮನೂರ ಸಾಬ್ ನದಾಫ್ ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಗುವಿನ ಚೀತ್ಕಾರ ಕೇಳಿ ಧಾವಿಸಿದ ಜನರು ನಾಯಿ ಹೊಡೆದೋಡಿಸಿದ್ದಾರೆ. ನಾಯಿ ದಾಳಿಯಿಂದ ಗಾಯಗೊಂಡಿದ್ದ ವಿದ್ಯಾರ್ಥಿಗಳು, ಶಿಕ್ಷಕರ ಪೈಕಿ ಕೆಲವರು ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು.

ಹಾಸನ ಮೇಯರ್ ಚಂದ್ರೇಗೌಡ ಸದಸ್ಯತ್ವ ಅನರ್ಹ

ಚಂದ್ರೇಗೌಡ

ಹಾಸನ: ಪಕ್ಷದ ವಿಪ್ ಉಲ್ಲಂಘಿಸಿದ ಮೇಯರ್ ಎಂ.ಚಂದ್ರೇಗೌಡ ಅವರನ್ನು ಪಾಲಿಕೆ ಸದಸ್ಯತ್ವದಿಂದ ಅನರ್ಹಗೊಳಿಸಿ ಮೈಸೂರಿನ ಪ್ರಾದೇಶಿಕ ಆಯುಕ್ತರು ಆದೇಶಿಸಿದ್ದಾರೆ.

ನಗರಸಭೆ ಅಧ್ಯಕ್ಷರಾಗಿದ್ದ ಎಂ. ಚಂದ್ರೇಗೌಡರ ವಿರುದ್ಧ ಜೆಡಿಎಸ್‌ನಿಂದ ಏ. 28 ರಂದು ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತು. ಚಂದ್ರೇಗೌಡ ಸೇರಿ ಜೆಡಿಎಸ್‌ನ 17 ಸದಸ್ಯರಿಗೆ ವಿಪ್ ಹೊರಡಿಸಲಾಗಿತ್ತು. ಆಗ ಚಂದ್ರೇಗೌಡ ತಟಸ್ಥವಾಗಿ ಉಳಿದಿದ್ದರು. ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು ಚಂದ್ರೇಗೌಡರನ್ನು ಬೆಂಬಲಿಸಿದ್ದರಿಂದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿತ್ತು.

ಈ ಕುರಿತ ದೂರಿನ ವಿಚಾರಣೆ ನಡೆಸಿದ ಪ್ರಾದೇಶಿಕ ಆಯುಕ್ತ ರಮೇಶ್ ಡಿ.ಎಸ್. ಸದಸ್ಯತ್ವ ಅನರ್ಹಗೊಳಿಸಿ ಆದೇಶಿಸಿದರು. ಹಂಗಾಮಿ ಮೇಯರ್ ಆಗಿ ಉಪ ಮೇಯರ್ ಹೇಮಲತಾ ಅಧಿಕಾರ ವಹಿಸಿಕೊಂಡರು. ಪ್ರತಿಕ್ರಿಯೆಗೆ ಚಂದ್ರೇಗೌಡರು ಲಭ್ಯರಾಗಲಿಲ್ಲ.

ಧರ್ಮಸ್ಥಳ: ದೂರುದಾರನ ವಿಚಾರಣೆ

ಸದ್ಯಕ್ಕೆ ಇತರೆ ದೂರುಗಳ ತನಿಖೆ ಇಲ್ಲ

• ಶವ ಸಿಕ್ಕ ದಿನವೇ ದಫನ್: ಆರೋಪ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಕುರಿತು ಇದುವರೆಗೆ ನಡೆದ ಶೋಧ ಕಾರ್ಯದಲ್ಲಿ ಪತ್ತೆಯಾದ ಅಂಶಗಳ ಬಗೆಗಿನ ತನಿಖೆಯನ್ನು ವಿಶೇಷ ತನಿಖಾ ತಂಡ ಚುರುಕುಗೊಳಿಸಿದೆ.

ಸಾಕ್ಷಿ ದೂರುದಾರನ ಬೆಳ್ತಂಗಡಿಯ ಕಚೇರಿಗೆ ಶನಿವಾರ ಕರೆಸಿಕೊಂಡ ಎಸ್‌ಐಟಿ ಅಧಿಕಾರಿಗಳು, ಆತ ದೂರಿನಲ್ಲಿ ಮಾಡಿರುವ ಆರೋಪಗಳು ಹಾಗೂ ಆತ ತೋರಿಸಿದ ಜಾಗಗಳ ಶೋಧಕಾರ್ಯಕ್ಕೆ ಸಂಬಂಧಿಸಿ ವಿಚಾರಣೆಗೆ ಒಳಪಡಿಸಿದರು.

ಶೋಧ ಕಾರ್ಯದ ವೇಳೆ 6 ಹಾಗೂ 11ನೇ ಜಾಗಕ್ಕಿಂತ 100 ಮೀ ದೂರದಲ್ಲಿ ಸಿಕ್ಕಿರುವ ಮೃತದೇಹಗಳ ಅವಶೇಷಗಳನ್ನು ಬೆಂಗಳೂರಿನ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಹಾಗೂ ಕಸ್ತೂರಬಾ ವೈದ್ಯಕೀಯ ಕಾಲೇಜಿನ ವಿಧಿವಿಜ್ಞಾನ ವಿಭಾಗಗಳಿಗೆ ಕಳುಹಿಸಿಕೊಡಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಈವರೆಗಿನ ಶೋಧ ಕಾರ್ಯಕ್ಕೆ ಸಂಬಂಧಿಸಿದ ತನಿಖೆಗೆ ಸಾಕಷ್ಟು ಸಮಯಬೇಕು. ಅಗತ್ಯ ನೋಡಿಕೊಂಡು ಶೋಧ ಕಾರ್ಯ ಮುಂದುವರಿಸುತ್ತೇವೆ' ಎಂದು ಮೂಲಗಳು ತಿಳಿಸಿವೆ.

ಸದ್ಯಕ್ಕೆ ಎಸ್‌ಐಟಿ, ಹೊಸತಾಗಿ ಬಂದ ದೂರುಗಳಿಗೆ ಸಂಬಂಧಿಸಿದ ತನಿಖೆ ಆರಂಭಿಸಿಲ್ಲ. ಸಾಕ್ಷಿ ದೂರುದಾರ ಮಾಡಿರುವ ಆರೋಪಗಳ ತನಿಖೆ ಒಂದು ಹಂತಕ್ಕೆ ಬಂದ ಬಳಿಕವಷ್ಟೇ ಉಳಿದ ದೂರುಗಳ ತನಿಖೆ ನಡೆಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರ ತೋರಿಸಿರುವ 18 ಜಾಗಗಳ ಪೈಕಿ ಈವರೆಗೆ 17 ಕಡೆ ನೆಲ ಅಗೆದಿದ್ದು, ಎರಡು ಕಡೆ ಮೃತದೇಹಗಳ ಅವಶೇಷಗಳು ಸಿಕ್ಕಿವೆ. ಶನಿವಾರ ಹೊಸ ಜಾಗ ತೋರಿಸಿಲ್ಲ.

ಮೃತದೇಹ ವಿಲೇವಾರಿಯಲ್ಲಿ ಲೋಪ: '13ರಿಂದ 15 ವರ್ಷದೊಳಗಿನ ಬಾಲಕಿಯ ಮೃತದೇಹ ಹೂತು ಹಾಕಿದ ಬಗ್ಗೆ ತನಿಖೆ ನಡೆಸುವಂತೆ ಎಸ್‌ಐಟಿಗೆ ಆ. 4ರಂದು ದೂರು ನೀಡಿದ್ದೆ. ಅಧಿಕಾರಿಗಳಿಗೂ ಮಾಹಿತಿ ನೀಡಿದ್ದೇನೆ. ಕೃತ್ಯ ನಡೆದಾಗ ಜೊತೆಗಿದ್ದವರ ಬಗ್ಗೆ ತಿಳಿಸಿದ್ದೆ. ಎಸ್‌ಐಟಿಯವರು ಅವರ ಮನೆಗೆ ಹೋಗಿ ಮಾಹಿತಿ ಪಡೆದಿದ್ದು, ಗುರುವಾರ ಸ್ಥಳ ಮಹಜರು ನಡೆಸಿದ್ದಾರೆ. ಇನ್ನಷ್ಟೇ ನಾನು ತೋರಿಸಿದ್ದ ಜಾಗ ಅಗೆಯಬೇಕಿದೆ' ಎಂದು ಕಡಬ ತಾಲ್ಲೂಕು ಇಚ್ಲಂಪಾಡಿಯ ಜಯಂತ್ ಟಿ. ಸುದ್ದಿಗಾರರಿಗೆ ತಿಳಿಸಿದರು.

ಬೆಳ್ತಂಗಡಿ ಎಸ್‌ಐಟಿ ಕಚೇರಿಯಲ್ಲಿ ಹೇಳಿಕೆ ದಾಖಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡುತ್ತಾ, '2010ರ ಏ. 6 ರಂದು ಧರ್ಮಸ್ಥಳದ ವಸತಿಗೃಹವೊಂದರಲ್ಲಿ 35ರಿಂದ 40 ವರ್ಷದ ಮಹಿಳೆ ಕೊಲೆ ಕುರಿತು ಮಾಹಿತಿ ಹಕ್ಕಿನಡಿ ಪೊಲೀಸರು ಮಾಹಿತಿ ನೀಡಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿದ ದಿನವೇ, ದಫನ ಮಾಡಿದ್ದಾರೆ. ಮೃತ ವ್ಯಕ್ತಿ ಯಾರು ಎಂದು ತಿಳಿಯುವ ಯತ್ನ ನಡೆದಿಲ್ಲ. ಪ್ರಕರಣ ಮುಚ್ಚಿ ಹಾಕಿದ್ದು ಯಾರು' ಎಂದು ಪ್ರಶ್ನಿಸಿದರು.

'ಮಾಹಿತಿ ಹಕ್ಕಿನಡಿ 1995ರಿಂದ 2024ರವರೆಗೆ ಧರ್ಮಸ್ಥಳದಲ್ಲಿ ಸಂಭವಿಸಿದ್ದ 160 ಅಸಹಜ ಸಾವುಗಳ ಮಾಹಿತಿ ಪಡೆದಿದ್ದೇನೆ. ಕೆಲ ಮೃತದೇಹಗಳು ಬಸ್‌ನಿಲ್ದಾಣದ ಬಳಿ, ದ್ವಾರದ ಬಳಿ, ಬೆಟ್ಟಕ್ಕೆ ಹೋಗುವ ದಾರಿಯ ಬಳಿ ಸಿಕ್ಕಿವೆ. ಆತ್ಮಹತ್ಯೆ ಮಾಡಿಕೊಂಡವರ ದೇಹಗಳು ಇವೆ. ಇವನ್ನು ಅದೇ ದಿನ ದಫನ ಮಾಡಿದ್ದು ಸರಿಯೇ' ಎಂದು ಪ್ರಶ್ನಿಸಿದರು.

ಸಾಕ್ಷಿದಾರರಿಗೆ ಬೆದರಿಕೆ: 'ಸಾಕ್ಷಿದಾರರೊಬ್ಬರಿಗೆ ಧರ್ಮಸ್ಥಳ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಬೆದರಿಕೆ ಒಡ್ಡಿದ್ದಾರೆ. ಬೆದರಿಕೆ ಒಡ್ಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯ ಠಾಣೆಗೆ ದೂರು ನೀಡಿದ್ದೇವೆ' ಎಂದು ಜಯಂತ್ ಟಿ. ತಿಳಿಸಿದರು.

ಶಾಸಕ ಎಸ್‌ಆರ್.ವಿಶ್ವನಾಥ್ ನೇತೃತ್ವದಲ್ಲಿ ಬೆಂಗಳೂರಿನಿಂದ ಹೊರಟ 'ಧರ್ಮಸ್ಥಳ ಚಲೊ' ಯಾತ್ರೆ ಧರ್ಮಸ್ಥಳ ಕ್ಷೇತ್ರವನ್ನು ಶನಿವಾರ ತಲುಪಿತು

'ಧರ್ಮಸ್ಥಳ ತಲುಪಿದ ಶಾಸಕ ವಿಶ್ವನಾಥ್ ನೇತೃತ್ವದ ಯಾತ್ರೆ'

ಕ್ಷೇತ್ರ ಕುರಿತು ಅಪಪ್ರಚಾರ ತಡೆಗೆ ಒತ್ತಾಯಿಸಿ ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ಬೆಂಗಳೂರಿನಿಂದ ಹೊರಟ 'ಧರ್ಮಸ್ಥಳ ಚಲೊ' ಯಾತ್ರೆ ಶನಿವಾರ ಸಂಜೆ ಧರ್ಮಸ್ಥಳ ತಲುಪಿತು. ಯಾತ್ರೆಯಲ್ಲಿ ಪಾಲ್ಗೊಂಡವರು ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಎಸ್.ಆರ್. ವಿಶ್ವನಾಥ್, 'ತನಿಖೆ ವರದಿ ಬಂದ ಬಳಿಕ ಮೊದಲು ಸಾಕ್ಷಿ ದೂರುದಾರನ ವಿಚಾರಣೆ ಮಾಡಬೇಕು. ಆತನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು' ಎಂದು ಒತ್ತಾಯಿಸಿದರು.

'ದೂರುದಾರ ಮುಖ ಮುಚ್ಚಿಕೊಂಡಿರುವುದು ಏಕೆ. ಅವನ ಹೆಸರನ್ನು ಎಸ್‌ಐಟಿ ಬಹಿರಂಗ ಮಾಡುತ್ತಿಲ್ಲವೇಕೆ. ಆತ ಮತಾಂತರಗೊಂಡ ವ್ಯಕ್ತಿ. ಮೂರು ಮದುವೆಯಾಗಿದ್ದಾನೆ ಎಂಬ ಮಾಹಿತಿ ಇದೆ' ಎಂದರು.

'ಎಸ್‌ಡಿಪಿಐ ಹಾಗೂ ಎಡಪಂಥೀಯರ ಷಡ್ಯಂತ್ರದಿಂದ ಸರ್ಕಾರ ಎಸ್‌ಐಟಿಯನ್ನು ರಚಿಸಲಾಗಿದೆ. ಯೂಟ್ಯೂಬರ್‌ಗಳು ಹಾಗೂ ಬೇರೆ ಬೇರೆಯವರು ಸೇರಿ ಅಂತರರಾಷ್ಟ್ರೀಯ ಷಡ್ಯಂತ್ರ ಮಾಡಿದ್ದಾರೆ. ಹೊರದೇಶಗಳಿಂದಲೂ ಹಣ ಸಂದಾಯವಾಗಿರಬಹುದು' ಎಂದರು.

ಬಿಜೆಪಿಯಿಂದ ರಾಜಕೀಯಕ್ಕೆ ಧರ್ಮಸ್ಥಳ ಬಳಕೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳ ಪ್ರಕರಣವನ್ನು ಬಿಜೆಪಿ ನಾಯಕರು ರಾಜಕಾರಣಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ದೂರು ಕೊಟ್ಟಾಗ, ಎಸ್‌ಐಟಿ ರಚನೆ ಆದಾಗ ಏಕೆ ಮೌನವಾಗಿದ್ದರು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಮುಸುಕುಧಾರಿ ವ್ಯಕ್ತಿ ದೂರು ಸಲ್ಲಿಸಿದಾಗ, ಎಸ್‌ಐಟಿ ರಚಿಸಿದಾಗ ಬಿಜೆಪಿ ನಾಯಕರು ಮಾತೇ ಆಡಲಿಲ್ಲ. ಈಗ ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ಧರ್ಮಸ್ಥಳದ ಮೇಲೆ ಪ್ರೀತಿ ಇಲ್ಲ, ರಾಜಕೀಯಕ್ಕಾಗಿ ಧರ್ಮಸ್ಥಳ ಬೇಕಿದೆ ಅಷ್ಟೆ. ದೂರು ನೀಡಿದ ನಂತರವೂ ಸರ್ಕಾರ ತನಿಖೆ ಮಾಡದಿದ್ದರೆ ಏನು ಹೇಳುತ್ತಿದ್ದರು? ಟೀಕೆ ಮಾಡುತ್ತಿರಲಿಲ್ಲವೆ? ರಾಜಕೀಯಕ್ಕಿಂತ ಧರ್ಮಸ್ಥಳದ ಗೌರವ ಕಾಪಾಡುವುದು ನಮ್ಮ ಚಿಂತನೆ' ಎಂದರು.

'ಧರ್ಮಸ್ಥಳದ ವಿಚಾರದಲ್ಲಿ ಷಡ್ಯಂತ್ರ ನಡೆಯುತ್ತಿದೆ ಎಂಬುದು ನನ್ನ ವೈಯಕ್ತಿಕ ಹೇಳಿಕೆ. ತಪ್ಪು ಯಾರೇ ಮಾಡಿದ್ದರೂ ಶಿಕ್ಷೆ ಆಗಬೇಕು. ಎಸ್‌ಐಟಿ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಕಾಂಗ್ರೆಸ್ ಶಾಸಕರು ಶಾಸಕಾಂಗ ಸಭೆಯಲ್ಲೇ ಧರ್ಮಸ್ಥಳದ ಪರ ಧ್ವನಿ ಎತ್ತಿದ್ದರು. ಬಿಜೆಪಿ ಶಾಸಕರು ಸದನದಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇವೆ' ಎಂದು ಹೇಳಿದರು.

> ಧರ್ಮಸ್ಥಳದ ವಿಚಾರದಲ್ಲಿ ಒಬ್ಬ ವ್ಯಕ್ತಿ ಕುಮ್ಮಕ್ಕು ನೀಡುತ್ತಿದ್ದಾನೆ. ಆತ ಮುಖ್ಯಮಂತ್ರಿ ಅವರನ್ನೇ ಕೊಲೆಗಾರ ಎಂದಿದ್ದಾನೆ. ನಮಗೆ ಮಾಹಿತಿ ಇದೆ.
> **ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ

> ಧರ್ಮಸ್ಥಳ ಪ್ರಕರಣದ ತನಿಖೆ ನಡೆಯುತ್ತಿದ್ದು, ಎಸ್‌ಐಟಿ ವರದಿ ನೀಡುವವರೆಗೂ ಏನೂ ಹೇಳುವುದಿಲ್ಲ. ಬಳಿಕ ಮುಖ್ಯಮಂತ್ರಿ ಜತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು
> **ಜಿ.ಪರಮೇಶ್ವರ,** ಗೃಹ ಸಚಿವ

'ಒಂದು ವಾರ ಶಿವ ಪಂಚಾಕ್ಷರಿ ಪಠಣ'

ಮಂಗಳೂರು: 'ಧರ್ಮಸ್ಥಳ ಕ್ಷೇತ್ರದ ವಿರುದ್ಧದ ಷಡ್ಯಂತ್ರಗಳಿಗೆ ಸೋಲುಂಟಾಗಲಿ. ಅಪಪ್ರಚಾರ ನಿಲ್ಲಲಿ, ಕ್ಷೇತ್ರದಲ್ಲಿ ಶ್ರದ್ಧೆ ಭಕ್ತಿ ಬೆಳಗಿ ಶಾಂತಿ ನೆಲಸಲಿ' ಎಂಬ ಸಂಕಲ್ಪದೊಂದಿಗೆ ಇದೇ 18ರಿಂದ ಒಂದು ವಾರ ರಾಜ್ಯದಾದ್ಯಂತ ಸಾಮೂಹಿಕ ಶಿವ ಪಂಚಾಕ್ಷರಿ (ಓಂ ನಮಃ ಶಿವಾಯ) ಜಪ ಅನುಷ್ಠಾನ ಮಾಡುವಂತೆ ವಿಶ್ವ ಹಿಂದೂ ಪರಿಷದ್ ಹೇಳಿದೆ. 'ಮಂಗಳೂರಿನ ಕದ್ರಿ ಮಂಜುನಾಥ ಕ್ಷೇತ್ರದಲ್ಲಿ ಇದೇ 18ರಂದು ಬೆಳಿಗ್ಗೆ 9ಕ್ಕೆ ಶಿವ ಪಂಚಾಕ್ಷರಿ ಜಪ ಅನುಷ್ಠಾನ ಪ್ರಾರಂಭಗೊಳ್ಳಲಿದೆ. ಹಿಂದೂಗಳು ತಮ್ಮ ಮನೆಗಳಲ್ಲಿ ಮಾಡಬೇಕು' ಎಂದು ವಿಎಚ್‌ಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಕೆ ಪುರುಷೋತ್ತಮ, ಕಾರ್ಯದರ್ಶಿ ರವಿ ಅಸೈಗೋಳಿ ಕೋರಿದ್ದಾರೆ.

'ಧರ್ಮಸ್ಥಳ': ಮಧ್ಯಂತರ ವರದಿ ಮಂಡಿಸಿ'

ಹುಬ್ಬಳ್ಳಿ: 'ಧರ್ಮಸ್ಥಳ ಪ್ರಕರಣ ಕುರಿತು ಸರ್ಕಾರ ಮಧ್ಯಂತರ ವರದಿ ಮಂಡಿಸಬೇಕು. ಸಾಕ್ಷಿ ದೂರುದಾರನ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇಲ್ಲಿ ಆಗ್ರಹಿಸಿದರು. 'ಈ ವಿಷಯದಲ್ಲಿ ಷಡ್ಯಂತ್ರ ನಡೆದಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಯಾರು ಮಾಡುತ್ತಾರೆ' ಎಂದು ಪ್ರಶ್ನಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.40	11,451	11,080
ಹಾರಂಗಿ	2,859	2,857.10	6,246	6,100
ಕಬಿನಿ	2,284.00	2,282.71	8,727	3,250
ಹೇಮಾವತಿ	2,922	2,921.85	8,475	7,300
ಲಿಂಗನಮಕ್ಕಿ	1,819	1,812.75	32,044	6,249
ಸೂಪಾ (ಮೀ)	564	552.45	20,283	252.84
ಮಾಣಿ	595	591.10	4,148	538
ತುಂಗಭದ್ರಾ	1,633	1,626.06	28,721	28,567
ಮಲಪ್ರಭಾ	2,079.5	2,077.05	1,745	194
ಘಟಪ್ರಭಾ	2175	2,172.70	7,258	2,679
ಭದ್ರಾ *	186	185	17,007	13,408
ಆಲಮಟ್ಟಿ (ಮೀ)	519.6	519.57	23,343	25,380
ನಾರಾಯಣಪುರ (ಮೀ)	492.25	492.23	45,000	52,350

* ನೆಲಮಟ್ಟದಿಂದ

ಮಳೆ: ಗೋಡೆ ಕುಸಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಮಳೆ ಶನಿವಾರವೂ ಮುಂದುವರಿದಿದೆ. ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಭೋಸಗಾ ಗ್ರಾಮದಲ್ಲಿ ಶಿಥಿಲಗೊಂಡಿದ್ದ ಮನೆಯ ಗೋಡೆ ಕುಸಿದು ಲಕ್ಷ್ಮಿಬಾಯಿ ಬಿರಾದಾರ (55) ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಅಫಜಲಪುರ ತಹಶೀಲ್ದಾರ್ ಸಂಜುಕುಮಾರ ದಾಸರ ಭೇಟಿ ನೀಡಿ ಪರಿಶೀಲಿಸಿದರು. ತಾಲ್ಲೂಕಿನಲ್ಲಿ 50 ಮನೆಗಳು ಕುಸಿದು ಬಿದ್ದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀದರ್ ಜಿಲ್ಲೆಯ ಔರಾದ್ ಹಾಗೂ ಹುಲಸೂರು ತಾಲ್ಲೂಕು ವ್ಯಾಪ್ತಿಯಲ್ಲಿ ತಲಾ ನಾಲ್ಕು, ಕಮಲನಗರ ತಾಲ್ಲೂಕಿನಲ್ಲಿ ಒಂದು ಮನೆಗೆ ಹಾನಿಯಾಗಿದೆ.

ಮಹಾರಾಷ್ಟ್ರದಿಂದ ಮುನ್ಸೂಚನೆ ಇಲ್ಲದೆ ನೀರು ಹರಿಸಿರುವ ಕಾರಣ ಮಾಂಜ್ರಾ ನದಿಯಲ್ಲಿ ಪ್ರವಾಹ ಉಂಟಾಗಿ ಹುಲಸೂರ ತಾಲ್ಲೂಕಿನ ನದಿ ಪಾತ್ರದ ಜಮೀನುಗಳಿಗೆ ನೀರು ನುಗ್ಗಿದೆ. ಬಸನಾಳ-ಕೋರಿಯಾಳ ಮಧ್ಯದ ಸೇತುವೆ ಮೂಲಕ ಸಂಪರ್ಕ ಕಡಿತಗೊಂಡಿತ್ತು.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಹಲವೆಡೆ ಶನಿವಾರವೂ ಭಾರಿ ಮಳೆ ಮುಂದುವರಿದಿದೆ. ಮಡಿಕೇರಿ ನಗರ ಸೇರಿ ತಾಲ್ಲೂಕಿನಾದ್ಯಂತ ಬಿರುಸಿನ ಮಳೆಯಾಗಿದೆ. ಸಂಪಾಜೆಯಲ್ಲಿ 11 ಸೆಂ.ಮೀ, ಶಾಂತಳ್ಳಿಯಲ್ಲಿ 10, ಮಡಿಕೇರಿ 7, ವಿರಾಜಪೇಟೆ, ಸೋಮವಾರಪೇಟೆ, ಶನಿವಾರಸಂತೆಯಲ್ಲಿ ತಲಾ 4 ಸೆಂ.ಮೀನಷ್ಟು ಮಳೆಯಾಗಿದೆ.

ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಬಸನಾಳ–ಕೋರಿಯಾಳ ಗ್ರಾಮದ ಮಧ್ಯದ ಸೇತುವೆ ಜಲಾವೃತಗೊಂಡಿತ್ತು

ಸಕಲೇಶಪುರ–ಸುಬ್ರಹ್ಮಣ್ಯ ನಡುವಿನ ರೈಲು ಮಾರ್ಗದ ರೈಲು ಹಳಿ ಮೇಲೆ ಎಡಕುಮೇರಿ ಬಳಿ ಶನಿವಾರ ಮಣ್ಣು ಕುಸಿದಿದೆ

ರೈಲು ಹಳಿ ಮೇಲೆ ಮಣ್ಣು ಕುಸಿತ

ಹಾಸನ: ಸಕಲೇಶಪುರ-ಸುಬ್ರಹ್ಮಣ್ಯ ರೋಡ್ ನಿಲ್ದಾಣಗಳ ನಡುವೆ ಮೂರು ಕಡೆ ಸಣ್ಣಪ್ರಮಾಣದಲ್ಲಿ ಮಣ್ಣು ಕುಸಿದಿದ್ದು, ಕೆಲಕಾಲ ರೈಲು ಸಂಚಾರ ಸ್ಥಗಿತವಾಗಿತ್ತು.

'ಮಂಗಳೂರಿನಿಂದ ಹೊರಟಿದ್ದ ಮಂಗಳೂರು-ವಿಜಯಪುರ (ರೈ.ಸಂ. 07378) ರೈಲನ್ನು ಬಂಟ್ವಾಳದಲ್ಲಿ ನಿಲುಗಡೆ ಮಾಡಲಾಗಿತ್ತು. ಎಲ್ಲ ಕಡೆ ಮಣ್ಣು ತೆರವುಗೊಳಿಸಲಾಗಿದ್ದು, ಶೀಘ್ರವೇ ರೈಲು ಸಂಚಾರ ಆರಂಭವಾಗಲಿದೆ' ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಶಿರಾಡಿ ಘಾಟ್ ಮಾರ್ಗದಲ್ಲೂ ಗುಡ್ಡ ಕುಸಿದು, ಸಂಚಾರ ಬಂದ್ ಆಗಿದೆ.

'ಒಳಮೀಸಲಾತಿ ಜಾರಿ ಆಗದಿದ್ದರೆ ಹೋರಾಟ'

ವಿಜಯಪುರ: 'ಒಳಮೀಸಲಾತಿಗೆ ಸಂಬಂಧಿಸಿದಂತೆ ಆಗಸ್ಟ್ 19ರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳದಿದ್ದರೆ, ಈ ಕುರಿತು 'ಮಾಡು ಇಲ್ಲವೇ ಮಡಿ' ಸ್ವರೂಪದ ಹೋರಾಟ ನಡೆಯಲಿದೆ' ಎಂದು ಸಂಸದ ಗೋವಿಂದ ಕಾರಜೋಳ ಶನಿವಾರ ಇಲ್ಲಿ ತಿಳಿಸಿದರು.

'ಒಳ ಮೀಸಲಾತಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರವೇ ಈ ಹಿಂದೆ ರಚಿಸಿದ ವಿವಿಧ ಆಯೋಗಗಳು, ಜೊತೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚನೆಯಾಗಿದ್ದ ಮಾಧುಸ್ವಾಮಿ ಸಮಿತಿ ವರದಿ ಇದೆ. ಈ ಪೈಕಿ ಯಾವುದಾದರೂ ಒಂದು ವರದಿಯನ್ನು ಸರ್ಕಾರ ಒಪ್ಪಿ, ತಿದ್ದುಪಡಿ ಮಾಡಿಯಾದರೂ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

'ಒಳಮೀಸಲಾತಿ ಜಾರಿಗೊಳಿಸಲು ಆಗದಿದ್ದರೆ, ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಬೇಕು. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಅನುಷ್ಠಾನಕ್ಕೆ ತರುವುದೇ ಸರ್ಕಾರದ ಆದ್ಯ ಕರ್ತವ್ಯ' ಎಂದರು.

ಬೆಂಗಳೂರು ನಗರದಲ್ಲಿ ಅವಘಡ: ಪಕ್ಕದ ಕಟ್ಟಡಗಳಿಗೆ ಜಿಗಿದು 17 ಮಂದಿ ಪಾರು

ಅಗ್ನಿ ದುರಂತದಲ್ಲಿ ಬೆಂದು ಹೋದ ಕುಟುಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವರೆಲ್ಲರೂ ಮುಂಜಾನೆಯ ನಿದ್ರೆಯಲ್ಲಿ ಇದ್ದರು. ಒಬ್ಬರು ನೆಲ ಅಂತಸ್ತಿನಲ್ಲಿ ಮುಂಜಾನೆಯೇ ಪ್ಯಾಕಿಂಗ್ ಕೆಲಸದಲ್ಲಿ ಮಗ್ನರಾಗಿದ್ದರು. ನೆಲ ಅಂತಸ್ತಿನಲ್ಲಿ ಕಾಣಿಸಿಕೊಂಡ ಬೆಂಕಿ, ಕ್ಷಣಾರ್ಧದಲ್ಲಿ ವ್ಯಾಪಿಸಿ ಬೇರೆ ಬೇರೆ ಅಂತಸ್ತಿನಲ್ಲಿದ್ದವರು ದುರಂತವಾಗಿ ಸಾವು ಕಂಡರು...

ಶನಿವಾರ ನಸುಕಿನ ವೇಳೆ ನಗರ್ತಪೇಟೆಯಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿದ್ದು, ಮೃತರ ಸಂಬಂಧಿಕರ ಆಕ್ರಂದನ ಅಲ್ಲಿ ಮಡುಗಟ್ಟಿತ್ತು.

ಆಡುಗೋಡಿಯ ಶ್ರೀರಾಮ ಕಾಲೊನಿಯಲ್ಲಿ ಶುಕ್ರವಾರವಷ್ಟೇ ಅಡುಗೆ ಅನಿಲ ಸೋರಿಕೆಯಿಂದ ಬಾಲಕ ಮೃತಪಟ್ಟು, 9 ಮಂದಿ ಮಂದಿ ಗಾಯಗೊಂಡಿದ್ದರು. ಮರುದಿನವೇ ಮತ್ತೊಂದು ದೊಡ್ಡ ದುರಂತಕ್ಕೆ ನಗರ ಸಾಕ್ಷಿ ಆಯಿತು. ಬಾಲಕೃಷ್ಣ ಶೆಟ್ಟಿ ಹಾಗೂ ಸಂದೀಪ್ ಶೆಟ್ಟಿ ಅವರಿಗೆ ಸೇರಿದ ಕೃಷ್ಣ ಕಾಂಪ್ಲೆಕ್ಸ್‌ನಲ್ಲಿ ಅಗ್ನಿ ದುರಂತ ಸಂಭವಿಸಿದೆ.

ನಾಲ್ಕು ಅಂತಸ್ತಿನ ಕಟ್ಟಡದ ನೆಲ ಅಂತಸ್ತಿನಲ್ಲಿ ಫ್ಲೋರ್ ಮ್ಯಾಟ್, ಬಟ್ಟೆ ಹಾಗೂ ಪ್ಲಾಸ್ಟಿಕ್ ವಸ್ತುಗಳನ್ನು ತುಂಬಿ ಇಡಲಾಗಿತ್ತು. ಆ ಮಳಿಗೆಯಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ನೆಲ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದ ಮದನ್ ಕುಮಾರ್ ಅವರಿಗೆ ಹೊರಗೆ ಬರಲು ಸಾಧ್ಯವಾಗದೇ ಮೃತಪಟ್ಟರು. ಅವರ ಪತ್ನಿ ಹಾಗೂ ಇಬ್ಬರು ಮಕ್ಕಳು ಎರಡನೇ ಮಹಡಿಯಲ್ಲಿ ಮಲಗಿದ್ದರು. ಸುರೇಶ್‌ಕುಮಾರ್ ಅವರು ಮೂರನೇ ಮಹಡಿಯಲ್ಲಿ ಇದ್ದರು. ಅವರಿಗೂ ಹೊರಗೆ ಬರಲು ಸಾಧ್ಯವಾಗದೆ ಮೃತಪಟ್ಟರು. ಎರಡನೇ ಮಹಡಿ ಹಾಗೂ ನಾಲ್ಕನೇ ಮಹಡಿಯಲ್ಲಿದ್ದ 17 ಮಂದಿ ಬೇರೊಂದು ಕಟ್ಟಡಕ್ಕೆ ಜಿಗಿದು ಪಾರಾಗಿದ್ದಾರೆ.

ದಟ್ಟೈಸಿದ ಹೊಗೆ: ಮಾಹಿತಿ ತಿಳಿದ ತಕ್ಷಣವೇ ಶನಿವಾರ ನಸುಕಿನ ವೇಳೆ 6 ಅಗ್ನಿಶಾಮಕ ವಾಹನಗಳು, 50ಕ್ಕೂ ಅಧಿಕ ಸಿಬ್ಬಂದಿ, ಎಸ್‌ಡಿಆರ್‌ಎಫ್, ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿದರು. ದಟ್ಟ ಹೊಗೆ ಹಾಗೂ ಪ್ರಖರವಾಗಿ ಬೆಂಕಿ ಉರಿಯುತ್ತಿದ್ದರಿಂದ ಕಾರ್ಯಾಚರಣೆಗೆ ಅಡ್ಡಿ ಉಂಟಾಗಿತ್ತು. ಹರಸಾಹಸಪಟ್ಟು ಕಟ್ಟಡದ ಒಳಗೆ ಹೋಗಿ ಬೆಂಕಿಯನ್ನು ಹತೋಟಿಗೆ ತರಲಾಯಿತು. ಶನಿವಾರ ಮಧ್ಯಾಹ್ನ 3ರವರೆಗೂ ಕಾರ್ಯಾಚರಣೆ ನಡೆಸಲಾಯಿತು.

ಸತತ ಕಾರ್ಯಾಚರಣೆ: ನಿರಂತರವಾಗಿ ಕಾರ್ಯಾಚರಣೆಯಿಂದ ನೆಲಅಂತಸ್ತಿನಲ್ಲಿ ಒಂದು ಮೃತದೇಹ ಪತ್ತೆಯಾಯಿತು. ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಸಂಪೂರ್ಣವಾಗಿ ಬೆಂಕಿ ಆವರಿಸಿತ್ತು. ಸತತ ಕಾರ್ಯಾಚರಣೆ ಬಳಿಕ ಎರಡನೇ ಮಹಡಿಯಲ್ಲಿ ಮತ್ತೊಂದು ಮೃತದೇಹ ಪತ್ತೆ ಆಯಿತು. ಭಾರಿ ಹೊಗೆಯ ನಡುವೆಯೂ ಕಾರ್ಯಾಚರಣೆ ಮುಂದುವರೆಸಿ ಮೂರನೇ ಮಹಡಿಯಲ್ಲಿದ್ದ ಮೂರು ಮೃತದೇಹಗಳನ್ನು ಹೊರಗೆ ತೆಗೆಯಲಾಯಿತು. ಘಟನೆಗೆ ನಿಖರ ಕಾರಣ ಏನು ಎಂದು ತಿಳಿಯಬೇಕಿದೆ. ಕಟ್ಟಡದಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗಿತ್ತೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯ ನಿರ್ದೇಶಕ ಶಿವಶಂಕರ್ ತಿಳಿಸಿದ್ದಾರೆ.

ಮೃತಪಟ್ಟ ತಾಯಿ ಸಂಗೀತಾ ಹಾಗೂ ಮಗು

ಬೆಂಗಳೂರಿನ ನಾಗರತ್ ಪೇಟೆಯಲ್ಲಿ ಶನಿವಾರ ಸಂಭವಿಸಿದ ಬೆಂಕಿ ಅವಘಡದ ನಂತರ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಿಯಂತ್ರಿಸಿದರು

ಪರಿಹಾರ ವಿತರಣೆ

ಚಿನ್ನಯ್ಯನಪಾಳ್ಯ ಹಾಗೂ ನಗರ್ತಪೇಟೆಯಲ್ಲಿ ಸಂಭವಿಸಿದ ಅವಘಡ ಸ್ಥಳಕ್ಕೆ ಭೇಟಿ ನೀಡಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ನೀಡಿದರು.

ಚಿನ್ನಯ್ಯನಪಾಳ್ಯದಲ್ಲಿ ಮೃತಪಟ್ಟ ಮುಬಾರಕ್ ಕುಟುಂಬಕ್ಕೆ ₹5 ಲಕ್ಷ ಪರಿಹಾರ ವಿತರಣೆ ಮಾಡಿದರು. ಗಾಯಾಳುಗಳಿಗೆ ಪರಿಹಾರ ವಿತರಿಸಿದರು.


ಗಡಿಗೆ ಒಡೆಯಲು ಸಾಹಸ...

ಚಿತ್ರ: ಗೋವಿಂದರಾಜ ಜವಳಿ

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಹುಬ್ಬಳ್ಳಿಯ ಸಂತೆ ಮೈದಾನದಲ್ಲಿ ಶನಿವಾರ ನಡೆದ ಮೊಸರು ಗಡಿಗೆ ಒಡೆಯುವ ಸ್ಪರ್ಧೆಯಲ್ಲಿ ಯುವಕರು ಪಾಲ್ಗೊಂಡಿದ್ದರು

ವಿದ್ಯಾರ್ಥಿಗಳ ಸಂಖ್ಯೆ ಆಧರಿಸಿ ಶಾಲಾ ನಿರ್ವಹಣಾ ಅನುದಾನ ಹಂಚಿಕೆಗೆ ಶಿಕ್ಷಕರ ಒತ್ತಾಯ

ಅಸಮಾಧಾನಕ್ಕೆ ಕಾರಣವಾಗುವ 'ಅನುದಾನ'

• ಸಂಧ್ಯಾ ಹೆಗಡೆ

ಮಂಗಳೂರು: ಸರ್ಕಾರಿ ಶಾಲೆಗಳ ವಾರ್ಷಿಕ ನಿರ್ವಹಣೆಗೆ ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಿಂದ ಬಿಡುಗಡೆಯಾಗುವ ಶಾಲಾನುದಾನ ಹಾಗೂ ಕ್ರೀಡಾ ಅನುದಾನದ ಹಂಚಿಕೆಯ ಮಾನದಂಡ ಶಿಕ್ಷಕರ ನಡುವೆ ಅಸಮಾಧಾನಕ್ಕೆ ಕಾರಣವಾಗುತ್ತಿದೆ.

ಪ್ರೌಢಶಿಕ್ಷಣ ಇರುವ ಶಾಲೆಗಳು, ಪ್ರೌಢಶಾಲಾ ವಿಭಾಗ ಹಾಗೂ ಪದವಿಪೂರ್ವ ಶಿಕ್ಷಣ ಹೊಂದಿರುವ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಏಕರೂಪದ ಅನುದಾನ ಹಂಚಿಕೆ ಆಗುತ್ತಿರುವುದು ಇದಕ್ಕೆ ಕಾರಣ ಎಂಬುದು ಶಿಕ್ಷಕರ ಅಭಿಪ್ರಾಯ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿ (ಆರ್‌ಎಂಎಸ್‌ಎ) ಬರುವ ಶಾಲೆಗಳಲ್ಲಿ 1ರಿಂದ 10ನೇ ತರಗತಿಗಳು ಇರುತ್ತವೆ. ಅದೇ ರೀತಿ ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಪ್ರೌಢಶಾಲಾ ವಿಭಾಗ ಮತ್ತು ಪದವಿಪೂರ್ವ ಕಾಲೇಜುಗಳು ಇರುತ್ತವೆ. ಆದರೆ, ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ (8ರಿಂದ 10ನೇ ತರಗತಿ) ಇರುವ ಶಾಲೆಗಳಿಗೆ ದೊರೆತಷ್ಟೇ ಮೊತ್ತದ ಅನುದಾನ ಆರ್‌ಎಂಎಸ್‌ಎ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ದೊರೆಯುತ್ತದೆ ಎನ್ನುತ್ತಾರೆ ಶಿಕ್ಷಕರೊಬ್ಬರು.

'ಶಾಲಾ ಅನುದಾನವನ್ನು ಪೀಠೋಪಕರಣ ದುರಸ್ತಿ, ಶೌಚಾಲಯ ನಿರ್ವಹಣೆ, ಕಚೇರಿ ನಿರ್ವಹಣೆ ಸೇರಿದಂತೆ ನಿಗದಿತ 10 ಅಂಶಗಳಿಗೆ ವ್ಯಯಿಸಲು ಅವಕಾಶ ಇದೆ. ಶಾಲೆಯಲ್ಲಿ 30 ಮಕ್ಕಳ ಒಳಗೆ ಇದ್ದರೆ ವರ್ಷಕ್ಕೆ ಗರಿಷ್ಠ ₹20 ಸಾವಿರ, 31ರಿಂದ 100 ಮಕ್ಕಳಿದ್ದರೆ ವರ್ಷಕ್ಕೆ ₹50 ಸಾವಿರ, 101ರಿಂದ 250 ಇದ್ದರೆ ₹1 ಲಕ್ಷದವರೆಗೆ, 251ರಿಂದ 1,000 ಇದ್ದರೆ ₹1.5 ಲಕ್ಷದವರೆಗೆ ಅನುದಾನ ಸಿಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಪೂರ್ಣ ಪ್ರಮಾಣದ ಅನುದಾನ ಸಿಗುವುದಿಲ್ಲ. ಇವುಗಳನ್ನು ನಾವು ಹಂಚಿಕೊಂಡು ಬಳಸಬೇಕಾಗುತ್ತದೆ' ಎನ್ನುತ್ತಾರೆ ಅವರು.

'ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಪ್ರೌಢಶಾಲಾ ವಿಭಾಗಗಳಿಗೆ ಸೇರಿದ ಶೌಚಾಲಯಗಳು ಇರುತ್ತವೆ. ಅವುಗಳ ಸ್ವಚ್ಛತೆ, ಕಟ್ಟಡ ದುರಸ್ತಿ ಕಾರ್ಯಗಳನ್ನು ಪ್ರೌಢಶಾಲಾ ವಿಭಾಗದವರೇ ನಿರ್ವಹಿಸುತ್ತಾರೆ. ಆದರೆ, ಹಂಚಿಕೆಯಾಗುವ ಅನುದಾನದಲ್ಲಿ ಪದವಿಪೂರ್ವ ವಿಭಾಗಕ್ಕೆ ಅರ್ಧ ಪಾಲು ನೀಡಬೇಕಾಗುತ್ತದೆ. ಇದರಿಂದ ಶಿಕ್ಷಕರ ನಡುವೆ ಗೊಂದಲ ಸೃಷ್ಟಿಯಾಗುತ್ತಿವೆ' ಎನ್ನುತ್ತಾರೆ ಶಿಕ್ಷಕರ ಸಂಘದ ಪದಾಧಿಕಾರಿಯೊಬ್ಬರು.

ಇದೇ ರೀತಿ ಕ್ರೀಡಾ ಅನುದಾನದ ಹಂಚಿಕೆಯಲ್ಲೂ ಅಸಮಾನತೆ ಇದೆ. ಮೂರು ವರ್ಷಗಳ ಪ್ರೌಢಶಿಕ್ಷಣ ಇರುವ ಶಾಲೆಗಳ ಮಕ್ಕಳಿಗೆ ಹೆಚ್ಚು ಕ್ರೀಡಾ ಸೌಲಭ್ಯಗಳು ದೊರೆಯುತ್ತವೆ. ಹೀಗಾಗಿ, ಮಕ್ಕಳ ಸಂಖ್ಯೆ ಆಧರಿಸಿ ಅನುದಾನ ನಿಗದಿಪಡಿಸಬೇಕು ಅಥವಾ ಪ್ರೌಢಶಾಲೆ ಮತ್ತು ಪದವಿಪೂರ್ವ ವಿಭಾಗಗಳಿಗೆ ಪ್ರತ್ಯೇಕ ಅನುದಾನ ನೀಡಬೇಕು ಎಂಬುದು ಅವರ ಆಗ್ರಹ.

> ಅನುದಾನ ಹಂಚಿಕೆಯಲ್ಲಿ ಅಸಮತೋಲನ ಆಗುತ್ತಿದೆ ಎಂದು ಕೆಲವು ಶಿಕ್ಷಕರು ಸಮಸ್ಯೆ ಹೇಳಿಕೊಂಡಿದ್ದಾರೆ. ಹಿರಿಯ ಅಧಿಕಾರಿಗಳ ಗಮನಕ್ಕೆ ತರುವೆ
> **ಜಿ.ಎಸ್.ಶಶಿಧರ**, ಉಪ ನಿರ್ದೇಶಕ, ಶಿಕ್ಷಣ ಇಲಾಖೆ

ಶಾಲೆ ನಿರ್ವಹಣೆ, ಕ್ರೀಡಾನುದಾನ ಬಿಡುಗಡೆ

ಪಿಎಂಶ್ರೀ ಯೋಜನೆಯಡಿ ಅನುಮೋದಿತ ಶಾಲೆಗಳು, ಶೂನ್ಯ ದಾಖಲಾತಿ ಶಾಲೆಗಳನ್ನು ಹೊರತುಪಡಿಸಿ, ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳ ಸರ್ಕಾರಿ ಪ್ರೌಢಶಾಲೆ, ಹೈಯರ್ ಸೆಕೆಂಡರಿ ಶಾಲೆಗಳು ಸೇರಿ 5,352 ಶಾಲೆಗಳಿಗೆ 2024–25ನೇ ಸಾಲಿನಲ್ಲಿ ಬಾಕಿ ಇದ್ದ ಎರಡನೇ ಹಂತದ ಒಟ್ಟು ₹11.52 ಕೋಟಿ ಶಾಲಾನುದಾನ ಬಿಡುಗಡೆಯಾಗಿದೆ. ಕ್ರೀಡೆ, ದೈಹಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಇದೇ ಮೊದಲಿಗೆ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಸಂಯುಕ್ತ ಪಿಯು ಕಾಲೇಜುಗಳು ಸೇರಿ 29,004 ಶಾಲೆಗಳಿಗೆ 2025–26ನೇ ಸಾಲಿಗೆ ಒಟ್ಟು ₹30.11 ಕೋಟಿ ಅನುದಾನ ಬಿಡುಗಡೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 14 ಕಿರಿಯ ಪ್ರಾಥಮಿಕ ಶಾಲೆಗಳು, 641 ಹಿರಿಯ ಪ್ರಾಥಮಿಕ ಶಾಲೆಗಳು, 114 ಪ್ರೌಢಶಾಲೆಗಳು, 55 ಸಂಯುಕ್ತ ಪದವಿಪೂರ್ವ ಕಾಲೇಜುಗಳು ಒಟ್ಟು ₹90.15 ಲಕ್ಷ ಕ್ರೀಡಾ ಅನುದಾನ ಪಡೆದಿವೆ.

'ದಿ ಡೆವಿಲ್ ಅಡೆತಡೆ ಇಲ್ಲದೆ ಸಾಗಲಿ'

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದುಗೊಂಡು ಮತ್ತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ತಮ್ಮ ಪತ್ನಿ ವಿಜಯಲಕ್ಷ್ಮಿ ಮೂಲಕ ಅಭಿಮಾನಿಗಳಿಗೆ ಸಂದೇಶವೊಂದನ್ನು ಕಳುಹಿಸಿದ್ದಾರೆ.

ಈ ಸಂದೇಶವನ್ನು ವಿಜಯಲಕ್ಷ್ಮಿ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ಇದು ದರ್ಶನ್ ಅವರು ನಿಮಗೆ ಕಳಿಸಿರುವ ಸಂದೇಶ' ಎಂದು ವಿಜಯಲಕ್ಷ್ಮಿ ಪೋಸ್ಟ್‌ನ ಆರಂಭದಲ್ಲಿ ಹೇಳಿದ್ದಾರೆ.

'ಲಯ ಸಾಧಕ ಪಂಡಿತ್ ಸತೀಶ್ ಹಂಪಿಹೊಳಿ' ಅಭಿನಂದನಾ ಸಮಾರಂಭ: ಉಪಸ್ಥಿತಿ: ಸಂತೋಷ್ ಹೆಗ್ಡೆ, ವೂಡೇ ಪಿ. ಕೃಷ್ಣ, ಮನು ಬಳಿಗಾರ್, ಗೀತಾ ರಾಮಾನುಜಂ, ಶ್ರೀನಿವಾಸ ಪ್ರಭು, ಕೆ.ಎನ್. ಚನ್ನೇಗೌಡ, ಸುದರ್ಶನ್ ಚನ್ನಂಗಿಹಳ್ಳಿ, ವಿಶ್ವನಾಥ್ ಪ್ರಸಾದ್ ಎಚ್., ಉಷಾದೇವಿ, ರೇಖಾ ಕೆ. ಗೋವಿಂದ್, ಮೃತ್ಯುಂಜಯ ಶೆಟ್ಟರ್, ಗಾಯನ, ವಾದನ, ನರ್ತನ: ಪ್ರವೀಣ್ ಗೋಡ್ಖಿಂಡಿ, ಪೂರ್ಣಾ ಆಚಾರ್ಯ, ಪ್ರತಿಮಾ ಆತ್ರೇಯ, ಸಂಜೀವ್ ಕೊರ್ತಿ, ಓಜಸ್ ಆದ್ಯ, ಸಂತೋಷ್ ಕುಲಕರ್ಣಿ, ಅರಣ್ಯಕುಮರ್, ಶಿವಲಿಂಗ್ ರಾಜಾಪೂರ್, ಬಾಲಾಜಿ, ಪ್ರಕಾಶ್ ಸಪ್ರೆ, ಶಿವಕುಮಾರ್ ಮಹಾಂತ್, ಆಯೋಜನೆ: ಪಂಡಿತ್ ಸತೀಶ್ ಹಂಪಿಹೊಳಿ ಅಭಿನಂದನಾ ಸಮಿತಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಎಂಟನೇ ಬ್ಲಾಕ್, ಮಧ್ಯಾಹ್ನ 2ರಿಂದ

ದೇವಸ್ಥಾನಗಳಲ್ಲಿ ಕಡ್ಡಾಯವಾಗಿ ಪ್ಲಾಸ್ಟಿಕ್ ನಿಷೇಧದ ಕುರಿತು ಜಾಗೃತಿ ಕಾರ್ಯಕ್ರಮ: ಅತಿಥಿಗಳು: ರಾಮಲಿಂಗಾರೆಡ್ಡಿ, ವೆಂಕಟೇಶ್ ಎಂ.ವಿ., ರವಿಸುಬ್ರಮಣ್ಯ, ಕೆ.ಎಂ. ನಾಗರಾಜ್, ದ್ವಾರಕನಾಥ್, ಆಯೋಜನೆ: ಮುಜರಾಯಿ ಇಲಾಖೆ, ಸ್ಥಳ: ದೊಡ್ಡಗಣಪತಿ ದೇವಸ್ಥಾನ, ಬಸವನಗುಡಿ, ಬೆಳಿಗ್ಗೆ 10.30

ಜತಿನ್ ದಾಸ್ ಅವರ ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ಜಸ್ವೀರ್ ರಾಮ್, ಆಯೋಜನೆ: ಕೃಷ್ಣ ಸೆಟ್ಟಿ ಫೌಂಡೇಷನ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3

ಟಿ. ತಿಮ್ಮೇಗೌಡ ಅವರ ಜನಪರ ಚಿಂತನೆಗಳ ವಿಚಾರ ಸಂಕಿರಣ: ಉದ್ಘಾಟನೆ: ಪಿ.ಜಿ.ಆರ್. ಸಿಂಧ್ಯ, ಉಪಸ್ಥಿತಿ: ಡಿ.ಎನ್. ಮುನಿಕೃಷ್ಣ, ಎಂ.ಕೆ. ಕೆಂಪೇಗೌಡ, ಟಿ. ತಿಮ್ಮೇಶ್, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಶ್ರೀಹರಿ ಭಟ್, ಪಿಟೀಲು: ಅನಿರುದ್ಧ ಭಾರದ್ವಾಜ್, ಮೃದಂಗ: ನಿಕ್ಷಿತ್ ಪುತ್ತೂರು, ಮೋರ್ಸಿಂಗ್: ಚಿದಾನಂದ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಲಾವಣ್ಯ ಕೃಷ್ಣಮೂರ್ತಿ, ಪಿಟೀಲು: ಕಾರ್ತಿಕೇಯ, ಮೃದಂಗ: ರಘು ಭಾಗವತ್, ಆಯೋಜನೆ: ವೆಂಕಟೇಶ್ ಸಂಗೀತ ಸಭಾ ಟ್ರಸ್ಟ್, ಸ್ಥಳ: ಸುಮಧ್ವ ಧಾಮ, ಆರನೇ ಮುಖ್ಯರಸ್ತೆ, ಕೆಎಸ್‌ಆರ್‌ಟಿಸಿ ಬಡಾವಣೆ, ಚಿಕ್ಕಲ್ಲಸಂದ್ರ, ಸಂಜೆ 5.30

ಚಿರಂಜೀವಿ ಸಿಂಘ್

ತಿರುಮಲ ವೆಂಕಟ ದೇವರಾಯ ಅವರ 'ಇನ್ ದಿ ಎಂಪೈರ್ ಆಫ್ ದಿ ಗಾಡ್ ಕಿಂಗ್' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಅತಿಥಿಗಳು: ಎಸ್. ಮುರುಗನ್, ಶ್ರೀಕೃಷ್ಣದೇವರಾಯ, ಅಧ್ಯಕ್ಷತೆ: ಕೆ.ಜಿ. ರಾಘವನ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

'ಪದ್ಮ ಪುರಾಣ' ಧಾರ್ಮಿಕ ಪ್ರವಚನ: ಹೊಳವನಹಳ್ಳಿ ಶ್ರೀನಿವಾಸಾಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

73.	ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ನಿರ್ದೇಶಕರು ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್	214/9	0–24.04	–	0–24.04
74.	ಮೈಸ್ಟೀಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪರವಾಗಿ ಡೈರೆಕ್ಟರ್ ಆದ ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್	214/10	0–34	–	0–34
75.	M/S ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ನಿರ್ದೇಶಕರು ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್	215/1ಎ	3–01.08	–	3–01.08
76.	ಗೋವಿಂದರಾಜು ಬಿನ್ ಅಪ್ಪಯ್ಯಣ್ಣ	215/1ಬಿ1	2–00	–	2–00
77.	ಗಂಗರಾಜು ಬಿನ್ ಅಪ್ಪಯ್ಯಣ್ಣ	215/1ಬಿ2	2–00	–	2–00
78.	ಲಕ್ಷ್ಮಮ್ಮ ಕೋಂ ಲೇಟ್ ಕೃಷ್ಣಪ್ಪ ಉರುಫ್ ಬಾಲಕೃಷ್ಣಪ್ಪ	215/1ಬಿ3	2–00	–	2–00
79.	ತುಳಸಮ್ಮ ಕೋಂ ಸಿ.ಶ್ರೀಕಾಂತಪ್ಪ, ವಸಂತಕುಮಾರಿ ಬಿನ್ ಸಿದ್ದಗಂಗಯ್ಯ, ಚಂದ್ರಕಲಾ ಬಿನ್ ಸಿದ್ದಗಂಗಯ್ಯ, ಸೌಭಾಗ್ಯ ಬಿನ್ ಸಿದ್ದಗಂಗಯ್ಯ	215/2	3–15	0–05	3–10
80.	ಆರ್. ನಂಜಪ್ಪ ಬಿನ್ ಲೇಟ್ ನಾಗರಾಜು, ಸಿದ್ದಲಿಂಗಯ್ಯ ಬಿನ್ ಲೇಟ್ ರುದ್ರಯ್ಯ, ಚಿಕ್ಕೀರಪ್ಪ ಬಿನ್ ಲೇಟ್ ರುದ್ರಯ್ಯ, ನಾಗರಾಜು ಬಿನ್ ಲೇಟ್ ರುದ್ರಯ್ಯ, ಬಸವರಾಜು ಬಿನ್ ಲೇಟ್ ರುದ್ರಯ್ಯ, ಗಿರೀಶ್ ಬಿನ್ ಲೇಟ್ ರುದ್ರಯ್ಯ	215/3	3–18	0–06	3–12
81.	ಆರ್.ನಂಜಪ್ಪ, ಸಿದ್ದಲಿಂಗಯ್ಯ, ಚಿಕ್ಕೀರಪ್ಪ ನಾಗರಾಜಪ್ಪ, ಬಸವರಾಜು, ಗಿರೀಶ್ ಬಿನ್ ಲೇಟ್ ರುದ್ರಯ್ಯ	215/4	1–15	0–12	0–33
82.	ಆರ್.ನಂಜಪ್ಪ, ಸಿದ್ದಲಿಂಗಯ್ಯ, ಚಿಕ್ಕೀರಪ್ಪ ನಾಗರಾಜಪ್ಪ, ಬಸವರಾಜು, ಗಿರೀಶ್ ಬಿನ್ ಲೇಟ್ ರುದ್ರಯ್ಯ	215/5	2–19	0–05	2–14
83.	ಮಧು ಬಿನ್ ಟಿಎನ್ ಶ್ರೀನಿವಾಸಮೂರ್ತಿ	215/6	0–15	–	0–15
84.	M/S ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ನಿರ್ದೇಶಕರು ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್	215/7	1–26.04	0–02.08	1–23.12
85.	M/S ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ನಿರ್ದೇಶಕರು ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್ ಸಾಕ್ಲೇಚ	215/8	1–27.04	0–03.08	1–23.12
86.	ಡಾ: ಜಿ.ಶಿವಪ್ರಸಾದ್ ಬಿನ್ ಲೇಟ್ ಹೆಚ್.ಎಂ.ಗಂಗಾಧರಯ್ಯ	216/1	2–09	–	2–09
87.	ಎನ್.ಎಸ್. ರಾಮಚಂದ್ರ ಬಿನ್ ಎನ್.ಎಸ್. ಶ್ರೀನಿವಾಸರಾವ್	216/2	2–09	–	2–09
88.	ಕಿಡಿಯಪ್ಪ ಬಿನ್ ಲೇಟ್ ರುದ್ರಪ್ಪ, ಶಿವರಾಜು ಬಿನ್ ಕಿಡಿಯಪ್ಪ, ಗಂಗರಾಜು ಬಿನ್ ಕಿಡಿಯಪ್ಪ, ಚಂದ್ರಕಲಾ ಬಿನ್ ಕಿಡಿಯಪ್ಪ	216/3	2–00	–	2–00
89.	ಡಾ: ಜಿ.ಶಿವಪ್ರಸಾದ್ ಬಿನ್ ಲೇಟ್ ಹೆಚ್.ಎಂ.ಗಂಗಾಧರಯ್ಯ	216/4	1–00	–	1–00
90.	ಹೊನ್ನಗಂಗಯ್ಯ	217/1	2–16.08	0–01.08	2–15
91.	M/S ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ನಿರ್ದೇಶಕರು ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್ ಸಾಕ್ಲೇಚಾ	217/2	2–16.04	0–01.04	2–15
92.	ಕೆ.ಸಿ.ಸಂತೋಷ್ ಬಿನ್ ಸಿ.ಕೃಷ್ಣಪ್ಪ	217/3	2–15.04	0–01.04	2–14
93.	M/S ಮಿಶ್ ಟಿಕ್ ಲಾಗ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ಪರವಾಗಿ ಡೈರೆಕ್ಟರ್ ಲಲಿತ್ ಸಾಕ್ಲೇಚ ಬಿನ್ ಲೇಟ್ ಶಾಂತಿಲಾಲ್ ಸಾಕ್ಲೇಚ	218	5–31	0–08	5–23
94.	ದಿನೇಶ್.ಆರ್ ಬಿನ್ ರಂಗಧಾಮಯ್ಯ, ಧನುಷ್.ಹೆಚ್.ಆರ್ ಬಿನ್ ರಂಗಧಾಮಯ್ಯ	219/1	2–11	0–06	2–05
95.	ವಸಂತಕುಮಾರಿ ಬಿನ್ ಸಿದ್ದಗಂಗಯ್ಯ, ಚಂದ್ರಕಲಾ ಬಿನ್ ಸಿದ್ದಗಂಗಯ್ಯ, ಸೌಭಾಗ್ಯ ಬಿನ್ ಸಿದ್ದಗಂಗಯ್ಯ	219/2	2–11	0–04	2–07
96.	ಹನುಮಂತಯ್ಯ ಬಿನ್ ಚಿಕ್ಕರಂಗಯ್ಯ	219/3	0–13	–	0–13
97.	ಗಿರೀಶ್ ಕುಮಾರ್.ಎಸ್ ಬಿನ್ ಲೇಟ್ ಶೆಟ್ಟಪ್ಪ, ಮಂಜುನಾಥ್.ಎಸ್ ಬಿನ್ ಲೇಟ್ ಶೆಟ್ಟಪ್ಪ	220/1ಎ	0–10	–	0–10
98.	ಶ್ರೀನಿವಾಸಮೂರ್ತಿ ವಿ. ಬಿನ್ ವೀರಚಿಕ್ಕಯ್ಯ ಶ್ರೀಧರಮೂರ್ತಿ .ಹೆಚ್.ವಿ ಬಿನ್ ವೀರಚಿಕ್ಕಯ್ಯ	220/1ಬಿ	0–10	–	0–10
99.	ಗಿರೀಶ್ ಕುಮಾರ್.ಎಸ್ ಬಿನ್ ಲೇಟ್ ಶೆಟ್ಟಪ್ಪ, ಮಂಜುನಾಥ್.ಎಸ್ ಬಿನ್ ಲೇಟ್ ಶೆಟ್ಟಪ್ಪ	220/2	0–13	0–03	0–10
100.	ಶ್ರೀನಿವಾಸಮೂರ್ತಿ.ವಿ. ಬಿನ್ ವೀರಚಿಕ್ಕಯ್ಯ, ಶ್ರೀಧರಮೂರ್ತಿ.ಹೆಚ್.ವಿ ಬಿನ್ ವೀರಚಿಕ್ಕಯ್ಯ	220/3	2–01	0–04	1–37
101.	ಹನುಮಂತರಾಯಪ್ಪ ಬಿನ್ ಲೇಟ್ ಸಿದ್ದಯ್ಯ	220/4	1–23	0–02	1–21
102.	ಶ್ರೀನಿವಾಸಮೂರ್ತಿ.ವಿ. ಬಿನ್ ವೀರಚಿಕ್ಕಯ್ಯ, ಶ್ರೀಧರಮೂರ್ತಿ.ಹೆಚ್.ವಿ ಬಿನ್ ವೀರಚಿಕ್ಕಯ್ಯ	220/5	0–13	–	0–13
103.	ಬಸವರಾಜಯ್ಯ ಬಿನ್ ಬಸಯ್ಯ, ಬಿ.ಬಸವರಾಜಯ್ಯ ಬಿನ್ ಲೇಟ್ ಬಸಪ್ಪ	221/1	1–05	0–01	1–04
104.	ಹೆಚ್. ಗಿರಿಜಮ್ಮ ಕೋಂ ಹೆಚ್. ವಿಶ್ವನಾಥ್, ವಸಂತಕುಮಾರಿ ಬಿನ್ ಸಿದ್ದಗಂಗಯ್ಯ ಚಂದ್ರಕಲಾ ಬಿನ್ ಸಿದ್ದಗಂಗಯ್ಯ, ಸೌಭಾಗ್ಯಮ್ಮ ಬಿನ್ ಸಿದ್ದಗಂಗಯ್ಯ	221/2	1–20	0–03	1–17
105.	ಬಸವರಾಜು ಬಿನ್ ಲೇಟ್ ಪುಟ್ಟಸಿದ್ದಯ್ಯ, ಪುಟ್ಟರಾಜಯ್ಯ ಬಿನ್ ಪುಟ್ಟಸಿದ್ದಯ್ಯ	221/3	1–28	0–02	1–26
106.	ಕೆ.ಸುನೀಲ್ ಕುಮಾರ್ ನಂದಾವತ್ ಬಿನ್ ಲೇಟ್ ಎಂ.ಕರಣ್ ಸಿಂಗ್	221/5	0–26	0–02	0–24
107.	ಸಿದ್ದರಾಮಯ್ಯ ಬಿನ್ ಹನುಮಂತ, ರಾಮಯ್ಯ ಬಿನ್ ಹನುಮಯ್ಯ	222/1	4–27	0–12	4–15
108.	ಹನುಮಂತಯ್ಯ ಬಿನ್ ಚಿಕ್ಕಗಂಗಯ್ಯ, ಹನುಮಂತಯ್ಯ ಬಿನ್ ಲೇಟ್ ಚಿಕ್ಕರಂಗಯ್ಯ	222/2	3–22	0–08	3–14
109.	ಹನುಮಂತರಾಯಪ್ಪ ಬಿನ್ ಲೇಟ್ ಸಿದ್ದಯ್ಯ, ಗಿರೀಶ್ ಕುಮಾರ್.ಎಸ್. ಬಿನ್ ಲೇಟ್ ಶೆಟ್ಟಪ್ಪ, ಮಂಜುನಾಥ್.ಎಸ್ ಬಿನ್ ಲೇಟ್ ಶೆಟ್ಟಪ್ಪ	222/3	0–19	–	0–19
110.	ಶ್ರೀನಿವಾಸಮೂರ್ತಿ.ವಿ ಬಿನ್ ವೀರಚಿಕ್ಕಯ್ಯ ಶ್ರೀಧರಮೂರ್ತಿ.ಹೆಚ್.ವಿ ಬಿನ್ ವೀರಚಿಕ್ಕಯ್ಯ	222/4	0–07	–	0–07
111.	ಲಕ್ಷ್ಮಯ್ಯ ಬಿನ್ ಲೇಟ್ ಗೋವಿಂದಪ್ಪ	223/1	1–01	–	1–01
112.	ಮಿಸ್ ಟಿಕ್ ಲಾಗ್ ಪಾರ್ಕ್ ಪ್ರೈವೆಟ್ ಲಿಮಿಟೆಡ್	223/2	2–34	0–04	2–30
113.	ದ್ರಾಕ್ಷಾಯಣಮ್ಮ .ಆರ್.ಹೆಚ್ ಕೋಂ ಲೇಟ್ ಎ.ರಾಜಣ್ಣ	223/3	2–27	0–02	2–25
114.	ಗೋಪಾಲಯ್ಯ ಬಿನ್ ಲೇಟ್ ವೆಂಕಟರಮಣಯ್ಯ, ಲಕ್ಷ್ಮಯ್ಯ ಬಿನ್ ಲೇಟ್ ಗೋವಿಂದಪ್ಪ ಲಕ್ಷ್ಮಯ್ಯ ಬಿನ್ ಲೇಟ್ ಗೋವಿಂದಪ್ಪ, ರಂಗಮ್ಮ ಕೋಂ ಲೇಟ್ ಪುಟ್ಟಯ್ಯ ರವಿಕುಮಾರ್ .ಹೆಚ್.ವಿ ಬಿನ್ ಲೇಟ್ ವೆಂಕಟೇಶಪ್ಪ ಮಂಜುನಾಥ ಬಿನ್ ಲೇಟ್ ವೆಂಕಟೇಶಪ್ಪ	224	9–06	0–23	8–23
115.	ಜಯಶ್ರೀ.ಹೆಚ್.ವಿ. ಕೋಂ ಜಿ. ವೆಂಕಟೇಶ್	225/1	1–19	–	1–19
116.	ರಾಮಕೃಷ್ಣಯ್ಯ ಬಿನ್ ಲೇಟ್ ಪುಟ್ಟಯ್ಯ	225/2	1–00	–	1–00
117.	ವೆಂಕಟೇಶ್ ಬಿನ್ ಗಂಗಯ್ಯ	225/3	0–25	0–05	0–20
118.	ರೇಖಾ ಕೋಂ ಕೆಂಪೇಗೌಡ, ಮಹೇಶ್ ಬಿನ್ ಪುಟ್ಟೇಗೌಡ, ಶ್ರೀಧರ್ ಬಿನ್ ಪುಟ್ಟೇಗೌಡ ಅಂಜನಮೂರ್ತಿ ಬಿನ್ ಪುಟ್ಟೇಗೌಡ	225/4	1–13	–	1–13
119.	ಹೆಚ್.ಕೆ. ಬೈರೇಗೌಡ ಬಿನ್ ಲೇಟ್ ಕೆಂಪಯ್ಯ	226/1	0–12	–	0–12
120.	ಹೆಚ್.ಕೆ. ಹನುಮಂತರಾಜು ಬಿನ್ ಕೆ. ಆಂಜಿನಪ್ಪ	226/2	0–11	–	0–11
121.	ಜಿ.ರಾಜಮ್ಮ	226/3	0–12	–	0–12
122.	ಬೈರೇಗೌಡ .ಹೆಚ್.ಕೆ ಬಿನ್ ಲೇಟ್ ಕೆಂಪಯ್ಯ, ಆನಂದ ಬಿನ್ ಲೇಟ್ ಕೆಂಪಯ್ಯ, ಲಕ್ಷ್ಮಮ್ಮ ಬಿನ್ ಲೇಟ್ ಕೆಂಪಯ್ಯ, ಯಶೋಧ ಬಿನ್ ಲೇಟ್ ಕೆಂಪಯ್ಯ	227/1	0–13	–	0–13
123.	ರೇಖಾ ಕೋಂ ಕೆಂಪೇಗೌಡ, ಮಹೇಶ್ ಬಿನ್ ಪುಟ್ಟೇಗೌಡ, ಶ್ರೀಧರ್ ಬಿನ್ ಪುಟ್ಟೇಗೌಡ ಅಂಜನಮೂರ್ತಿ ಬಿನ್ ಪುಟ್ಟೇಗೌಡ	227/2	3–00.08	0–00.08	3–00
124.	ರೇಖಾ ಕೋಂ ಕೆಂಪೇಗೌಡ, ಮಹೇಶ್ ಬಿನ್ ಪುಟ್ಟೇಗೌಡ, ಶ್ರೀಧರ್ ಬಿನ್ ಪುಟ್ಟೇಗೌಡ ಅಂಜನಮೂರ್ತಿ ಬಿನ್ ಪುಟ್ಟೇಗೌಡ	227/3	0–07	–	0–07
125.	ಜಿ.ರಾಜಮ್ಮ ಬಿನ್ ಗಂಗಮರಿಯಪ್ಪ	227/4	2–36.12	0–00.12	2–36
126.	ಬಿ.ಮರಿಹೊನ್ನೇಗೌಡ ಬಿನ್ ಲೇಟ್ ಬೈರೇಗೌಡ ಉರುಫ್ ಬೈರಯ್ಯ	227/5	1–11	–	1–11
127.	ಹೆಚ್.ಬಿ. ಕೆಂಪೇಗೌಡ ಬಿನ್ ಲೇಟ್ ಬೈರೇಗೌಡ ಉರುಫ್ ಬೈರಯ್ಯ	227/6	1–11.12	0–00.12	1–11
128.	ಬಿ.ಮರಿಹೊನ್ನೇಗೌಡ ಬಿನ್ ಲೇಟ್ ಬೈರೇಗೌಡ ಉರುಫ್ ಬೈರಯ್ಯ, ಹೆಚ್.ಬಿ. ಕೆಂಪೇಗೌಡ ಬಿನ್ ಲೇಟ್ ಬೈರೇಗೌಡ ಉರುಫ್ ಬೈರಯ್ಯ	227/7	0–01	–	0–01
	ಒಟ್ಟು		**218–03**	**8–16**	**209–27**

–:: ಘೋಷ್ವಾರೆ ::–

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ		
		ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ತರಬನಹಳ್ಳಿ	145–13	56–20	88–33
2	ಹುಲಿಕುಂಟೆ	218–03	8–16	209–27
	ಒಟ್ಟು	**363–16**	**64–36**	**298–20**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದುಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.
ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ **30 ದಿನಗಳೊಳಗಾಗಿ** ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಲಾಗಿದೆ. ಮೇಲ್ಕಂಡ ಗ್ರಾಮಗಳ ವಿಚಾರಣೆಯನ್ನು ಕೆಳಕಂಡ ದಿನಾಂಕ ಮತ್ತು ಸಮಯಕ್ಕೆ ನಿಗದಿಪಡಿಸಲಾಗಿದೆ.

ಕ್ರ.ಸಂ.	ಗ್ರಾಮದ ಹೆಸರು	ವಿಚಾರಣಾ ದಿನಾಂಕ ಮತ್ತು ಸಮಯ
1	**ತರಬನಹಳ್ಳಿ**	**ದಿನಾಂಕ 21.08.2025 ಬೆಳಿಗ್ಗೆ 11.00 ಗಂಟೆ**
2	**ಹುಲಿಕುಂಟೆ**	

ಮೇಲ್ಕಂಡ ದಿನಾಂಕಗಳಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ, (ಬಿ.ಎಂ.ಐ.ಸಿ.ಪಿ), ಎನ್.ಟಿ. ರಸ್ತೆ, ಬೆಂಗಳೂರು
ವಾಸಾಸಂಇ/ಉನಿ–ಸಿ.ಪಿ/2343/ಕೆಎಸ್‌ಎಂಸಿಎ/2025–26

ಚಟಾಕಿ ಸುದ್ದಿ

₹20 ಲಕ್ಷ ಮೌಲ್ಯದ ಆಭರಣ ಕಳವು

ತುಮಕೂರು: ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಬ್ಯಾಂಕ್ ಲಾಕರ್‌ನಿಂದ ಚಿನ್ನದ ಒಡವೆ ಪಡೆದು, ಹಬ್ಬ ಮುಗಿದ ನಂತರ ಮತ್ತೆ ಲಾಕರ್‌ನಲ್ಲಿ ಇಡಲು ಆಭರಣ ತೆಗೆದುಕೊಂಡು ಹೋಗುವಾಗ ₹20 ಲಕ್ಷ ಮೌಲ್ಯದ 261 ಗ್ರಾಂ ಚಿನ್ನಾಭರಣ ಕಳವಾಗಿದೆ.

'ನಗರದ ವಿಜಯಕ್ಕ ಕೋ-ಆಪರೇಟಿವ್ ಬ್ಯಾಂಕ್ ಲಾಕರ್‌ನಲ್ಲಿ ಇಟ್ಟಿದ್ದ ಆಭರಣವನ್ನು ಆ.6ರಂದು ಬಿಡಿಸಿಕೊಂಡು ಬಂದಿದ್ದೆ. 12ರಂದು ವಾಪಸ್ ಲಾಕರ್‌ನಲ್ಲಿ ಇಡಲು ಹೋಗುತ್ತಿದ್ದಾಗ ಬಸ್‌ನಲ್ಲಿ ಒಡವೆ ಇದ್ದ ಪರ್ಸ್ ಕಾಣೆಯಾಗಿದೆ' ಎಂದು ಸಿದ್ಧರಾಮೇಶ್ವರ ಬಡಾವಣೆ ಸಂಗೀತಾ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಾಗಿದೆ.

ವ್ಯಾನಿಟಿ ಬ್ಯಾಗ್‌ನಿಂದ ಹಣ ತೆಗೆದುಕೊಂಡು ಟಿಕೆಟ್ ಪಡೆಯುವಾಗ ಜಿಪ್ ಹಾಕಿರಲಿಲ್ಲ. ಅದರಲ್ಲಿದ್ದ ಪರ್ಸ್‌ನ್ನು ಯಾರೋ ಕಳ್ಳತನ ಮಾಡಿದ್ದಾರೆ. ಬಸ್‌ನಲ್ಲಿ ತುಂಬಾ ಜನ ಪ್ರಯಾಣಿಕರಿದ್ದರು. ಬ್ಯಾಂಕ್‌ಗೆ ಹೋಗಿ ನೋಡಿದಾಗ ಆಭರಣ ಇರಲಿಲ್ಲ ಎಂದು ಸಂಗೀತಾ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸ್ ಠಾಣೆ ಬಳಿ ಕಳ್ಳತನ

ದೊಡ್ಡಬಳ್ಳಾಪುರ: ನಗರ ಪೊಲೀಸ್ ಠಾಣೆ ಕೂಗಳತೆ ದೂರದಲ್ಲಿರುವ ಡಿ.ಕ್ರಾಸ್ ಹಾಗೂ ಅಯ್ಯಪ್ಪಸ್ವಾಮಿ ದೇವಾಲಯ ರಸ್ತೆ ಅಂಗಡಿಗಳಲ್ಲಿ ಶುಕ್ರವಾರ ರಾತ್ರಿ ಕಳ್ಳತನ ನಡೆದಿದೆ.

ಫರ್ನಿಚರ್ ಹಾಗೂ ಟೈಲ್ಸ್ ಅಂಗಡಿಗೆ ಅಳವಡಿಸಿದ್ದ ಕಬ್ಬಿಣದ ಶೀಟ್‌ಗಳನ್ನು ಕೊಯ್ದಿರುವ ದುಷ್ಕರ್ಮಿಗಳು, ಅಂಗಡಿಯಲ್ಲಿ ಹಣ ದೋಚಲು ಯತ್ನಿಸಿದ್ದಾರೆ. ಆದರೆ, ಹಣ ಸಿಗದ ಇದ್ದಾಗ ಎರಡು ಅಂಗಡಿಗಳಲ್ಲಿ ತಲಾ ₹50 ಸಾವಿರಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ನಾಶ ಮಾಡಿ ಪರಾರಿಯಾಗಿದ್ದಾರೆ.

ಅಗ್ನಿ ದುರಂತದಲ್ಲಿ ಬೆಂದ ಕುಟುಂಬ

ಪಕ್ಕದ ಕಟ್ಟಡಗಳಿಗೆ ಜಿಗಿದು ಪ್ರಾಣ ಉಳಿಸಿಕೊಂಡ 17 ಮಂದಿ

ಪ್ರಜಾವಾಣಿ ವಾರ್ತೆ

ಮದನ್ ಕುಮಾರ್

ಮೃತಪಟ್ಟ ತಾಯಿ ಸಂಗೀತಾ ಹಾಗೂ ಮಗು

ಬೆಂಗಳೂರು: ಅವರೆಲ್ಲರೂ ಮುಂಜಾನೆಯ ನಿದ್ರೆಯಲ್ಲಿ ಇದ್ದರು. ಒಬ್ಬರು ನೆಲ ಅಂತಸ್ತಿನಲ್ಲಿ ಮುಂಜಾನೆಯೇ ಪ್ಯಾಕಿಂಗ್ ಕೆಲಸದಲ್ಲಿ ಮಗ್ನರಾಗಿದ್ದರು. ನೆಲ ಅಂತಸ್ತಿನಲ್ಲಿ ಕಾಣಿಸಿಕೊಂಡ ಬೆಂಕಿ, ಕ್ಷಣಾರ್ಧದಲ್ಲಿ ವ್ಯಾಪಿಸಿ ಬೇರೆ ಬೇರೆ ಅಂತಸ್ತಿನಲ್ಲಿದ್ದವರು ದುರಂತವಾಗಿ ಸಾವು ಕಂಡರು. 17 ಮಂದಿ ಅಕ್ಕಪಕ್ಕದ ಕಟ್ಟಡಕ್ಕೆ ಜಿಗಿದು ಪ್ರಾಣ ಉಳಿಸಿಕೊಂಡರು...

ಶನಿವಾರ ನಸುಕಿನ ವೇಳೆ ನಗರ್ತಪೇಟೆಯಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿತ್ತು. ಮೃತರ ಸಂಬಂಧಿಕರ ಕಣ್ಣೀರು ಅಲ್ಲಿ ಮಡುಗಟ್ಟಿತ್ತು.

ಆಡುಗೋಡಿಯ ಶ್ರೀರಾಮ ಕಾಲೊನಿಯಲ್ಲಿ ಶುಕ್ರವಾರವಷ್ಟೇ ಅಡುಗೆ ಅನಿಲ ಸೋರಿಕೆಯಿಂದ ಬಾಲಕ ಮೃತಪಟ್ಟು, 9 ಮಂದಿ ಗಾಯಗೊಂಡಿದ್ದರು. ಮರುದಿನವೇ ಮತ್ತೊಂದು ದೊಡ್ಡ ದುರಂತಕ್ಕೆ ನಗರ ಸಾಕ್ಷಿ ಆಯಿತು. ಬಾಲಕೃಷ್ಣ ಶೆಟ್ಟಿ ಹಾಗೂ ಸಂದೀಪ್ ಶೆಟ್ಟಿ ಅವರಿಗೆ ಸೇರಿದ ಕೃಷ್ಣ ಕಾಂಪ್ಲೆಕ್ಸ್‌ನಲ್ಲಿ ಅಗ್ನಿ ದುರಂತ ಸಂಭವಿಸಿದೆ.

ನಾಲ್ಕು ಅಂತಸ್ತಿನ ಕಟ್ಟಡದ ನೆಲ ಅಂತಸ್ತಿನಲ್ಲಿ ಫ್ಲೋರ್ ಮ್ಯಾಟ್, ಬಟ್ಟೆ ಹಾಗೂ ಪ್ಲಾಸ್ಟಿಕ್ ವಸ್ತುಗಳನ್ನು ತುಂಬಿ ಇಡಲಾಗಿತ್ತು. ಆ ಮಳಿಗೆಯಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ನೆಲ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದ ಮದನ್ ಕುಮಾರ್ ಅವರಿಗೆ ಹೊರಗೆ ಬರಲು ಸಾಧ್ಯವಾಗದೇ ಮೃತಪಟ್ಟರು. ಅವರ ಪತ್ನಿ ಹಾಗೂ ಇಬ್ಬರು ಮಕ್ಕಳು ಎರಡನೇ ಮಹಡಿಯಲ್ಲಿ ಮಲಗಿದ್ದರು. ಸುರೇಶ್‌ಕುಮಾರ್ ಅವರು ಮೂರನೇ ಮಹಡಿಯಲ್ಲಿ ಇದ್ದರು. ಅವರಿಗೂ ಹೊರಗೆ ಬರಲು ಸಾಧ್ಯವಾಗದೇ ಮೃತಪಟ್ಟರು. ಎರಡನೇ ಮಹಡಿ [illegible] ಹಾಗೂ ನಾಲ್ಕನೇ ಮಹಡಿಯಲ್ಲಿದ್ದ 17 ಮಂದಿ ಬೇರೊಂದು ಕಟ್ಟಡಕ್ಕೆ ಜಿಗಿದು ಪಾರಾಗಿದ್ದಾರೆ.

ದಟ್ಟವಾದ ಹೊಗೆ: ಮಾಹಿತಿ ತಿಳಿದ ತಕ್ಷಣವೇ ಶನಿವಾರ ನಸುಕಿನ ವೇಳೆ 6 ಅಗ್ನಿಶಾಮಕ ವಾಹನಗಳು, 50ಕ್ಕೂ ಅಧಿಕ ಸಿಬ್ಬಂದಿ, ಎಸ್‌ಡಿಆರ್‌ಎಫ್, ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿದರು. ದಟ್ಟ ಹೊಗೆ ಹಾಗೂ ಪ್ರಖರವಾದ ಬೆಂಕಿ ಉರಿಯುತ್ತಿದ್ದರಿಂದ ಕಾರ್ಯಾಚರಣೆಗೆ ಅಡ್ಡಿ ಉಂಟಾಗಿತ್ತು. ಹರಸಾಹಸಪಟ್ಟು ಕಟ್ಟಡದ ಒಳಗೆ ಹೋಗಿ ಬೆಂಕಿಯನ್ನು ಹತೋಟಿಗೆ ತರಲಾಯಿತು. ಶನಿವಾರ ಮಧ್ಯಾಹ್ನ 3ರವರೆಗೂ ಕಾರ್ಯಾಚರಣೆ ನಡೆಸಲಾಯಿತು.

'ಹೊರ ರಾಜ್ಯಗಳಿಂದ ಜನರು ಬಂದು ಅವೈಜ್ಞಾನಿಕವಾಗಿ ಕಟ್ಟಡಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಯಾವುದೇ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳುವುದಿಲ್ಲ' ಎಂದು ಮಾಜಿ ಶಾಸಕ ಆರ್.ವಿ.ದೇವರಾಜ್ ದೂರಿದರು.

'ಮುಂಜಾನೆ 3.30ರ ಸುಮಾರಿಗೆ ಪೊಲೀಸ್ ಹಾಗೂ ಅಗ್ನಿ ಶಾಮಕ ಇಲಾಖೆಗೆ ಮಾಹಿತಿ ಬಂದಿತ್ತು. ತಕ್ಷಣವೇ ರಕ್ಷಣಾ ಸಿಬ್ಬಂದಿ ತೆರಳಿ ಕಾರ್ಯಾಚರಣೆ ನಡೆಸಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ಸತತ ಕಾರ್ಯಾಚರಣೆ: ನಿರಂತರವಾಗಿ ಕಾರ್ಯಾಚರಣೆಯಿಂದ ನೆಲಅಂತಸ್ತಿನಲ್ಲಿ ಒಂದು ಮೃತದೇಹ ಪತ್ತೆಯಾಯಿತು. ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಸಂಪೂರ್ಣವಾಗಿ ಬೆಂಕಿ ಆವರಿಸಿತ್ತು. ಸತತ ಕಾರ್ಯಾಚರಣೆಯ ಬಳಿಕ ಎರಡನೇ ಮಹಡಿಯಲ್ಲಿ ಮತ್ತೊಂದು ಮೃತದೇಹ ಪತ್ತೆ ಆಯಿತು. ಭಾರಿ ಹೊಗೆಯ ನಡುವೆಯೂ ಕಾರ್ಯಾಚರಣೆ ಮುಂದುವರೆಸಿ ಮೂರನೇ ಮಹಡಿಯಲ್ಲಿದ್ದ ಮೂರು ಮೃತದೇಹಗಳನ್ನು ಹೊರಗೆ ತೆಗೆಯಲಾಯಿತು. ಘಟನೆಗೆ ನಿಖರ ಕಾರಣ ಏನು ಎಂದು ತಿಳಿಯಬೇಕಿದೆ. ಕಟ್ಟಡದಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗಿತ್ತೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯ ನಿರ್ದೇಶಕ ಶಿವಶಂಕರ್ ತಿಳಿಸಿದ್ದಾರೆ.

ಎಫ್‌ಎಸ್‌ಎಲ್ ತಂಡ ಭೇಟಿ: 'ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಅಗ್ನಿಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿ, 'ಎಫ್‌ಎಸ್‌ಎಲ್ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಮಾದರಿ ಸಂಗ್ರಹಿಸಿದ್ದಾರೆ. ವರದಿ ನಂತರ ಘಟನೆಯ ಬಗ್ಗೆ ಗೊತ್ತಾಗಲಿದೆ. ಸಂತ್ರಸ್ತರ ಕುಟುಂಬಸ್ಥರಿಗೆ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ ಮುಖ್ಯಮಂತ್ರಿಯವರ ಜತೆಗೆ ಮಾತನಾಡುತ್ತೇನೆ' ಎಂದು ತಿಳಿಸಿದರು.

> ನೆಲ ಅಂತಸ್ತಿನಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ತುಂಬಿದ್ದರಿಂದ ಬೆಂಕಿಯ ತೀವ್ರತೆ ಹೆಚ್ಚಿತ್ತು. ಹಾಗಾಗಿ, ಕಾರ್ಯಾಚರಣೆಗೆ ಅಡಚಣೆ ಉಂಟಾಯಿತು
>
> **ವಂಶಿಕೃಷ್ಣ,** ಜಂಟಿ ಪೊಲೀಸ್ ಕಮಿಷನರ್, ಪೂರ್ವ ವಿಭಾಗ

ಕಟ್ಟಡ ಮಾಲೀಕರ ವಿರುದ್ಧ ಎಫ್‌ಐಆರ್

ನಿರ್ಲಕ್ಷ್ಯದ ಆರೋಪದಡಿ ಕಟ್ಟಡದ ಮಾಲೀಕರಾದ ಬಾಲಕೃಷ್ಣ ಶೆಟ್ಟಿ ಹಾಗೂ ಸಂದೀಪ್ ಶೆಟ್ಟಿ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬೆಂಕಿ ನಂದಿಸಲು ಯಾವುದೇ ಸಲಕರಣೆಗಳನ್ನೂ ಇಟ್ಟಿಲ್ಲ. ಮುಂಜಾಗ್ರತಾ ಕ್ರಮ ಅನುಸರಿಸದೇ ಜನರ ಸಾವಿಗೆ ಮಾಲೀಕರು ಕಾರಣರಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ನಗರದ ನಗರ್ತಪೇಟೆಯಲ್ಲಿ ಸಂಭವಿಸಿದ ಬೆಂಕಿ ದುರಂತ

ಸುರಕ್ಷತಾ ಕ್ರಮಗಳೇ ಇಲ್ಲ

ಕಿಷ್ಕಿಂಧೆಯಂತಹ ಪ್ರದೇಶದಲ್ಲಿ ಬೃಹತ್ ಕಟ್ಟಡ ನಿರ್ಮಿಸಲಾಗಿದೆ. ಅನಾಹುತ ಸಂಭವಿಸಿದರೆ ತುರ್ತು ಸೇವಾ ಸಿಬ್ಬಂದಿ ವಾಹನಗಳೂ ತೆರಳುವುದು ಆಗುವುದಿಲ್ಲ. ಕಟ್ಟಡದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸಿಲ್ಲ. ಮೇಲಿನ ಮಹಡಿಗೆ ತೆರಳವುದಕ್ಕೂ ಸೂಕ್ತವಾದ ವ್ಯವಸ್ಥೆ ಕಟ್ಟಡದಲ್ಲಿ ಇರಲಿಲ್ಲ ಎಂದು ಕಾರ್ಯಾಚರಣೆ ಸಿಬ್ಬಂದಿ ಹೇಳಿದರು.

ವೈಯಕ್ತಿಕ ಪರಿಹಾರ ನೀಡಿದ ಸಚಿವ ಜಮೀರ್

ಚಿನ್ನಯ್ಯನಪಾಳ್ಯ ಹಾಗೂ ನಗರ್ತಪೇಟೆಯಲ್ಲಿ ಸಂಭವಿಸಿದ ಅವಘಡ ಸ್ಥಳಕ್ಕೆ ಭೇಟಿ ನೀಡಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಭೇಟಿ ನೀಡಿ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ನೀಡಿದರು.

ಚಿನ್ನಯ್ಯನಪಾಳ್ಯದಲ್ಲಿ ಮೃತಪಟ್ಟ ಮುಬಾರಕ್ ಕುಟುಂಬಕ್ಕೆ ₹5 ಲಕ್ಷ ಪರಿಹಾರ ವಿತರಣೆ ಮಾಡಿದರು. ಗಾಯಾಳುಗಳಿಗೆ ಪರಿಹಾರ ವಿತರಿಸಿದರು.

ನಗರ್ತಪೇಟೆಯಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಮೃತಪಟ್ಟ ಮೃತರ ಕುಟುಂಬಕ್ಕೆ ವೈಯಕ್ತಿಕವಾಗಿ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಸಂತ್ರಸ್ತರ ಕುಟುಂಬದವರಿಗೆ ಸಚಿವ ಜಮೀರ್ ಅಹಮದ್ ಖಾನ್ ಪರಿಹಾರ ವಿತರಣೆ ಮಾಡಿದರು

ಸುದ್ದಿ 2 ನಿಮಿಷ

ಲಂಚ: ಪಿಐ, ಪಿಎಸ್‌ಐ ಬಂಧನ

ಬೆಂಗಳೂರು: ವಂಚನೆ ಪ್ರಕರಣ ದಾಖಲಿಸಿ ತನಿಖೆ ನಡೆಸಲು ₹1 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ರಾಮಮೂರ್ತಿನಗರ ಪೊಲೀಸ್ ಠಾಣೆಯ ಪಿಐ, ಪಿಎಸ್‌ಐ ಮತ್ತು ಖಾಸಗಿ ವ್ಯಕ್ತಿಯೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೃಷ್ಣರಾಜಪುರದ ನಿವಾಸಿ ಗೋಪಿನಾಥ್ ಅವರ ಪತ್ನಿ, ಗೋಪಿನಾಥ್ ಅವರಿಗೆ ತಿಳಿಸದೆಯೇ ಕುಟುಂಬದ ಚಿನ್ನಾಭರಣ ಮತ್ತು ನಗದನ್ನು ಅನ್ಯರಿಗೆ ನೀಡಿದ್ದರು. ಈ ಬಗ್ಗೆ ವಿಚಾರಣೆ ನಡೆಸಿ, ಚಿನ್ನಾಭರಣವನ್ನು ವಾಪಸ್ ಕೊಡಿಸಿಕೊಡಿ ಎಂದು ಗೋಪಿನಾಥ್ ಅವರು ರಾಮಮೂರ್ತಿನಗರ ಪೊಲೀಸರಿಗೆ ದೂರು ನೀಡಿದ್ದರು.

'ಈ ದೂರಿನ ಅನ್ವಯ ಪ್ರಕರಣ ದಾಖಲಿಸಲು ಮತ್ತು ಚಿನ್ನಾಭರಣ ವಾಪಸ್ ಕೊಡಿಸಿಕೊಡಲು ₹2 ಲಕ್ಷ ಲಂಚ ನೀಡುವಂತೆ ಪಿಐ ರಾಜಶೇಖರ್ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಮಂಜುನಾಥ್ ಎಂಬುವವರು ನೀಡಿದ್ದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಲೋಕಾಯುಕ್ತ ಎಸ್‌ಪಿ ಕೋನ ವಂಶಿಕೃಷ್ಣ ಅವರ ಮಾರ್ಗದರ್ಶನದಂತೆ, ದೂರುದಾರರು ರಾಮಮೂರ್ತಿನಗರ ಠಾಣೆಯ ಪಿಎಸ್‌ಐ ರುಮಾನ್ ಪಾಷಾ ಮತ್ತು ಅವರ ಆಪ್ತ ಇಮ್ರಾನ್ ಬಾಬು ಅವರಿಗೆ ₹1 ಲಕ್ಷ ಹಣ ನೀಡಿದ್ದರು. ಈ ವೇಳೆ ದಾಳಿ ನಡೆಸಿ ಆರೋಪಿಗಳಿಬ್ಬರನ್ನೂ ಬಂಧಿಸಲಾಯಿತು. ಆರೋಪಿಗಳು ನೀಡಿದ ಮಾಹಿತಿ ಆಧಾರದಲ್ಲಿ ಪಿಐ ರಾಜಶೇಖರ್ ಅವರನ್ನೂ ಬಂಧಿಸಲಾಯಿತು' ಎಂದು ತಿಳಿಸಿದ್ದಾರೆ.

'ವರದಿ ಅಂಗೀಕರಿಸಿದರೆ ಹೋರಾಟ'

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿ ನ್ಯಾಯಮೂರ್ತಿ ನಾಗಮೋಹನದಾಸ್ ಅವರ ಸಮಿತಿ ನೀಡಿರುವ ವರದಿ ಅಂಗೀಕರಿಸಿದರೆ, ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಸಚಿವರು, ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡುವವರೆಗೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಎಚ್ಚರಿಸಿದೆ.

ಪರಿಶಿಷ್ಟ ಜಾತಿಗಳಲ್ಲಿ ಸಮಾನ ಜಾತಿಯ ಉಪಜಾತಿಗಳ ಗುಂಪುಗಳನ್ನು ಒಟ್ಟುಗೂಡಿಸಲು ಸರ್ಕಾರವು ಆಯೋಗಕ್ಕೆ ನೀಡಿರುವ ನಿಬಂಧನೆಗಳಲ್ಲಿ ತಿಳಿಸಿದೆ. ಆದರೂ ಆಯೋಗವು 'ಪ್ರವರ್ಗ ಎ ಗುಂಪನ್ನು ಸೃಜಿಸಿ ಬಲಗೈ, ಹೊಲಯ, ಛಲವಾದಿ ಸಂಬಂಧಿತ ಜಾತಿಗಳನ್ನು ಸೇರ್ಪಡೆಗೊಳಿಸುವ ಮೂಲಕ ಹೊಲಯ ಸಮುದಾಯದ ಜನಸಂಖ್ಯೆಯನ್ನು ವಿಭಜಿಸಿ ಕಡಿಮೆ ಮಾಡಿ ತೋರಿಸಲಾಗಿದೆ ಎಂದಿದೆ.

ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಎಂಬುದು ಜಾತಿಗಳಲ್ಲದೇ ಇದ್ದರೂ ಜಾತಿಗಳಿಗೆ ನಿಗದಿಪಡಿಸುವ ಮೀಸಲಾತಿಯಲ್ಲಿ ಶೇ 1ರಷ್ಟನ್ನು ನೀಡಿದೆ. ಹಾಗಾಗಿ ಈ ವರದಿಯನ್ನು ಸರ್ಕಾರ ತಿರಸ್ಕರಿಸಬೇಕು. ವರದಿ ಅಂಗೀಕರಿಸಿದರೆ ಪರಿಶಿಷ್ಟ ಜಾತಿಯ ಸಚಿವರು, ಶಾಸಕರು ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ವರದಿ ತಿರಸ್ಕರಿಸಿ, ಹೊಸದಾಗಿ ಜಾತಿ ಸಮೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿ ಆ.18ರಂದು ಬೆಳಿಗ್ಗೆ 11ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಒಕ್ಕೂಟದ ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಯಲಹಂಕದಲ್ಲಿ ಬಿಬಿಎಂಪಿ ಪೌರಕಾರ್ಮಿಕರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು. ಶಾಸಕ ಎಸ್‌ಆರ್‌. ವಿಶ್ವನಾಥ್, ತಹಶೀಲ್ದಾರ್ ಶ್ರೇಯಸ್ ಜಿ.ಎಸ್. ಉಪಸ್ಥಿತರಿದ್ದರು

ನೆಲಮಂಗಲದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಲಾಯಿತು. ನಗರಸಭೆ ಅಧ್ಯಕ್ಷ ಎನ್‌.ಗಣೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ನರಸಿಂಹಮೂರ್ತಿ, ನಗರಸಭೆ ಉಪಾಧ್ಯಕ್ಷ ಆನಂದ್, ತಹಶೀಲ್ದಾರ್ ಮಲ್ಲೇಶ್, ಶಾಸಕ ಎನ್.ಶ್ರೀನಿವಾಸ್, ಪೌರಾಯುಕ್ತ ಗಂಗಾಧರ್, ಕೆಡಿಪಿ ಸದಸ್ಯ ನಾರಾಯಣಗೌಡ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ನಾರಾಯಣಗೌಡ ಉಪಸ್ಥಿತರಿದ್ದರು

ಕುಂಚಗಲ್ ಬಂಡೆ ಮಠದ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ರೈಲ್ವೆ ಬಡಾವಣೆ 3ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಪರಿಸರ ಸೇನೆ ವತಿಯಿಂದ ಸ್ವಚ್ಛತಾ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ ಹಾಗೂ ಕಲಾವಿದರನ್ನು ಸನ್ಮಾನಿಸಲಾಯಿತು

ಕೆ.ಆರ್‌ಪುರ ಜೆಎಂಎಫ್‌ಸಿ ಕೋರ್ಟ್ ಆವರಣದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ವಕೀಲರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ವಿಶ್ವನಾಥ್ ಸವದಿ ಅವರು ಮಹಾತ್ಮಗಾಂಧಿ, ಡಾ.ಬಿ.ಆರ್‌.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಂಘದ ಅಧ್ಯಕ್ಷ ಎಂ. ಮುನಿಯಪ್ಪ ಉಪಸ್ಥಿತರಿದ್ದರು

ಉಪವಿಭಾಗಾಧಿಕಾರಿಗಳ ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಎಚ್ಚರಿಕೆ

'ಕಾನೂನು ಮೀರಿ ಆದೇಶ ಹೊರಡಿಸಿದರೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರದಿರುವ ಪ್ರಕರಣಗಳನ್ನು ದಾಖಲಿಸಿಕೊಂಡರೆ ಮತ್ತು ಕಾನೂನು ಮೀರಿ ಆದೇಶ ಹೊರಡಿಸಿದರೆ, ಶಿಸ್ತು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಎಚ್ಚರಿಕೆ ನೀಡಿದ್ದಾರೆ.

ಉಪವಿಭಾಗಾಧಿಕಾರಿಗಳ ಜತೆ ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ಬರುವ ಪ್ರಕರಣಗಳನ್ನು ಉಪವಿಭಾಗಾಧಿಕಾರಿಗಳು (ಎ.ಸಿ) ದಾಖಲಿಸಿಕೊಳ್ಳುತ್ತಿರುವ ಬಗ್ಗೆ ವರದಿ ಇದೆ. ಇಂತಹ ಪ್ರಕರಣಗಳಲ್ಲಿ ಕೆಲವು ಎ.ಸಿಗಳು ಕಾನೂನುಬಾಹಿರವಾಗಿ ಆದೇಶ ಹೊರಡಿಸಿದ್ದರ ಬಗ್ಗೆ ಮಾಹಿತಿ ಇದೆ' ಎಂದು ಸಚಿವರು ಸಭೆಯಲ್ಲಿ ಉಲ್ಲೇಖಿಸಿದರು.

'ಇಂತಹ ಘಟನೆಗಳು ಪದೇ–ಪದೇ ಮರುಕಳುಹಿಸುತ್ತಿವೆ. ಎ.ಸಿಗಳು ಹೊರಡಿಸಿದ ಆದೇಶದ ಬಗ್ಗೆ ಆಕ್ಷೇಪ ವ್ಯಕ್ತವಾಗಿವೆ. ಇನ್ನು ಮುಂದೆ ಎ.ಸಿಗಳು ತಾವು ಹೊರಡಿಸುವ ಆದೇಶಗಳಲ್ಲಿ, ಯಾವ ಕಾಯ್ದೆ–ಸೆಕ್ಷನ್‌ಗಳ ಅಡಿಯಲ್ಲಿ ಅಂತಹ ಆದೇಶ ಹೊರಡಿಸಿದ್ದೇವೆ ಎಂಬುದನ್ನು ಉಲ್ಲೇಖಿಸಬೇಕು' ಎಂದು ಸೂಚಿಸಿದರು.

'ಈ ಸೂಚನೆಗಳನ್ನು ಮೀರುವ ಅಥವಾ ಪಾಲಿಸದೇ ಇರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಅದರ ವಿರುದ್ಧ ನ್ಯಾಯಾಲಯಕ್ಕೆ ಹೋದರೆ, ಸುಪ್ರೀಂ ಕೋರ್ಟ್‌ವರೆಗೂ ಹೋಗಲು ನಾವು ಸಿದ್ಧರಿದ್ದೇವೆ' ಎಂದೂ ಎಚ್ಚರಿಸಿದರು.

'ಎ.ಸಿಗಳು ಹೊಸ ಪ್ರಕರಣಗಳನ್ನು ದಾಖಲಿಸಿಕೊಳ್ಳುವುದರ ಜತೆಗೆ, ಈಗಾಗಲೇ ತಮ್ಮ ಬಳಿ ಬಾಕಿಯಾಗಿರುವ ಪ್ರಕರಣಗಳ ಇತ್ಯರ್ಥಕ್ಕೆ ಗಮನ ಕೊಡಬೇಕು' ಎಂದು ಸೂಚಿಸಿದರು.

ಚಿಕ್ಕಮಗಳೂರು ಎ.ಸಿಗೆ ತರಾಟೆ: ಚಿಕ್ಕಮಗಳೂರು ಉಪವಿಭಾಗಾಧಿಕಾರಿ ಸುದರ್ಶನ ಅವರು ಸಭೆ ಶುರುವಾದ ನಂತರವೂ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿದ್ದರು. ಇದನ್ನು ಗಮನಿಸಿದ ಸಚಿವರು, 'ಸ್ವಾಮಿ ನೀವು ನನಗೆ ಗೌರವ ನೀಡಬೇಕಾಗಿಲ್ಲ. ಈ ಕುರ್ಚಿಗಾದರೂ ಗೌರವ ಕೊಡಿ. ನಾನು ವೈಯಕ್ತಿಕ ಕೆಲಸಕ್ಕಾಗಿ ಇಲ್ಲಿ ಬಂದಿಲ್ಲ. ಸಭೆಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕಲಿತುಕೊಂಡು, ಸಭೆಗೆ ಗೌರವ ನೀಡಿ' ಎಂದು ತರಾಟೆಗೆ ತೆಗೆದುಕೊಂಡರು.

ಬಾಕಿ ಪ್ರಕರಣಗಳು

18,000
ಎಸಿ ನ್ಯಾಯಾಲಯಗಳಲ್ಲಿ ಆರು ತಿಂಗಳಿಂದ ಬಾಕಿಯಿರುವ ಪ್ರಕರಣಗಳು

14,000
ಒಂದು ವರ್ಷದಿಂದ ಬಾಕಿಯಿರುವ ಪ್ರಕರಣಗಳು

4,000
ಐದು ವರ್ಷಗಳಿಗೂ ಹೆಚ್ಚು ಅವಧಿಯಿಂದ ಬಾಕಿಯಿರುವ ಪ್ರಕರಣಗಳು

> ಬಹುತೇಕ ಉಪವಿಭಾಗಾಧಿಕಾರಿಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಆದರೆ ಕೆಲವರು ಸರಿಯಾಗಿ ಕೆಲಸ ಮಾಡದೇ ಇರುವ ಕಾರಣಕ್ಕೆ ಇಲಾಖೆಗೂ ಕೆಟ್ಟ ಹೆಸರು ಬರುತ್ತಿದೆ
>
> **ಕೃಷ್ಣಬೈರೇಗೌಡ,** ಕಂದಾಯ ಸಚಿವ

ಚವಾಣ್ ಪುತ್ರನ ವಿರುದ್ಧ ಮತ್ತೊಂದು ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಔರಾದ ಕ್ಷೇತ್ರದ ಬಿಜೆಪಿ ಶಾಸಕ ಪ್ರಭು ಚವಾಣ್ ಅವರ ಪುತ್ರ ಪ್ರತೀಕ್ ಚವಾಣ್ ವಿರುದ್ಧ ನಗರದ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಇದೇ ಪ್ರಕರಣದ ಸಂಬಂಧ ಬೀದರ್ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಜುಲೈ 20ರಂದು ಪ್ರತೀಕ್ ವಿರುದ್ಧ ಪ್ರಕರಣ ದಾಖಲಾಗಿತ್ತು.

'ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಹೋಟೆಲ್‌ವೊಂದರಲ್ಲಿ ಪ್ರತೀಕ್ ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆ ದೂರು ನೀಡಿದ್ದರು. ಬೀದರ್‌ನಲ್ಲಿ ದಾಖಲಾಗದ ಪ್ರಕರಣವನ್ನು ಉಪ್ಪಾರಪೇಟೆಗೆ ವರ್ಗಾವಣೆ ಮಾಡಲಾಗಿದ್ದು, ಈ ಠಾಣೆಯಲ್ಲೂ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಮಹಾರಾಷ್ಟ್ರದ ಉದಗೀರ್ ಸಮೀಪದ ಹಣೆಗಾಂವ್ ತಾಂಡಾದ ಸಂತ್ರಸ್ತೆ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾಗುವುದಕ್ಕೂ ಮುನ್ನ ಸಂತ್ರಸ್ತೆ ಹಾಗೂ ಅವರ ತಾಯಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಬೆಳಿಗ್ಗೆ ಭೇಟಿ ಮಾಡಿ ಮನವಿ ಸಲ್ಲಿಸಿದ್ದರು ಎಂದು ಮೂಲಗಳು ತಿಳಿಸಿವೆ.

'2023ರ ಡಿಸೆಂಬರ್ 25ರಂದು ಔರಾದ ತಾಲ್ಲೂಕಿನ ಘಮಸುಬಾಯಿ ಬೊಂತಿ ತಾಂಡಾದಲ್ಲಿ ಶಾಸಕ ಪ್ರಭು ಚವಾಣ್ ಅವರ ಪುತ್ರ ಪ್ರತೀಕ್ ಜತೆ ಹಿರಿಯರ ಸಮ್ಮುಖದಲ್ಲಿ ನಿಶ್ಚಿತಾರ್ಥವಾಗಿತ್ತು. ನಂತರ, ಇಬ್ಬರೂ ನಾನಾ ಕಡೆ ಸುತ್ತಾಡಿದ್ದೇವೆ. ಈ ವೇಳೆ ಪ್ರತೀಕ್ ನನ್ನ ಮೇಲೆ ಬಲವಂತದಿಂದ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ನಂತರ ಮೋಸ ಮಾಡಿದ್ದಾರೆ' ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ರೈಲು ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಭಾರಿ ಮಳೆಯಿಂದ ಸುಬ್ರಹ್ಮಣ್ಯ ರೋಡ್ ಹಾಗೂ ಸಕಲೇಶಪುರ ರೈಲು ನಿಲ್ದಾಣದ ನಡುವಿನ ಘಾಟ್ ಪ್ರದೇಶದ ರೈಲು ಮಾರ್ಗದ ಮೂರು ಕಡೆ ಶನಿವಾರ ಭೂ ಕುಸಿತ ಉಂಟಾದ ಪರಿಣಾಮ ಕೆಲವು ರೈಲುಗಳ ಮಾರ್ಗವನ್ನು ಬದಲಾಯಿಸಲಾಗಿದೆ.

ಸಂಜೆ 4.40ರ ವೇಳೆಗೆ ಸಿರಿಬಾಗಿಲು-ಯಡಕುಮಾರಿ, ಯಡಕುಮಾರಿ-ಕಡಗರವಳ್ಳಿ ಮತ್ತು ಕಡಗರವಳ್ಳಿ-ಡೋಣಿಗಲ್ ನಡುವಿನ ಕೆಲವೆಡೆ ಮಣ್ಣು ಮತ್ತು ಬಂಡೆಗಳು ಹಳಿಗಳ ಮೇಲೆ ಬಿದ್ದಿದೆ.

ಮಂಗಳೂರು ಸೆಂಟ್ರಲ್-ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು (ರೈಲು ಸಂಖ್ಯೆ 07378) ಶನಿವಾರ ಪ್ರಯಾಣವನ್ನು ತೋಕೂರು, ಕಾರವಾರ, ಮಡಗಾಂವ್, ಲೋಂಡಾ ಮತ್ತು ಎಸ್‌ಎಸ್‌ಎಸ್ ಹುಬ್ಬಳ್ಳಿ ಮೂಲಕ ಆರಂಭಿಸಿದೆ. ಮುರ್ಡೇಶ್ವರ-ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲು (16586) ಹಾಗೂ ಕಣ್ಣೂರು-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್(16512), ಕಾರವಾರ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು(16596) ಶನಿವಾರ ಕಾಸರಗೋಡು, ಶೊರ್ನೂರ್, ಪಾಲಕ್ಕಾಡ್, ಸೇಲಂ ಮತ್ತು ಜೋಲಾರ್‌ಪೇಟೆ ಮೂಲಕ ಸಂಚರಿಸಲಿದೆ ಎಂದು ರೈಲ್ವೆ ಇಲಾಖೆ ಮೂಲಗಳು ತಿಳಿಸಿವೆ.

ಪ್ರಧಾನ ವ್ಯವಸ್ಥಾಪಕ ಮುಕುಲ್ ಸರನ್ ಮಾಥುರ್, ಹೆಚ್ಚುವರಿ ವ್ಯವಸ್ಥಾಪಕ ಕೆ.ಎಸ್.ಜೈನ್ ಹಾಗೂ ಇತರ ಅಧಿಕಾರಿಗಳು ಪರಿಸ್ಥಿತಿಯನ್ನು ಗಮನಿಸುತ್ತಿದ್ದು ಮತ್ತು ಮರುಸ್ಥಾಪನೆ ಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೈದರಾಬಾದ್ ರೇಸ್

ಗಲಹಡ್ ಗೆಲ್ಲುವ ನಿರೀಕ್ಷೆ

ನಿಜಾಮ್ಸ್ ಗೋಲ್ಡ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗಲಹಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎನ್.ಆರ್.ಐ ಹೈ ಪವರ್ 10, ಎಮಿರಾಲ್ಡ್ ಟಚ್ 5, ಫ್ರಾಕ್ಸಿ ಗರ್ಲ್ 7
2ನೇ ರೇಸ್: ಕಲಾಂಜಿಂಜಿ 2, ಸಿಲ್ವರ್ ಆರೋ 8, ಫೆಡರರ್ 1
3ನೇ ರೇಸ್: ಡ್ರೇಪರ್ ಲುಕ್ 1, ರೇಸಿಂಗ್ ರೂಲರ್ 5, ಫ್ರೀಡಂ ಟಚ್ 3
4ನೇ ರೇಸ್: ಆಲ್ವೇಸ್ ಸ್ಪೆಷಲ್ 1, ಮೋಸ್ಟ್ ಬ್ಯೂಟಿಫುಲ್ 7, ಟಾಲಿಯಾ 2
5ನೇ ರೇಸ್: ಸೀಕ್ರೆಟ್ ಸೈಂಟ್ 8, ನಾನ್‌ಪರೈಲ್ 1, ಗೆಟ್‌ಲಕ್ಕಿ 6
6ನೇ ರೇಸ್: ಗಲಹಡ್ 1, ಪಿರೈಟ್ 5, ರೈಸ್ ಅಂಡ್ ರೀನ್ 6
7ನೇ ರೇಸ್: ಚೆರಿಷ್ ದಿ ಲೇಡಿ 11, ಫ್ಯಾಷನ್ ಐಕಾನ್ 4, ಹಾಕ್ ವಿಂಗ್ 7

ಉತ್ತಮ ಬೆಟ್: ಆಲ್ವೇಸ್ ಸ್ಪೆಷಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಯುಟ್ಯೂಬ್, ಪಾಡ್‌ಕಾಸ್ಟ್‌ಗಳ ಮೂಲಕ ಸಂವಾದ, ಉಪನ್ಯಾಸ, ವಿಮರ್ಶೆ

ನವ ಮಾಧ್ಯಮದತ್ತ ಕಥನ ಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ ಸಂವಾದ, ಉಪನ್ಯಾಸ, ಚರ್ಚೆಗಳಿಗೆ ಖುದ್ದು ಹಾಜರಾಗಿ ಅವುಗಳ ಭಾಗವೇ ಆಗುವ ಅಂದವೇ ಬೇರೆ. ಐದಾರು ದಶಕ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಯಿಂದ ಚಾಲ್ತಿಯಲ್ಲಿರುವ ಈ ರೂಢಿಯನ್ನು, ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಒಗ್ಗಿಸುವ ಯತ್ನಕ್ಕೆ ಕನ್ನಡ ಸಾರಸ್ವತ ಲೋಕ ತೆರೆದುಕೊಳ್ಳುತ್ತಿದೆ.

ಬೆರಳ ತುದಿಯಲ್ಲಿಯೇ ಜಗತ್ತಿನ ಆಗುಹೋಗುಗಳನ್ನೆಲ್ಲಾ ಜಾಲಾಡಿ ಬಿಡುವ ಈ ಹೊತ್ತಿನ ಹೊಸ ಸಾಧ್ಯತೆಗಳಿಗೆ ಕನ್ನಡದ ಸಾಹಿತಿ-ವಿಮರ್ಶಕರೂ ಅಡಿ ಇಡತೊಡಗಿದ್ದಾರೆ. ಯುಟ್ಯೂಬ್, ಪಾಡ್‌ಕಾಸ್ಟ್‌ಗಳ ಮೂಲಕ ಸಂವಾದ ನಡೆಸುವ, ಉಪನ್ಯಾಸ ನೀಡುವ, ವಿಮರ್ಶೆ ಮಾಡುವ ಈ ಹೊತ್ತಿನ ಪ್ರಯತ್ನಕ್ಕೆ ಕನ್ನಡದ ಸಾಹಿತಿ–ವಿಮರ್ಶಕರು ಕೈಇರಿಸಿದ್ದಾರೆ.

ಕನ್ನಡದ ಕೆಲ ಸಾಹಿತ್ಯಾಸಕ್ತರು ನಡೆಸುತ್ತಿರುವ ಕಥನ ಸ್ಟುಡಿಯೊ ಎಂಬ ಯೂಟ್ಯೂಬ್ ವಾಹಿನಿ ಇದಕ್ಕೊಂದು ನಿದರ್ಶನ. ಕನ್ನಡದ ಸಾಹಿತಿ-ವಿಮರ್ಶಕರನ್ನು ಕೂರಿಸಿ, ಕನ್ನಡ ಸಾಹಿತ್ಯದ ಪ್ರಮುಖ ಕೃತಿ-ಘಟ್ಟಗಳ ಬಗ್ಗೆ ಮಾತನಾಡಿಸುವ ಕೆಲಸವನ್ನು ಕಥನ ಸ್ಟುಡಿಯೊ ಬಳಗ ಮಾಡುತ್ತಿದೆ.



ಕಥನ ಸ್ಟುಡಿಯೊವಿನ 'ನೂರು ಮರ–ನೂರು ಸ್ವರ' ಉಪನ್ಯಾಸ ಮಾಲೆಯ ಪೋಸ್ಟರ್

ವಿಮರ್ಶಕ ರಹಮತ್ ತರೀಕೆರೆ ಅವರೊಂದಿಗೆ ಎರಡು ವರ್ಷಗಳ ಹಿಂದೆ ನಡೆಸಿದ್ದ ಸಂವಾದದ ಎರಡು ಭಾಗಗಳು ಕಥನ ಸ್ಟುಡಿಯೊ ವಾಹಿನಿಯಲ್ಲಿ ಲಭ್ಯವಿವೆ. ತಮ್ಮ ಬಾಲ್ಯ, ಅಪ್ಪ–ಅಮ್ಮ, ತಾವು ಬೆಳೆದ ಪರಿಸರದ ಜತೆಗೆ ಈ ಹೊತ್ತಿನ ಸಾಹಿತ್ಯ ಲೋಕದ ದಿಕ್ಕು–ದೆಸೆಗಳ ಬಗ್ಗೆ ರಹಮತ್ ತರೀಕೆರೆ ಅವರ ಮಾತುಗಳನ್ನು ಒಳಗೊಂಡ ಈ ವಿಡಿಯೊಗಳು ಈವರೆಗೆ ಆರು ಸಾವಿರಕ್ಕೂ ಹೆಚ್ಚು ವೀಕ್ಷಣೆ ಪಡೆದಿವೆ.

ಈಗ್ಗೆ ತಿಂಗಳ ಹಿಂದಿನಿಂದ ಮತ್ತೆ ಅಂಥದ್ದೊಂದು ಪ್ರಯತ್ನಕ್ಕೆ ಕಥನ ಸ್ಟುಡಿಯೊ ಚಾಲನೆ ನೀಡಿದ್ದು, ಹೊಸದಾಗಿ ಎಂಟು ವಿಡಿಯೊಗಳನ್ನು ಕನ್ನಡದ ಓದುಗರಿಗೆ ತೆರೆದಿಟ್ಟಿದೆ. ಆಧುನಿಕ ಕನ್ನಡ ಸಾಹಿತ್ಯದ ನವ್ಯ ಕಾಲಘಟ್ಟದಲ್ಲಿ ಗುರುತಿಸಿಕೊಂಡಿದ್ದ ಲೇಖಕಿ ರಾಜಲಕ್ಷ್ಮಿ ಎನ್. ರಾವ್ ಅವರೊಂದಿಗಿನ ಸಂವಾದದ ಎರಡು ಕಂತುಗಳನ್ನು ಬಿತ್ತರಿಸಿದೆ.

'ನೂರು ಮರ–ನೂರು ಸ್ವರ'

ಸಾಹಿತಿಗಳು ಮತ್ತು ಕೃತಿಗಳ ಕುರಿತು ವಿಮರ್ಶಕ ಎಚ್.ಎಸ್.ರಾಘವೇಂದ್ರ ರಾವ್ ಅವರ ಉಪನ್ಯಾಸ ಇರುವ 'ನೂರು ಮರ–ನೂರು ಸ್ವರ' ವಿಡಿಯೊ ಸರಣಿಯನ್ನು ಕಥನ ಸ್ಟುಡಿಯೊ ಆರಂಭಿಸಿದೆ. ಈ ಸರಣಿಯಲ್ಲಿ ಈವರೆಗೆ ಆರು ವಿಡಿಯೊಗಳು ರೂಪುಗೊಂಡಿವೆ. ಆಧುನಿಕ ಕನ್ನಡ ಸಾಹಿತ್ಯ, ಈ ಹೊತ್ತಿನ ಸಾಹಿತ್ಯ ಮತ್ತು ಕುವೆಂಪು ಅವರ ಬದುಕು ಬರಹಗಳ ಬಗ್ಗೆ ಎಚ್ಚೆಸ್ಸಾರ್ ಅವರು ನೀಡಿರುವ ಉಪನ್ಯಾಸಗಳನ್ನು 10 ಸಾವಿರಕ್ಕೂ ಹೆಚ್ಚು ಜನರು ನೋಡಿದ್ದಾರೆ.

'ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಮಾಸ್ತಿ, ಪುತಿನ, ಕೆಎಸ್‌ನ, ಮಧುರ ಚೆನ್ನ, ಗೋಪಾಲಕೃಷ್ಣ ಅಡಿಗ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ದೇವನೂರ ಮಹಾದೇವರಂತಹ ಲೇಖಕರು, ನವೋದಯ, ನವ್ಯ, ಬಂಡಾಯ, ದಲಿತ ಮತ್ತು ಮಹಿಳಾ ಸಾಹಿತ್ಯ, ರಂಗಭೂಮಿ ಮತ್ತು ವಿಮರ್ಶೆಗಳ ಕುರಿತಾದ ಉಪನಾಸ್ಯಗಳ ವಿಡಿಯೊವನ್ನು ವಾರಕ್ಕೊಂದರಂತೆ ಈ ಸರಣಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ' ಎನ್ನುತ್ತಾರೆ ಕಥನ ಸ್ಟುಡಿಯೊ ರೂವಾರಿ ಚಂದನ್ ಗೌಡ.

ಅಲೆಮಾರಿಯ ಕತೆಗಳು...

ವಿಮರ್ಶಕ ರಹಮತ್ ತರೀಕೆರೆ ಅವರು ತಾವು ರಾಜ್ಯ, ದೇಶ, ವಿದೇಶಗಳ ಪ್ರವಾಸಿ ತಾಣಗಳಿಗೆ ನೀಡಿದ ಭೇಟಿ ಮತ್ತು ನಡೆಸಿದ ಚಾರಣಗಳ ಕಥನಗಳನ್ನು ಕಟ್ಟಿಕೊಡುವ 'ಅಲೆಮಾರಿಯ ಕತೆಗಳು' ವಿಡಿಯೊ ಸರಣಿಯನ್ನು ಈದಿನ.ಕಾಂ ತನ್ನ ಯೂಟ್ಯೂಬ್ ವಾಹಿನಿಯಲ್ಲಿ ಬಿಡುಗಡೆ ಮಾಡುತ್ತಿದೆ.

ಹಿಮಚ್ಛಾದಿತ ಕುಲು–ಮನಾಲಿ, ಲಡಾಖ್‌ನ ಹಿಮ ಮರುಭೂಮಿಯ ಪ್ಯಾಂಗಾಂಗ್ ಸರೋವರ, ಕ್ರೈಸ್ತ–ಇಸ್ಲಾಂ–ಯಹೂದಿ ಧರ್ಮಗಳಿಗೆ ಪ್ರಮುಖವಾದ ಸಿನಾಯಿ ಪರ್ವತ, ಕಾವೇರಿ ಹರಿದುಹೋಗುವ ನಾಡುಗಳ ಉದ್ದಕ್ಕೂ ಕೈಗೊಂಡ ಪಯಣದ ಬಗ್ಗೆ ರಹಮತ್ ಅವರು ಕಟ್ಟಿಕೊಟ್ಟ ಚಿತ್ರಣದ ವಿಡಿಯೊಗಳಿಗೆ ಮೆಚ್ಚುಗೆ ವ್ಯಕ್ತವಾಗಿದೆ. ಕರ್ನಾಟಕದ ದಾರ್ಶನಿಕ ಪಂಥಗಳ ಬಗ್ಗೆ ಅವರ ವಿಶ್ಲೇಷಣಾ ವಿಡಿಯೊಗಳು 20 ಸಾವಿರದಷ್ಟು ವೀಕ್ಷಣೆಗಳನ್ನು ದಾಖಲಿಸಿವೆ.

'ದೊಡ್ಡ ಇನಿಂಗ್ಸ್ ಕಟ್ಟುವ ಸಂಕಲ್ಪ'

ಬೆಂಗಳೂರು (ಪಿಟಿಐ): 'ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ನನ್ನ ಆಟವು ಹತಾಶೆ ಮೂಡಿಸಿದ್ದು ನಿಜ. ಆದರೆ, ಒಳ್ಳೆಯ ಆರಂಭವನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವ ದೃಢಸಂಕಲ್ಪವನ್ನು ಆ ಸರಣಿಯು ನನ್ನಲ್ಲಿ ಮೂಡಿಸಿದೆ' ಎಂದು ಭಾರತ ಟೆಸ್ಟ್ ಕ್ರಿಕೆಟ್ ತಂಡದ ಬ್ಯಾಟರ್ ಕರುಣ್ ನಾಯರ್ ಹೇಳಿದ್ದಾರೆ.

ಕರುಣ್ ನಾಯರ್

'ಇಂಗ್ಲೆಂಡ್ ಎದುರಿನ ಸರಣಿಯುದ್ದಕ್ಕೂ ಉತ್ತಮವಾಗಿಯೇ ಇನಿಂಗ್ಸ್ ಆರಂಭಿಸಿದ್ದೆ. ಆದರೆ, ಅವುಗಳನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ಎಡವಿದೆ. 30–40ರನ್‌ಗಳ ಆಸುಪಾಸಿನಲ್ಲಿ ವಿಕೆಟ್ ಕಳೆದುಕೊಂಡಾಗ ಹತಾಶೆಗೊಳಗಾಗುತ್ತಿದ್ದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಹಲವರೊಂದಿಗೆ ಚರ್ಚಿಸಿದ್ದೇನೆ. ಮುಂದೆ ದೊರೆಯುವ ಅವಕಾಶಗಳಲ್ಲಿ ನನಗೆ ಅದು ನೆರವಾಗಲಿದೆ' ಎಂದು ಕರುಣ್ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಲಾರಿ– ಕೆಕೆಆರ್‌ಟಿಸಿ ಬಸ್ ನಡುವೆ ಅಪಘಾತ: ಸ್ಥಳದಲ್ಲೇ ಮೂವರ ಸಾವು

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ರಾಷ್ಟ್ರೀಯ ಹೆದ್ದಾರಿ 48ರ ಗುಂಡೇನಹಳ್ಳಿ ಬಳಿ ಮೇಕೆ, ಕುರಿಗಳನ್ನು ತುಂಬಿದ್ದ ಲಾರಿ ಹಾಗೂ ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) ಬಸ್ ನಡುವೆ ಶುಕ್ರವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಸೀನಪ್ಪ(50), ನಜೀರ್ ಅಹಮದ್ (36), ಆನಂದ್(42) ಮೃತರು.

ಮೇಕೆ, ಕುರಿಗಳನ್ನು ತುಂಬಿಕೊಂಡಿದ್ದ ಲಾರಿ ಮುಧೋಳದಿಂದ ತುಮಕೂರು ಮಾರ್ಗವಾಗಿ ಬೆಂಗಳೂರು ಕಡೆಗೆ ತೆರಳುತ್ತಿತ್ತು. ಲಾರಿಯ ಟೈರ್ ಪಂಕ್ಚರ್ ಆಗಿದ್ದರಿಂದ ಗುಂಡೇನಹಳ್ಳಿ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಬದಿ ನಿಲುಗಡೆ ಮಾಡಲಾಗಿತ್ತು. ಎದುರಿನಿಂದ ವೇಗವಾಗಿ ಬಂದ ಬಸ್, ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಲಾರಿ ಮುಂಭಾಗ ನಜ್ಜುಗುಜ್ಜಾಗಿದೆ.

ಬಸ್‌ನಲ್ಲಿದ್ದ ಕೆಲವು ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು.

ಟೈರ್ ಬದಲಾವಣೆ ವೇಳೆ ಅವಘಡ: ಟೈರ್ ಪಂಕ್ಚರ್ ಆಗಿದ್ದರಿಂದ ಇಬ್ಬರು ಲಾರಿ ಚಾಲಕರು, ಒಬ್ಬ ಕ್ಲೀನರ್ ಟೈರ್ ತೆಗೆದು ಮತ್ತೊಂದು ಟೈರ್ ಅಳವಡಿಸುತ್ತಿದ್ದರು. ಆ ಸಂದರ್ಭದಲ್ಲಿ ವೇಗವಾಗಿ ಬಂದ ಬಸ್ ಡಿಕ್ಕಿ ಹೊಡೆದಿದೆ. ಮೂವರೂ ಸ್ಥಳದಲ್ಲೇ ಮೃತಪಟ್ಟರು.

ಸ್ಥಳಕ್ಕೆ ನೆಲಮಂಗಲ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಪಘಾತ ಸಂಭವಿಸಿದ ಸ್ಥಳದಲ್ಲಿ ಅಪಾಯಕಾರಿ ತಿರುವು ಇರುವುದರಿಂದ ಈ ರೀತಿಯ ಘಟನೆಗಳು ಆಗಾಗ್ಗೆ ಸಂಭವಿಸುತ್ತಿವೆ. ಅಪಾಯಕಾರಿ ತಿರುವು ಸರಿಪಡಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ಬಸ್, ಲಾರಿಯನ್ನು ಕ್ರೇನ್ ಸಹಾಯದಿಂದ ತೆರವುಗೊಳಿಸಲಾಯಿತು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂ.ಅ.ಪ್ರಾ/ಇ.ಓ/ಟಿ.ಡಿ.ಆರ್ ಸೆಲ್/ಅಧಿಸೂಚನೆ/104/2025–26 ದಿನಾಂಕ: 16.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಮತ್ತು ಕರ್ನಾಟಕ ರಾಜ್ಯ ಸರ್ಕಾರದ ನೋಟಿಫಿಕೇಷನ್ ಸಂಖ್ಯೆ: ಯುಡಿಡಿ/283/ಬಿಇಎಂಆರ್‌ಯುಪಿಆರ್‌ಎ/ 2015 ದಿನಾಂಕ: 04.03.2017 ರಲ್ಲಿನ ನಿಯಮ ಮತ್ತು ಷರತ್ತುಗಳನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಅಧಿಸೂಚನೆಯಂತೆ, ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್–2015 ರಲ್ಲಿ ಗುರುತಿಸಿರುವ ರಸ್ತೆಗಳ ಅನುಷ್ಠಾನಕ್ಕಾಗಿ, ಈ ಕೆಳಗಿನ ಅನುಸೂಚಿಯಲ್ಲಿ ತಿಳಿಸಲಾದ ಪ್ರದೇಶದ ಭೂಮಾಲೀಕರಿಗೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು ವಿತರಿಸಲಾಗಿರುತ್ತದೆ.

ದಿನಾಂಕ: 04.03.2017 ರ ಸರ್ಕಾರದ ಅಧಿಸೂಚನೆಯನ್ವಯ ಹೊಸ ಟಿ.ಡಿ.ಆರ್. ನಿಯಮಾವಳಿಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಿತರಿಸಲಾಗಿರುವ ಈ ಕೆಳಕಂಡ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರಗಳನ್ನು ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಿವ್ಯಾಲಿಡೇಷನ್/ವರ್ಗಾವಣೆ/ಬಳಕೆ ಪ್ರಮಾಣ ಪತ್ರಕ್ಕಾಗಿ ಪ್ರಸ್ತುತ ಹಕ್ಕುದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮನವಿಯನ್ನು ಸಲ್ಲಿಸಿದ್ದು, **ಸರ್ಕಾರದ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ಬೆಂಗಳೂರು, ದಿನಾಂಕ: 18.07.2025** ರ ಆದೇಶದಲ್ಲಿ ವಿವರಿಸಿರುವಂತೆ ಕಾರ್ಯವಿಧಾನ ರೂಪಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಡತಗಳು ಸಲ್ಲಿಕೆಯಾಗಿರುತ್ತದೆ.

ಬೆಂ.ಅ.ಪ್ರಾಧಿಕಾರದ ಸಭೆಯ ದಿನಾಂಕ: 15.12.2018, ವಿಷಯ ಸಂಖ್ಯೆ: 159/18 ರಂತೆ ಭೂಮಿ ಹಾಗೂ ಭೂಮಾಲೀಕರ ವಿವರಗಳನ್ನು ಹಾಗೂ ಸಾರ್ವಜನಿಕ ಉದ್ದೇಶಗಳಿಗಾಗಿ ಯಾರ ಭೂಮಿಯ ಅವಶ್ಯವಿದೆಯೋ ಹಾಗೂ ಅಭಿವೃದ್ಧಿ ಹಕ್ಕುಗಳನ್ನು ನಗದು ಪರಿಹಾರದ ಬದಲಿಗೆ ಯಾರಿಗೆ ನೀಡಲಾಗಿದೆಯೋ ಅಂತಹ ಹಿತಾಸಕ್ತರ ವಿವರಗಳನ್ನು ಕೆಳಕಂಡಂತೆ, ಸಾರ್ವಜನಿಕರ ತಿಳುವಳಿಕೆಗೆ ಪ್ರಕಟಿಸಲಾಗಿದೆ. ಯಾವುದೇ ತಕರಾರುಗಳಿದ್ದಲ್ಲಿ ಹಾಗೂ ಸಲಹೆಗಳಿದ್ದಲ್ಲಿ ಅಂತಹವುಗಳನ್ನು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ವಿಳಾಸಿಸಿ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಸ್ವಾಧೀನಕ್ಕೆ ಒಪ್ಪಿಸಿದ ಭೂಮಿ / ಕಟ್ಟಡದ ವಿಸ್ತೀರ್ಣ ಹಾಗೂ ಭೂ ಮಾಲೀಕರ ವಿವರ ಹಾಗೂ ಅದಕ್ಕೆ ನೀಡಲಾಗಿರುವ ಅಭಿವೃದ್ಧಿ ಹಕ್ಕಿನ ಪ್ರಮಾಣ ಪತ್ರದ ತಖ್ತೆ:

ಕ್ರ. ಸಂ.	ನಿವೇಶನ / ಭೂಮಿ / ಕಟ್ಟಡದ ವಿಸ್ತೀರ್ಣ ಹಾಗೂ ವಿಳಾಸ	ಭೂಮಿ / ನಿವೇಶನ / ಅಗತ್ಯವಿರುವ ಸಾರ್ವಜನಿಕ ಉದ್ದೇಶ	ಭೂಮಿ/ ನಿವೇಶನದ ವಿಸ್ತೀರ್ಣ ಉದ್ದ X ಅಗಲ ಮೀ.ಗಳಲ್ಲಿ	ಡಿ.ಆರ್.ಸಿ.ಸಂಖ್ಯೆ & ಭೂಮಿ/ ನಿವೇಶನದ ವಿಸ್ತೀರ್ಣ ಚ.ಮೀ.ಗಳಲ್ಲಿ	ಭೂಮಿ/ನಿವೇಶನದ ಗಡಿಯ ಚಕ್ಕುಬಂದಿ	ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ನೀಡಲಾಗಿರುವ ಭೂಮಿಯ / ನಿವೇಶನದ ಮೂಲ ಭೂಮಾಲೀಕರ ಹೆಸರು ಮತ್ತು ವಿಳಾಸ
1	ಸರ್ವೆ ನಂ. 77/1, ಚಘಲಟ್ಟಿ ಗ್ರಾಮ, ಜಾಲಾ ಹೋಬಳಿ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಕಣ್ಣೂರು ಜಂಕ್ಷನ್‌ನಿಂದ ಮೈಲನಹಳ್ಳಿವರೆಗೆ ರಸ್ತೆ ಅಗಲೀಕರಣ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2528 782.05 ಚ.ಮೀ	**ಪೂರ್ವ:** ಸರ್ವೆ ನಂ. 77/2; **ಪಶ್ಚಿಮ:** ಸರ್ವೆ ನಂ. 81; **ಉತ್ತರ:** ಓಣಿ ರಸ್ತೆ; **ದಕ್ಷಿಣ:** ಸರ್ವೆ ನಂ.77/1 ರ **ಉಳಿಕೆ;**	ಶ್ರೀಮತಿ ಸಿ. ಮಮತ ಕೋಂ ನಾಗರಾಜು. ನಂ. 180, ಮಾರುತಿ ನಿಲಯ, ಕಣ್ಣೂರು ಗ್ರಾಮ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
2	ಸರ್ವೆ ನಂ. 90/5, ಕೋಗಿಲು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಕೋಗಿಲು ಮುಖ್ಯರಸ್ತೆಯಿಂದ ಕಣ್ಣೂರು ಜಂಕ್ಷನ್‌ವರೆಗೆ ರಸ್ತೆ ಅಗಲೀಕರಣ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1955 242.29 ಚ.ಮೀ	ಪೂರ್ವ: ಸರ್ವೆ ನಂ. 90/3; **ಪಶ್ಚಿಮ:** ಸರ್ವೆ ನಂ. 90/2; **ಉತ್ತರ:** ಸರ್ವೆ ನಂ.90/5ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀ ಆಂಜಿನಪ್ಪ ಬಿನ್ ಮುನಿಶಾಮಪ್ಪ. ಕೋಗಿಲು ಗ್ರಾಮ, ಯಲಹಂಕ ಹೋಬಳಿ ಬೆಂಗಳೂರು – 560 064.
3	ಹೊಸ ಸರ್ವೆ ನಂ. 99/2 (ಹಳೆ ಸರ್ವೆ ನಂ. 99/2(ಎ), 99/2(ಬಿ) & 99/3(ಸಿ), ಮೈಲನಹಳ್ಳಿ ಗ್ರಾಮ, ಜಾಲ ಹೋಬಳಿ, ಯಲಹಂಕ ತಾಲ್ಲೂಕು.	ಮೈಲನಹಳ್ಳಿ ಗ್ರಾಮದಲ್ಲಿ ಕಣ್ಣೂರು ಜಂಕ್ಷನ್‌ನಿಂದ ಬೆಂಗಳೂರು ಅಂತರಾಷ್ಟೀಯ ವಿಮಾನ ನಿಲ್ದಾಣದ ಕಾಂಪೌಂಡ್ ವರೆಗಿನ 150 ಅಡಿ ಡಬಲ್ ರೋಡ್ ಹೆಣ್ಣೂರು ರಸ್ತೆಯನ್ನು ಅಗಲೀಕರಣಗೊಳಿಸುವುದು	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2239 237.82 ಚ.ಮೀ	**ಪೂರ್ವ:** ಸರ್ವೆ ನಂ. 99/12 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 99/2; **ಉತ್ತರ:** ಸರ್ವೆ ನಂ.100; **ದಕ್ಷಿಣ:** ಸರ್ವೆ ನಂ.99/2;	ಶ್ರೀ ರಾಮಕೃಷ್ಣ ಬಿನ್ ಅಶ್ವತ್ಥಪ್ಪ, ಮೈಲನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
4	ಸರ್ವೆ ನಂ. 104, ಕೆ. ದೊಮ್ಮಸಂದ್ರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಮೇಡಹಳ್ಳಿಯಿಂದ ಕುರುಡುಸೊನ್ನೆನಹಳ್ಳಿ ಸಾಯಿ ಸೆರಿನಿಟಿ ಲೇಔಟ್, ದೊಮ್ಮಸಂದ್ರ, ಬೆಳತ್ತೂರುವರೆಗೆ ಬೆಳತ್ತೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1323 807.10 ಚ.ಮೀ	**ಪೂರ್ವ:** ಸರ್ವೆ ನಂ. 105; **ಪಶ್ಚಿಮ:** ಸರ್ವೆ ನಂ. 100; **ಉತ್ತರ:** ಸರ್ವೆ ನಂ.104 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀ ಮುನಿಯಲ್ಲಪ್ಪ ಬಿನ್ ಗುಳ್ಳಪ್ಪ. ಕೆ. ದೊಮ್ಮಸಂದ್ರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
5	ಸರ್ವೆ ನಂ. 25/1, ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಜಂಕ್ಷನ್‌ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1952 152.00 ಚ.ಮೀ	**ಪೂರ್ವ:** ಸರ್ವೆ ನಂ. 25/10; **ಪಶ್ಚಿಮ:** ಸರ್ವೆ ನಂ. 26; **ಉತ್ತರ:** ರಸ್ತೆ; **ದಕ್ಷಿಣ:** ಸರ್ವೆ ನಂ.25/11 ರ ಉಳಿಕೆ;	ಶ್ರೀ ಆರ್. ಸುಬ್ರಮಣಿ ಬಿನ್ ರಂಗಪ್ಪ. ಬಾಗಲೂರು ಗ್ರಾಮ, ಬಾಗಲೂರು ಪೋಸ್ಟ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
6	ಸರ್ವೆ ನಂ. 34/2, ಪಟ್ಟಂದೂರು ಅಗ್ರಹಾರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಹೋಫಾರ್ಮ್ ವೃತ್ತದಿಂದ ಚನ್ನಸಂದ್ರ ಹೋಪ್‌ಫಾರ್ಮ್ ವೃತ್ತದಿಂದ ಚನ್ನಸಂದ್ರದವರೆಗಿನ ರಸ್ತೆಯ ಸುಧಾರಣೆಗಳ ಕಾಮಗಾರಿ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1658 1045.87 ಚ.ಮೀ	**ಪೂರ್ವ:** ಸರ್ವೆ ನಂ. 34/1; **ಪಶ್ಚಿಮ:** ಕಾಡುಗೋಡಿ ರಸ್ತೆ; **ಉತ್ತರ:** ಸರ್ವೆ ನಂ. 34/2 ರ ಉಳಿಕೆ; **ದಕ್ಷಿಣ:** ಚನ್ನಸಂದ್ರ ಮುಖ್ಯ ರಸ್ತೆ;	ಡಿವೈನ್ ಲೈಟ್ ಟ್ರಸ್ಟ್ ಫಾರ್ ದ ಬ್ಲೈಂಡ್. ವೈಟ್‌ಫೀಲ್ಡ್ ಕಾಡುಗೋಡಿ ಮುಖ್ಯ ರಸ್ತೆ, ಬೆಂಗಳೂರು–560 066.
7	ಸರ್ವೆ ನಂ. 6, ಬೈಯಪ್ಪನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಜಂಕ್ಷನ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2257 598.29 ಚ.ಮೀ	**ಪೂರ್ವ:** ಸರ್ವೆ ನಂ. 6 ರ ಉಳಿಕೆ; **ಪಶ್ಚಿಮ:** ರಸ್ತೆ; **ಉತ್ತರ:** ಸಾತನೂರು ಗ್ರಾಮದ ಗಡಿ; **ದಕ್ಷಿಣ:** ಸರ್ವೆ ನಂ.5;	ಶ್ರೀ ಎಸ್.ಸಿ. ಅರುಣ್ ಕುಮಾರ್ ಬಿನ್ ಲೇ॥ ಎಸ್.ಸಿ.ಚನ್ನೇಗೌಡ, ಸಾತನೂರು ಗ್ರಾಮ, ಬಾಗಲೂರು ಪೋಸ್ಟ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
8	ವಿ.ಪಿ. ಖಾತಾ ನಂ. 916/811/1/50, ಸರ್ವೆ ನಂ. 35/1, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2264 76.17 ಚ.ಮೀ	**ಪೂರ್ವ:** ಸರ್ವೆ ನಂ. 35/1ಎ1 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 35/1ಎ1 ರ ಉಳಿಕೆ; **ಉತ್ತರ:** ಸರ್ವೆ ನಂ. 35/1ಎ1 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀಮತಿ ಎಸ್.ಸಿ. ಚೈತನ್ಯ ಬಿನ್ ಎಸ್.ಸಿ. ಚಂದ್ರಶೇಖರ್. ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
9	ಹಳೆ ಸರ್ವೆ ನಂ. 67, ಹೊಸ ಸರ್ವೆ ನಂ. 131, ಸಾತನೂರು ಗ್ರಾಮ, ಪಂಚಾಯತ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2106 390.18 ಚ.ಮೀ	**ಪೂರ್ವ:** ಸರ್ವೆ ನಂ. 67 ರ ಉಳಿಕೆ; **ಪಶ್ಚಿಮ:** ರಸ್ತೆ; **ಉತ್ತರ:** ರಸ್ತೆ, **ದಕ್ಷಿಣ:** ಸರ್ವೆ ನಂ. 67 ರ ಉಳಿಕೆ;	ಶ್ರೀ ದೀಪಕ್ ಬಿನ್ ಎಸ್.ಸಿ. ಚಂದ್ರಶೇಖರ್. ನಂ. 54, 55, ಶ್ರೀನಿವಾಸ ಗಾರ್ಡನ್ ಬಡಾವಣೆ ಸಾತನೂರು, ಸಿ.ಸಿ. ಕ್ಲಬ್ ಹತ್ತಿರ, ಬಾಗಲೂರು ಪೋಸ್ಟ್, ಬೆಂಗಳೂರು –562149
10	ಸರ್ವೆ ನಂ. 113, ರಾಂಪುರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2355 90.00 ಚ.ಮೀ	**ಪೂರ್ವ:** ಲೋಕೇಶ್ ರವರ ಸ್ವತ್ತು; **ಪಶ್ಚಿಮ:** ಜಯರಾಮ್ ರವರ ಸ್ವತ್ತು; **ಉತ್ತರ:** ಇದೇ ಸರ್ವೆ ನಂಬರಿನ ಉಳಿಕೆ; **ದಕ್ಷಿಣ:** ರಸ್ತೆ & ಸರ್ವೆ ನಂ. 110;	ಶ್ರೀಮತಿ ಅಮ್ಮಯಮ್ಮ ಬಿನ್ ಹನುಮಂತಪ್ಪ. ರಾಂಪುರ ಗ್ರಾಮ, ವಿರ್‍ಗೋನಗರ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
11	ಖಾತಾ ನಂ. 19/2, ಪಿಐಡಿ ನಂ. 25/69/19/2, ಮಿನರ್ವಮಿಲ್ ಕ್ವಾರ್ಟಸ್. ರಾಮಚಂದ್ರಪುರ, ವಾರ್ಡ್ ನಂ. 25, ಸಿಟಿಎಸ್ ನಂ. 02, ಲೋಕಲ್ ಏರಿಯಾ ಪ್ಲಾನ್–56, ಬೆಂಗಳೂರು.	ರಾಜಾಜಿನಗರದಲ್ಲಿ ಅಂಡರ್‌ಪಾಸ್ ಮತ್ತು ವಾಟಾಳ್ ನಾಗರಾಜ್ ರಸ್ತೆ ಮತ್ತು ಮೈಸೂರು ಡಿವಿಯೇಷನ್ ಅಗಲೀಕರಣ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 001 2637.00 ಚ.ಮೀ ಡಿ.ಆರ್.ಸಿ. 001 2788.51 ಚ.ಮೀ	**ಬ್ಲಾಕ್–1** **ಪೂರ್ವ:** ಸಿಟಿ ಸರ್ವೆ ನಂ.4; **ಪಶ್ಚಿಮ:** ರಸ್ತೆ; **ಉತ್ತರ:** ರಸ್ತೆ; **ದಕ್ಷಿಣ:** ಸಿಟಿ ಸರ್ವೆ ನಂ. 2 ರ ಉಳಿಕೆ; **ಬ್ಲಾಕ್–2** **ಪೂರ್ವ:** ರಸ್ತೆ; **ಪಶ್ಚಿಮ:** ಸಿಟಿ ಸರ್ವೆ ನಂ. 2 ರ ಉಳಿಕೆ; **ಉತ್ತರ:** ಸಿಟಿ ಸರ್ವೆ ನಂ.4; **ದಕ್ಷಿಣ:** ರಸ್ತೆ;	ಮೆ॥ ದವನಮ್ ಕನ್‌ಸ್ಟ್ರಕ್ಷನ್ಸ್ (ಪಿ) ಲಿ., **ಪ್ರತಿನಿಧಿಸುವವರು.** ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಡಿ.ವಿ. ಹರೀಶ್ ಬಿನ್ ಶ್ರೀ ಡಿ.ಎಸ್. ವೆಂಕಟನಾರಾಯಣ ಶೆಟ್ಟಿ. ನಂ. 148, ಸರ್ವೇಯರ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು– 560 004.
12	ಹೊಸ ಸರ್ವೆ ನಂ. 125, (ಹಳೆ ಸರ್ವೆ ನಂ. 125/2) ಬಿಳಿಶಿವಾಲೆ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 3780 612.00 ಚ.ಮೀ	**ಪೂರ್ವ:** ಸರ್ವೆ ನಂ. 124; **ಪಶ್ಚಿಮ:** ಕ್ಯಾಲಸನಹಳ್ಳಿ ಗ್ರಾಮದ ಗಡಿ; **ಉತ್ತರ:** ಸರ್ವೆ ನಂ. 125 ರ ಉಳಿಕೆ; **ದಕ್ಷಿಣ:** ರಸ್ತೆ;	1)ಶ್ರೀ ಎನ್.ರಾಜಣ್ಣ ಬಿನ್ ನಂಜಪ್ಪ. 2)ಶ್ರೀ ಆರ್. ಕೇಶವ ಬಿನ್ ಎನ್. ರಾಜಣ್ಣ. ಬಿಳಿಶಿವಾಲೆ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
13	ಸರ್ವೆ ನಂ. 81/2, ಹಿರಂಡಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ, ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2178 102.43 ಚ.ಮೀ	**ಪೂರ್ವ:** ಸರ್ವೆ ನಂ. 80; **ಪಶ್ಚಿಮ:** ಸರ್ವೆ ನಂ. 81/11; **ಉತ್ತರ:** ರಸ್ತೆ; **ದಕ್ಷಿಣ:** ಸರ್ವೆ ನಂ. 81/2 ರ ಉಳಿಕೆ;	ಶ್ರೀ ರಾಮಮೂರ್ತಿ ಬಿನ್ ಲೇ॥ ಲಕ್ಷ್ಮಯ್ಯ. ಹಿರಂಡಹಳ್ಳಿ ಗ್ರಾಮ, ವಿರ್‍ಗೋನಗರ ಪೋಸ್ಟ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
14	ಸರ್ವೆ ನಂ. 27/3, ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಜಂಕ್ಷನ್‌ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2267 115.95 ಚ.ಮೀ	**ಪೂರ್ವ:** ಸರ್ವೆ ನಂ. 27/1; **ಪಶ್ಚಿಮ:** ಸರ್ವೆ ನಂ. 27/4; **ಉತ್ತರ:** ಸರ್ವೆ ನಂ. 27/3 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀ ಅಸೀಫ್ ಇಕ್ಬಾಲ್ ಬಿನ್ ಅಬ್ದುಲ್ ಗಾಫರ್. ನಂ. 46, ಪ್ರಿಯಾಂಕ ಗ್ರಾಮ, ಬಾಗಲೂರು ರಸ್ತೆ, ಬೆಂಗಳೂರು–560063.
15	ಸರ್ವೆ ನಂ. 113, ರಾಂಪುರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2353 160.00 ಚ.ಮೀ	**ಪೂರ್ವ:** ಮುನಿಕಾವೇರಮ್ಮ ರವರ ಸ್ವತ್ತು; **ಪಶ್ಚಿಮ:** ಅಮ್ಮಯಮ್ಮ ರವರ ಸ್ವತ್ತು; **ಉತ್ತರ:** ಇದೇ ಸರ್ವೆ ನಂಬರಿನ ಉಳಿಕೆ; **ದಕ್ಷಿಣ:** ರಸ್ತೆ & ಸರ್ವೆ ನಂ. 110;	ಶ್ರೀ ಹೆಚ್. ಲೋಕೇಶ್ ಬಿನ್ ಹನುಮಂತಪ್ಪ. ರಾಂಪುರ ಗ್ರಾಮ, ವಿರ್‍ಗೋನಗರ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
16	ಹೊಸ ಸರ್ವೆ ನಂ. 35/1ಎ1, ವಿ.ಪಿ. ಖಾತಾ ನಂ. 953/837/1/132, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಜಂಕ್ಷನ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2266 74.32 ಚ.ಮೀ	**ಪೂರ್ವ:** ಸರ್ವೆ ನಂ. 35/1ಎ1 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 35/1ಎ1 ರ ಉಳಿಕೆ; **ಉತ್ತರ:** ಸರ್ವೆ ನಂ. 35/1ಎ1 ರ ಉಳಿಕೆ **ದಕ್ಷಿಣ:** ರಸ್ತೆ;	ಶ್ರೀಮತಿ ಜಯಮ್ಮ ಕೋಂ ಎಸ್.ಸಿ. ಚಂದ್ರಶೇಖರ್. ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
17	ಹೊಸ ಸರ್ವೆ ನಂ. 35/1ಎ1, ವಿ.ಪಿ. ಖಾತಾ ನಂ. 958/841/1/133, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಜಂಕ್ಷನ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2263 70.60 ಚ.ಮೀ	**ಪೂರ್ವ:** ಸರ್ವೆ ನಂ. 35/1ಎ1 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 35/1ಎ1 ರ ಉಳಿಕೆ; **ಉತ್ತರ:** ಸರ್ವೆ ನಂ. 35/1ಎ1 ರ ಉಳಿಕೆ **ದಕ್ಷಿಣ:** ರಸ್ತೆ;	ಶ್ರೀಮತಿ ಜಯಮ್ಮ ಕೋಂ ಎಸ್.ಸಿ. ಚಂದ್ರಶೇಖರ್. ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
18	ಸರ್ವೆ ನಂ. 113, ರಾಂಪುರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2352 160.00 ಚ.ಮೀ	**ಪೂರ್ವ:** ಅಮ್ಮಯಮ್ಮ ರವರ ಸ್ವತ್ತು; **ಪಶ್ಚಿಮ:** ರಾಮಚಂದ್ರಪ್ಪ ರವರ ಸ್ವತ್ತು; **ಉತ್ತರ:** ಇದೇ ಸರ್ವೆ ನಂಬರಿನ ಉಳಿಕೆ; **ದಕ್ಷಿಣ:** ರಸ್ತೆ & ಸರ್ವೆ ನಂ. 110;	ಶ್ರೀ ಹೆಚ್. ಜಯರಾಮ್ ಬಿನ್ ಎನ್. ಹನುಮಂತಪ್ಪ. ರಾಂಪುರ ಗ್ರಾಮ, ವಿರ್‍ಗೋನಗರ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
19	ಸರ್ವೆ ನಂ. 51/1, ಆದೂರು ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1457 680.00 ಚ.ಮೀ	**ಪೂರ್ವ:** ಸರ್ವೆ ನಂ. 51/2, **ಪಶ್ಚಿಮ:** ರಾಂಪುರ ಗ್ರಾಮದ ಗಡಿ; **ಉತ್ತರ:** ರಸ್ತೆ; **ದಕ್ಷಿಣ:** ಸರ್ವೆ ನಂ. 51/1 ರ ಉಳಿಕೆ;	ಶ್ರೀ ಎ ತಾಯಪ್ಪ ಬಿನ್ ಅಣ್ಣಯಪ್ಪ. ನಂ. 18/3, ಅಣ್ಣಯಪ್ಪ ಗಾರ್ಡನ್, ಜಕ್ಕಸಂದ್ರ ಗ್ರಾಮ, ಕೋರಮಂಗಲ ಪೋಸ್ಟ್, ಬೆಂಗಳೂರು–560 031.
20	ಸರ್ವೆ ನಂ. 30/8, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2260 865.29 ಚ.ಮೀ	**ಪೂರ್ವ:** ಸರ್ವೆ ನಂ. 29, **ಪಶ್ಚಿಮ:** ರಸ್ತೆ; **ಉತ್ತರ:** ಸರ್ವೆ ನಂ. 30/8 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀಮತಿ ಜಯಮ್ಮ ಕೋಂ ಎಸ್.ಸಿ. ಚಂದ್ರಶೇಖರ್. ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
21	ಸರ್ವೆ ನಂ. 10/2. ಬಿ.ಕೆ. ಹಳ್ಳಿ ಅಮಾನಿಕೆರೆ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಕಣ್ಣೂರು ಜಂಕ್ಷನ್‌ನಿಂದ ಮೈಲನಹಳ್ಳಿ ಗ್ರಾಮಕ್ಕೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2248 185.76 ಚ.ಮೀ	**ಪೂರ್ವ:** ರಸ್ತೆ, **ಪಶ್ಚಿಮ:** ಸರ್ವೆ ನಂ. 10/2 ರ ಉಳಿಕೆ; **ಉತ್ತರ:** ಸರ್ವೆ ನಂ. 10/1; **ದಕ್ಷಿಣ:** ಸರ್ವೆ ನಂ.14;	ಶ್ರೀ ಪಿ. ಜನಾರ್ಧನ್ ಬಿನ್ ಪಿಳ್ಳ ವೆಂಕಟರಾಯಪ್ಪ. ಮೈಲನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
22	ಸರ್ವೆ ನಂ. 113, ರಾಂಪುರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು, ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ರಾಂಪುರದಿಂದ ಕೊತ್ತನೂರು ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2351 180.00 ಚ.ಮೀ	**ಪೂರ್ವ:** ಮುನಿವೆಂಕಟಮ್ಮ ರವರ ಸ್ವತ್ತು; **ಪಶ್ಚಿಮ:** ಮುನಿಕಾವೇರಮ್ಮ ರವರ ಸ್ವತ್ತು; **ಉತ್ತರ:** ಇದೇ ಸ್ವತ್ತಿನ ಉಳಿಕೆ; **ದಕ್ಷಿಣ:** ರಸ್ತೆ & ಸರ್ವೆ ನಂ.111;	ಶ್ರೀ ಆರ್.ಹೆಚ್. ಮಂಜುನಾಥ್ ಬಿನ್ ಎನ್. ಹನುಮಂತಪ್ಪ. ರಾಂಪುರ ಗ್ರಾಮ, ವಿರ್‍ಗೋನಗರ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
23	ಸರ್ವೆ ನಂ. 28, ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್ ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2262 40.25 ಚ.ಮೀ	**ಪೂರ್ವ:** ಸರ್ವೆ ನಂ. 27, **ಪಶ್ಚಿಮ:** ರಸ್ತೆ; **ಉತ್ತರ:** ಸರ್ವೆ ನಂ. 28 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀ ಎಸ್.ಎಂ. ಹೇಮಣ್ಣ ಬಿನ್ ಮಳಿಯಪ್ಪ. ಸಾತನೂರು ಗ್ರಾಮ, ಬಾಗಲೂರು ಪೋಸ್ಟ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
24	ಸರ್ವೆ ನಂ. 77/3, ಚಘಲಟ್ಟಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಕಣ್ಣೂರು ಜಂಕ್ಷನ್‌ನಿಂದ ಮೈಲನಹಳ್ಳಿ ಗ್ರಾಮಕ್ಕೆ ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 2530 1066.80 ಚ.ಮೀ	**ಪೂರ್ವ:** ಸರ್ವೆ ನಂ. 77/4, **ಪಶ್ಚಿಮ:** ಸರ್ವೆ ನಂ. 77/2; **ಉತ್ತರ:** ಓಣಿ; **ದಕ್ಷಿಣ:** ಸರ್ವೆ ನಂ.77/3 ರ ಉಳಿಕೆ;	ಶ್ರೀಮತಿ ಸಿ. ಅಂಜಿತ ಕೋಂ ಡಾ॥ ರಾಜೀವ್. ನಂ.17, 2ನೇ ಅಡ್ಡರಸ್ತೆ, ಅಂಜಿನಪ್ಪ ಬ್ಲಾಕ್, ಕೃಷ್ಣಮ್ಮ ಗಾರ್ಡನ್ ಬೆನ್‌ಸನ್ ಟೌನ್ ಪೋಸ್ಟ್, ಬೆಂಗಳೂರು–560 046.
25	ಸರ್ವೆ ಸಂಖ್ಯೆ 77/2, ಚಗಲಟ್ಟಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಕಣ್ಣೂರು ಜಂಕ್ಷನ್‌ನಿಂದ ಮೈಲಾನಹಳ್ಳಿ ಗ್ರಾಮವರೆಗೆ ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. ಸಂಖ್ಯೆ: 2529 1356.36 ಚ.ಮೀ.	**ಪೂರ್ವ:** ಸರ್ವೆ ನಂ. 77/3; **ಪಶ್ಚಿಮ:** ಸರ್ವೆ ನಂ. 77/1; **ಉತ್ತರ:** ಓಣಿ; **ದಕ್ಷಿಣ:** ಸರ್ವೆ ನಂ. 77/2 ರ ಉಳಿಕೆ;	ಶ್ರೀಮತಿ ಸಿ. ಕವಿತಾ ಕೋಂ ಮಂಜುನಾಥ, ನಂ. 301, ಮಾರುತಿ ನಿವಾಸ, 3ನೇ ಮೇನ್ ರಸ್ತೆ, 3ನೇ ಎಚ್‌ಆರ್‌ಬಿಆರ್ ಲೇಔಟ್, ಬೆಂಗಳೂರು–560048.
26	ಹೊಸ ಸರ್ವೆ ಸಂಖ್ಯೆ 35/1, ವಿ.ಪಿ. ಖಾತೆ ಸಂಖ್ಯೆ 919/813/1/20, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್‌ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ವಿಸ್ತರಣೆ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿಆರ್‌ಸಿ ಸಂಖ್ಯೆ: 2261 76.17 ಚ.ಮೀ.	**ಪೂರ್ವ:** ಸರ್ವೆ ನಂ. 35/1ಎ1 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 35/1ಎ1 ರ ಉಳಿಕೆ; **ಉತ್ತರ:** ಸರ್ವೆ ನಂ. 35/1ಎ1 ರ ಉಳಿಕೆ; **ದಕ್ಷಿಣ:** ರಸ್ತೆ;	ಶ್ರೀಮತಿ ಜಯಮ್ಮ, ಕೋಂ ಎಸ್.ಸಿ. ಚಂದ್ರಶೇಖರ್, ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.
27	ಸರ್ವೆ ಸಂಖ್ಯೆ 112/9, ಖಾತೆ ಸಂಖ್ಯೆ 521/112/9/57, ಹಿರಂಡಹಳ್ಳಿ ಗ್ರಾಮ, ಬಿಡರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.	ಕೊತ್ತನೂರು ರಸ್ತೆ ವಿಸ್ತರಣೆ: ಕೊತ್ತನೂರು, ಅವಲಹಳ್ಳಿ, ಬೈರತಿ, ಬಿಳಿಶಿವಳೆ, ಆದೂರು, ಬಿಡರಹಳ್ಳಿ, ಹಿರಂದಹಳ್ಳಿ ರಾಂಪುರ ಮಾರ್ಗ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿಆರ್‌ಸಿ ಸಂಖ್ಯೆ: 2181 78.40 ಚ.ಮೀ.	**ಪೂರ್ವ:** ಸರ್ವೆ ನಂ. 112/9 ರ ಉಳಿಕೆ; **ಪಶ್ಚಿಮ:** ಸರ್ವೆ ನಂ.112/12; **ಉತ್ತರ:** ರಸ್ತೆ; **ದಕ್ಷಿಣ:** ಸರ್ವೆ ನಂ.112/9;	ಶ್ರೀಮತಿ ಕೆ. ನೇತ್ರಾವತಿ, ಬಿನ್ ಕೆಂಪಣ್ಣ, ಹಿರಂಡಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ವಿರ್‍ಗೋನಗರ ಪೋಸ್ಟ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು.
28	ಸರ್ವೆ ಸಂಖ್ಯೆಗಳು 73, 75/1, 75/2, 71/3 ಮತ್ತು 77, ಹೊಸಕೆರೆಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.	ಹೊಸಕೆರೆಹಳ್ಳಿ ಮುಖ್ಯರಸ್ತೆ ವಿಸ್ತರಣೆ: ರಿಂಗ್‌ರೋಡ್‌ನಿಂದ ಹೊಸಕೆರೆಹಳ್ಳಿ ಹಾಗೂ ಪುಷ್ಪಗಿರಿ ನಗರ, ಡೆಸೋಜನಗರ ಮೂಲಕ ರಿಂಗ್‌ರೋಡ್‌ಗೆ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿಆರ್‌ಸಿ ಸಂಖ್ಯೆ: 2041 5180.55 ಚ.ಮೀ.	**ಪೂರ್ವ:** ಸರ್ವೆ ನಂ. 73, 75/1, 75/2, 77 ರ ಉಳಿಕೆ; **ಪಶ್ಚಿಮ:** ಸರ್ವೆ ನಂ. 73, 75/1, 71/3, 75/2, 77 ರ ಉಳಿಕೆ; **ಉತ್ತರ:** ರಿಂಗ್‌ರೋಡ್; **ದಕ್ಷಿಣ:** ಸರ್ವೆ ನಂ.78;	ಮೆ॥ ನಂದಿ ಎಕಾನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್. ನಂ.1 ಮೊಡಿಫೈಡ್ ಹೌಸ್, ಮಿಡ್‌ಫೋರ್ಡ್ ಗಾರ್ಡನ್ಸ್, ಎಂ.ಜಿ.ರೋಡ್ ಹತ್ತಿರ, ಬೆಂಗಳೂರು–560001.
29	ವಿ.ಪಿ. ಖಾತೆ ಸಂಖ್ಯೆ 166/136/121/12, ಸಾತನೂರು ಗ್ರಾಮ, ಹುಣಸೇಮಾರನಹಳ್ಳಿ ಗ್ರಾಮ ಪಂಚಾಯತ್, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ದೆಹಲಿ ಪಬ್ಲಿಕ್ ಸ್ಕೂಲ್ ಕ್ರಾಸ್‌ನಿಂದ ಬಾಗಲೂರು ಗ್ರಾಮದವರೆಗೆ ಬಾಗಲೂರು ರಸ್ತೆಯ ವಿಸ್ತರಣೆ,	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ ಸಂಖ್ಯೆ: 2265 1060.94 ಚ.ಮೀ.	**ಪೂರ್ವ:** ರಸ್ತೆ; **ಪಶ್ಚಿಮ:** ರಸ್ತೆ; **ಉತ್ತರ:** ರಸ್ತೆ; **ದಕ್ಷಿಣ:** ಗ್ರಾಮಠಾಣದ ಉಳಿಕೆ ಭಾಗ;	ಶ್ರೀಮತಿ ಜಯಮ್ಮ ಕೋಂ ಎಸ್.ಸಿ. ಚಂದ್ರಶೇಖರ್, ಸಾತನೂರು ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.

ಸಹಿ/– **ಆಯುಕ್ತರು,** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಬಿಆರ್‌ಟಿಗೆ ಒತ್ತುವರಿ ಸಂಕಟ

ಬಿಆರ್‌ಟಿಯ ಹಿತಕರ ವಾತಾವರಣ	540 ಚದರ ಕಿ.ಮೀ ಬಿಆರ್‌ಟಿ	ಉಷ್ಣಾಂಶ	ಮಳೆ	
		9°-16° ಕನಿಷ್ಠ 20°-38° ಗರಿಷ್ಠ	600 ಮಿ.ಮೀ ಬೆಟ್ಟದ ಬುಡದಲ್ಲಿ	3000 ಮಿ.ಮೀ ಬೆಟ್ಟದ ಮೇಲೆ

ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಆರ್‌ಟಿ ಅರಣ್ಯದಲ್ಲಿ ಈಚೆಗೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು

ಒಂದನೇ ಪುಟದಿಂದ..

ಈ ಕಾರಣದಿಂದ ಸರ್ವೆ ನಂಬರ್ 1, 2 ಹಾಗೂ 3ರಲ್ಲಿರುವ ಜಮೀನಿನ ಜಂಟಿ ಸರ್ವೆ 2021ರ ಅಕ್ಟೋಬರ್ 1ರಂದು ಹಾಗೂ ಸರ್ವೆ ನಂಬರ್ 4ರಲ್ಲಿರುವ ಭೂಮಿಯ ಸರ್ವೆ ಇದೇ ವರ್ಷದ 6 ತಿಂಗಳ ಹಿಂದೆ ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ನಡೆದಿದೆ.

ಯಾರ ಮೇಲೆ ಏನು ಆರೋಪ: ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಗೊಳಪಡುವ ಸರ್ವೆ ನಂಬರ್ 3ರಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮ 1 ಎಕರೆ 28 ಗುಂಟೆ, ಸರ್ವೆ ನಂಬರ್ 3ರಲ್ಲಿ ಸುತ್ತೂರು ಮಠ 16 ಗುಂಟೆ, ಸರ್ವೆ ನಂಬರ್ 3ರಲ್ಲಿ ಬೆಂಗಳೂರಿನ ಉದ್ಯಮಿ ವೆಂಕಟ ಸತ್ಯಸುಬ್ರಹ್ಮಣ್ಯ ಗುಪ್ತ ಹಾಗೂ ಶ್ಯಾಮ್ 3 ಎಕರೆ 28 ಗುಂಟೆ, ಸರವೆ ನಂಬರ್ 3ರಲ್ಲಿ ನೀಲಗಿರಿ ಆದಿವಾಸಿ ವೆಲ್‌ಫೆರ್ ಅಸೋಸಿಯೇಷನ್‌ನ ಡಿ.ವಿ.ಆರ್ಮ್‌ಸ್ಟ್ರಾಂಗ್ 2.4 ಎಕರೆ, ಸರ್ವೆ ನಂಬರ್ 3ರಲ್ಲಿ ಆರ್.ವಿಜಯಲಕ್ಷ್ಮಿ 3 ಎಕರೆ 8 ಗುಂಟೆ, ಸರ್ವೆ ನಂಬರ್ 2ರಲ್ಲಿ ತುಳಸಮ್ಮ ಎಂಬುವರು 2 ಎಕರೆ 24 ಗುಂಟೆ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಆರೋಪಗಳು ಕೇಳಿಬಂದಿದೆ. ತುಳಸಮ್ಮ 2 ಗುಂಟೆ ಜಾಗವನ್ನು ಅರಣ್ಯ ಇಲಾಖೆಗೆ ಮರಳಿಸಿದ್ದಾರೆ ಎನ್ನುತ್ತಾರೆ ಅಧಿಕಾರಿಗಳು.

ನ್ಯಾಯಾಲಯದ ಮೊರೆ

ಒತ್ತುವರಿ ಕಾರ್ಯಾಚರಣೆ ಚುರುಕು ಪಡೆಯುತ್ತಿದ್ದಂತೆ ಆರ್.ವಿಜಯಲಕ್ಷ್ಮಿ ಹಾಗೂ ಉದ್ಯಮಿ ವೆಂಕಟಸತ್ಯ ಸುಬ್ರಹ್ಮಣ್ಯ ಗುಪ್ತ ಹೈಕೋರ್ಟ್ ಮೊರೆ ಹೋಗಿದ್ದು ಎರಡೂ ಪ್ರಕರಣಗಳಿಗೆ ತಡೆಯಾಜ್ಞೆ ನೀಡಲಾಗಿದೆ. ಆಶ್ರಮ ಹಾಗೂ ಮಠದ ಪ್ರತಿನಿಧಿಗಳು ಅರಣ್ಯ ಇಲಾಖೆಯ ನೋಟಿಸ್ ಪ್ರಶ್ನಿಸಿದ್ದು, ಸರ್ವೆ ನಂಬರ್ 2 ಹಾಗೂ 3ರಲ್ಲಿ ಭೂಮಿ ಹೊಂದಿಲ್ಲ. ಬದಲಾಗಿ ಸರ್ವೆ ನಂಬರ್ 4ರಲ್ಲಿ ಕಾನೂನುಬದ್ಧ ಹಾಗೂ ಮಾಲೀಕತ್ವ ಸಾಬೀತುಪಡಿಸುವ ದಾಖಲೆಗಳು ಇವೆ ಎಂದು ಉತ್ತರ ನೀಡಿವೆ. ಎರಡು ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡಲಾಗಿದ್ದು ಉಳಿದ ನಾಲ್ಕು ಪ್ರಕರಣಗಳಲ್ಲಿ ಕಾರ್ಯಾಚರಣೆ ಮುಂದುವರಿದಿದೆ.

ಮಹಾರಾಜರಿಂದಲೇ ಮೀಸಲು ಅರಣ್ಯ ಘೋಷಣೆ: ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶವನ್ನು ಮೈಸೂರು ಮಹಾರಾಜರು ಅರಣ್ಯ ಕಾಯ್ದೆ 1900ರ ಅನ್ವಯ ಮೀಸಲು ಅರಣ್ಯ ಎಂದು ಘೋಷಿಸಿದರು. ಬಿಆರ್‌ಟಿ ಅರಣ್ಯದ ಸರ್ವೆ ನಂಬರ್ 1ರಲ್ಲಿ 5 ಎಕರೆ 20 ಗುಂಟೆಯಲ್ಲಿ ಜಾಗಿರ್‌ದಾರ್ ಬಂಗ್ಲೆ ಇದ್ದು, ಸರ್ವೆ ನಂಬರ್ 2ರಲ್ಲಿ 21 ಎಕರೆ 36 ಗುಂಟೆ, ಸರ್ವೆ ನಂಬರ್ 3ರಲ್ಲಿ 13 ಎಕರೆ 10 ಗುಂಟೆ ಹಾಗೂ ಸರ್ವೆ ನಂಬರ್ 4ರಲ್ಲಿ 22,606 ಎಕರೆ ಇದ್ದು ಎಲ್ಲವನ್ನೂ ಮೀಸಲು ಅರಣ್ಯ ವ್ಯಾಪ್ತಿಗೊಳಪಡಿಸಲಾಗಿತ್ತು.

1942ರಲ್ಲಿ ದೇವಸ್ಥಾನದ ಉದ್ದೇಶಗಳಿಗೆ ಬಳಕೆ ಮಾಡಲು 130 ಎಕರೆ ಭೂಮಿಯನ್ನು ಮೀಸಲು ಅರಣ್ಯ ವ್ಯಾಪ್ತಿಯಿಂದ ಕೈಬಿಡಲಾಯಿತು. ಬಳಿಕ, 1962ರಲ್ಲಿ 565 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಗೊಳಿಸಿ ಬುಡಕಟ್ಟು ಸಮುದಾಯಗಳ ಜೀವನೋಪಾಯಕ್ಕಾಗಿ ಇನಾಂ, ದರ್ಖಾಸ್ತು, ಅರಣ್ಯ ಹಕ್ಕು ಕಾಯ್ದೆಗಳಡಿ ಸ್ಥಳೀಯ ಬುಡಕಟ್ಟು ಜನರಿಗೆ ಹಂಚಿಕೆ ಮಾಡಲಾಗಿದೆ.

ಆದರೆ, ಕಂದಾಯ ಇಲಾಖೆಗೆ ಅರಣ್ಯಭೂಮಿ ಹಸ್ತಾಂತರವಾಗಿ 6 ದಶಕಗಳು ಕಳೆದರೂ ಜಮೀನಿನ ಹದ್ದುಬಸ್ತು ಗುರುತಿಸಿ ಪೋಡು ಮಾಡಿಲ್ಲ. ಪರಿಣಾಮ ನೆಲದ ಮೂಲನಿವಾಸಿಗಳಾದ ಆದಿವಾಸಿಗಳು ಸಾಲ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯವನ್ನು 'ಬಂಡವಾಳ' ಮಾಡಿಕೊಂಡಿರುವ ಪ್ರಭಾವಿಗಳು ಸರ್ವೆ ನಂಬರ್ 4ರಲ್ಲಿ ಹಂಚಿಕೆಯಾಗಿರುವ ಭೂಮಿಗಳಲ್ಲಿ ನಿಯಮ ಮೀರಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಭೂಪರಿವರ್ತನೆ ಆಗದೆ ರೆಸಾರ್ಟ್, ಹೋಂಸ್ಟೇ, ವಾಸದ ಮನೆ, ತೋಟದ ಮನೆಗಳು ಇಲ್ಲಿ ನಿರ್ಮಾಣವಾಗಿದೆ. ಈ ವಾಣಿಜ್ಯ ಚಟುವಟಿಕೆಗಳಿಂದಲೇ ಹುಲಿಗಳ ಆವಾಸಸ್ಥಾನ ಕ್ಷೀಣಿಸುತ್ತಿದೆ ಎಂದು ದೂರುತ್ತಾರೆ ಪರಿಸರವಾದಿಗಳು.

ಕುಸಿಯುತ್ತಿದೆ ಹುಲಿಗಳ ಸಂಖ್ಯೆ

ಹುಲಿಗಳ ಆವಾಸ ಅತಿಕ್ರಮಣ, ಅಕ್ರಮ ರೆಸಾರ್ಟ್ ಹೋಂಸ್ಟೇಗಳ ನಿರ್ಮಾಣ, ಹೆಚ್ಚಿದ ಮಾನವ ಪ್ರಾಣಿ ಸಂಘರ್ಷದ ಪರಿಣಾಮ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವರ್ಷದಿಂದ ವರ್ಷಕ್ಕೆ ಹುಲಿಗಳ ಸಂಖ್ಯೆ ಕುಸಿಯುತ್ತಿದ್ದು, ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಹುಲಿ ಗಣತಿಯ ವರದಿಯು ಆತಂಕ ಹುಟ್ಟಿಸುವಂತಿದೆ. ಎನ್‌ಟಿಸಿಎ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ಬಿಆರ್‌ಟಿಯಲ್ಲಿ 2014ರ ಹುಲಿಗಣತಿಯಲ್ಲಿ 52 ಹುಲಿಗಳು ಪತ್ತೆಯಾಗಿದ್ದವು, 2022ರ ಹುಲಿ ಗಣತಿಯ ಸಂದರ್ಭ 37 ಹುಲಿಗಳು ಮಾತ್ರ ಪತ್ತೆಯಾಗಿವೆ. ಕಳೆದ 11 ವರ್ಷಗಳಲ್ಲಿ 15 ಹುಲಿಗಳು ಕಡಿಮೆಯಾಗಿವೆ.



(ಮೂಲ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ)

135 ಎಕರೆ ಅಕ್ರಮ ಹಂಚಿಕೆ

ಸರ್ವೆ ನಂಬರ್ 4ರಲ್ಲಿ ಅರಣ್ಯ ಇಲಾಖೆ ಹಸ್ತಾಂತರ ಮಾಡಿದ್ದು 565 ಎಕರೆ. ಆದರೆ, ಕಂದಾಯ ಇಲಾಖೆ ಹಂಚಿಕೆ ಮಾಡಿರುವುದು ಬರೋಬ್ಬರಿ 700 ಎಕರೆಗೂ ಹೆಚ್ಚು ಭೂಮಿ. 140 ಎಕರೆಗೂ ಹೆಚ್ಚು ಭೂಮಿಯನ್ನು ಅಕ್ರಮವಾಗಿ ಯಾರಿಗೆ ಹಂಚಿಕೆ ಮಾಡಲಾಗಿದೆ ಎಂಬುದು ಕಂದಾಯ ಹಾಗೂ ಅರಣ್ಯ ಇಲಾಖೆ 6 ತಿಂಗಳ ಹಿಂದೆ ನಡೆಸಿರುವ ಜಂಟಿ ಸರ್ವೆಯಿಂದ ಪತ್ತೆಯಾಗಿದೆ ಎಂದು ತಿಳಿದುಬಂದಿದೆ. ಈ ವರದಿಯ ಕಡತವು ಜಿಲ್ಲಾಧಿಕಾರಿ ಕಚೇರಿಯಲ್ಲಿದ್ದು, ಜಿಲ್ಲಾಡಳಿತ ಜಂಟಿ ಸರ್ವೆಯ ವರದಿಯನ್ನು ಅಂಗೀಕರಿಸಿದರೆ ಒತ್ತುವರಿದಾರರಿಗೆ ಸಂಕಷ್ಟ ಎದುರಾಗಲಿದೆ. ಆದರೆ ವರದಿ ಅಂಗೀಕಾರ ಮಾಡದಂತೆ ರಾಜಕೀಯ ಮುಖಂಡರ ಹಾಗೂ ಪ್ರಭಾವಿಗಳ ಒತ್ತಡವಿದೆ. ಹೀಗಾಗಿಯೇ ಕಡತ ದೂಳು ಹಿಡಿಯುತ್ತಿದೆ ಎನ್ನುವ ಆಪಾದನೆ ಸಾರ್ವಜನಿಕ ವಲಯದಲ್ಲಿದೆ.

'1962ರಲ್ಲಿ ಅರಣ್ಯ ಇಲಾಖೆ ನೀಡಿದ ಭೂಮಿಯ ಜೊತೆ ಹೆಚ್ಚುವರಿಯಾಗಿ 135 ಎಕರೆ ಭೂಮಿಯನ್ನು ಫಲಾನುಭವಿಗಳಿಗೆ ನೀಡಿ ಎಡವಟ್ಟು ಮಾಡಿರುವ ಕಂದಾಯ ಇಲಾಖೆಯು, ಕಂದಾಯ ಇಲಾಖೆಯ ಮೂಲಕವೇ ಭೂಮಿ ಪಡೆದ ಫಲಾನುಭವಿಗಳ ಜೊತೆ ಚೆಲ್ಲಾಟವಾಡುತ್ತಿದೆ. ಅರಣ್ಯ ಒತ್ತುವರಿಯಾಗಿದ್ದರೆ ಭೂಮಿಯನ್ನು ವಶಪಡಿಸಿಕೊಳ್ಳಲಿ. ಆದರೆ ಕಂದಾಯ ಇಲಾಖೆ ಮಾಡಿದ ತಪ್ಪಿಗೆ ಯಾರು ಹೊಣೆಯಾಗುತ್ತಾರೆ' ಎಂದು ಪ್ರಶ್ನಿಸುತ್ತಾರೆ ಸ್ಥಳೀಯ ಮುಖಂಡರಾದ ಪರಿಸರಪರ ಹೋರಾಟಗಾರ ಜಿ.ಮಲ್ಲೇಶಪ್ಪ.

ನೋಟಿಸ್ ನೀಡದ ಆರೋಪ: ಜಂಟಿ ಸರ್ವೆಗೂ ಮುನ್ನ ಸಂಬಂಧಪಟ್ಟ ಭೂಮಾಲೀಕರಿಗೆ ನೋಟಿಸ್ ನೀಡಬೇಕು, ಸರ್ವೆ ಸಮಯದಲ್ಲಿ ಹಾಜರಿರಲು ಅವಕಾಶ ಕಲ್ಪಿಸಬೇಕು ಎಂಬ ನಿಯಮಗಳಿವೆ. ಆದರೆ ಬಹುತೇಕರಿಗೆ ಜಂಟಿ ಸರ್ವೆ ನಡೆದಿರುವುದೇ ತಿಳಿದಿಲ್ಲ. ನೋಟಿಸ್ ನೀಡದೆ ಅರಣ್ಯ ಮತ್ತು ಕಂದಾಯ ಅಧಿಕಾರಿಗಳು ಸರ್ವೆ ಮುಗಿಸಿಕೊಂಡು ಹೋಗಿದ್ದಾರೆ ಎಂಬ ದೂರುಗಳು ಕೇಳಿಬಂದಿವೆ. ಸರ್ವೆಗೂ ಮುನ್ನ ತಮಗೆ ನೋಟಿಸ್ ನೀಡಿಲ್ಲ ಎಂದು ಸುತ್ತೂರು ಮಠದವರು ಸಹ ಪ್ರತಿಕ್ರಿಯಿಸಿದ್ದಾರೆ.

ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶವು ಪೂರ್ವ ಹಾಗೂ ಪಶ್ಚಿಮ ಘಟ್ಟ ಸೇರುವ ಸ್ಥಳದಲ್ಲಿದೆ. ತಮಿಳುನಾಡಿನ ಸತ್ಯಮಂಗಲ, ನೆರೆಯ ಮಲೆ ಮಹದೇಶ್ವರ ವನ್ಯಧಾಮದೊಂದಿಗೆ ಬೆಸೆದುಕೊಂಡಿದ್ದು ಹುಲಿಗಳ ಪ್ರಮುಖ ಆವಾಸಸ್ಥಾನವಾಗಿ ಗುರುತಿಸಿಕೊಂಡಿದೆ. ದುರದೃಷ್ಟವಶಾತ್ ಅರಣ್ಯ ಒತ್ತುವರಿಯಿಂದ ಹುಲಿಗಳ ಆವಾಸಸ್ಥಾನವನ್ನೇ ಬಲವಂತವಾಗಿ ಕಸಿದುಕೊಳ್ಳಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಹುಲಿಗಳ ಸಂಖ್ಯೆ ಕ್ಷೀಣಿಸುತ್ತಾ ಬಂದಿದ್ದು ಮುಂದೊಂದು ದಿನ ವ್ಯಾಘ್ರಗಳ ಸಂತತಿಯೇ ನಾಶವಾಗುವ ಆತಂಕ ಎದುರಾಗಲಿದೆ.

'ಬಿಆರ್‌ಟಿಯ ಸರ್ವೆ ನಂಬರ್ 4ರಲ್ಲಿರುವ ಅತಿ ಹೆಚ್ಚು ಅರಣ್ಯ ಭೂಮಿ ಒತ್ತುವರಿಯಾಗಿರುವ ದೂರುಗಳಿವೆ. ಉದ್ಯಮಿಗಳು, ರಾಜಕಾರಣಿಗಳು, ಧನಿಕರು ರೆಸಾರ್ಟ್, ಹೋಂಸ್ಟೇ, ವಸತಿಗೃಹಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದ ಹುಲಿಗಳ ಸಹಿತ ಇತರೆ ಪ್ರಾಣಿಗಳ ಆವಾಸಕ್ಕೆ ಧಕ್ಕೆಯಾಗುತ್ತಿದೆ. ಅನಧಿಕೃತ ವಾಣಿಜ್ಯ ಚಟುವಟಿಕೆ ನಿಲ್ಲಿಸುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣ ಪ್ರಾಧಿಕಾರ ಆದೇಶ ನೀಡಿ ಎರಡು ವರ್ಷವೇ ಕಳೆದರೂ ಜಿಲ್ಲಾಡಳಿತ ಕ್ರಮ ತೆಗೆದುಕೊಂಡಿಲ್ಲ' ಎನ್ನುತ್ತಾರೆ ಸಾಮಾಜಿಕ ಹೋರಾಟಗಾರರಾದ ಗಿರಿಧರ ಕುಲಕರ್ಣಿ.

ಆದಿವಾಸಿಗಳಿಗೆ ತೊಂದರೆ ಇಲ್ಲ

'ಅರಣ್ಯದೊಳಗೆ ವಾಣಿಜ್ಯ ಚಟುವಟಿಕೆಗಳಿಗೆ ಕಡಿವಾಣ ಹಾಕುವ ನೆಪದಲ್ಲಿ ತಲೆಮಾರುಗಳಿಂದಲೂ ಅರಣ್ಯದೊಳಗೆ ನೆಲೆಸಿರುವ ಆದಿವಾಸಿಗಳನ್ನು ಒಕ್ಕಲೆಬ್ಬಿಸಲಾಗುತ್ತದೆ' ಎಂಬ ವದಂತಿ ಸೃಷ್ಟಿಸಲಾಗುತ್ತಿದೆ. ಆದಿವಾಸಿಗಳು ಅರಣ್ಯಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ಭೂಮಿಯ ಮಾಲೀಕತ್ವದ ಹಕ್ಕುಪತ್ರಗಳನ್ನು ಪಡೆಯಬಹುದು. ಜಂಟಿ ಸರ್ವೆಯ ವರದಿ ಅನುಷ್ಠಾನದ ಬಳಿಕ ಹಿಂದೆ ಕಂದಾಯ ಇಲಾಖೆಯಿಂದ ಮಂಜೂರಾದ ಭೂಮಿಗೆ ದಾಖಲಾತಿಗಳನ್ನು ಪಡೆಯಬಹುದು ಎನ್ನುತ್ತಾರೆ ಯಳಂದೂರು ವನ್ಯಜೀವಿ ವಲಯದ ಎಸಿಎಫ್ ಅಕ್ಷಯ್ ಪ್ರಕಾಶ್‌ಕರ್.

ಜಿಲ್ಲಾಡಳಿತದ ನಿರ್ಲಕ್ಷ್ಯ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಿಯಮ ಬಾಹಿರವಾಗಿ ರೆಸಾರ್ಟ್, ಹೋಂಸ್ಟೇ, ಹೋಟೆಲ್‌ಗಳು ತಲೆಎತ್ತಿರುವ, ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ತನಿಖೆ ನಡೆಸುವಂತೆ ಕೋರಿ ಪರಿಸರವಾದಿ ಗಿರಿಧರ ಕುಲಕರ್ಣಿ ಸಲ್ಲಿಸಿದ ದೂರಿನನ್ವಯ 2022ರ ನ.28ರಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಸಹಾಯಕ ಇನ್‌ಸ್ಪೆಕ್ಟರ್ ಜನರಲ್ ಹರಿಣಿ ವೇಣುಗೋಪಾಲ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಒತ್ತುವರಿ ಪತ್ತೆ ಹಚ್ಚಿ ಸಮಗ್ರ ವರದಿ ಸಲ್ಲಿಸಿದ್ದರು.

'ಸಂರಕ್ಷಿತ ಅರಣ್ಯದೊಳಗಿರುವ ಹೋಂಸ್ಟೇ ಹಾಗೂ ರೆಸಾರ್ಟ್‌ಗಳು ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆ ವಾಣಿಜ್ಯ ಉದ್ದೇಶಗಳಿಗೆ ಭೂಮಿ ಪರಿವರ್ತನೆ ಮಾಡಿಕೊಳ್ಳದಿರುವುದು 1986ರ ಪರಿಸರ ಸಂರಕ್ಷಣಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ಸಂರಕ್ಷಿತ ಅರಣ್ಯ ಭೂಮಿಯ ಮಾದರಿಯನ್ನು ಮುಂದಿನ 50 ವರ್ಷಗಳ ಕಾಲ ಬದಲಾಯಿಸುವಂತಿಲ್ಲ ಎಂಬ 2002ರ ಸುಪ್ರೀಂಕೋರ್ಟ್ ತೀರ್ಪಿನ ಉಲ್ಲಂಘನೆಯೂ ಆಗಲಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿಯ ಆದೇಶವನ್ನು ಅರಣ್ಯ ಇಲಾಖೆಯ ವಿಚಕ್ಷಣಾ ದಳದ ಮುಖ್ಯಸ್ಥರು ಸಹ 2023ರಲ್ಲಿ ನೀಡಿ ಅಕ್ರಮ ಚಟುವಟಿಕೆ ನಿಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಸಂಚಾರ

ಜಿಲ್ಲಾಡಳಿತಕ್ಕೆ ಸಲ್ಲಿಕೆ

ಸರ್ವೆ ನಂಬರ್ 4ರಲ್ಲಿ ಜಂಟಿ ಸರ್ವೆ ನಡೆಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗಿದೆ. 1962ರಲ್ಲಿ ಅರಣ್ಯ ಇಲಾಖೆಯಿಂದ ಬಿಡುಗಡೆಗೊಳಿಸಲಾಗಿದ್ದ 565 ಎಕರೆಗಿಂತಲೂ ಹೆಚ್ಚಿನ ಭೂಮಿ ಒತ್ತುವರಿಯಾಗಿರುವುದು ಕಂಡುಬಂದಿದೆ. ಕಂದಾಯ ಇಲಾಖೆಯ ಹಂತದಲ್ಲಿ ಸಮಸ್ಯೆ ಬಗೆಹರಿಯಬೇಕಿದೆ. ಒತ್ತುವರಿ ಭೂಮಿ ಗುರುತಿಸಿಕೊಟ್ಟರೆ ತೆರವುಗೊಳಿಸಲಾಗುವುದು. ಅರಣ್ಯವಾಸಿಗಳಿಗೆ ಅರಣ್ಯ ಹಕ್ಕುಕಾಯ್ದೆಯಡಿ (ಎಫ್‌ಆರ್‌ಎ) ಭೂಮಿ ಹಂಚಿಕೆ ಮಾಡಲಾಗುವುದು, ಅರಣ್ಯವಾಸಿಗಳಲ್ಲದವರು ಭೂಮಿ ಒತ್ತುವರಿ ಮಾಡಿಕೊಂಡಿದ್ದರೆ ತೆರವುಗೊಳಿಸಲಾಗುವುದು.

ಶ್ರೀಪತಿ, ಡಿಸಿಎಫ್, ಬಿಆರ್‌ಟಿ

ಆದಿವಾಸಿಗಳ ಭೂಮಿ ಕಿತ್ತುಕೊಂಡರೆ ಹೋರಾಟ

1962–63ರಲ್ಲಿ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪ ಸರ್ಕಾರದಲ್ಲಿ ಆದಿವಾಸಿಗಳಿಗೆ ಯರಕನಗದ್ದೆ ಕಾಲೋನಿ ಹಾಗೂ ಸೀಗೆಬೆಟ್ಟ ಪೋಡಿನಲ್ಲಿ ಭೂಮಿ ಹಂಚಿಕೆ ಮಾಡಿದ್ದು ಭೂ ಮಂಜೂರಾತಿ ಪತ್ರ ವಿತರಿಸಿಲ್ಲ. 6 ದಶಕಗಳಿಂದ ಅನುಭೋಗದಲ್ಲಿರುವ ಜಾಗಕ್ಕೆ ಆರ್‌ಟಿಸಿ ಹಾಗೂ ಹಕ್ಕುಪತ್ರಗಳಿದ್ದು ಲಭ್ಯ ದಾಖಲಾತಿಗಳ ಆಧಾರದ ಮೇಲೆ ಆದಿವಾಸಿಗಳಿಗೆ ಕಂದಾಯ ಭೂಮಿಯನ್ನೇ ಹಂಚಿಕೆ ಮಾಡಬೇಕು. ಭೂಮಂಜೂರಾತಿ ಪತ್ರ ಇಲ್ಲ ಎಂಬ ಕಾರಣಕ್ಕೆ ನಿರಾಕರಿಸಿದರೆ ಪ್ರತಿಭಟನೆ ಅನಿವಾರ್ಯವಾಗಲಿದೆ ಎನ್ನುತ್ತಾರೆ ಆದಿವಾಸಿ ಸಮುದಾಯಗಳ ಮುಖಂಡ ಸಿ.ಮಾದೇಗೌಡ.

'8 ಮಂದಿಗೆ ನೋಟಿಸ್'

ಸರ್ವೆ ನಂ 2 ಹಾಗೂ 3ರಲ್ಲಿರುವ ಅರಣ್ಯ ಭೂಮಿ ಒತ್ತುವರಿ ಸಂಬಂಧ 8 ಮಂದಿಗೆ ನೋಟಿಸ್ ನೀಡಲಾಗಿದ್ದು ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ. ಖಾಸಗಿ ಸಂಸ್ಥೆ ಹಾಗೂ ಉದ್ಯಮಿಯೊಬ್ಬರ ಒತ್ತುವರಿ ತೆರವುಗೊಳಿಸಲಾಗಿದೆ. ಇಬ್ಬರು ಒತ್ತುವರಿದಾರರು ನ್ಯಾಯಾಲಯದ ಮೊರೆ ಹೋಗಿದ್ದು ತಡೆಯಾಜ್ಞೆ ತೆರವಾದ ಕೂಡಲೇ ಕಾರ್ಯಾಚರಣೆ ಆರಂಭಿಸಲಾಗುವುದು. ಸರ್ವೆ ನಂಬರ್ 4ರಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿ 6 ತಿಂಗಳಾಗಿದ್ದು ಅಂತಿಮ ತೀರ್ಮಾನವಾಗಿಲ್ಲ.

ಅಕ್ಷಯ್ ಪ್ರಕಾಶ್‌ಕರ್, ಎಸಿಎಫ್ ಯಳಂದೂರು ವಲಯ

ನ್ಯಾಯಾಲಯ ನಿರ್ಧರಿಸಲಿದೆ: ರಾಮಕೃಷ್ಣ ಮಠ

'ನಮಗೆ ಅರಣ್ಯ ಇಲಾಖೆಯ ಭೂಮಿಯೇನೂ ಬೇಕಿಲ್ಲ. ಇಲಾಖೆಯವರು 35 ವರ್ಷದ ಹಿಂದೆ ಮಠಕ್ಕೆ ನೀಡಿದ ಕಂದಾಯ ಭೂಮಿಯದು. ಒತ್ತುವರಿಯೆಂದು ಈಗ ಹಠಾತ್ ನೋಟಿಸ್ ಕಳುಹಿಸಿದ್ದಾರೆ. ಸತ್ಯಾಸತ್ಯತೆಯನ್ನು ನ್ಯಾಯಾಲಯವೇ ನಿರ್ಧರಿಸಲಿದೆ' ಎಂದು ರಾಮಕೃಷ್ಣ ಆಶ್ರಮದ ಸ್ವಾಮೀಜಿಯೊಬ್ಬರು ಪ್ರತಿಕ್ರಿಯಿಸಿದರು.

ಮತ್ತೊಮ್ಮೆ ಜಂಟಿ ಸರ್ವೆ ನಡೆಯಲಿ: ಸುತ್ತೂರು ಮಠ

'1995ರಿಂದಲೂ ಜಮೀನು ಮಠದ ಹೆಸರಿನಲ್ಲಿದೆ. 2007ರಲ್ಲಿ ಅಂದಿನ ಜಿಲ್ಲಾಧಿಕಾರಿಯು ಭೂಪರಿವರ್ತನೆ ಆದೇಶ ಮಾಡಿದ್ದಾರೆ. ಅದರಲ್ಲಿ ಎಲ್ಲಿಯೂ ಅರಣ್ಯ ಭೂಮಿಯ ಉಲ್ಲೇಖವಿಲ್ಲ. ಈಗ ನಡೆದ ಜಂಟಿ ಸರ್ವೆಯಲ್ಲಿ ನಾವು ಪಾಲ್ಗೊಂಡಿರಲಿಲ್ಲ. ಅದರ ಆದೇಶವನ್ನೂ ನಮಗೆ ನೀಡಿಲ್ಲ. ಆದರೆ ಇನ್ನೊಮ್ಮೆ ಸರ್ವೆ ಮಾಡುವಂತೆ ಮನವಿ ಸಲ್ಲಿಸಿದ್ದೇವೆ' ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಹಾಯಕ ನಿರ್ದೇಶಕ ಶಿವಕುಮಾರ್ ಪ್ರತಿಕ್ರಿಯಿಸಿದರು.

ಕಾಫಿ ತೋಟದಿಂದ ಜಲಮೂಲಗಳಿಗೆ ವಿಷ

ಚಾಮರಾಜನಗರ ತಾಲ್ಲೂಕಿನ ಹೊಂಡರಬಾಳುವಿನಲ್ಲಿರುವ ಬಿಆರ್‌ಟಿ ಚೆಕ್‌ಪೋಸ್ಟ್

ಬಿಆರ್‌ಟಿ ವ್ಯಾಪ್ತಿಯಲ್ಲಿ ಬಿರ್ಲಾ, ಟಿವಿಎಸ್, ಅತ್ತೀಕಾನ್ ಕಂಪೆನಿಗಳು 1,600 ಎಕರೆ ಕಾಫಿ ಎಸ್ಟೇಟ್ ಹೊಂದಿವೆ. ಈ ತೋಟಗಳು ಅರಣ್ಯ ಇಲಾಖೆಯ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಪಡೆದಿವೆ. ಈ ಭಾಗದಲ್ಲಿ ಕಾಫಿ ಬೆಳೆಗೆ ಕಾಣಿಸಿಕೊಳ್ಳುವ ರೋಗ ಹತೋಟಿಗೆ ಯಥೇಚ್ಛವಾಗಿ ರಾಂಟಾಕ್ ಕ್ರಿಮಿನಾಶಕ ಸಿಂಪರಿಸಲಾಗುತ್ತಿದೆ. ಗಾಳಿ ಹಾಗೂ ನೀರಿನೊಂದಿಗೆ ಬೆರೆಯುವ ಕ್ರಿಮಿನಾಶಕ ಅರಣ್ಯದೊಳಗಿರುವ ಕೆರೆ, ಕಟ್ಟೆ, ನದಿ ಹಾಗೂ ಜಲಾಶಯಗಳನ್ನು ಸೇರುತ್ತಿದ್ದು ಪ್ರಾಣಿಗಳ ಜೀವಕ್ಕೆ ಕಂಟಕ ಎದುರಾಗಿದೆ. ಬ್ರಿಟಿಷ್ ಆಡಳಿತದಲ್ಲಿ ಪಡೆದ ದೀರ್ಘಾವಧಿ ಗುತ್ತಿಗೆ ಅವಧಿಯನ್ನು ಕರ್ನಾಟಕ ಸರ್ಕಾರ ಕಡಿಮೆ ಮಾಡಿದೆ. ಇದನ್ನು ಪ್ರಶ್ನಿಸಿ ಕಾಫಿ ತೋಟದ ಮಾಲೀಕರು ನ್ಯಾಯಾಲಯದ ಮೊರೆ ಹೊಕ್ಕಿದ್ದಾರೆ. ದಶಕಗಳಿಂದಲೂ ಈ ವ್ಯಾಜ್ಯ ನಡೆಯುತ್ತಿದೆ.

ಈ ದೂರಿನ ಸಂಬಂಧ ಪ್ರತಿಕ್ರಿಯಿಸಿ ಬಿಆರ್‌ಟಿ ಡಿಸಿಎಫ್ ಶ್ರೀಪತಿ, 'ಕಾಫಿ ಎಸ್ಟೇಟ್‌ಗಳಲ್ಲಿ ಸಿಂಪಡಿಸುವ ಕ್ರಿಮಿನಾಶಕ ಅರಣ್ಯದೊಳಗಿರುವ ಜಲಮೂಲಗಳಿಗೆ ಸೇರುತ್ತಿರುವ ವಿಚಾರ ಗಮನಕ್ಕೆ ಬಂದಿದ್ದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಜೊತೆಗೆ, ಮೀಸಲು ಅರಣ್ಯದೊಳಗಿರುವ ಖಾಸಗಿ ಎಸ್ಟೇಟ್‌ಗಳ ಜಾಗವನ್ನು ಮತ್ತೆ ಅರಣ್ಯ ಇಲಾಖೆಯ ವಶಕ್ಕೆ ಪಡೆಯಬೇಕಾಗಿದೆ. ಈ ವಿಚಾರ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನಲ್ಲಿದ್ದು ಇತ್ಯರ್ಥವಾಗಬೇಕಿದೆ ಎಂದು ತಿಳಿಸಿದರು.

'ಪರಿಸರ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆ ಬಿಆರ್‌ಟಿಯ ಪರಿಸರ ಸೂಕ್ಷ್ಮ ವಲಯದಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯ ಗಿರಿದರ್ಶಿನಿ ರೆಸಿಡೆನ್ಸಿ, ಡಾ.ಸುದರ್ಶನ್ ಒಡೆತನದ ಗೋರುಕನ ರೆಸಾರ್ಟ್, ಚಂಪಕಾರಣ್ಯ ಹೋಂಸ್ಟೇ, ಆಕಾಶ್ ಲಾಡ್ಜ್, ರಜತಾದ್ರಿ ಹಿಲ್ ವಿಲಾ, ಶ್ವೇತಾದ್ರಿ ಹೋಂಸ್ಟೇ, ರಾಜಕುಮಾರ್ ಲಾಡ್ಜ್, ಸೋಮಣ್ಣ ರೂಮ್ಸ್ ಅಂಡ್ ಲಾಡ್ಜಸ್ ಕಾರ್ಯ ನಿರ್ವಹಿಸುತ್ತಿರುವುದನ್ನು ದಾಖಲೆಗಳ ಸಮೇತ ಪತ್ತೆಹಚ್ಚಿ ಕ್ರಮಕ್ಕೆ ಸೂಚಿಸಲಾಗಿದ್ದರೂ ಪ್ರಭಾವಿಗಳ ಒತ್ತಡಕ್ಕೆ ಮಣಿದು ಸರ್ಕಾರ ತೆರವುಗೊಳಿಸಲು ಮುಂದಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ ಪರಿಸರವಾದಿಗಳು.

ಹೋಟೆಲ್, ರೆಸಾರ್ಟ್, ಹೋಂಸ್ಟೇಗಳಿಂದ ಬಿಡುಗಡೆಯಾಗುವ ತ್ಯಾಜ್ಯ ಅರಣ್ಯದ ಒಡಲು ಸೇರುತ್ತಿದ್ದು ನೀರಿನ ಮೂಲಗಳು ಕಲುಷಿತಗೊಳ್ಳುತ್ತಿದ್ದು ವನ್ಯಜೀವಿಗಳಿಗೂ ಕಂಟಕ ಎದುರಾಗಿದೆ. ಪೂರ್ವ ಮತ್ತು ಪಶ್ಚಿಮ ಘಟ್ಟ ಸೇರುವ ಪ್ರದೇಶವು ಕರ್ನಾಟಕದ ಊಟಿ ಎಂದೇ ಹೆಸರುವಾಸಿಯಾಗಿದೆ. ರಂಗನಾಥಸ್ವಾಮಿ ದೇವಾಲಯದ ಜೊತೆಗೆ ಮಳೆ ಮತ್ತು ಚಳಿಗಾಲದಲ್ಲಿ ಆಹ್ಲಾದಕರ ವಾತಾವರಣದಿಂದ ಭೂಮಿಗೆ ಬೆಲೆ ಹೆಚ್ಚಿ ಅನಿಯಂತ್ರಿತ ವಾಣಿಜ್ಯ ಚಟುವಟಿಕೆ ನಡೆಯುತ್ತಿದೆ. ಒತ್ತುವರಿ ತೆರವು ಕಾರ್ಯಾಚರಣೆಯು ಹಿತಕರ ವಾತಾವರಣದ ನಡುವೆ ಬಿಸಿಯನ್ನು ಸೃಷ್ಟಿಸಿದೆ.

ಪರಿಕಲ್ಪನೆ ಮತ್ತು ಪೂರಕ ಮಾಹಿತಿ: ಯತೀಶ್ ಕುಮಾರ್ ಜಿ.ಡಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 17-8-2000

● ಖಾಲಿ ಹುದ್ದೆಗಳ ನೇರ ನೇಮಕಾತಿ ನಿಷೇಧಿಸಿ ರಾಜ್ಯ ಸರ್ಕಾರದ ಆದೇಶ

ಬೆಂಗಳೂರು, ಆ. 16– ಕರ್ನಾಟಕ ಆಡಳಿತ ಸುಧಾರಣಾ ಆಯೋಗ ತನ್ನ ಸಮಗ್ರ ವರದಿ ನೀಡುವವರೆಗೂ ಸರ್ಕಾರದ (ನಾಗರಿಕ ಸೇವೆಗಳು) ಖಾಲಿ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯನ್ನು ಸಂಪೂರ್ಣ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇದರ ಜತೆಗೆ ಜಾರಿ ಹಂತದಲ್ಲಿರುವ ನೇರ ನೇಮಕಾತಿ ಪ್ರಕ್ರಿಯೆಯನ್ನೂ ಸ್ಥಗಿತಗೊಳಿಸುವಂತೆ ಸಂಬಂಧಪಟ್ಟ ನೇಮಕಾತಿ ಆಯೋಗ ಮತ್ತು ಪ್ರಾಧಿಕಾರಗಳಿಗೆ ಸರ್ಕಾರ ಆಗಸ್ಟ್ 14ರಂದು ಹೊರಡಿಸಿರುವ ಆದೇಶದಲ್ಲಿ ಸೂಚಿಸಿದೆ.

75 ವರ್ಷಗಳ ಹಿಂದೆ

ಗುರುವಾರ, 17-8-1950

● ಸ್ವಾತಂತ್ರ್ಯದ ಅರ್ಥ, ಹೊಣೆ ಅರಿತು ಜನ ವರ್ತಿಸಲಿ

ನವದೆಹಲಿ, ಆಗಸ್ಟ್ 15– ಸ್ವಾತಂತ್ರ್ಯವು ತನ್ನೊಡನೆ ತಂದ ಜವಾಬ್ದಾರಿಯನ್ನು ದೇಶದ ಪ್ರತಿಯೊಬ್ಬ ಪುರುಷನೂ, ಸ್ತ್ರೀಯೂ ಅರಿತು, ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕೆಂದು ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ಅವರು ನಾಡಿನ ಸ್ವಾತಂತ್ರ್ಯ ದಿನದ ಸಂದೇಶ ನೀಡುತ್ತ, ಕರೆ ಇತ್ತಿದ್ದಾರೆ.

'ಜನತೆ ಈ ಜವಾಬ್ದಾರಿಯನ್ನರಿತು ಕೊಳ್ಳದಿದ್ದರೆ, ಅವರು ಸ್ವಾತಂತ್ರ್ಯದ ಅರ್ಥವನ್ನೂ ಅರಿತುಕೊಂಡಂತಾಗದೆ, ಆಂತರಿಕ ಅಥವಾ ಬಾಹ್ಯ ತೊಂದರೆಗಳಿಂದ ರಕ್ಷಿಸಿಕೊಳ್ಳಲು ಸಾಧ್ಯವಾದೀತು' ಎಂದು ಅವರು ಎಚ್ಚರಿಕೆ ನೀಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಆಗಸ್ಟ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ನವಮಿ ಗಂ. 19-25 **ನಕ್ಷತ್ರ:** ರೋಹಿಣಿ ಗಂ. 27-18 ಯೋಗ: ವ್ಯಾಘಾತ ಗಂ. 25-40 ಕರಣ: ತೈತಿಲ ಗಂ. 8-29 ಕರ್ಕಾಟಕ ಮಾಸದ 32 ನೇ ದಿನ. **ಮಳೆ ನಕ್ಷತ್ರ:** ಆಶ್ಲೇಷ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 06-00, **ಸೂರ್ಯೋದಯ:** 06-22, **ಸೂರ್ಯಾಸ್ತ:** 06-48, **ಮುಸ್ಲಿಂ ದಿನಾಂಕ:** 22 ಸಫರ್, **ಅದೃಷ್ಟ ಸಂಖ್ಯೆ:** 7, 8

ಮೇಷ: ನಿಮ್ಮ ನಿರ್ಧಾರಗಳು ನಿಮ್ಮ ಏಕಾಂಗಿತನಕ್ಕೆ ಕಾರಣವಾಗುವುದು. ವಾಯು ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ತಾಯಿಯ ಆರೋಗ್ಯ ಸುಧಾರಿಸಲು ಧಾರ್ಮಿಕ ಕಾರ್ಯವನ್ನು ಮಾಡಿ.

ವೃಷಭ: ಚಲನಚಿತ್ರ ಹಾಗೂ ಧಾರವಾಹಿಗಳಲ್ಲಿ ಬರುವ ಸನ್ನಿವೇಶಗಳನ್ನು ನಿಮ್ಮ ನಿಜ ಜೀವನದಲ್ಲಿ ಕಲ್ಪಿಸಿಕೊಳ್ಳಬೇಡಿ. ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮವಾಗಿರುವುದು. ನಿಮ್ಮ ಸಾಧನೆಗಳ ಬಗ್ಗೆ ನಿಮಗೆ ಹೆಮ್ಮೆ ಎನಿಸುವುದು.

ಮಿಥುನ: ಸಂಧಾನ ಅಥವಾ ಕರಾರು ಒಪ್ಪಂದಗಳು ನಿಮಗೆ ಅನುಕೂಲಕರವೆನಿಸಲಿದೆ. ಬಯಕೆಗಳು ಈಡೇರುವುದು. ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆಯು ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಕರ್ಕಾಟಕ: ಸಾರಿಗೆ ಉದ್ಯೋಗ, ಸಂಪಾದನೆಗೆ ನೂತನವಾಗಿ ತೊಡಗುವವರಿಗೆ ಈ ಸಮಯ ಅಭಿವೃದ್ಧಿದಾಯಕ. ತಂದೆಯ ಕಣ್ಣಿನ ಚಿಕಿತ್ಸೆ ಫಲಕಾರಿಯಾಗಲಿದೆ. ಧಾನ್ಯ ಬೆಳೆಗಳ ಮಾರಾಟದಿಂದ ಲಾಭವಿರುವುದು.

ಸಿಂಹ: ದಾಂಪತ್ಯ ಜೀವನದಲ್ಲಿ ಬಂದಿರುವ ಬಿರುಕನ್ನು ಸರಿಮಾಡಿಕೊಳ್ಳಲು ನಿಮ್ಮ ಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಿ. ಗುರು ಅನುಗ್ರಹ ಉತ್ತಮವಿರುವುದರಿಂದ ಕೆಲಸಕಾರ್ಯಗಳು ಸರಾಗವಾಗಿ ನಡೆಯಲಿದೆ.

ಕನ್ಯಾ: ನಿಮ್ಮ ಮನೆಯ ಕೆಲಸಗಾರರು ನಿಮಗಾಗಿ ಶ್ರಮಿಸುವುದರಿಂದ ಅವರನ್ನು ಗೌರವದಿಂದ ಕಾಣುವುದು ಸೂಕ್ತ. ಇಂದು ನೀವಾಡುವ ಮಾತು ಬಹಳ ಮುಖ್ಯವಾಗಿರುವುದರಿಂದ ಕಡಿಮೆ ಹಾಗೂ ತೂಕದ ಮಾತನಾಡಿ.

ತುಲಾ: ಎಲ್ಲರೊಂದಿಗೆ ಬೆರೆಯುವ ಭಾವ ಹೆಚ್ಚುವುದು. ವ್ಯವಹಾರಗಳನ್ನು ವ್ಯವಸ್ಥಿತಗೊಳಿಸಲು ಸರಿಯಾದ ಸಮಯ. ಜೀವನದಲ್ಲಿ ಭದ್ರತೆ ಒದಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಜಗನ್ಮಾತೆಯನ್ನು ಆರಾಧಿಸಿ ಶುಭವಾಗುವುದು.

ವೃಶ್ಚಿಕ: ಎಲ್ಲ ದಾರಿಗಳೂ ಸುಗಮ ಎನಿಸಿ, ಕಷ್ಟಗಳೂ ನಿವಾರಣೆಯಾಗಲಿವೆ. ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಮಿತ್ರರ ಸಹಕಾರದಿಂದ ಮತ್ತು ಅವರ ಚಾಣಾಕ್ಷ ವರ್ತನೆಯಿಂದ ವ್ಯಾಪಾರದಲ್ಲಿ ಪ್ರಗತಿ.

ಧನು: ರಾತ್ರಿ ಅನಿವಾರ್ಯ ಕಾರಣಗಳಿಂದ ಆದ ನಿದ್ರಾಹೀನತೆಯು ಕೆಲಸದ ಸಮಯದಲ್ಲಿ ಬಹಳ ಕಾಡುವ ಸಂಭವವಿದೆ. ಯಾವ ಪರಿಸ್ಥಿತಿಯಲ್ಲಿಯೂ ಧೈರ್ಯಗೆಡುವುದು ಸರಿಯಲ್ಲ. ಸ್ವಂತ ವಿಚಾರಕ್ಕೆ ಜಿಪುಣರ ರೀತಿ ವರ್ತಿಸಬೇಡಿ.

ಮಕರ: ದಿನಗೂಲಿ ಲೆಕ್ಕದಲ್ಲಿ ದುಡಿಮೆ ಮಾಡುತ್ತಿರುವವರಿಗೆ ಜೀವನದಲ್ಲಿ ಅಸ್ಥಿರತೆ ಕಾಡಲು ಶುರುವಾಗುತ್ತದೆ. ನೀವು ತೆಗೆದುಕೊಳ್ಳುವ ಆಹಾರದ ವಿಚಾರವಾಗಿ ನಿರ್ಲಕ್ಷ್ಯವು ಆರೋಗ್ಯಕ್ಕೆ ಒಳ್ಳೆಯದಲ್ಲ.

ಕುಂಭ: ಚರ್ಮ ಸಂಬಂಧಿ ಕಾಯಿಲೆಗಳಿದ್ದಲ್ಲಿ ಆಯುರ್ವೇದ, ನಾಟಿ ಚಿಕಿತ್ಸೆ ಪರಿಣಾಮಕಾರಿಯಾಗಿ ಕಾಣುತ್ತದೆ. ಮಗಳ ಶಿಫಾರಸ್ಸಿನ ಮೇಲೆ ಖರೀದಿಸಿದ ಆಸ್ತಿಯು ಲಾಭದಾಯಕವಾದದ್ದು ಎಂದು ಮನವರಿಕೆಯಾಗುತ್ತದೆ.

ಮೀನ: ಬರಹಗಾರರಿಗೆ ಉತ್ತೇಜನ, ಪ್ರಕಾಶಕರಿಂದ ಪ್ರಶಂಸೆ ಜೊತೆಗೆ ಹೊಸ ಪ್ರಕಟನೆಗಾಗಿ ಸಮಾಲೋಚನೆ ನಡೆಸುವರು. ಆಮದು ಹಾಗೂ ರಫ್ತು ವ್ಯಾಪಾರಸ್ಥರಿಗೆ ಕೆಲವೊಂದು ನಿಯಮಗಳ ಸಡಿಲಿಕೆಯಿಂದ ಹೆಚ್ಚಿನ ವಹಿವಾಟು ಸಾಧ್ಯ.

ಪದಬಂಧ 6137

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಮತೂಕವಿಲ್ಲದಿರುವಿಕೆ (4)
3.ಈಕೆ ನಿರ್ಭಾಗ್ಯಳಾದ ಹೆಂಗಸು (4)
5.ಕಲೆಯಲ್ಲಿ ಅಂಧಕಾರ! (3)
6.ಆಕರದಲ್ಲಿರುವ ಕೈ! (2)
8.ಉರಗದ ಎದೆ ಕಾಣುತ್ತಿದೆಯೇ? (2)
9.ಹಾವು ಮುಂತಾದ ಹರಿದಾಡುವ ಪ್ರಾಣಿ (4)
11.ರತ್ನಗಳಿಗೆ ಆಶ್ರಯವಾಗಿರುವ ಸಮುದ್ರ (4)
12.ನಾರೀಕೇಳದ ಹತ್ತಿರವಿರುವ ಕೊಳವೆ (2)
13.ಉಲ್ಟಾಪಲ್ಟಾ ಬಿದ್ದಿರುವ ಶರ (2)
15.ಲಿಖಿತ ಮೂಲಕ ಮಾಡಿಕೊಳ್ಳುವ ಅರ್ಜಿ (3)
17.ಅಕ್ಕಿ ತೊಳೆದ ನೀರು (4)
18.ಗ್ರಂಥಗಳನ್ನು ಪ್ರಕಟಿಸುವವನು (4)

ಮೇಲಿಂದ ಕೆಳಕ್ಕೆ

1.ಒಂದೇ ಒಂದು ಎಂದು ಹೀಗೆ ಹೇಳಿ (3)
2.ಹಸುವಿನ ಮರಿಯಿಲ್ಲಿ ಉಲ್ಟಾ ನಿಂತಿದೆಯಲ್ಲಾ? (2)
3.ಅಬಲೆಗೆ ಕಾಣಿಸಿದ ತರಂಗ! (2)
4.ಅತಿಶಯವಾದುದು ಅಥವಾ ವಿಶೇಷವಾದುದು! (3)
7.ರುಚಿಕರವಾದ ಭೋಜನ (5)
8.ಕೆಲಸಕ್ಕೆ ಬೇಕಾದ ಸಾಧನ (5)
10.ಉತ್ತರದವರ ವೇತನ (3)
12.ನಾವೆಯನ್ನು ನಡೆಸುವವನು (3)
14.ಬಾಲ ಹಚ್ಚಿಕೊಂಡಿರುವ ಹುಡುಗ (3)
15.ಕಡಿಗತ್ತಿಯನ್ನು ಹೀಗೂ ಹೇಳುವರು (2)
16.ಬ್ರಾಹ್ಮಣ ಇಲ್ಲಿದ್ದಾನೆ (2)



6136ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ತೋರುಬೆರಳು 3.ವಿವಿಧ 5.ತಲೆಬರಹ 7.ಸುಪಥ 9.ಸಂವಾದ 11.ವಿವಾಹ 13.ದುರುಪಯೋಗ 15.ಸಂಭವ 16.ವರದಿಗಾರ

ಮೇಲಿಂದ ಕೆಳಕ್ಕೆ: 1.ತೋರ್ಪಡಿಸು 2.ರಹಿತ 4.ವಿದ್ರೋಹ 6.ಬಲ್ಲಿದ 8.ಪಟ್ಟ 9.ಸಂತಾಪ 10.ಗ್ರೀವಾ 12.ಹಸ್ತಾಂತರ 13.ದುರ್ಲಭ 14.ಗಟಾರ

ಸುಡೊಕು 6521

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1			4		2		7	
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

6520 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪರಿಶಿಷ್ಟರ ಪ್ರಗತಿ; ದೇಶಕ್ಕೇ ರಾಜ್ಯ ಮಾದರಿ

ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಅನುಷ್ಠಾನ ಪ್ರಗತಿ ಕುರಿತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ನಡೆಸಿದ ಅಧ್ಯಯನ ವರದಿ ಪ್ರಕಾರ ಪರಿಶಿಷ್ಟರ ಆರೋಗ್ಯ, ಶಿಕ್ಷಣ, ಜೀವನಮಟ್ಟ ಸುಧಾರಣೆ, ಬಡತನ ನಿರ್ಮೂಲನೆಯಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ನಡೆದ ರಾಜ್ಯ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಮಾತನಾಡಿದ ಅವರು, ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಜಾರಿಗೊಂಡು ದಶಕ ಪೂರ್ಣಗೊಂಡಿದೆ. ಅನುಷ್ಠಾನದ ಪ್ರಗತಿ ಬಗ್ಗೆ ಐಸೆಕ್ ತಟಸ್ಥವಾಗಿ ಮೌಲ್ಯಮಾಪನ ನಡೆಸಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಹೆಚ್ಚಿರುವ 39 ತಾಲ್ಲೂಕುಗಳಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ವಿವಿಧ ಮಾನದಂಡಗಳನ್ನು ಪರಿಗಣಿಸಿ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆ ಪ್ರಕಾರ, ಕರ್ನಾಟಕ ವಾರ್ಷಿಕ ಶೇ 9.6 ರಷ್ಟು ಪ್ರಗತಿ ಸಾಧಿಸಿದೆ ಎಂದರು.

'ಕಾಯ್ದೆ ಪ್ರಕಾರ, ಪ್ರತಿವರ್ಷ ಶೇ 24.1ರಷ್ಟು ಅನುದಾನ ನೀಡಬೇಕಾಗಿದೆ. ಆದರೆ, 2019-20ರ ಅವಧಿಯಲ್ಲಿ ನಿಗದಿತಂತೆ ಕಡಿಮೆ ಅನುದಾನ ಬಿಡುಗಡೆ ಮಾಡಲಾಗಿದೆ. ಕಾಯ್ದೆ ಜಾರಿ ಬಳಿಕ ₹2.97 ಲಕ್ಷ ಕೋಟಿ ಮತ್ತು ವಸತಿ ಯೋಜನೆಗಳಿಗೆ ₹1,086 ಕೋಟಿ ವೆಚ್ಚ ಮಾಡಲಾಗಿದೆ' ಎಂದು ಹೇಳಿದರು.

'ಆಯಾ ಇಲಾಖೆಗಳು ಸಮರ್ಪಕ ಕ್ರಿಯಾ ಯೋಜನೆ ರೂಪಿಸಿ, ಪರಿಶಿಷ್ಟ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಸುಧಾರಣೆಗೆ ಶ್ರಮಿಸಬೇಕು. ಇನ್ನಷ್ಟು ಬದ್ಧತೆ ತೋರಿದ್ದರೆ 10 ವರ್ಷಗಳಲ್ಲಿ ಹೆಚ್ಚಿನ ಪ್ರಗತಿ ಸಾಧ್ಯವಿತ್ತು. ಇಷ್ಟೆಲ್ಲ ಖರ್ಚು ಮಾಡಿಯೂ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಜೀವನಮಟ್ಟ ಸುಧಾರಣೆ ಆಗದಿದ್ದರೆ ನಾಚಿಕೆಗೇಡು. ಯೋಜನೆ ಅನುಷ್ಠಾನ ಕುರಿತು ನಿರಂತರವಾಗಿ ಪರಿಶೀಲನೆ ನಡೆಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಲ್ಯಾಣ ಯೋಜನೆಗಳಿಗೆ ಸಾಲಸೌಲಭ್ಯ ಒದಗಿಸಲು ವಿಳಂಬ ಮಾಡುವ ಬ್ಯಾಂಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರದ ಯೋಜನೆಗಳು ಎಲ್ಲ ಫಲಾನುಭವಿಗಳಿಗೂ ತಲುಪುವಂತೆ ಕ್ರಮ ಕೈಗೊಳ್ಳಬೇಕು
ಸಿದ್ದರಾಮಯ್ಯ, ಮುಖ್ಯಮಂತ್ರಿ


ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಸತೀಶ ಜಾರಕಿಹೊಳಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಎಚ್‌.ಸಿ.ಮಹದೇವಪ್ಪ ಭಾಗವಹಿಸಿದ್ದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದರ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಶೇ 6, ನಗರ ಪ್ರದೇಶದಲ್ಲಿ ಶೇ 3 ಸೇರಿ ಒಟ್ಟು ಶೇ 9ರಷ್ಟು ಪರಿಶಿಷ್ಟ ಕುಟುಂಬಗಳು ಬಡತನದಿಂದ ಹೊರಬಂದಿವೆ
ಎಚ್‌.ಸಿ.ಮಹದೇವಪ್ಪ, ಸಮಾಜಕಲ್ಯಾಣ ಸಚಿವ

'ಬಿಡುಗಡೆಯಾಗದ ಕೇಂದ್ರ ಅನುದಾನ'

ಪರಿಶಿಷ್ಟರ ಕಲ್ಯಾಣ ಕಾರ್ಯಕ್ರಮಗಳಿಗೆ 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರ ₹38,793 ಕೋಟಿ ಬಿಡುಗಡೆ ಮಾಡಿತ್ತು. ₹38,717 ಕೋಟಿ ವೆಚ್ಚ ಮಾಡಿ, ಶೇ 97ರಷ್ಟು ಪ್ರಗತಿ ಸಾಧಿಸಿದ್ದೇವೆ. ಆದರೆ, ಕೇಂದ್ರದಿಂದ ಬರಬೇಕಿದ್ದ ₹880 ಕೋಟಿ ಅನುದಾನ ಬಿಡುಗಡೆಯಾಗಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

'2025–26ನೇ ಸಾಲಿನಲ್ಲಿ ₹42,017.51 ಕೋಟಿ ಹಂಚಿಕೆ ಮಾಡಿದ್ದೇವೆ. ಈ ಅನುದಾನ ಬಳಕೆಗೆ ಕ್ರಿಯಾ ಯೋಜನೆ ರೂಪಿಸಿ, ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು. ಶೇ 100ರಷ್ಟು ಪ್ರಗತಿ ಸಾಧಿಸಬೇಕು. ನಿರ್ಲಕ್ಷ್ಯವಹಿಸುವ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕು' ಎಂದರು.

ದೇವದಾಸಿಯರ ಪುನರ್‌ವಸತಿಗೆ ಸಮೀಕ್ಷೆ

ದೇವದಾಸಿಯರ ಪುನರ್‌ವಸತಿ ಸಮೀಕ್ಷೆ ಕಾರ್ಯ ಸೆಪ್ಟೆಂಬರ್‌ನಿಂದ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

ದೇವದಾಸಿ ಪದ್ಧತಿಯನ್ನು ಸಂಪೂರ್ಣ ತೊಡೆದು ಹಾಕಲು ಕಾನೂನಿಗೆ ತಿದ್ದುಪಡಿ ತರಲಾಗುವುದು. ಹೆಣ್ಣುಮಕ್ಕಳನ್ನು [illegible] ದೂಡುವ ಪಾಲಕರು ಸೇರಿದಂತೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲಾಗುವುದು. ಕೇವಲ ಪದ್ಧತಿ ಅಷ್ಟೇ ಅಲ್ಲ, ಎಲ್ಲರೂ ತಲೆತಗ್ಗಿಸುವ ವಿಚಾರ. ದೇವದಾಸಿಯರು, ಸಫಾಯಿ ಕರ್ಮಚಾರಿಗಳು ಸೇರಿದಂತೆ ನಿರ್ಲಕ್ಷಿತ ವರ್ಗಗಳ ಜೀವನಮಟ್ಟ ಸುಧಾರಣೆಗೆ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಡಿಸೆಂಬರ್‌ನಲ್ಲಿ ಡಿಕೆಶಿ ಮುಖ್ಯಮಂತ್ರಿ: ಶಾಸಕ ಶಿವಗಂಗಾ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಡಿಸೆಂಬರ್‌ನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿ.ಎಂ ಆಗಲಿದ್ದಾರೆ. ಅಲ್ಲಿಯವರೆಗೂ ನಾನು ಮಾಧ್ಯಮಗಳ ಎದುರು ಏನೂ ಮಾತನಾಡುವುದಿಲ್ಲ' ಎಂದು ಚನ್ನಗಿರಿ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜು ಹೇಳಿದರು.

'ಡಿಸೆಂಬರ್‌ನಲ್ಲಿ ಶಿವಕುಮಾರ್ ಮುಖ್ಯಮಂತ್ರಿ ಆಗುವುದು ನಿಶ್ಚಿತ' ಎಂದು ಹಲವು ಬಾರಿ ಹೇಳಿದ್ದ ಅವರು, 'ಯಾವ ಡಿಸೆಂಬರ್ ಎಂದು ನಾನು ಹೇಳಿಲ್ಲ' ಎಂದು ಇತ್ತೀಚೆಗೆ ಹೇಳಿದ್ದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪಕ್ಷದ ವಿರುದ್ಧ ಹೇಳಿಕೆ ಕೊಟ್ಟು ರಾಜಣ್ಣ ಈಗ ಅನುಭವಿಸುತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ವೋಟಿಗಾಗಿ ನೋಟು ಹಂಚಿಕೆ ಸಂಬಂಧದ ಆರೋಪ ಹರಿದಾಡಿದೆ. ಶಾಸಕ ಶಿವಲಿಂಗೇಗೌಡ ಅವರ ವಿರುದ್ಧವೂ ಶಿಸ್ತು ಕ್ರಮ ಕೈಗೊಳ್ಳಲಿ' ಎಂದರು.

ಎಚ್ಚರಿಕೆ ನೀಡಿದರೂ, ಮುಖ್ಯಮಂತ್ರಿ ಅಧಿಕಾರ ಹಸ್ತಾಂತರದ ಬಗ್ಗೆ ಹೇಳಿಕೆ ನೀಡಿರುವ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜು ಅವರಿಗೆ ನೋಟಿಸ್ ನೀಡಲಾಗುವುದು
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಜಮಖಂಡಿಯ ಸಂಗಮೇಶ್ವರ ಮಹಾರಾಜರ ದೇವಸ್ಥಾನದ ಆವರಣದಲ್ಲಿ ಶನಿವಾರ ಪಂಡಿತರು ಕೃಷ್ಣಾ ಆರತಿ ನೆರವೇರಿಸಿದರು

ಅದ್ದೂರಿಯಾಗಿ ನೆರವೇರಿದ ಕೃಷ್ಣಾರತಿ

ಪ್ರಜಾವಾಣಿ ವಾರ್ತೆ

ಜಮಖಂಡಿ: ತಾಲ್ಲೂಕಿನ ಹಿಪ್ಪರಗಿ ಬ್ಯಾರೇಜ್ ಹಿಂಭಾಗದಲ್ಲಿರುವ ಸಂಗಮೇಶ್ವರ ಮಹಾರಾಜರ ದೇವಸ್ಥಾನದ ಆವರಣದ ಕೃಷ್ಣಾ ನದಿ ತೀರದಲ್ಲಿ ಶನಿವಾರ ಕೃಷ್ಣಾರತಿ ನೆರವೇರಿತು. ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು. ಎಂ.ಆರ್.ಎನ್. ನಿರಾಣಿ ಫೌಂಡೇಶನ್ ಮತ್ತು ರೈತರ ಸಹಯೋಗದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಮುರುಗೇಶ ನಿರಾಣಿಯವರ 60ನೇ ಜನ್ಮ ದಿನ ಅಂಗವಾಗಿ ಕೃಷ್ಣಾರತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಮುಂಚೂಣಿಯಲ್ಲಿ ಥಾವರಚಂದ್ ಗೆಹಲೋತ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಜಗದೀಪ್ ಧನಕರ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾಗಿರುವ ಉಪ ರಾಷ್ಟ್ರಪತಿ ಹುದ್ದೆಗೆ ನಡೆಯಲಿರುವ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯ ಆಯ್ಕೆಯಲ್ಲಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೆಸರು ಮುಂಚೂಣಿಯಲ್ಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಗೆಹಲೋತ್

ಭಾನುವಾರ ಬಿಜೆಪಿ ಸಂಸದೀಯ ಮಂಡಳಿ ಸಭೆ ನಡೆಯಲಿದ್ದು, ಉಪ ರಾಷ್ಟ್ರಪತಿ ಅಭ್ಯರ್ಥಿಯನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ. ಸೋಮವಾರ ಅಧಿಕೃತವಾಗಿ ತನ್ನ ಅಭ್ಯರ್ಥಿಯ ಹೆಸರು ಘೋಷಿಸುವ ನಿರೀಕ್ಷೆಯಿದೆ.

ಎನ್‌ಡಿಎ ಮಿತ್ರಪಕ್ಷಗಳ ಸಭೆ ಮಂಗಳವಾರ ನಡೆಯಲಿದ್ದು, ಉಳಿದ ಪಕ್ಷಗಳು ತನ್ನ ಅಭ್ಯರ್ಥಿಗೆ ಬೆಂಬಲ ವ್ಯಕ್ತಪಡಿಸಲಿವೆ. ಇದೇ ಸಭೆಯಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಅಭ್ಯರ್ಥಿಯ ಹೆಸರು ಘೋಷಿಸುವ ಸಾಧ್ಯತೆಯಿದೆ. ನಾಮಪತ್ರ ಸಲ್ಲಿಕೆಗೆ ಆಗಸ್ಟ್ 21 ಕೊನೆಯ ದಿನ.

'ನಾಮಪತ್ರ ಸಲ್ಲಿಕೆಯ ದಿನ ಬಿಜೆಪಿಯು ತನ್ನ ಶಕ್ತಿಪ್ರದರ್ಶನ ಮಾಡಲಿದೆ. ಬಿಜೆಪಿ ಅಧಿಕಾರದಲ್ಲಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕೂಡ ಭಾಗವಹಿಸಲಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಕಳೆದ ವಾರ ಸಭೆ ಸೇರಿದ್ದ ಎನ್‌ಡಿಎ ಮಿತ್ರಪಕ್ಷಗಳು, ಉಪ ರಾಷ್ಟ್ರಪತಿ ಅಭ್ಯರ್ಥಿ ಆಯ್ಕೆಯ ನಿರ್ಧಾರವನ್ನು ಮೋದಿ ಅವರಿಗೆ ಬಿಟ್ಟಿದ್ದವು. ಸೆಪ್ಟೆಂಬರ್ 9ರಂದು ಮತದಾನ ನಡೆಯಲಿದೆ. ಉಪ ರಾಷ್ಟ್ರಪತಿ ಹುದ್ದೆಗೆ ವಿರೋಧ ಪಕ್ಷಗಳು ತಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಲಿವೆಯೇ ಎಂಬುದು ಕುತೂಹಲ ಮೂಡಿಸಿದೆ.

ಬಿಜೆಪಿ ನಿಷ್ಠರಿಗೆ ಮಣೆ

ಧನಕರ್ ವರ್ತನೆಯಿಂದ ಮುಜುಗರಕ್ಕೀಡಾಗಿರುವ ಬಿಜೆಪಿ ವರಿಷ್ಠರು, ಈ ಬಾರಿ ಪಕ್ಷ ನಿಷ್ಠರಿಗೆ ಮಣೆ ಹಾಕಲು ನಿರ್ಧರಿಸಿದ್ದಾರೆ. ಪಕ್ಷದ ಉನ್ನತ ಮೂಲಗಳ ಪ್ರಕಾರ, ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್, ಗುಜರಾತ್ ರಾಜ್ಯಪಾಲ ದೇವವ್ರತ್ ಆಚಾರ್ಯ ಹೆಸರು ಮುಂಚೂಣಿಯಲ್ಲಿವೆ.

ಉಳಿದಂತೆ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ, ಬಿಹಾರದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಆರ್‌ಎಸ್‌ಎಸ್ ನಾಯಕ ಶೇಷಾದ್ರಿಚಾರಿ ಹೆಸರು ಕೂಡ ಕೇಳಿಬಂದಿವೆ.

ಉಪ ರಾಷ್ಟ್ರಪತಿ ಚುನಾವಣೆ


ದೇವೇಗೌಡ ಅವರು ಚಂದ್ರಶೇಖರನಾಥ ಸ್ವಾಮೀಜಿಗೆ ಅಂತಿಮ ನಮನ ಸಲ್ಲಿಸಿದರು

ಚಂದ್ರಶೇಖರನಾಥ ಸ್ವಾಮೀಜಿ ನಿಧನ

ಒಂದನೇ ಪುಟದಿಂದ...

1968ರಲ್ಲಿ ದೀಕ್ಷೆ: ಕೆ.ಆರ್. ಪೇಟೆಯ ಬಸ್ ಮಾಲೀಕ ತಿಮ್ಮೇಗೌಡ ಹಾಗೂ ಸಣ್ಣಮ್ಮ ದಂಪತಿಯ ಪುತ್ರರಾಗಿ 1945ರ ಫೆಬ್ರುವರಿ 10ರಂದು ಜನಿಸಿದ್ದ ಗೋವಿಂದೇಗೌಡರು, ಬಾಲ್ಯದಿಂದಲೇ ಆಧ್ಯಾತ್ಮಿಕ ಒಲವು ಹೊಂದಿದ್ದರು. 1968ರಲ್ಲಿ ಆದಿಚುಂಚನಗಿರಿ ಪೀಠಾಧಿಪತಿ ರಾಮಾನಂದನಾಥ ಸ್ವಾಮೀಜಿಯವರ ಮೊದಲ ಶಿಷ್ಯರಾಗಿ ದೀಕ್ಷೆ ಸ್ವೀಕರಿಸಿ, ಚಂದ್ರಶೇಖರನಾಥ ಸ್ವಾಮೀಜಿ ಎಂದು ನಾಮಾಂಕಿತರಾದರು.

ರಾಜರಾಜೇಶ್ವರಿನಗರದ ತಿರುಚ್ಚಿ ಸ್ವಾಮೀಜಿಯವರ ಗುರುಕುಲದಲ್ಲಿ ಶಾಸ್ತ್ರ ಅಭ್ಯಾಸ, ವೇದ ಉಪನಿಷತ್ ಪಠಣ ಮಾಡಿದ್ದರು. ಬಿ.ಕಾಂ ಪದವೀಧರರಾದ ಸ್ವಾಮೀಜಿ, ಅದ್ವೈತ ವೇದಾಂತದಲ್ಲಿ ವಿದ್ವತ್ ಪದವಿ ಗಳಿಸಿದ್ದರು.

ರಾಜ್ಯಸಭೆ ಸದಸ್ಯ ಎಚ್‌.ಡಿ. ದೇವೇಗೌಡ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶಿರಾದ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ಕೇಂದ್ರ ಸಚಿವ ವಿ.ಸೋಮಣ್ಣ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರು ಅಂತ್ಯಕ್ರಿಯೆಯಲ್ಲಿ ಭಾಗಿಯಾದರು.

ತಾಂತ್ರಿಕ ದೋಷ: ವಿಮಾನ ವಾಪಸ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿಯಿಂದ ಮುಂಬೈಗೆ ಶನಿವಾರ ಬೆಳಿಗ್ಗೆ 7.50ಕ್ಕೆ ಹೊರಟಿದ್ದ 'ಸ್ಟಾರ್ ಏರ್ ಸಂಸ್ಥೆಯ 'ಎಸ್‌5111' ವಿಮಾನವು ತಾಂತ್ರಿಕ ದೋಷದ ಕಾರಣ ಪ್ರಯಾಣ ಮೊಟಕುಗೊಳಿಸಿ, ಬೆಳಗಾವಿಗೆ ಮರಳಿತು. ವಿಮಾನದಲ್ಲಿ 48 ಮಂದಿ ಪ್ರಯಾಣಿಕರು ಇದ್ದರು.

'ವಿಮಾನವು ಮುಂಬೈಗೆ ಬೆಳಿಗ್ಗೆ 8.50ಕ್ಕೆ ತಲುಪಬೇಕಿತ್ತು. ತಾಂತ್ರಿಕ ದೋಷದಿಂದ ಮರಳಿದ ಬಳಿಕ, ಪ್ರಯಾಣಿಕರು ಮತ್ತೊಂದು ವಿಮಾನದಲ್ಲಿ ಪ್ರಯಾಣಿಸಿದರು' ಎಂದು ಬೆಳಗಾವಿ ವಿಮಾನ ನಿಲ್ದಾಣ ನಿರ್ದೇಶಕ ಎಸ್. ತ್ಯಾಗರಾಜನ್ ತಿಳಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.
ಕುಲಸಚಿವರ ಕಛೇರಿ, ಗ್ರಂಥಾಲಯ ವಿಭಾಗ, ವಿಜಯಪುರ
ದೂರವಾಣಿ : 08352–220951,
Ref:KSAWU/LIB/ACQ/2025-26/757 Date:08.08.2025

ಪ್ರಕಟಣೆ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಗ್ರಂಥಾಲಯಕ್ಕೆ 2025–65 ನೇ ಸಾಲಿನ ಗ್ರಂಥಗಳ ಖರೀದಿಗಾಗಿ ಗ್ರಂಥ ಸರಬರಾಜುದಾರರ ನೊಂದಣಿಗಾಗಿ ಅರ್ಜಿ ಆಹ್ವಾನಿಸಿದ್ದು, ಅರ್ಹ ಹಾಗೂ ಇಚ್ಛೆಯುಳ್ಳ ಗ್ರಂಥ ಸರಬರಾಜುದಾರರು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯ ವೆಬ್‌ಸೈಟ್ www.kswu.ac.in ಸಂದರ್ಶಿಸಬಹುದು.

ಸಹಿ/– ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ವಾಸಾಸಂಇ/ವಿಜಯಪುರ/267/ಕೆಎಸ್‌ಎಂಸಿಎ/2025–26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 4701 ಲೆಕ್ಕ ಶೀರ್ಷಿಕೆಯ ಗುಬ್ಬಿ ವಿಧಾನಸಭಾ ಕ್ಷೇತ್ರದ 14 ಸಂಖ್ಯೆ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಮತ್ತು ತಿಪಟೂರು ವಿಧಾನಸಭಾ ಕ್ಷೇತ್ರದ 10 ಸಂಖ್ಯೆ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಗಿಟ್ಟ ಮೊತ್ತ ಕನಿಷ್ಠ ರೂ.71.65 ಲಕ್ಷಗಳ ಹಾಗೂ ಗರಿಷ್ಠ ರೂ.398.24ಲಕ್ಷಗಳ ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ದಿ: 18–08–2025 ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ಪ್ರೀಬಿಡ್ಡ್ ಸಭೆ/ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp. karnataka. gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10
(ದೂರವಾಣಿ : 0821–2979772 ಇ–ಮೇಲ್: -khsdrp.divmys@gmail.com)
ಸಂ: ಆಕುಕ/ಇಂ.ವಿ./ಕಾ.ಅ/ಮೈ/ಸಇ–3/ಟೆಂಡರ್–09/167–AAM/2025–26 ದಿನಾಂಕ: 14.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ **ಮಂಡ್ಯ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ** ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, CAT-I, CAT-II(A) ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಒಟ್ಟಾರೆ ಅಂದಾಜು ಮೊತ್ತ **ರೂ. 1000.00 ಲಕ್ಷಗಳು.**

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:–1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **29.08.2025ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **30.08.2025 ರಂದು 16.30 ಗಂಟೆಗೆ.** ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/MYS/808/SA/2025-26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಆಯುಕ್ತರು ಹಾಗೂ ಮಹಾನಿರ್ದೇಶಕರು,
ಕರ್ನಾಟಕ ಕ್ರೀಡಾ ಪ್ರಾಧಿಕಾರ ಕಾರ್ಯಾಲಯ, ರಾಜ್ಯ ಯುವ ಕೇಂದ್ರ,
ನೃಪತುಂಗ ರಸ್ತೆ, ಬೆಂಗಳೂರು–560001.
ಸಂಖ್ಯೆ: ಕಕ್ರೀಪ್ರಾ/ಪಿ5/53/2024–25(ಭಾಗ–01) ದಿನಾಂಕ: 16.08.2025

ಪ್ರಕಟಣೆ

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಸಲುವಾಗಿ ತರಬೇತುದಾರರ ಸೇವೆ ಪಡೆಯಲು ನೇಮಕಾತಿ ಆದೇಶ ನೀಡುವ ದಿನಾಂಕದಿಂದ ಸೆಪ್ಟೆಂಬರ್–2025 ರ ಅಂತ್ಯದವರೆಗೆ ತಾತ್ಕಾಲಿಕವಾಗಿ ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಭಾರತದ ಅರ್ಹ ನಾಗರೀಕರಿಂದ ಅರ್ಜಿಯನ್ನು ಆಹ್ವಾನಿಸಿದೆ. ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಕ್ರೀಡೆಯ ಹೆಸರು	ಕ್ರೀಡಾ ವಸತಿ ನಿಲಯ	ತರಬೇತುದಾರರ ಹುದ್ದೆಯ ಸಂಖ್ಯೆ
1	ಅಥ್ಲೆಟಿಕ್	ಚಿಕ್ಕಮಗಳೂರು ಜಿಲ್ಲೆ	01
2	ಅಥ್ಲೆಟಿಕ್	ಉಡುಪಿ ಜಿಲ್ಲೆ	01
3	ಹಾಕಿ	ಬಾಗಲಕೋಟೆ ಜಿಲ್ಲೆ	01
4	ವಾಲಿಬಾಲ್	ಕೊಪ್ಪಳ ಜಿಲ್ಲೆ	01

ಅರ್ಜಿ ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ದಿನಾಂಕ 30–08–2025 ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–56001 ಇವರಿಗೆ ಸಲ್ಲಿಸಬೇಕಾಗಿರುತ್ತದೆ.
ಮಾಸಿಕ ಸಂಚಿತ ವೇತನ, ವಿದ್ಯಾರ್ಹತೆ ಮತ್ತು ಇತರೆ ಅರ್ಹತಾ ಮಾನದಂಡದ ವಿವರಗಳು ಮತ್ತು ಅರ್ಜಿ ನಮೂನೆ ಹಾಗೂ ಅಧಿಸೂಚನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್‌ಸೈಟ್ dyes.karnataka.gov.in ನಲ್ಲಿ ಮತ್ತು ಹೆಚ್ಚಿನ ಮಾಹಿತಿಯನ್ನು ಮೇಲೆ ತಿಳಿಸಿರುವ ಕಾರ್ಯಾಲಯದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಅಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ
DIPR/CP/2344/ NR/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ.ರಸ್ತೆ, ಹುಬ್ಬಳ್ಳಿ – 580 025.
ದೂರವಾಣಿ: (0836) 2223536. Website: www.hescom.co.in
E-mail: seepmc.hescom@gmail.com ; eepmc1.hescom@gmail.com
CIN No: U31401KA2002SGCO30437
No: HESCOM/SEE(PMC)/EE-P1/AEE-1/2025-26/CYS4660 Date: 16-08-2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳು	ಬಿಡ್ ಇಂಡೆಂಟ್ ಸಂಖ್ಯೆ
ಹುಬ್ಬಳ್ಳಿ ನಗರ ವಿಭಾಗದಲ್ಲಿ, ರಿಜಿಸ್ಟರ್ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ, ಹುಬ್ಬಳ್ಳಿ ರವರ ಹೆಸರಿನಲ್ಲಿ 1200 ಕೆವಿಎ ಎಚ್‌ಟಿ ಸ್ಥಾಪನೆಗೆ 33ಕೆವಿ ವೋಲ್ಟೇಜ್ ಕ್ಲಾಸ್ ವ್ಯವಸ್ಥೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿ.	HESCOM/2025-26/ EL/WORK_INDENT917

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ರಲ್ಲಿ ದಿನಾಂಕ: **16.08.2025, 05:00 PM** ನಂತರ ಪಡೆಯಬಹುದು.

ಅಧೀಕ್ಷಕ ಇಂಜಿನಿಯರರು (ವಿ),
(ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾ/ದಿಶಾ/560/2025–26

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/1671
ದಿನಾಂಕ : 14.08.205

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KG-1

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KG-1 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **24** ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025–26 ನೇ ಸಾಲಿನ MGNREGA ಒಗ್ಗೂಡುವಿಕೆ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **(https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : (1) WORK_INDENT : 10420/CALL-2, 10406/CALL-2,10439/CALL-2, 10427/CALL-2, 10426/CALL-2, 10425/CALL-2, 10486/CALL-2, 10487/CALL-2, 8151/CALL-5, 10257/CALL-3, 10270/CALL-3, 10272/CALL-3, 10274/CALL-3, 10275/CALL-3, 10276/CALL-3, 10283/CALL-3, 10814, 5107, 10816, 10817, 10819, 10818, 10821, 10820

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **7.03** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **11.81** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ. ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **18–08–2025** ರಿಂದ **02–09–2025** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **03–09–2025** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/243/2025–26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.
ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ–04/2025–26/619
ದಿನಾಂಕ:08.08.2025

ಟೆಂಡರ್ ಪ್ರಕಟಣೆ ಸಂಖ್ಯೆ:04/2025–26/619 ದಿ:08.08.2025 (ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರೆಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ. ಕ್ರ.ಸಂ.ಕಾಮಗಾರಿ ವಿವರ: 1)Construction of gravity pipe network for filling up of tanks for drinking water purpose in Arasikere taluk under yettinahole gravity main canal in the reach from ch.72.210 km to ch.91.840 km comprising of supply, installation, testing and commissioning of gravity MS/HDPE/OPVC pipes including structures and improvements to 9 no of tanks. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)11687.19 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ/ ಸಿ.ಪಿ.ಡಬ್ಲ್ಯೂ..ಡಿ 1ನೇ ದರ್ಜೆ ಸಿವಿಲ್ ಗುತ್ತಿಗೆದಾರರು ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ಬಿಡ್ಡುದಾರರ ಅರ್ಹತೆ/ ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಭಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ–ಪ್ರೋಕ್ಯೂರೆಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ:19.08.2025 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ–ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, http://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯ ಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174–233111 e-mail: eeypd3ask@gmail.com

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ
ವಾಸಾಸಂಇ/ಹಿಸನಿ/ಹಾಸನ/455/ಕೆಎಸ್‌ಎಂಸಿಎ/2025–26

ಜಿಲ್ಲಾ ಪಂಚಾಯತ ಉತ್ತರ ಕನ್ನಡ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳು, ಉತ್ತರ ಕನ್ನಡ–ಕಾರವಾರ
Email: dhoukannada@gmail.com Phone: 08382-226339
ಕ್ರ.ಸಂ. ಅಭಿವೃದ್ಧಿ (1)/16/2025–26 ದಿನಾಂಕ: 16–08–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: 2025–26 ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಉ.ಕ., ಕಾರವಾರ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ವಾಹನ ಚಾಲಕರು, ಫಾರ್ಮಾಸಿಸ್ಟ್, ಲ್ಯಾಬ್ ಟೆಕ್ನಿಷಿಯನ್, ಡಾಟಾ ಎಂಟ್ರಿ ಆಪರೇಟರ್ ಮತ್ತು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಗೆ ಲೆಕ್ಕ ಸಹಾಯಕರು, ಆಡಳಿತ ಸಹಾಯಕರು, ಆರೋಗ್ಯ ವಿಸ್ತರಣಾ ಕೇಂದ್ರಗಳಿಗೆ ಶುಶ್ರೂಷಕರು ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ಪೂರೈಸುವ ಕುರಿತು ಅಲ್ಪಾವಧಿ ಇ–ಟೆಂಡರ್ ಆಹ್ವಾನ.

2025–26ನೇ ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಉ.ಕ.. ಕಾರವಾರ ಅಧೀನದಲ್ಲಿ ಒಳಪಡುವ ಅರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ಸಿಬ್ಬಂದಿಗಳನ್ನು ಪೂರೈಸುವ ಕುರಿತು ಇ–ಟೆಂಡರ್ ಆಹ್ವಾನ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಎಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಮೂಲಕ ವಾಹನ ಚಾಲಕರು, ಫಾರ್ಮಾಸಿಸ್ಟ್, ಲ್ಯಾಬ್ ಟೆಕ್ನಿಷಿಯನ್, ಡಾಟಾ ಎಂಟ್ರಿ ಆಪರೇಟರ್, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಗೆ ಲೆಕ್ಕ ಸಹಾಯಕರು, ಆಡಳಿತ ಸಹಾಯಕರು ಮತ್ತು ಆರೋಗ್ಯ ವಿಸ್ತರಣಾ ಕೇಂದ್ರಗಳಿಗೆ ಶುಶ್ರೂಷಕರು ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ಪೂರೈಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್

ಕ್ರ.ಸಂ	ವಿವರಗಳು	ದಿನಾಂಕ
1	ಇ.ಎಂ.ಡಿ ಮೊತ್ತ 1.5%	ರೂ.: 3,70,984/–
2	ಇ– ಪ್ರೋಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ	ದಿನಾಂಕ: 16–08–2025 ಪೂರ್ವಾಹ್ನ 11.00
3	ಟೆಂಡರ್‌ನಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 26–08–2025
4	ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 30–08–2025 ಅಪರಾಹ್ನ 5.30
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 01–09–2025 ಪೂರ್ವಾಹ್ನ 11.00
6	ಟೆಂಡರ ಅಂದಾಜು ಮೊತ್ತ	ರೂ. 2,47,26,324.00/–

ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ,
ಉತ್ತರ ಕನ್ನಡ, ಕಾರವಾರ,

ಚಿಟಿಕೆ ಸುದ್ದಿ

ಪಾಕ್‌ನಲ್ಲಿ ದಿಢೀರ್ ಪ್ರವಾಹ: ಮೃತರ ಸಂಖ್ಯೆ 327ಕ್ಕೆ ಏರಿಕೆ

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಸಂಭವಿಸಿದ ದಿಢೀರ್ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 327ಕ್ಕೆ ಏರಿಕೆಯಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಯಿಂದಾಗಿ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಹಠಾತ್ ಪ್ರವಾಹ ಉಂಟಾಗಿದೆ. ಮಳೆ ಆಗಸ್ಟ್ 21ರವರೆಗೆ ಮುಂದುವರಿಯುವ ಸಾಧ್ಯತೆಯಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಶನಿವಾರ ತಿಳಿಸಿದೆ.

ಮೇಘಸ್ಫೋಟ, ಪ್ರವಾಹ ಸೇರಿ ಮಳೆ ಅನಾಹುತದಿಂದ ಜೂನ್ 26ರಿಂದ ಆಗಸ್ಟ್.16ರವರೆಗೆ 645 ಜನರು ಮೃತಪಟ್ಟಿದ್ದಾರೆ ಎಂದು ಪ್ರಾಧಿಕಾರ ಹೇಳಿದೆ.

ಮ್ಯಾನ್ಮಾರ್: ಸೇನಾ ದಾಳಿ–21 ಜನ ಸಾವು

ಬ್ಯಾಂಗ್‌ಕೊಕ್(ಎಪಿ): ಆಗ್ನೇಯ ಏಷ್ಯಾದ ಮ್ಯಾನ್ಮಾರ್‌ನ ಲಾಭದಾಯಕ ರತ್ನ ಗಣಿಗಾರಿಕೆಯ ಕೇಂದ್ರ ಸ್ಥಾನ ಮೊಗೋಕ್ ನಗರದ ಮೇಲೆ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಗರ್ಭಿಣಿ ಸೇರಿದಂತೆ ಕನಿಷ್ಠ 21 ಮಂದಿ ಸಾವಿಗೀಡಾಗಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಜನಾಂಗೀಯ ಬಂಡುಕೋರ ಪಡೆ, ಸ್ಥಳೀಯರು ಮತ್ತು ಮ್ಯಾನ್ಮಾರ್ ಸಾಮಾಜಿಕ ಮಾಧ್ಯಮಗಳು ಶನಿವಾರ ತಿಳಿಸಿವೆ.

2021ರ ಫೆಬ್ರವರಿಯಲ್ಲಿ ಮ್ಯಾನ್ಮಾರ್ ಸೇನೆ ಅಧಿಕಾರವನ್ನು ತನ್ನ ತೆಕ್ಕೆಗೆ ತಗೆದುಕೊಂಡ ನಂತರ ಇಲ್ಲಿನ ಜನಾಂಗೀಯ ಸಶಸ್ತ್ರ ಪಡೆಗಳಿಂದ ಈ ಪ್ರಾಂತ್ಯವನ್ನು ವಾಪಸ್ ಪಡೆದುಕೊಳ್ಳಲು ಸೇನೆಯು ಸರಣಿ ವಾಯುದಾಳಿಗಳನ್ನು ನಡೆಸಿದೆ. ಹಲವು ನಾಗರಿಕರು ಈ ದಾಳಿಗಳಿಗೆ ಬಲಿಯಾಗುತ್ತಿದ್ದಾರೆ.

ಗುರುವಾರ ರಾತ್ರಿ 8.30ರ ಸುಮಾರಿಗೆ ಸೇನೆ ದಾಳಿ ನಡೆಸಿದೆ ಎಂದು ಜನಾಂಗೀಯ ಬಂಡುಕೋರ ಸಂಘಟನೆ ತಾ ಆಂಗ್ ನ್ಯಾಷನಲ್ ಲಿಬರೇಷನ್ ಆರ್ಮಿ (ಟಿಎನ್‌ಎಲ್‌ಎ) ವಕ್ತಾರ ಲೇ ವೆ ಯಾಯೂ ತಿಳಿಸಿದ್ದಾರೆ.

ಬೌದ್ಧ ಮಂದಿರ ಗುರಿಯಾಗಿಸಿ ಜೆಟ್ ವಿಮಾನ ಮೂಲಕ ಬಾಂಬ್ ದಾಳಿ ಮಾಡಿದ್ದು, 16 ಮಹಿಳೆಯರೂ ಸೇರಿ 21 ಮಂದಿ ಸಾವಿಗೀಡಾಗಿದ್ದಾರೆ ಎಂದು ಸಾಮಾಜಿಕ ಮಾಧ್ಯಮಗಳು ವರದಿ ಮಾಡಿವೆ.

ಅಡಿಕೆ ಧಾರಣೆ

ಚನ್ನಗಿರಿ		ಹೊಸತು	26000-48500
ಕೋಕ	30000-64000	ಸಿದ್ದಾಪುರ	
ಹೊಸತು	27000-48500	ಬಿಳಿಗೋಟು	24599-31519
ಪುತ್ತೂರು		ಚಾಲಿ	34609-42099
ಕೋಕ	20000-28000		
ಕೋಕ	16719-19319		
ರಾಶಿ	43699-49989		
ಚಿಪ್ಪಟ್ಟ	30619-30619		

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100ಕ್ಕೆ	₹530
	12ಕ್ಕೆ	₹70
ಮೈಸೂರು	100ಕ್ಕೆ	₹538

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕಿ.ಜಿ)	₹290-605
ದ್ವಿತಳಿ (ಬಿ.ವಿ)	₹392-802

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹173

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1395 (1390)
ವನಸ್ಪತಿ	₹1265 (1260)

ಹೆಸರುಕಾಳು: ಕ್ವಿಂಟಲ್‌ಗೆ ₹10,059

ಜಿಲ್ಲೆಯಲ್ಲಿ ಪ್ರತಿ ಕ್ವಿಂಟಲ್‌ಗೆ ಸರಾಸರಿ ₹9,605ಕ್ಕೆ ಮಾರಾಟ

• ಬಸವರಾಜ ಹವಾಲ್ದಾರ

ಮುಖ್ಯಾಂಶಗಳು
- ನಿತ್ಯ 2 ಸಾವಿರ ಕ್ವಿಂಟಲ್ ಆವಕ
- ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ
- ರಾಶಿ ಮಾಡಲು ಮಳೆ ಅಡ್ಡಿ

ಬಾಗಲಕೋಟೆ: ಕಳೆದ ವರ್ಷ ಹೆಸರುಕಾಳು ಬೆಂಬಲ ಬೆಲೆಗಿಂತ ಕಡಿಮೆಗೆ ಮಾರಾಟವಾಗಿ, ರೈತರಿಗೆ ನಷ್ಟವಾಗಿತ್ತು. ಈ ಬಾರಿ ಉತ್ತಮ ಬೆಲೆಯಿದೆ. ಹೆಸರುಕಾಳು ಪ್ರತಿ ಕ್ವಿಂಟಲ್ ದರ ಸರಾಸರಿ ₹9,605 ಇದ್ದರೆ, ಉತ್ತಮ ಹೆಸರುಕಾಳು ದರ ಪ್ರತಿ ಕ್ವಿಂಟಲ್‌ಗೆ ₹10,059 ಇದೆ. ಕಳೆದ ವರ್ಷ ದರ ಕ್ವಿಂಟಲ್‌ಗೆ ₹7,500 ಇತ್ತು.

ಕೃಷಿ ಉತ್ಪನ್ನ ಮಾರುಕಟ್ಟೆಗೆ (ಎಪಿಎಂಸಿ) ಬರುತ್ತಿರುವ ಹೆಸರುಕಾಳಿಗೆ ಹೆಚ್ಚಿನ ಬೇಡಿಕೆಯಿದೆ. ಅದು ಮಹಾರಾಷ್ಟ್ರ, ತಮಿಳುನಾಡಿಗೂ ಪೂರೈಕೆಯಾಗುತ್ತದೆ. ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹೆಸರುಕಾಳು ಬಿತ್ತನೆಯಾಗಿದೆ.

‘ಎಪಿಎಂಸಿಗೆ ನಿತ್ಯ 2 ಸಾವಿರ ಕ್ವಿಂಟಲ್‌ಗೂ ಹೆಚ್ಚು ಹೆಸರುಕಾಳು ಆವಕವಾಗುತ್ತಿದೆ. ಸತತ ಮಳೆ ಕಾರಣ ರೈತರಿಗೆ ಹೆಸರುಕಾಳಿನ ರಾಶಿ ಮಾಡಲು ಸಾಧ್ಯವಾಗಿಲ್ಲ. ಮುಂದೆ ಆವಕ ಹೆಚ್ಚಾದಾಗ, ಬೆಲೆ ಹೇಗಿರುತ್ತದೆ ನೋಡಬೇಕು’ ಎಂದು ಎಪಿಎಂಸಿ ವ್ಯಾಪಾರಿ ಮಲ್ಲಿಕಾರ್ಜುನ ತಿಳಿಸಿದರು.

> **ಹೆಸರುಕಾಳು ಉತ್ತಮ ಬೆಲೆಗೆ ಮಾರಾಟವಾಗುತ್ತಿದೆ. ಇನ್ನೊಂದೆಡೆ ಮುಂಜಾಗ್ರತೆಯಾಗಿ ಬೆಂಬಲ ಬೆಲೆಯಡಿ ಖರೀದಿಸಲೂ ಅಗತ್ಯ ಸಿದ್ಧತೆ ನಡೆದಿದೆ**
> **ವಿ.ಡಿ. ಪಾಟೀಲ,** ಕಾರ್ಯದರ್ಶಿ, ಎಪಿಎಂಸಿ, ಬಾಗಲಕೋಟೆ

‘ಎಪಿಎಂಸಿಯಲ್ಲಿ ಹೆಸರುಕಾಳಿಗೆ ಉತ್ತಮ ಬೆಲೆ ಸಿಗುತ್ತಿರುವುದು ಸಂತಸ ತಂದಿದೆ. ಮುಂದೆ ಆವಕ ಹೆಚ್ಚಾದಾಗ ಬೆಲೆ ಕುಸಿಯಬಹುದು. ಸರ್ಕಾರ ಈಗಲೇ ಬೆಂಬಲ ಬೆಲೆಯಡಿ ಖರೀದಿಗೆ ಕೇಂದ್ರಗಳನ್ನು ಆರಂಭಿಸಬೇಕು’ ಎಂದು ಶಿರೂರಿನ ರೈತ ಶಿವಕುಮಾರ ರೆಡ್ಡಿ ಹೇಳಿದರು.

10 ದಿನದಲ್ಲಿ ಕ್ವಿಂಟಲ್‌ಗೆ ₹3,179 ಹೆಚ್ಚಳ

• ಮಲ್ಲಿಕಾರ್ಜುನ ನಾಲವಾರ

ಯಾದಗಿರಿ: ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಹೆಸರುಕಾಳಿಗೆ ಬಂಪರ್ ಬೆಲೆ ಬಂದಿದೆ. ಬೆಲೆಯು 10 ದಿನಗಳಲ್ಲಿ ಕ್ವಿಂಟಲ್‌ಗೆ ₹3,179 ಹೆಚ್ಚಾಗಿದೆ.

ಆಗಸ್ಟ್ 5ರಂದು ಹೆಸರುಕಾಳು ಕ್ವಿಂಟಲ್‌ಗೆ ಗರಿಷ್ಠ ದರ ₹6,531 ಇತ್ತು. ಆಗಸ್ಟ್ 16ಕ್ಕೆ ₹9,710ಕ್ಕೆ ಏರಿಕೆಯಾಗಿದೆ. ಇದು ಕೇಂದ್ರ ನಿಗದಿಪಡಿಸಿರುವ ಬೆಂಬಲ ಬೆಲೆಗಿಂತ (₹8,768) ಹೆಚ್ಚು. ಕಳೆದ ವರ್ಷ ಇದೇ ದಿನ (ಆ.16) ₹8,365 ಆಸುಪಾಸಿನಲ್ಲಿ ಹೆಸರುಕಾಳು ಮಾರಾಟ ಆಗಿತ್ತು.

ಹೆಸರುಕಾಳು ಆವಕ ಈಗ 2 ಸಾವಿರ ಕ್ವಿಂಟಲ್‌ಗೆ ತಲುಪಿದೆ. 11 ದಿನಗಳಲ್ಲಿ 13,302 ಕ್ವಿಂಟಲ್ ಹೆಸರು ಕಾಳು ಯಾದಗಿರಿ ಎಪಿಎಂಸಿಗೆ ಆವಕ ಆಗಿದೆ. ಯಾದಗಿರಿ ಜಿಲ್ಲೆ, ನೆರೆಯ ಜಿಲ್ಲೆಗಳು, ಪಕ್ಕದ ತೆಲಂಗಾಣ ರಾಜ್ಯದಿಂದಲೂ ಪೂರೈಕೆ ಆಗುತ್ತಿದೆ.

ಕಾರಣ ಏನು?: ‘ಜಿಲ್ಲೆಯಲ್ಲಿ ಕಳೆದ ವರ್ಷ 21,205 ಹೆಕ್ಟೇರ್ ಪ್ರದೇಶದಲ್ಲಿ ಹೆಸರುಕಾಳು ಬಿತ್ತನೆಯಾಗಿತ್ತು. ಇದು ಈ ವರ್ಷ 13,178 ಹೆಕ್ಟೇರ್ ಪ್ರದೇಶಕ್ಕೆ ಇಳಿದಿದೆ.

ವಾರದಿಂದ ಮಳೆ ಸುರಿಯುತ್ತಿದೆ. ಹೆಸರುಕಾಳುಗಳು ತೇವಾಂಶದಿಂದ ಕಪ್ಪಾಗಬಹುದು. ಮಳೆಗೂ ಮುನ್ನ ರಾಶಿಯಾಗಿರುವ ಗುಣಮಟ್ಟದ ಹೆಸರುಕಾಳಿಗೆ ಬೇಡಿಕೆ ಬಂದಿದೆ’ ಎಂದು ಸಹಾಯಕ ಕೃಷಿ ನಿರ್ದೇಶಕ ರಾಜಕುಮಾರ ‘ಪ್ರಜಾವಾಣಿ’ಗೆ ತಿಳಿಸಿದರು.

ಯಾದಗಿರಿ ಎಪಿಎಂಸಿ ಆವರಣದಲ್ಲಿ ಶನಿವಾರ ಆವಕ ಆಗಿರುವ ಹೆಸರು ಕಾಳನ್ನು ಕಾರ್ಮಿಕರು ಚೀಲದಲ್ಲಿ ತುಂಬುತ್ತಿದ್ದ ನೋಟ

> **ಇನ್ನೂ ನಾಲ್ಕೈದು ದಿನ ಮಳೆ ಬಂದರೆ ಹೆಸರು ಕಾಳು ಕಪ್ಪಾಗುವ ಸಾಧ್ಯತೆ ಇದೆ. ಆಗ ದರದಲ್ಲಿ ವ್ಯತ್ಯಾಸ ಆಗಬಹುದು**
> **ಶಿವಕುಮಾರ** ಎಪಿಎಂಸಿ ಕಾರ್ಯದರ್ಶಿ, ಯಾದಗಿರಿ

ಮತ್ತೆ ಏರಿಕೆ ಹಾದಿಯಲ್ಲಿ ಕಾಫಿ ಧಾರಣೆ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಮೇ ತಿಂಗಳಿಂದ ಈಚೆಗೆ ಕುಸಿಯುತ್ತಿದ್ದ ಕಾಫಿ ಧಾರಣೆಯು ಎರಡು ವಾರಗಳಿಂದ ಏರಿಕೆಯ ಹಾದಿಯಲ್ಲಿದೆ. ಇದು ಬೆಳೆಗಾರರಲ್ಲಿ ಭರವಸೆ ಮೂಡಿಸಿದೆ.

ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಧಾರಣೆ ವಾರದಲ್ಲಿ ಶೇ 18ರಷ್ಟು ಏರಿಕೆ ಕಂಡು, ಟನ್‌ಗೆ 4,067 ಡಾಲರ್‌ಗೆ ತಲುಪಿದೆ. ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಅರೇಬಿಕಾ ಕಾಫಿ ಶೇ 10ರಷ್ಟು ಏರಿಕೆ ಕಂಡು, ಪೌಂಡ್ ಒಂದಕ್ಕೆ 334 ಸೆಂಟ್ ಬೆಲೆ ಪಡೆದಿದೆ.

ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಬೆಲೆ ಕೆ.ಜಿ.ಗೆ ₹455ರಿಂದ ಹಾಗೂ ಅರೇಬಿಕಾ ಕೆ.ಜಿಗೆ ₹545ಕ್ಕೆ ಮಾರಾಟವಾಗುತ್ತಿದೆ. ಮೇ 3ನೇ ವಾರದಿಂದ ಸತತವಾಗಿ ಕುಸಿದಿದ್ದ ಕಾಫಿ ಬೆಲೆ ಬೆಳೆಗಾರರಲ್ಲಿ ಆತಂಕ ಮೂಡಿಸಿತ್ತು.

ಇದೀಗ ಕಾಫಿ ಬೆಲೆ ಏರಿಕೆಗೆ ಬ್ರೆಜಿಲ್‌ನ ಕೆಲ ಪ್ರದೇಶಗಳಲ್ಲಿ ಬಿದ್ದಿರುವ ಮಂಜು ಪ್ರಮುಖ ಕಾರಣ ಎನ್ನಲಾಗುತ್ತಿದೆ. ಜೊತೆಗೆ ಬ್ರೆಜಿಲ್ ವಾಣಿಜ್ಯ ಸಚಿವಾಲಯ ಕಳೆದ ವಾರ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ಜುಲೈ ತಿಂಗಳಲ್ಲಿ ಶೇ 20ಕ್ಕೂ ಕಡಿಮೆ ಪ್ರಮಾಣದಲ್ಲಿ ಕಾಫಿ ರಫ್ತು ಮಾಡಲಾಗಿದೆ. ಸೀ ಕೆಫೆ ಸಂಸ್ಥೆಯ ಪ್ರಕಾರ ಬ್ರೆಜಿಲ್ ದೇಶದ ಜುಲೈ ತಿಂಗಳ ರಫ್ತಿನಲ್ಲಿ ಅರೇಬಿಕಾ ಕಾಫಿ ಪ್ರಮಾಣ ಶೇ 21 ಮತ್ತು ರೊಬಸ್ಟಾ ಕಾಫಿ ಪ್ರಮಾಣ ಶೇ 49ಕ್ಕೆ ಕುಸಿದಿದೆ. ಇದರಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಉಂಟಾದ ಕೊರತೆ ಕೂಡ ಈಗಿನ ಕಾಫಿ ಬೆಲೆಯ ದಿಢೀರ್ ಏರಿಕೆಗೆ ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದೆಡೆ ಬ್ರೆಜಿಲ್‌ನಿಂದ ಅಮೆರಿಕಕ್ಕೆ ರಫ್ತಾಗುವ ಕಾಫಿ ಮೇಲೆ ಅಧ್ಯಕ್ಷ ಟ್ರಂಪ್ ಶೇ 50ರಷ್ಟು ಸುಂಕ ವಿಧಿಸಿದ್ದಾರೆ. ಇದರಿಂದಾಗಿ ರಫ್ತು ಮಾರುಕಟ್ಟೆಯಲ್ಲಿ ಸುಂಕದ ಬಗೆಗಿನ ಗೊಂದಲವು ಸದ್ಯಕ್ಕೆ ಕಾಫಿ ರಫ್ತು ಮತ್ತು ಬೆಲೆ ಮೇಲೆ ಗಮನಾರ್ಹ ಪರಿಣಾಮ ಬೀರುತ್ತಿದೆ.

ಕಳಸದಲ್ಲಿ ಸೊಂಪಾಗಿ ಬೆಳೆದಿರುವ ಅರೇಬಿಕಾ ಕಾಫಿ

ಭಾರತದ ಮೇಲೆ ಎರಡನೆಯ ಹಂತದ ಸುಂಕ ಇಲ್ಲ?

ನವದೆಹಲಿ (ಪಿಟಿಐ): ರಷ್ಯಾದಿಂದ ಕಚ್ಚಾ ತೈಲ ಖರೀದಿ ಮುಂದುವರಿಸಿರುವ ದೇಶಗಳ ಮೇಲೆ ಅಮೆರಿಕವು ಎರಡನೆಯ ಹಂತದ ತೆರಿಗೆಯನ್ನು ವಿಧಿಸದೆ ಇರಬಹುದು ಎಂಬ ಸೂಚನೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ.

‘ಅವರು (ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್) ಕಚ್ಚಾ ತೈಲದ ಗ್ರಾಹಕರೊಬ್ಬರನ್ನು ಕಳೆದುಕೊಂಡಿದ್ದಾರೆ. ಅದು ಭಾರತ... ಚೀನಾ ಕೂಡ ದೊಡ್ಡ ಮಟ್ಟದಲ್ಲಿ ಕಚ್ಚಾ ತೈಲ ಖರೀದಿಸುತ್ತಿದೆ... ನಾನು ಎರಡನೆಯ ಹಂತದ ತೆರಿಗೆ ವಿಧಿಸಿದರೆ ಅದು ಅವರ ಪಾಲಿಗೆ ಭಾರಿ ವಿನಾಶಕಾರಿ ಆಗುತ್ತದೆ. ನಾನು ಅದನ್ನು ಜಾರಿಗೆ ತರಬೇಕು ಎಂದಾದರೆ ತರುತ್ತೇನೆ. ಆದರೆ ಅದನ್ನು ಜಾರಿಗೊಳಿಸುವ ಸ್ಥಿತಿ ಬರಲಿಕ್ಕಿಲ್ಲ’ ಎಂದು ಟ್ರಂಪ್ ಅವರು ಹೇಳಿದ್ದಾರೆ.

ಫಾಕ್ಸ್ ನ್ಯೂಸ್ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ. ವ್ಲಾದಿಮಿರ್ ಪುಟಿನ್ ಅವರ ಜೊತೆ ಅಲಾಸ್ಕಾದಲ್ಲಿ ಸಭೆಯಲ್ಲಿ ಭಾಗಿಯಾಗುವುದಕ್ಕೂ ಮೊದಲು ಟ್ರಂಪ್ ಈ ಮಾತು ಹೇಳಿದ್ದಾರೆ.

ಟ್ರಂಪ್ ಮತ್ತು ಪುಟಿನ್ ಅವರ ನಡುವಿನ ಮಾತುಕತೆಯು ಸಕಾರಾತ್ಮಕವಾಗಿ ನಡೆಯದೆ ಇದ್ದರೆ, ರಷ್ಯಾದಿಂದ ಕಚ್ಚಾ ತೈಲ ಖರೀದಿಸಿದ್ದಕ್ಕೆ ಭಾರತದ ಮೇಲೆ ಎರಡನೆಯ ಹಂತದ ನಿರ್ಬಂಧಗಳು ಹೆಚ್ಚಬಹುದು ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಈಚೆಗೆ ಹೇಳಿದ್ದರು.

ಮುಂಬೈ ಧಾರಣೆ (ಶೇಂಗಾ)

16-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1263 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1325 (1320)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,200 (99,450)
ಬೆಳ್ಳಿ ಕೆ.ಜಿಗೆ	1,14,200 (1,14,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮುಂದೊಂದು ದಿನ ಒಂದೇ ಹಂತದ ಜಿಎಸ್‌ಟಿ?

ಮಧ್ಯಮ ವರ್ಗ, ಬಡವರು, ರೈತರು, ಎಂಎಸ್‌ಎಂಇ ವಲಯಕ್ಕೆ ಅನುಕೂಲ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ತರಲು ಉದ್ದೇಶಿಸಿರುವ ಬದಲಾವಣೆಗಳು ಮುಂದೊಂದು ಕಾಲಘಟ್ಟದಲ್ಲಿ ಒಂದೇ ಹಂತದ ತೆರಿಗೆ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈಗಿರುವ ಜಿಎಸ್‌ಟಿ ವ್ಯವಸ್ಥೆಯಲ್ಲಿ ಬದಲಾವಣೆ ತಂದು, ಎರಡು ಹಂತಗಳ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಇದು ಜಾರಿಗೆ ಬಂದರೆ ಬಹುತೇಕ ಸರಕುಗಳು ಮತ್ತು ಸೇವೆಗಳು ಶೇ 5 ಹಾಗೂ ಶೇ 18ರ ತೆರಿಗೆ ಹಂತದ ವ್ಯಾಪ್ತಿಗೆ ಬರಲಿವೆ.

ಈ ವ್ಯವಸ್ಥೆಯು ಅರ್ಥವ್ಯವಸ್ಥೆಗೆ ಹೊಸ ಚೈತನ್ಯ ನೀಡಲಿದೆ, ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಸುಂಕದ ದುಷ್ಪರಿಣಾಮವನ್ನು ಕಡಿಮೆ ಮಾಡುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಸ್ತಾವಿತ ಹೊಸ ತೆರಿಗೆ ಹಂತಗಳಿಗೆ ಜಿಎಸ್‌ಟಿ ಮಂಡಳಿಯ ಒಪ್ಪಿಗೆ ಅಗತ್ಯ. ಪ್ರಸ್ತಾವಿತ ಬದಲಾವಣೆಗಳನ್ನು ‘ಮುಂದಿನ ತಲೆಮಾರಿನ ಜಿಎಸ್‌ಟಿ’ ಎಂದು ಬಣ್ಣಿಸಲಾಗಿದೆ.

ಪ್ರಸ್ತಾವಿತ ಬದಲಾವಣೆಗಳು, ದಿನನಿತ್ಯದ ಬಳಕೆಯ ಬಹುತೇಕ ಸರಕುಗಳನ್ನು, ಉತ್ಪನ್ನಗಳನ್ನು ಕೆಳಗಿನ ತೆರಿಗೆ ಹಂತಕ್ಕೆ ತರುತ್ತವೆ. ಇದರಿಂದ ದಿನಬಳಕೆಯ ಉತ್ಪನ್ನಗಳ ಬೆಲೆ ತಗ್ಗುತ್ತದೆ. ಆಗ ಮಾರುಕಟ್ಟೆಯಲ್ಲಿ ಅವುಗಳಿಗೆ ಬೇಡಿಕೆ ಹೆಚ್ಚುತ್ತದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

‘ಮಧ್ಯಮ ವರ್ಗದವರು, ಬಡವರು, ರೈತರು ಮತ್ತು ಎಂಎಸ್‌ಎಂಇ ವಲಯವನ್ನು ಗಮನದಲ್ಲಿ ಇಟ್ಟುಕೊಂಡು ನಾವು ಮುಂದಿನ ತಲೆಮಾರಿನ ಜಿಎಸ್‌ಟಿ ವ್ಯವಸ್ಥೆಯ ಬಗ್ಗೆ ಸಲಹೆ ನೀಡಿದ್ದೇವೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ವ್ಯವಸ್ಥೆಯು ಜಾರಿಗೆ ಬಂದು, ಭಾರತವು ಅಭಿವೃದ್ಧಿ ಹೊಂದಿದ ದೇಶ ಆದ ನಂತರದಲ್ಲಿ ಒಂದೇ ಹಂತದ ತೆರಿಗೆ ವ್ಯವಸ್ಥೆ ಇರುವ ಜಿಎಸ್‌ಟಿ ಬಗ್ಗೆ ಆಲೋಚನೆ ನಡೆಸಬಹುದು ಎಂದು ಅವರು ವಿವರಿಸಿದ್ದಾರೆ. ಆದಾಯ ಹಾಗೂ ಕೊಳ್ಳುವ ಶಕ್ತಿಯಲ್ಲಿ ಏಕರೂಪತೆ ಇರುವ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಾತ್ರ ಒಂದೇ ಹಂತದ ತೆರಿಗೆ ವ್ಯವಸ್ಥೆಯು ಸರಿಹೊಂದುತ್ತದೆ ಎಂದು ಅವರು ಹೇಳಿದ್ದಾರೆ.

ಈಗ ಶೇ 12ರಷ್ಟು ತೆರಿಗೆ ಇರುವ ಉತ್ಪನ್ನಗಳಾದ ಬೆಣ್ಣೆ, ಹಣ್ಣಿನರಸ, ಒಣಹಣ್ಣುಗಳು ಸೇರಿದಂತೆ ಈ ಹಂತದಲ್ಲಿನ ಶೇ 99ರಷ್ಟು ಉತ್ಪನ್ನಗಳು ಶೇ 5ರಷ್ಟು ತೆರಿಗೆಯ ಹಂತಕ್ಕೆ ಬರಲಿವೆ. ಈಗ ಶೇ 28ರಷ್ಟು ತೆರಿಗೆ ಇರುವ ಎಲೆಕ್ಟ್ರಾನಿಕ್ ಉತ್ಪನ್ನಗಳಾದ ಹವಾನಿಯಂತ್ರಕಗಳು, ಟಿ.ವಿ., ಫ್ರಿಜ್, ವಾಷಿಂಗ್ ಮೆಷಿನ್‌ನಂತಹವು ಶೇ 18ರಷ್ಟು ತೆರಿಗೆಯ ಹಂತಕ್ಕೆ ಬರಲಿವೆ.

ಗಾಜಾ ಪಟ್ಟಿಯಿಂದ ಪ್ಯಾಲೆಸ್ಟೀನಿಯರ ಸ್ಥಳಾಂತರಕ್ಕೆ ಸಿದ್ಧತೆ

ಟೆಲ್ ಅವೀವ್ (ಎಪಿ): ಗಾಜಾ ಪಟ್ಟಿಯಿಂದ 20 ಲಕ್ಷದಷ್ಟು ಪ್ಯಾಲೆಸ್ಟೀನಿಯರನ್ನು ಬೇರೆ ದೇಶಗಳಿಗೆ ಸಾಮೂಹಿಕ ಸ್ಥಳಾಂತರ ಮಾಡುವುದಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಯೋಜನೆಯನ್ನು ಕಾರ್ಯಗತಗೊಳಿಸಲು ಇಸ್ರೇಲ್ ಮುಖಂಡರು ಸಿದ್ಧತೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ಯಾಲೆಸ್ಟೀನಿಯರು ಸ್ವಯಂಪ್ರೇರಿತವಾಗಿ ಸ್ಥಳಾಂತರಗೊಳ್ಳಲು ಅನುಕೂಲವಾಗುವಂತೆ ಗಾಜಾ ಪಟ್ಟಿಯಲ್ಲಿ ಮಾನವೀಯ ನೆರವಿನ ಕ್ರಮಗಳನ್ನು ಇಸ್ರೇಲ್ ಕೈಗೊಂಡಿದೆ. ಸ್ಥಳಾಂತರಕ್ಕೆ ಸಂಬಂಧಿಸಿ ಆಫ್ರಿಕಾ ದೇಶಗಳ ಮುಖಂಡರೊಂದಿಗೂ ಇಸ್ರೇಲ್ ಮಾತುಕತೆ ನಡೆಸಿದೆ. ಈ ಮಧ್ಯೆ, ಪ್ಯಾಲೆಸ್ಟೀನಿಯರನ್ನು ಗಾಜಾ ಪಟ್ಟಿಯಿಂದ ಬಲವಂತವಾಗಿ ಹೊರ ಹಾಕುವುದು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ ಎಂದು ಕೆಲವು ಸಂಘಟನೆಗಳು ಆರೋಪಿಸಿವೆ.

‘ಹಮಾಸ್ ಅನ್ನು ನಿಶ್ಯಸ್ತ್ರೀಕರಣಗೊಳಿಸಿ, ಗಾಜಾವನ್ನು ಬಂಡುಕೋರರಿಂದ ಮುಕ್ತಗೊಳಿಸುತ್ತೇವೆ. ನಂತರ ಡೊನಾಲ್ಡ್ ಟ್ರಂಪ್ ಅವರ ಯೋಜನೆಯಂತೆ ಸ್ವಯಂಪ್ರೇರಿತ ಸ್ಥಳಾಂತರಕ್ಕೆ ಅವಕಾಶ ನೀಡುತ್ತೇವೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಈ ಬಗ್ಗೆ ಚರ್ಚೆಗೆ ಸದಾ ಸಿದ್ಧರಿದ್ದೇವೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

‘ಇಸ್ರೇಲ್ ಗಾಜಾ ಪಟ್ಟಿಯ ಮೇಲೆ ಅಧಿಕಾರ ಸ್ಥಾಪಿಸಿದ ನಂತರ, ಇಲ್ಲಿಗೆ ಮರಳಿ ಬರುವುದರ ಬಗ್ಗೆ ನಮಗೆ ಖಾತರಿಯಿಲ್ಲ. ಹೀಗಾಗಿ ಸ್ವದೇಶವನ್ನು ತೊರೆಯುವುದು ಸ್ವಯಂ ಪ್ರೇರಿತ ನಿರ್ಧಾರವಲ್ಲ’ ಎನ್ನುತ್ತಾರೆ ಪ್ಯಾಲೆಸ್ಟೀನಿಯರು.

> **ಗಾಜಾ ಪಟ್ಟಿ ತೊರೆಯಲು ಬಯಸುವ ಪ್ಯಾಲೆಸ್ಟೀನಿಯರಿಗಾಗಿ ವಿಶೇಷ ಯೋಜನೆಯೊಂದನ್ನು ಸಿದ್ಧಪಡಿಸುವಂತೆ ಇಸ್ರೇಲ್ ಸೇನೆಗೆ ಸೂಚನೆ ನೀಡಿದ್ದೇನೆ**
> **ಇಸ್ರೇಲ್ ಕಾಟ್ಸ್,** ಇಸ್ರೇಲ್‌ನ ರಕ್ಷಣಾ ಸಚಿವ

> **ಸ್ಥಳಾಂತರಕ್ಕೆ ಇದು ತಕ್ಕ ಸಮಯ ಎನಿಸುತ್ತದೆ. ಯುದ್ಧದ ನಿಯಮದ ಅನ್ವಯ ಈ ಪ್ರಕ್ರಿಯೆ ನಡೆಯುತ್ತದೆ. ನಾವು ಅವರಿಗೆ ಹೊರಗೆ ಹೋಗಲು ಅವಕಾಶ ನೀಡುತ್ತಿದ್ದೇವೆ**
> **ಬೆಂಜಮಿನ್ ನೆತನ್ಯಾಹು** ಇಸ್ರೇಲ್ ಪ್ರಧಾನಿ

> **ಇದು ನಮ್ಮ ನೆಲ. ನಮಗೆ ಬೇರೆಲ್ಲೂ ಹೋಗಲು ಜಾಗವಿಲ್ಲ. ನಾವು ಇಲ್ಲೇ ಹುಟ್ಟಿದ್ದೇವೆ, ಇಲ್ಲೇ ಸಾಯುತ್ತೇವೆಯೇ ಹೊರತು ಶರಣಾಗುವುದಿಲ್ಲ**
> **ಇಸ್ಮಾಯಿಲ್ ಜೈದ್,** ಗಾಜಾದಲ್ಲಿರುವ ಪ್ಯಾಲೆಸ್ಟೀನಿಯನ್

‘ಜವಳಿ ವಲಯದ 30 ಲಕ್ಷ ಉದ್ಯೋಗಕ್ಕೆ ಕುತ್ತು’

ಚೆನ್ನೈ (ಪಿಟಿಐ): ಅಮೆರಿಕವು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ಹೇರಿರುವುದು ತಮಿಳುನಾಡಿನ ಜವಳಿ ವಲಯದ ಅಂದಾಜು 30 ಲಕ್ಷ ಉದ್ಯೋಗಿಗಳ ಕೆಲಸದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

2024–25ರ ಆರ್ಥಿಕ ವರ್ಷದಲ್ಲಿ ದೇಶದ ಜವಳಿ ಉತ್ಪನ್ನಗಳ ರಫ್ತಿನಲ್ಲಿ ತಮಿಳುನಾಡು ಶೇ 28ರಷ್ಟು ಪಾಲನ್ನು ಹೊಂದಿದ್ದು, ದೇಶದ ಇತರೆ ರಾಜ್ಯಗಳಿಗಿಂತ ಹೆಚ್ಚಿನ ಕೊಡುಗೆ ನೀಡಿದೆ. ಈ ವಲಯವು 75 ಲಕ್ಷ ಉದ್ಯೋಗಿಗಳನ್ನು ಹೊಂದಿದ್ದು, ಸುಂಕ ಹೆಚ್ಚಳದಿಂದಾಗಿ ಅಂದಾಜು 30 ಲಕ್ಷ ಉದ್ಯೋಗಿಗಳ ಉದ್ಯೋಗವು ಅಪಾಯದಲ್ಲಿದೆ ಎಂದು ಶನಿವಾರ ಹೇಳಿದ್ದಾರೆ.

ಜವಳಿ ವಲಯಕ್ಕೆ ಶೀಘ್ರ ನೆರವಿನ ಅಗತ್ಯವಿದೆ. ಜವಳಿ ಉತ್ಪನ್ನಗಳನ್ನು ಜಿಎಸ್‌ಟಿಯ ಶೇ 5ರ ಹಂತದಲ್ಲಿ ತರಬೇಕು, ಎಲ್ಲಾ ಬಗೆಯ ಹತ್ತಿ ಆಮದಿಗೆ ಸುಂಕ ವಿನಾಯಿತಿ ನೀಡಬೇಕು ಎಂದು ಕೇಂದ್ರವನ್ನು ಕೋರಿದ್ದಾರೆ.

ಪ್ರಧಾನಿಗೆ ಪತ್ರ: ದೇಶದ ಸರಕುಗಳ ಮೇಲೆ ಅಮೆರಿಕದ ಸುಂಕದ ಹೆಚ್ಚಳವು ಕೈಗಾರಿಕೆಗಳು ಮತ್ತು ಉದ್ಯೋಗದ ಮೇಲೆ ಪರಿಣಾಮ ಬೀರಲಿದೆ. ಹೀಗಾಗಿ, ಕೇಂದ್ರ ಸರ್ಕಾರವು ವಿಶೇಷ ಹಣಕಾಸಿನ ನೆರವನ್ನು ನೀಡಬೇಕೆಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಟಾಲಿನ್ ಪತ್ರ ಬರೆದಿದ್ದಾರೆ.

ಯುದ್ಧ ಸ್ಥಗಿತ: ನಿರ್ಧಾರಕ್ಕೆ ಬಾರದ ಟ್ರಂಪ್–ಪುಟಿನ್

ಒಂದನೇ ಪುಟದಿಂದ...

ಪುಟಿನ್ ಅವರೊಂದಿಗೆ ನಡೆಸಿದ ಮಾತುಕತೆಯ ವಿವರಗಳನ್ನು ನೀಡಲು ಝೆಲೆನ್‌ಸ್ಕಿ ಮತ್ತು ಐರೋಪ್ಯ ದೇಶಗಳ ನಾಯಕರನ್ನು ಆಹ್ವಾನಿಸುವುದಾಗಿ ಟ್ರಂಪ್ ಅವರು ಹೇಳಿದ್ದಾರೆ. ಮಾತುಕತೆ ಬಳಿಕ ಟ್ರಂಪ್ ಅವರೊಂದಿಗೆ ಝೆಲೆನ್‌ಸ್ಕಿ ಅವರು ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಆ ಬಳಿಕ ಟ್ರಂಪ್ ಅವರು ಐರೋಪ್ಯ ನಾಯಕರ ಬಳಿಯೂ ಮಾತುಕತೆ ನಡೆಸಿದ್ದಾರೆ. ಈ ಗುಂಪು ಕರೆಯ ವೇಳೆ ಝೆಲೆನ್‌ಸ್ಕಿ ಅವರೂ ಇದ್ದರು.

ಮಾತುಕತೆಯ ಬಳಿಕ ಟ್ರಂಪ್ ಮತ್ತು ಪುಟಿನ್ ಅವರು ಜಂಟಿ ಪತ್ರಿಕಾಗೋಷ್ಠಿ ನಡೆಸಿದರೂ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ. ಅಲಾಸ್ಕದಿಂದ ಹೊರಡುವ ವೇಳೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಟ್ರಂಪ್, ‘ಕೆಲಸ ಮಾಡಿ ಮುಗಿಸುವುದು ಈಗ ಝೆಲೆನ್‌ಸ್ಕಿ ಅವರ ಜವಾಬ್ದಾರಿ. ಆದರೆ, ಐರೋಪ್ಯ ದೇಶಗಳು ಈ ಮಾತುಕತೆಯಲ್ಲಿ ಭಾಗವಹಿಸುವುದು ಬಹುತೇಕ ಖಚಿತ’ ಎಂದರು.

‘ನಾನೇ ಯುದ್ಧ ನಿಲ್ಲಿಸಿದೆ’

‘ಯುದ್ಧ ಬಹಳ ಕೆಟ್ಟದು. ವ್ಯಾಪಾರದ ವಿಷಯದ ಮೂಲಕ ನಾನು ಭಾರತ ಮತ್ತು ಪಾಕಿಸ್ತಾನದ ಯುದ್ಧವನ್ನು ನಿಲ್ಲಿಸಿದೆ. ನಾನು ಎಲ್ಲ ದೇಶಗಳೊಂದಿಗೂ ವ್ಯಾಪಾರದ ಮೂಲಕವೇ ಮಾತುಕತೆ ನಡೆಸುವುದು. ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ನಾನು ಅವರ ಬಳಿ ದೂರವಾಣಿ ಮೂಲಕ ಮಾತನಾಡುತ್ತೇನೆ ಎಂದರೆ, ನಾನು ಆ ದೇಶಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿರುವ ಕಾರಣಕ್ಕಾಗಿ, ‘ಶಾಂತಿ ಸ್ಥಾಪಿಸಿ. ಇಲ್ಲವಾದಲ್ಲಿ ನಾನು ವ್ಯಾಪಾರ ಮಾಡುವುದಿಲ್ಲ’ ಎಂದು ಹೇಳುತ್ತೇನೆ’ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದರು.

> **ನಮ್ಮ ನಡುವಿನ ಮಾತುಕತೆಯು ಉಕ್ರೇನ್ ಸಮಸ್ಯೆಯನ್ನು ಬಗೆಹರಿಸುತ್ತದೆ ಮಾತ್ರವಲ್ಲ. ರಷ್ಯಾ ಮತ್ತು ಅಮೆರಿಕ ಮಧ್ಯದ ವ್ಯಾಪಾರ ಹಾಗೂ ಸಂಬಂಧವೂ ಪುನಃ ಆರಂಭಗೊಳ್ಳಲಿದೆ**
> **ವ್ಲಾದಿಮಿರ್ ಪುಟಿನ್,** ರಷ್ಯಾ ಅಧ್ಯಕ್ಷ

ಉಕ್ರೇನ್–ರಷ್ಯಾ ಯುದ್ಧ: ಪುಟಿನ್ ಜೊತೆ ಮಾತುಕತೆ ವಿಫಲ • ಮುಂದಿನ ದಾರಿಯತ್ತ ಅಮೆರಿಕ ಚಿತ್ತ

ಕದನ ವಿರಾಮವಲ್ಲ ಯುದ್ಧ ಅಂತ್ಯಕ್ಕೆ ಯತ್ನ

ವಾಷಿಂಗ್ಟನ್/ಕೀವ್ (ಎಎಫ್‌ಪಿ): ಉಕ್ರೇನ್–ರಷ್ಯಾ ನಡುವೆ ಕದನ ವಿರಾಮಕ್ಕೆ ಬರುವ ಬಗ್ಗೆ ಒಪ್ಪಂದ ಮಾಡಿಕೊಳ್ಳುವ ಬದಲು ಯುದ್ಧವನ್ನೇ ಅಂತ್ಯಗೊಳಿಸುವ ಒಪ್ಪಂದ ವೊಂದನ್ನು ರೂಪಿಸಲು ಅಮೆರಿಕ ಮುಂದಾಗಿದೆ. ಇದಕ್ಕೆ ಐರೋಪ್ಯ ದೇಶಗಳು ಬೆಂಬಲ ಸೂಚಿಸಿವೆ.

ಟ್ರಂಪ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ ಬಳಿಕ ಪ್ರತಿಕ್ರಿಯಿಸಿದ ಐರೋಪ್ಯ ಒಕ್ಕೂಟದ ದೇಶಗಳು, ‘ಮುಂದಿನ ಮಾತುಕತೆಯಲ್ಲಿ ಟ್ರಂಪ್ ಮತ್ತು ಪುಟಿನ್ ಮಾತ್ರ ಇರಬಾರದು. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೂ ಇರಬೇಕು’ ಎಂದು ಆಗ್ರಹಿಸಿವೆ.

‘ಟ್ರಂಪ್ ಮತ್ತು ಝೆಲೆನ್‌ಸ್ಕಿ ಅವರೊಂದಿಗೆ ಕೆಲಸ ಮಾಡಲು ನಾವು ಸಿದ್ಧರಿದ್ದೇವೆ. ಟ್ರಂಪ್–ಪುಟಿನ್–ಝೆಲೆನ್‌ಸ್ಕಿ ಮೂವರೂ ಸೇರಿ ಮಾತುಕತೆ ನಡೆಸಬೇಕು. ನ್ಯಾಟೊಗೆ ಸೇರುವ ಉಕ್ರೇನ್‌ನ ಯತ್ನಕ್ಕೆ ರಷ್ಯಾವು ತಡೆವೊಡ್ಡಬಾರದು’ ಎಂದು ಐರೋಪ್ಯ ಒಕ್ಕೂಟವು ಹೇಳಿಕೆ ಬಿಡುಗಡೆ ಮಾಡಿದೆ.

‘ಉಕ್ರೇನ್‌ನಲ್ಲಿ ಯುದ್ಧ ನಿಲ್ಲುವವರೆಗೂ ನಾವು ರಷ್ಯಾದ ಮೇಲೆ ಒತ್ತಡ ಹೇರುವ ಕ್ರಮವನ್ನು ಮುಂದುವರಿಸಲಿದ್ದೇವೆ. ರಷ್ಯಾದ ಮೇಲೆ ಇನ್ನಷ್ಟು ನಿರ್ಬಂಧ ಹೇರುತ್ತೇವೆ. ರಷ್ಯಾದ ಯುದ್ಧದ ಆರ್ಥಿಕತೆಯು ನೆಲಸಮವಾಗಬೇಕು ಮತ್ತು ಶಾಂತಿ ಸ್ಥಾಪನೆಯಾಗಬೇಕು’ ಎಂದು ಒಕ್ಕೂಟ ಹೇಳಿದೆ.

ಕೆಂಪುಹಾಸು: ಕಳೆದ 10 ದಶಕಗಳಲ್ಲಿ ಇದೇ ಮೊದಲ ಬಾರಿಗೆ ರಷ್ಯಾ ಅಧ್ಯಕ್ಷರೊಬ್ಬರು ಅಮೆರಿಕ ಪ್ರವಾಸ ಕೈಗೊಂಡಿದ್ದರು. ಪುಟಿನ್ ಅವರಿಗೆ ಅಲಾಸ್ಕದಲ್ಲಿ ಕೆಂಪುಹಾಸಿನ ಸ್ವಾಗತವನ್ನೂ ಕೋರಲಾಗಿತ್ತು. ಆದರೂ ಯುದ್ಧ ಅಂತ್ಯಗೊಳಿಸುವ ಸಂಬಂಧ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ‘ಆದರೆ, ಮುಂದಿನ ಮಾತುಕತೆಯು ರಷ್ಯಾದಲ್ಲಿ ಆಗಬೇಕು’ ಎಂದು ಪುಟಿನ್ ಹೇಳಿದ್ದಾರೆ.

ನ್ಯಾಟೊ ರೀತಿಯಲ್ಲಿ ಒಪ್ಪಂದ ರೂಪಿಸಲು ಮುಂದಾದ ಅಮೆರಿಕ

‘ಉಕ್ರೇನ್–ರಷ್ಯಾ ಯುದ್ಧ ನಿಲ್ಲಿಸಲು ನ್ಯಾಟೊ ದೇಶಗಳ ಮಧ್ಯೆ ಇರುವ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಒಪ್ಪಂದದಂತೆಯೇ ಒಪ್ಪಂದವೊಂದನ್ನು ರೂಪಿಸಲು ಅಮೆರಿಕ ಮುಂದಾಗಿದೆ’ ಎಂದು ಇಟಲಿಯ ರಾಯಭಾರ ಕಚೇರಿಯ ಮೂಲಗಳು ಶನಿವಾರ ಹೇಳಿವೆ.

ನ್ಯಾಟೊ ದೇಶಗಳ ಮಧ್ಯೆ ಆರ್ಟಿಕಲ್ 5 ಎನ್ನುವ ಒಪ್ಪಂದವಿದೆ. ‘ನ್ಯಾಟೊ ಸದಸ್ಯ ದೇಶವೊಂದರ ಮೇಲೆ ಹೊರಗಿನವರು ಯಾರೇ ಯುದ್ಧ ಸಾರಿದರೂ ಆ ಸದಸ್ಯ ದೇಶದ ಬೆಂಬಲಕ್ಕೆ ಎಲ್ಲ ನ್ಯಾಟೊ ಸದಸ್ಯ ದೇಶಗಳು ಬರಬೇಕು’ ಎನ್ನುತ್ತದೆ ಆರ್ಟಿಕಲ್ 5.

‘ನ್ಯಾಟೊ ಸೇರುವುದು ಬೇಡ. ಆದರೆ, ಆರ್ಟಿಕಲ್ 5ನಂಥ ಒಪ್ಪಂದ ಇರಬಹುದು ಎನ್ನುವ ಒಪ್ಪಂದವೊಂದನ್ನು ಅಮೆರಿಕವು ರೂಪಿಸಿದೆ. ಈ ಒಪ್ಪಂದಕ್ಕೆ ಪುಟಿನ್ ಅವರೂ ಒಪ್ಪಿಗೆ ನೀಡಿದ್ದಾರೆ ಎನ್ನಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಐರೋಪ್ಯ ದೇಶಗಳೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದಾಗ, ಟ್ರಂಪ್ ಅವರು ಈ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. ಈ ಬಗ್ಗೆ ಚರ್ಚೆ ನಡೆಸಬಹುದು ಎಂದು ಐರೋಪ್ಯ ದೇಶಗಳೂ ಹೇಳಿವೆ’ ಎಂದೂ ಮೂಲಗಳು ತಿಳಿಸಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

9ನೇ ವರ್ಷದ ಚಿರಸ್ಮರಣೆ

ಶ್ರೀ. ಎ. ಕೃಷ್ಣಪ್ಪನವರು
ನಿಧನ: 17–08–2016
ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷವಾಯಿತು. ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ. ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ.
ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ ಶ್ರೀಮತಿ. ಶಾಂತಮ್ಮ, ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು ಮತ್ತು ಬಂಧುಮಿತ್ರರು.

ಪ್ರಥಮ ವರ್ಷದ ಪುಣ್ಯಸ್ಮರಣೆ

ಬಿ.ಎಂ. ಪ್ರಕಾಶ್
11-05-1952 - 25-10-2024
Retd. BBMP Health Inspector (Senior)
ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ ಮಕ್ಕಳು, ಕುಟುಂಬವರ್ಗ ಮತ್ತು ಬಂಧು–ಮಿತ್ರರು

10ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
(ದಿ॥ ಶ್ರೀ ಸಿದ್ಧಗಂಗಯ್ಯನವರ ಧರ್ಮಪತ್ನಿ)
ಜನನ: 20.04.1953 • ನಿಧನ: 17.08.2016
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Mysore Road

MY OWN PROPERTY
LAND FOR SALE
9 ACRES GARDEN LAND
MYSORE - OOTY HIGHWAY TO SITE 4.5KM
MYSORE ORR TO 28 KMS
PER ACRE ₹50 LAKHS
89888 31999

Agricultural Land

Davangere

AGRICULTURAL LANDS 4-05 ACRES and 0-27 GUNTAS for Sale in Bannikodu Village, Harihara. Contact 7795494932

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈವಾಹಿಕ

Brides Wanted

Hindu

BRIDE WANTED FOR A DIVORCEE
Well settled [Business] having own house in mysore lingayat family invites alliance for their son 45yr's 5.7" B'com seeking beautiful girl from a respectable equivalent family [caste no bar]
9900160390

ಉದ್ಯೋಗಾವಕಾಶ

General

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಜಿಲ್ಲೆಯ ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಎಸಿ ಕಚೇರಿಯಿಂದ ಭೂ ಕಂದಾಯ ದಾಖಲೆಗಳ ಖರೀದಿಗಾಗಿ ನಾವು ಭೂ ದಾಖಲೆ ಸಂಪರ್ಕ ಕಾರ್ಯ ನಿರ್ವಾಹಕರನ್ನು ನೇಮಿಸಿಕೊಳ್ಳುತ್ತಿದ್ದೇವೆ. ಸ್ಥಳ: ಆರ್.ಆರ್. ನಗರ, ಬೆಂಗಳೂರು. ದೂ: 9535486707

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಆರ್.ಆರ್. ನಗರದ ಕಚೇರಿಯಲ್ಲಿ ಕೆಲಸ ಮಾಡಲು, ಭೂ ದಾಖಲೆ ಕಾರ್ಯ ನಿರ್ವಾಹಕ ಹುದ್ದೆಗೆ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ತಾಲೂಕು ಕಚೇರಿ, ಎಸಿಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿಯ ಭೂ ದಾಖಲೆಗಳು ಮತ್ತು ಕಂದಾಯ ದಾಖಲೆಗಳ ಜ್ಞಾನ ಮತ್ತು ತಿಳುವಳಿಕೆ ಕಡ್ಡಾಯವಾಗಿದೆ. ಸಂಪರ್ಕಿಸಿ: +919535486707

ಪ್ರವಾಸ

Travel Agencies

ದಸರಾ ವಿಶೇಷ 23/09/25ರಿಂದ 30/09/2025ರ ವರೆಗೆ ನೇಪಾಳ ಪಶುಪತಿನಾಥ ಮುಕ್ತಿನಾಥ್ ಕಾಶಿ ಅಯೋಧ್ಯೆ ಎಲ್ಲಾ ಸೇರಿ 51000/ ಶ್ರೀರಾಮ್ ಟೂರ್: 9108933383

Travel

ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿಯಿಂದ ಪಿತೃಪಕ್ಷ ಪ್ರಯುಕ್ತ 10.09.2025 02.10.2025 ಕಾಶಿ,ಅಯೋಧ್ಯ,ಬುದ್ಧಗಯಾ 19.09.2025 08.10.2025 ಚಾರ್‌ಧಾಮ ಪ್ರವಾಸ. 03.10.2025 ನೇಪಾಳ ಮುಕ್ತಿನಾಥ,ಪೋಕ್ರಾ,ಲುಂಬಿನಿ 26.10.2025 23.11.2025 ಸೋಮನಾಥ ದ್ವಾರಕಾ ಮಹಂಕಾಲೇಶ್ವರ ಓಂಕಾರೇಶ್ವರ ದಕ್ಷಿಣಭಾರತ ಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. 26574131 8431888138 8317446683 9686708171

ಚಾರ್‌ಧಾಮ್ ಯಾತ್ರೆ 14 ದಿನಗಳು. ಕಾಶಿ,ಕಲ್ಕತ್ತಾ ಭುವನೇಶ್ವರ್‌ಯಾತ್ರೆ 10 ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.3 9448294477 9845311899

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | 080-45557163/164

ಚಿಟಿಕೆ ಸುದ್ದಿ

ಮೊಸರು ಗಡಿಗೆ ಉತ್ಸವ: ಇಬ್ಬರ ಸಾವು

ಮುಂಬೈ (ಪಿಟಿಐ): ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮುಂಬೈನ ಮಾನ್ ಖುರ್ದ್ ಹಾಗೂ ಘಾಟ್‌ಕೋಪರ್‌ನಲ್ಲಿ ನಡೆದ ಮೊಸರು ಗಡಿಗೆ ಒಡೆಯುವ ಧಾರ್ಮಿಕ ಉತ್ಸವದ ವೇಳೆ ಮೇಲಿಂದ ಬಿದ್ದು ಇಬ್ಬರು ಮೃತಪಟ್ಟಿದ್ದಾರೆ ಮತ್ತು 95 ಮಂದಿ ಗಾಯಗೊಂಡಿದ್ದಾರೆ.

ವಾಣಿಜ್ಯ ನಗರಿ ಮುಂಬೈ, ಠಾಣೆ ಮತ್ತಿತರ ಭಾಗಗಳಲ್ಲಿ ಭಾರಿ ಮಳೆಯ ನಡುವೆಯೂ 'ದಹಿ ಹಂಡಿ' ಉತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಹಲವು ಕಡೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಭೇಟಿ ನೀಡಿದರು.

ಮಿದುಳು ಸೋಂಕು: ಸಾವು

ಕೋಯಿಕ್ಕೋಡ್ (ಪಿಟಿಐ): ಮಿದುಳು ಸೋಂಕಿನಿಂದ (ಅಮೀಬಿಕ್ ಎನ್ಸೆಫಲಿಟಿಸ್) ಉತ್ತರ ಕೇರಳದ ಜಿಲ್ಲೆಯೊಂದರ ಒಂಬತ್ತು ವರ್ಷದ ಬಾಲಕಿಯೊಬ್ಬಳು ಎರಡು ದಿನದ ಹಿಂದೆ ಮೃತಪಟ್ಟಿದ್ದಾಳೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಶನಿವಾರ ದೃಢಪಡಿಸಿದ್ದಾರೆ.



ಜ್ವರದಿಂದ ಬಳಲುತ್ತಿದ್ದ ಬಾಲಕಿಯನ್ನು ಆಗಸ್ಟ್ 13ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯವು ತೀವ್ರವಾಗಿ ಹದಗೆಟ್ಟಿದ್ದರಿಂದ 14ರಂದೇ ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಗಿತ್ತು. ಆಕೆ ಅದೇ ದಿನ ಮೃತಪಟ್ಟಿದ್ದಾಳೆ ಎಂದು ಮಾಹಿತಿ ನೀಡಿದ್ದಾರೆ.

26 ವರ್ಷದ ಹಿಂದೆ ಹತ್ಯೆ: ಬಂಧನ

ನವದೆಹಲಿ (ಪಿಟಿಐ): ಸೌದಿ ಅರೇಬಿಯಾದಲ್ಲಿ 1999ರಲ್ಲಿ ನಡೆದಿದ್ದ ಹತ್ಯೆ ಪ್ರಕರಣದ ಆರೋಪಿಯನ್ನು ಸಿಬಿಐ ಈ ವಾರ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಆರೋಪಿ ಮಹಮ್ಮದ್ ದಿಲ್‌ಶಾದ್ ಮದೀನಾದಿಂದ ವಾಪಸ್ ಬರುವಾಗ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಗಸ್ಟ್ 11ರಂದು ಬಂಧಿಸಲಾಗಿದೆ ಸಿಬಿಐ ವಕ್ತಾರರು ತಿಳಿಸಿದ್ದಾರೆ.

'ಆರೋಪಿಯನ್ನು ಪತ್ತೆಹಚ್ಚಿ, ಸ್ಥಳೀಯವಾಗಿ ಕಾನೂನು ಕ್ರಮ ಜರುಗಿಸುವಂತೆ ಸೌದಿ ಅರೇಬಿಯಾ ಸರ್ಕಾರ ಮಾಡಿದ್ದ ಮನವಿಯ ಮೇರೆಗೆ 2022ರಲ್ಲಿ ಸಿಬಿಐ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡಿತ್ತು' ಎಂದು ವಿವರಿಸಿದರು.

ದೇಗುಲ ಹತ್ತಲು ಯತ್ನ: ವ್ಯಕ್ತಿ ಸೆರೆ

ಪುರಿ (ಪಿಟಿಐ): ಪುರಿ ಶ್ರೀ ಜಗನ್ನಾಥ ದೇಗುಲವನ್ನು ಶನಿವಾರ ಹತ್ತಲು ಪ್ರಯತ್ನಿಸುತ್ತಿದ್ದ ಜಾರ್ಖಂಡ್‌ನ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ರಾಂಚಿಯ ಪಂಚಮ ಮಾಹೋತ್ ಎಂದು ಗುರುತಿಸಲಾಗಿದೆ. ಈತ ದೇವಾಲಯದ ಸುಮಾರು 5–7 ಅಡಿಗಳಷ್ಟು ಮೇಲಕ್ಕೆ ಏರಿದ್ದನು. ವಿಷಯ ತಿಳಿಯುತ್ತಿದ್ದಂತೆ ಶ್ರೀ ಜಗನ್ನಾಥ ದೇಗುಲದ ಪೊಲೀಸರು ಆತನನ್ನು ತಡೆದಿದ್ದಾರೆ.

ಮಣಿಪುರ: ಐವರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ತೌಬಾಲ್ ಮತ್ತು ಇಂಫಾಲ್ ಪೂರ್ವ ಜಿಲ್ಲೆಗಳಲ್ಲಿ ನಿಷೇಧಿತ ಸಂಘಟನೆಯ ಐವರು ಬಂಡುಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಭದ್ರತಾ ಪಡೆಯ ಸಿಬ್ಬಂದಿ ಗುರುವಾರ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ನಿಷೇಧಿತ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಾರ್ಟಿಯ ತೈಬಾಂಗಂಬಾ ಬಣದ ಮೂವರು ಮಹಿಳೆಯರು ಸೇರಿದಂತೆ ನಾಲ್ಕು ಸಕ್ರಿಯ ಸದಸ್ಯರನ್ನು ತೌಬಾಲ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ನಿಷೇಧಿತ ಪ್ರಿಪಾಕ್ (ಪಿಆರ್‌ಇಪಿಎಕೆ) ಸಂಘಟನೆಯ ಸಕ್ರಿಯ ಸದಸ್ಯರೊಬ್ಬರನ್ನು ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಮತ ಕಳವು: ಪ್ರತಿಕ್ರಿಯೆಗೆ ಸಜ್ಜಾದ ಇ.ಸಿ

ಇಂಡಿಯಾ ಮೈತ್ರಿಕೂಟ ಮಾಡಿರುವ ಸರಣಿ ಆರೋಪಗಳಿಗೆ ಸ್ಪಷ್ಟನೆ ನೀಡುವ ನಿರೀಕ್ಷೆ

ನವದೆಹಲಿ (ಪಿಟಿಐ): 'ಮತ ಕಳ್ಳತನ'ದ ವಿಚಾರವಾಗಿ ದೇಶದಾದ್ಯಂತ ಪ್ರತಿಭಟನೆಯನ್ನು ತೀವ್ರಗೊಳಿಸಲು ಕಾಂಗ್ರೆಸ್ ಒಳಗೊಂಡ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ತೀರ್ಮಾನಿಸಿದ ಬೆನ್ನಲ್ಲೇ, ಚುನಾವಣಾ ಆಯೋಗವು ಭಾನುವಾರ ಈ ಬಗ್ಗೆ ಸುದ್ದಿಗೋಷ್ಠಿ ನಡೆಸಿ ಪ್ರತಿಕ್ರಿಯೆ ನೀಡಲು ಮುಂದಾಗಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳುವ ಮುನ್ನವೇ ಆಯೋಗವು ಸುದ್ದಿಗೋಷ್ಠಿ ನಡೆಸಿ, ಸ್ಪಷ್ಟನೆ ನೀಡುವುದು ರೂಢಿಯಲ್ಲಿ ಇಲ್ಲದ ಕ್ರಮವಾಗಿದೆ. ಸುದ್ದಿಗೋಷ್ಠಿಯ ವಿಷಯ ಯಾವುದು ಎನ್ನುವುದನ್ನು ಆಯೋಗ ಸ್ಪಷ್ಟಪಡಿಸಿಲ್ಲ. ಆದರೆ, ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ಆಯೋಗದ ವಿರುದ್ಧ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಮಾಡಿರುವ ಸರಣಿ ಆರೋಪಗಳಿಗೆ ಸ್ಪಷ್ಟನೆ ನೀಡುವುದು ಸುದ್ದಿಗೋಷ್ಠಿಯ ವಿಷಯವಾಗಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಮಹಾರಾಷ್ಟ್ರ, ಕರ್ನಾಟಕ ಮತ್ತು ಹರಿಯಾಣದಲ್ಲಿ ಭಾರಿ 'ಮತ ಕಳ್ಳತನ' ನಡೆಸಿ ಬಿಜೆಪಿ ಜಯ ಗಳಿಸಿದೆ. ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಲು ಆಯೋಗವು ಬಿಜೆಪಿಯೊಂದಿಗೆ ಕೈಜೋಡಿಸಿದೆ' ಎಂದು ರಾಹುಲ್ ಗಾಂಧಿ, ಆಯೋಗದ ವಿರುದ್ಧ ಆರೋಪಿಸಿದ್ದರು.

ಮತದಾರರ ಪಟ್ಟಿಯಲ್ಲಿ ಅಳಿಸಿ ಹಾಕಲಾಗಿದೆ ಎನ್ನಲಾದ ಮತದಾರರ ವಿವರವನ್ನು ಲಿಖಿತ ಘೋಷಣೆಯೊಂದಿಗೆ ಸಲ್ಲಿಸುವಂತೆ ಆಯೋಗವು ರಾಹುಲ್‌ಗೆ ಸೂಚಿಸಿತ್ತು. ಆಯೋಗದ ವಿರುದ್ಧ ತಮ್ಮ ಆರೋಪ ವಾಪಸ್ ಪಡೆಯದಿದ್ದಲ್ಲಿ, ಸದನದಲ್ಲಿ ಕ್ಷಮೆ ಯಾಚಿಸುವಂತೆಯೂ ಎಚ್ಚರಿಕೆ ನೀಡಿತ್ತು. ಆದರೆ, ಆಯೋಗದ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದ ರಾಹುಲ್, 'ಚುನಾವಣಾ ಆಯೋಗದ ಮುಂದಿಟ್ಟಿರುವ ನಮ್ಮ ಬೇಡಿಕೆ ಸ್ಪಷ್ಟವಾಗಿದೆ. ಪಾರದರ್ಶಕತೆಯನ್ನು ತೋರಿಸಿ ಮತ್ತು ಡಿಜಿಟಲ್ ಸ್ವರೂಪದಲ್ಲಿ ಮತದಾರರ ಪಟ್ಟಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿ' ಎಂದು ಆಗ್ರಹಿಸಿದ್ದರು.

ಬಿಹಾರದಲ್ಲಿ 'ಎಸ್‌ಐಆರ್' ವೇಳೆ ಪಟ್ಟಿಯಿಂದ ಕೈಬಿಟ್ಟಿರುವ 65 ಲಕ್ಷ ಮತದಾರರ ಹೆಸರು ಮತ್ತು ವಿವರ ಪ್ರಕಟಿಸುವಂತೆ ಸುಪ್ರೀಂಕೋರ್ಟ್ ಗುರುವಾರ ಆಯೋಗಕ್ಕೆ ನಿರ್ದೇಶನ ನೀಡಿತ್ತು.

ಅಭಿಯಾನ

ಭಾರತೀಯ ಯುವ ಕಾಂಗ್ರೆಸ್ (ಐವೈಸಿ) 'ಮತ ಕಳ್ಳತನ ನಿಲ್ಲಿಸಿ' ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿದೆ. ಅಭಿಯಾನವು ದೇಶದಾದ್ಯಂತ ನಡೆಯಲಿದೆ.

ಐವೈಸಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಉದಯ್ ಭಾನು ಛಿಬ್ ಅವರು ಜಮ್ಮು ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನಕ್ಕೆ ಚಾಲನೆ ನೀಡಿದರು.

'ಐವೈಸಿ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತ ಕಳ್ಳತನದ ವಿರುದ್ಧ ಜಾಗೃತಿ ಮೂಡಿಸಲಿದ್ದಾರೆ. ಮತದಾರರ ಪಟ್ಟಿಯನ್ನು ಪರಿಶೀಲಿಸಿ, ಮತದಾನದ ಹಕ್ಕನ್ನು ಖಚಿತಪಡಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವದ ರಕ್ಷಣೆ ಮಾಡುವುದು ಈ ಅಭಿಯಾನದ ಉದ್ದೇಶವಾಗಿದೆ' ಎಂದು ಐವೈಸಿ ಪ್ರಕಟಣೆ ತಿಳಿಸಿದೆ.

ಮತದಾರನ ಅಧಿಕಾರ ಯಾತ್ರೆಗೆ ಇಂದು ಚಾಲನೆ

ಸಸಾರಾಮ್ (ಬಿಹಾರ): 'ಒಬ್ಬರಿಗೆ ಒಂದು ಮತ' ಹಕ್ಕು ಪ್ರತಿಪಾದನೆಯೊಂದಿಗೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭಾನುವಾರ ಇಲ್ಲಿ 'ಮತದಾರನ ಅಧಿಕಾರ (ಮತದಾರರ ಹಕ್ಕು) ಯಾತ್ರೆ'ಗೆ ಚಾಲನೆ ನೀಡಲಿದ್ದಾರೆ.

ಯಾತ್ರೆಯು ಬಿಹಾರದಾದ್ಯಂತ 16 ದಿನಗಳು ನಡೆಯಲಿದೆ. 1,300 ಕಿ.ಮೀ ಸಾಗಲಿರುವ ಈ ಯಾತ್ರೆಯು ಸೆಪ್ಟೆಂಬರ್ 1ರಂದು ಪಾಟ್ನಾದಲ್ಲಿ ಸಮಾರೋಪಗೊಳ್ಳಲಿದೆ.

'ರಾಹುಲ್ ಗಾಂಧಿ ಅವರು ಬಿಹಾರದಲ್ಲಿ ಕೈಗೊಂಡಿರುವ ಯಾತ್ರೆಯು ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಲಿದೆ' ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ದೇಶದ ಚುನಾವಣಾ ಆಯೋಗವು ಈಗಿನ ಸ್ವಯಂ ಘೋಷಿತ ಡಬಲ್ ಎಂಜಿನ್ ಸರ್ಕಾರದ ಬೋಗಿ ಆಗುವುದನ್ನು ನಾವು ಒಪ್ಪುವುದಿಲ್ಲ. ಬಿಹಾರದ ಜನರ ಮತದಾನದ ಹಕ್ಕನ್ನು ಕಸಿದುಕೊಂಡ ಆಯೋಗದ ವಿರುದ್ಧ ನಾವು ಹೋರಾಟ ಮುಂದುವರಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಜನರು ಎಚ್ಚೆತ್ತುಕೊಂಡಿದ್ದಾರೆ: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಮತಗಳ್ಳತನದ ಕುರಿತು ಚುನಾವಣಾ ಆಯೋಗದ ವಿರುದ್ಧ ಅಭಿಯಾನ ಮುಂದುವರಿಸಿರುವ ಕಾಂಗ್ರೆಸ್ ಪಕ್ಷ, 'ಲಾಪತಾ ವೋಟ್' ಹೆಸರಿನ ಹೊಸ ವಿಡಿಯೊವನ್ನು ಶನಿವಾರ ಬಿಡುಗಡೆಗೊಳಿಸಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಬಿಡುಗಡೆಗೊಳಿಸಿದ ವಿಡಿಯೊದಲ್ಲಿ 'ಚೋರಿ ಚೋರಿ ಚುಪ್ಕೆ, ಚುಪ್ಕೆ... ಜನರು ಎಚ್ಚೆತ್ತುಕೊಂಡಿದ್ದಾರೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಅಧಿಕೃತ ಖಾತೆಯಲ್ಲೂ ಈ ವಿಡಿಯೊ ಹಂಚಿಕೊಂಡಿದ್ದು, 'ನಿಮ್ಮ ಮತ ಕದಿಯುವುದೆಂದರೆ, ನಿಮ್ಮ ಹಕ್ಕುಗಳನ್ನು ಕಸಿದುಕೊಂಡಂತೆ' ಎಂದು ತಿಳಿಸಿದೆ. 'ಮತಗಳ್ಳತನದ ಕುರಿತು ಎಲ್ಲರೂ ಸಂಘಟಿತರಾಗಿ ಧ್ವನಿಯೆತ್ತೋಣ. ಆ ಮೂಲಕ ನಮ್ಮ ಹಕ್ಕುಗಳನ್ನು ಉಳಿಸೋಣ' ಎಂದು ಹೇಳಿದೆ.

ವಿಡಿಯೊದಲ್ಲೇನಿದೆ?: ಪೊಲೀಸ್ ಠಾಣೆಗೆ ಭೇಟಿ ನೀಡಿದ ವ್ಯಕ್ತಿಯೊಬ್ಬರು, ಕಳ್ಳತನವಾಗಿದೆ ಎಂದು ದೂರುತ್ತಾನೆ. ಏನು ಕಳ್ಳತನ? ಎಂದು ಅಧಿಕಾರಿಗಳು ಪ್ರಶ್ನಿಸಿದ ವೇಳೆ, 'ನನ್ನ ಮತಗಳ್ಳತನವಾಗಿದ್ದು, ಅದೇ ರೀತಿ, ಲಕ್ಷಾಂತರ ಮತಗಳ್ಳತನವಾಗಿದೆ' ಎಂದು ಅಧಿಕಾರಿಗಳ ಮುಂದೆ ದೂರುತ್ತಾನೆ. ಆಗ ಪೊಲೀಸ್ ಅಧಿಕಾರಿಗಳು, 'ಮತವನ್ನು ಕಳ್ಳತನ ಮಾಡಲಾಗಿದೆಯೇ?' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಒಂದು ನಿಮಿಷದ ವಿಡಿಯೊ ತುಣುಕಿಗೆ 'ಲಾಪತಾ ವೋಟ್' ಎಂದು ಹೆಸರಿಡಲಾಗಿದ್ದು, ಕಿರಣ್ ರಾವ್ ನಿರ್ದೇಶನದ 'ಲಾಪತಾ ಲೇಡಿಸ್' ಸಿನಿಮಾದ ಶೀರ್ಷಿಕೆಯ ಮೊದಲಾರ್ಧವನ್ನು ಬಳಸಿಕೊಳ್ಳಲಾಗಿದೆ.

ಆರೋಪಕ್ಕೆ ತಿರುಗೇಟು

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯಲ್ಲಿನ ಲೋಪಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಚುನಾವಣಾ ಆಯೋಗವು, 'ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಎಲ್ಲ ಹಂತಗಳಲ್ಲಿ ರಾಜಕೀಯ ಪಕ್ಷಗಳು ಭಾಗಿಯಾಗುತ್ತವೆ. ಆದರೆ, ಕೆಲವು ರಾಜಕೀಯ ಪಕ್ಷಗಳು ಮತ್ತು ಬೂತ್ ಮಟ್ಟದ ಏಜೆಂಟರು ಮತದಾರರ ಪಟ್ಟಿಯನ್ನು ಪರಿಶೀಲಿಸುವುದಿಲ್ಲ ಮತ್ತು ನಿರ್ದಿಷ್ಟ ಸಮಯದಲ್ಲಿ ಆಕ್ಷೇಪ ದಾಖಲಿಸುವುದಿಲ್ಲ' ಎಂದು ತಿರುಗೇಟು ನೀಡಿದೆ.

ಲೋಪ ರಹಿತ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಕೂಲಂಕಷ ಪರಿಶೀಲನೆಯನ್ನು ಆಯೋಗವು ಸ್ವಾಗತಿಸುತ್ತದೆ ಎಂದು ಶನಿವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ನಂತರ ಪ್ರಕಟಿಸಲಾದ ಕರಡು ಮತದಾರರ ಪಟ್ಟಿಯಲ್ಲಿ 65 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು.

ಕಾಲಮಿತಿ ನಿಗದಿ– ಸಾಂವಿಧಾನಿಕ ವ್ಯವಸ್ಥೆಗೆ ಧಕ್ಕೆ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): 'ರಾಜ್ಯ ವಿಧಾನ ಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ರಾಜ್ಯಪಾಲರು, ರಾಷ್ಟ್ರಪತಿಯವರು ಕಾಲಮಿತಿಯೊಳಗೆ ಅಂಕಿತ ಹಾಕಬೇಕು ಎಂದು ಹೇಳುವುದರಿಂದ ಸರ್ಕಾರದ ಒಂದು ಅಂಗವೇ ಹೆಚ್ಚಿನ ಅಧಿಕಾರ ಹೊಂದಿದಂತಾಗಲಿದೆ. ಇದರಿಂದ 'ಸಾಂವಿಧಾನಿಕ ವ್ಯವಸ್ಥೆಗೆ ಧಕ್ಕೆ' ಉಂಟಾಗಲಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯ ದಾಖಲಿಸಿದೆ.

ಕಾಲಮಿತಿ ನಿಗದಿಪಡಿಸಿ ಏಪ್ರಿಲ್ 8ರಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್‌ಗೆ ಸಂವಿಧಾನದ 143(1)ನೇ ವಿಧಿಯಡಿ ದತ್ತವಾದ ಅಧಿಕಾರವನ್ನು ಬಳಸಿಕೊಂಡು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 14 ಪ್ರಶ್ನೆಗಳನ್ನು ಕೇಳಿದ್ದರು. ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಲಿಖಿತ ಅಭಿಪ್ರಾಯದಲ್ಲಿ ಕೇಂದ್ರವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಸಂವಿಧಾನದ ಯಾವುದೇ ಒಂದು ಅಂಗದ ಕಾರ್ಯವನ್ನು ಮತ್ತೊಂದು ಅಂಗವು ನಿರ್ವಹಿಸಲು ಸಾಧ್ಯವಿಲ್ಲ. ಯಾವುದೇ ಅಂಗವು ಅಹಂಕಾರದಿಂದ ವರ್ತಿಸಿ ಇನ್ನೊಂದರ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಹೆಸರಿನಲ್ಲಿ ಮನವಿ ಮಾಡಿದರೆ ಅಥವಾ ಸಾಂಸ್ಥಿಕ ಅತೃಪ್ತಿ ವ್ಯಕ್ತಪಡಿಸಿದರೆ, ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ಉಂಟಾಗಲಿದೆ' ಎಂದು ತಿಳಿಸಿದೆ.

ರಾಷ್ಟ್ರಪತಿಯವರು ಕೇಳಿದ 14 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಲಿಖಿತ ಅಭಿಪ್ರಾಯ ದಾಖಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ನ್ಯಾಯಪೀಠವು ಎರಡು ವಾರಗಳ ಹಿಂದೆ ಸೂಚನೆ ನೀಡಿತ್ತು. ಆಗಸ್ಟ್ 19ರಿಂದ ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣದ ವಿಚಾರಣೆಯು ನಡೆಯಲಿದೆ.

'ದ.ಕೊರಿಯಾ ಜತೆ ಚರ್ಚೆ ಫಲಪ್ರದ'

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್, ಪರಿಸರ ಸ್ನೇಹಿ ಇಂಧನ, ರಕ್ಷಣೆ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಮತ್ತು ಪಾಲುದಾರಿಕೆಯನ್ನು ಹೆಚ್ಚಿಸಿಕೊಳ್ಳಲು ಭಾರತ–ದಕ್ಷಿಣ ಕೊರಿಯಾ ಶನಿವಾರ ನಿರ್ಧರಿಸಿವೆ.

ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವರಾದ ಚೋ ಹಯೂನ್ ಹಾಗೂ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ನಡುವೆ ದ್ವಿಪಕ್ಷೀಯ ಬಾಂಧವ್ಯ ಮತ್ತು ಸಹಕಾರ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ಮಾತುಕತೆ ನಡೆಯಿತು.

'ವ್ಯಾಪಾರ, ಉತ್ಪಾದನೆ ಹಾಗೂ ಕಡಲಿಗೆ ಸಂಬಂಧಿಸಿದ ಕ್ಷೇತ್ರದಲ್ಲೂ ಹೊಸ ಸಾಧ್ಯತೆಗಳನ್ನು ಬಳಸಿಕೊಳ್ಳಲು ಸಹಕಾರವನ್ನು ಮುಂದುವರಿಸುವ ಕುರಿತಂತೆ ಫಲಪ್ರದ ಚರ್ಚೆ' ನಡೆಸಲಾಯಿತು ಎಂದು ಜೈಶಂಕರ್ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ತಮಿಳುನಾಡು: ಸಚಿವ ಪೆರಿಯಸಾಮಿ ನಿವಾಸದ ಮೇಲೆ ಇ.ಡಿ ದಾಳಿ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಗ್ರಾಮೀಣಾಭಿವೃದ್ಧಿ ಸಚಿವ, ಡಿಎಂಕೆ ಮುಖಂಡ ಐ.ಪೆರಿಯಸಾಮಿ ಮತ್ತು ಅವರ ಪುತ್ರ ಶಾಸಕ ಐ.ಪಿ. ಸೆಂಥಿಲ್‌ಕುಮಾರ್ ಅವರಿಗೆ ಸೇರಿದ ಹಲವು ಕಟ್ಟಡ, ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ದಾಳಿ ನಡೆಸಿದೆ.

ಆದಾಯ ಮೀರಿ ಅಕ್ರಮವಾಗಿ ₹ 2.1 ಕೋಟಿ ಮೌಲ್ಯದ ಆಸ್ತಿ ಗಳಿಸಿದ ಆರೋಪ ಪೆರಿಯಸಾಮಿ ಮತ್ತು ಅವರ ಕುಟುಂಬ ಸದಸ್ಯರ ಮೇಲಿದೆ. ದಿಂಡಿಗಲ್‌ನಲ್ಲಿರುವ ವಿಶೇಷ ನ್ಯಾಯಾಲಯವು ಪೆರಿಯಸಾಮಿ, ಅವರ ಪತ್ನಿ ಪಿ. ಸುಶೀಲಾ ಮತ್ತು ಪುತ್ರ ಸೆಂಥಿಲ್‌ಕುಮಾರ್ ಅವರನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿತ್ತು. ಇದನ್ನು ಪ್ರಶ್ನಿಸಿ ವಿಚಕ್ಷಣಾ ದಳ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯ (ಡಿವಿಎಸಿ) ಮದ್ರಾಸ್ ಹೈಕೋರ್ಟ್‌ಗೆ ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆಯನ್ನು 6 ತಿಂಗಳಲ್ಲಿ ಮುಗಿಸುವಂತೆ ಮದ್ರಾಸ್ ಹೈಕೋರ್ಟ್, ದಿಂಡಿಗಲ್ ನ್ಯಾಯಾಲಯಕ್ಕೆ ಸೂಚಿಸಿದೆ.

ಇದರ ಬೆನ್ನಲ್ಲೇ ಇ.ಡಿ.ಯ ದಾಳಿ ನಡೆದಿದೆ.

'ಪಕ್ಷವು ಇ.ಡಿ.ಗಾಗಲಿ, ಮೋದಿ ಅವರಿಗಾಗಲಿ ಹೆದರುವುದಿಲ್ಲ' ಎಂದು ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಹೇಳಿದ್ದಾರೆ.

ಕಿಶ್ತವಾಡದಲ್ಲಿ ಮುಂದುವರಿದ ರಕ್ಷಣಾ ಕಾರ್ಯಾಚರಣೆ: ಒಮರ್ ಅಬ್ದುಲ್ಲಾ

'ಜನಾಕ್ರೋಶ ಸಹಜ– ರಕ್ಷಣೆಗೆ ಒತ್ತು'

ಚಸೋತಿ, ಜಮ್ಮು ಮತ್ತು ಕಾಶ್ಮೀರ (ಪಿಟಿಐ): 'ಕಿಶ್ತವಾಡ ಜಿಲ್ಲೆಯ ಚಸೋತಿ ಗ್ರಾಮದಲ್ಲಿ ಮೇಘಸ್ಫೋಟದ ರಕ್ಷಣಾ ಕಾರ್ಯಾಚರಣೆ ಕುರಿತು ಜನರ ಆಕ್ರೋಶ ಸಹಜವಾಗಿದೆ, ಅದನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆದರೂ ಕಾರ್ಯಾಚರಣೆಗೆ ವೇಗ ನೀಡಲಾಗಿದ್ದು, ಅವಶೇಷಗಳ ಅಡಿಯಲ್ಲಿ ಸಿಲುಕಿದವರನ್ನು ಹುಡುಕುವ ಕೆಲಸ ಮಾಡುತ್ತಿದ್ದೇವೆ' ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ತಿಳಿಸಿದ್ದಾರೆ.

ದುರಂತದ ಸ್ಥಳಕ್ಕೆ ವೇಳೆ ಹಿರಿಯ ಅಧಿಕಾರಿಗಳ ಜೊತೆ ಭೇಟಿ ನೀಡಿದ್ದ ವೇಳೆ ಸ್ಥಳೀಯರು ರಕ್ಷಣಾ ಕಾರ್ಯಾಚರಣೆ ಕುರಿತು ಅಸಮಾಧಾನ ವ್ಯಕ್ತಪಡಿಸಿ, ಆಕ್ರೋಶ ಹೊರಹಾಕಿದರು. ಸನಿಹದ ಟೆಂಟ್‌ನಲ್ಲಿ ಕೂತು, ಜನರಿಂದ ಅಹವಾಲು ಸ್ವೀಕರಿಸಲು ಮುಂದಾದರು. ಕೆಲವರು ಅವರ ಬಳಿ ತೆರಳದೇ, ದೂರ ಉಳಿದರು. ಆದಷ್ಟು ಬೇಗ ರಕ್ಷಣಾ ಕಾರ್ಯಾಚರಣೆ ಪೂರ್ಣಗೊಳಿಸುವುದಾಗಿ ಭರವಸೆ ನೀಡಿ, ಅಲ್ಲಿಂದ ತೆರಳಿದರು.

ರಕ್ಷಣಾ ಕಾರ್ಯಾಚರಣೆ ಬಿರುಸು: ರಕ್ಷಣಾ ಹಾಗೂ ಪರಿಹಾರ ತಂಡಗಳು ಪರಸ್ಪರ ಸಮನ್ವಯದಿಂದ ಕಾರ್ಯಾಚರಣೆ ತೀವ್ರಗೊಳಿಸಿದ್ದು, ನಾಪತ್ತೆಯಾದ 70ರಿಂದ 80 ಮಂದಿಯ ಪತ್ತೆಗೆ ಹುಡುಕಾಟ ಮುಂದುವರಿಸಲಾಗಿದೆ. ಸ್ಫೋಟಕಗಳನ್ನು ಬಳಸಿಕೊಂಡು, ಬೃಹತ್ ಬಂಡೆಗಳನ್ನು ಒಡೆಯಲಾಗಿದೆ.

ಕಿಶ್ತವಾಡದ ಚಸೋತಿಯಲ್ಲಿ ಸಂಭವಿಸಿದ ಮೇಘಸ್ಫೋಟದಿಂದ ಗಾಯಗೊಂಡು ಜಮ್ಮುವಿನ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಶನಿವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು ಪಿಟಿಐ ಚಿತ್ರ

ಭಾರಿ ಮಳೆ

ಮುಂಬೈ (ಪಿಟಿಐ): ಮುಂಬೈ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಶನಿವಾರ ಭಾರಿ ಮಳೆಯಾಗಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದವು.

ಎಡಬಿಡದೆ ಮಳೆ ಸುರಿದ ಕಾರಣ ಲೋಕಲ್ ರೈಲುಗಳು ಮತ್ತು ಕೆಲವು ಬಸ್‌ಗಳ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು.

ಮುಂಬೈ ನಗರದಲ್ಲಿ ಇನ್ನೂ ಎರಡು ದಿನ ಭಾರಿ ಮಳೆಯಾಗಲಿದೆ ಎಂದು ಐಎಂಡಿ 'ರೆಡ್ ಅಲರ್ಟ್' ಘೋಷಣೆ ಮಾಡಿದೆ. ನಗರದ ಹಲವು ಕಡೆಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಶನಿವಾರ ಮುಂಜಾನೆವರೆಗೆ 20 ಸೆಂ.ಮೀ.ಗಿಂತ ಹೆಚ್ಚು ಮಳೆಯಾಗಿದೆ ಎಂದು ಐಎಂಡಿ ತಿಳಿಸಿದೆ.

ಶುಭಾಂಶು ಸ್ವಾಗತಕ್ಕೆ ಲಖನೌ ಸಜ್ಜು

ಶುಭಾಂಶು

ಲಖನೌ (ಪಿಟಿಐ): ಆ್ಯಕ್ಸಿಯಂ–4 ಯೋಜನೆಯ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಪಯಣಿಸಿ, ಯಶಸ್ವಿಯಾಗಿ ಹಿಂದಿರುಗಿರುವ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಭಾನುವಾರ ಭಾರತಕ್ಕೆ ಬರಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಅವರು ಭೇಟಿಯಾಗುವ ನಿರೀಕ್ಷೆ ಇದೆ.

ಆಗಸ್ಟ್ 25ರಂದು ಶುಭಾಂಶು ಲಖನೌಗೆ ಭೇಟಿ ನೀಡಲಿದ್ದಾರೆ. ಅವರು ವ್ಯಾಸಂಗ ಮಾಡಿದ ಸಿಟಿ ಮಾಂಟೆಸ್ಸರಿ ಸ್ಕೂಲ್‌ನ (ಸಿಎಂಎಸ್) ಗೆಳೆಯರು ಹಾಗೂ ಶಾಲಾ ಆಡಳಿತ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಸಿದ್ಧತೆ ನಡೆಸಿದ್ದಾರೆ.

ಸಂಭ್ರಮಾಚರಣೆಯಲ್ಲಿ ಶಾಲೆಯ ಮಕ್ಕಳು, ಗಣ್ಯರು ಶುಭಾಂಶು ಅವರಿಗೆ ಸ್ವಾಗತ ಕೋರಲಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನೂ ಆಹ್ವಾನಿಸುವ ಪ್ರಯತ್ನ ನಡೆಯುತ್ತಿದೆ ಎಂದು ಶಾಲೆಯ ಸಂವಹನ ವಿಭಾಗದ ಮುಖ್ಯಸ್ಥರಾದ ರಿಶಿ ಖನ್ನಾ ಹೇಳಿದ್ದಾರೆ.

ಎನ್‌ಸಿಇಆರ್‌ಟಿ ಪಠ್ಯದಲ್ಲಿ 'ದೇಶ ವಿಭಜನೆಯ ಕರಾಳ ದಿನ'

'ದೇಶ ವಿಭಜನೆಗೆ ಕಾಂಗ್ರೆಸ್, ಜಿನ್ನಾ ಕಾರಣ'

ನವದೆಹಲಿ (ಪಿಟಿಐ): 'ಭಾರತ ವಿಭಜನೆಗೆ ಕಾಂಗ್ರೆಸ್, ಮಹಮ್ಮದ್ ಅಲಿ ಜಿನ್ನಾ ಮತ್ತು ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರೇ ಕಾರಣ' ಎಂದು ಉಲ್ಲೇಖಿಸಿರುವ 'ದೇಶ ವಿಭಜನೆಯ ಕರಾಳ ದಿನ' ಎಂಬ ವಿಶೇಷ ಪಠ್ಯದ ಮಾದರಿಯನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪ್ರಕಟಿಸಿದೆ.

'ಕೆಟ್ಟ ಆಲೋಚನೆಯಿಂದಾಗಿ ಭಾರತದ ವಿಭಜನೆಯಾಯಿತು. ಇಂಡಿಯನ್ ಮುಸ್ಲಿಂ ಪಕ್ಷ ಮತ್ತು ಮುಸ್ಲಿಂ ಲೀಗ್ ಲಾಹೋರ್‌ನಲ್ಲಿ 1940ರಲ್ಲಿ ಸಭೆ ಸೇರಿದ್ದವು. ಮುಸ್ಲಿಂ ಲೀಗ್ ನಾಯಕ ಮಹಮ್ಮದ್ ಅಲಿ ಜಿನ್ನಾ ಅವರು, 'ಹಿಂದೂಗಳು ಮತ್ತು ಮುಸ್ಲಿಮರು ವಿಭಿನ್ನ ಧಾರ್ಮಿಕ ಸಿದ್ಧಾಂತಗಳು, ಸಾಮಾಜಿಕ ಪದ್ಧತಿಗಳನ್ನು ಹೊಂದಿದ್ದಾರೆ' ಎಂದು ಹೇಳಿದ್ದರು' ಎಂದು ಪಠ್ಯದಲ್ಲಿ ವಿವರಿಸಲಾಗಿದೆ.

'ದೇಶ ವಿಭಜಿಸಿದವರು' ಎಂಬ ಶೀರ್ಷಿಕೆಯ ವಿಭಾಗದಲ್ಲಿ, 'ಅಂತಿಮವಾಗಿ 1947ರ ಆಗಸ್ಟ್ 15ರಂದು ಭಾರತ ಎರಡು ಹೋಳಾಯಿತು. ಇದು ಕೇವಲ ಒಬ್ಬರಿಂದ ಆಗಿದ್ದಲ್ಲ. ಭಾರತದ ವಿಭಜನೆಗೆ ಮೂವರು ಹೊಣೆಗಾರರು. ಜಿನ್ನಾ ಅವರು ವಿಭಜನೆಗೆ ಬೇಡಿಕೆ ಇಟ್ಟರು, ಕಾಂಗ್ರೆಸ್ ಇದಕ್ಕೆ ಒಪ್ಪಿಗೆ ನೀಡಿತು ಮತ್ತು ಮೌಂಟ್ ಬ್ಯಾಟನ್ ಅದನ್ನು ಅನುಷ್ಠಾನ ಮಾಡಿದರು. ಆದರೆ ಮೌಂಟ್ ಬ್ಯಾಟನ್ ದೊಡ್ಡ ಪ್ರಮಾದದ ತಪ್ಪಿತಸ್ಥ ಎಂದು ಸಾಬೀತಾಗಿದೆ' ಎಂದು ಉಲ್ಲೇಖಿಸಿದೆ.

ಅಧಿಕಾರ ಹಸ್ತಾಂತರಿಸಲು 1948ರ ಜೂನ್‌ನಲ್ಲಿ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ ಮೌಂಟ್ ಬ್ಯಾಟನ್ ಅದಕ್ಕೂ ಮುಂಚೆಯೇ ಅಂದರೆ 1947ರ ಆಗಸ್ಟ್‌ನಲ್ಲೇ ಅಧಿಕಾರ ಹಸ್ತಾಂತರಿಸುವುದಾಗಿ ತಿಳಿಸಿದರು. ಹೀಗಾಗಿ ವಿಭಜನೆಗೂ ಮೊದಲು ಸಿದ್ಧತೆ ಮಾಡಲಾಗಲಿಲ್ಲ. ಉಭಯ ದೇಶಗಳ ಗಡಿಗಳನ್ನೂ ಅವಸರದಲ್ಲಿ ಗುರುತು ಮಾಡಲಾಯಿತು. ಇದಕ್ಕಾಗಿ ಕೇವಲ ಐದು ವಾರ ಕಾಲಾವಕಾಶ ನೀಡಲಾಗಿತ್ತು ಎಂದು ವಿವರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶ ವಿಭಜನೆಯನ್ನು 'ಕರಾಳ ದಿನ' ಎಂದು ಆಚರಿಸುವುದಾಗಿ 2021ರಲ್ಲಿ ನೀಡಿದ್ದ ಹೇಳಿಕೆಯೊಂದಿಗೆ ಪಠ್ಯ ಆರಂಭವಾಗಿದೆ.

ಎನ್‌ಸಿಇಆರ್‌ಟಿ 6ರಿಂದ 8 ಮತ್ತು 9ರಿಂದ 12ನೇ ತರಗತಿಯ ಮಕ್ಕಳಿಗಾಗಿ ಎರಡು ಪ್ರತ್ಯೇಕ ವಿಶೇಷ ಪಠ್ಯದ ಮಾದರಿ ಪ್ರಕಟಿಸಿದೆ. ಇದು ಸಾಮಾನ್ಯ ಪಠ್ಯಕ್ರಮದ ಭಾಗ ಅಲ್ಲ. ಪ್ರಾಜೆಕ್ಟ್, ಪೋಸ್ಟರ್, ಚರ್ಚೆಗಳಲ್ಲಿ ಈ ವಿಶೇಷ ಪಠ್ಯದ ಮಾದರಿಯನ್ನು ಬಳಸಲಾಗುತ್ತದೆ.

ಪಠ್ಯಕ್ರಮದ ಇತರ ಅಂಶಗಳು

- ದೇಶ ವಿಭಜನೆ ಬಳಿಕ ಭಾರತದ ನಕ್ಷೆಗೆ ಸೇರದ ಕಾಶ್ಮೀರವು ಹೊಸ ಸಮಸ್ಯೆಯಾಗಿ ಪರಿಣಮಿಸಿತ್ತು. ಇದು ವಿದೇಶಾಂಗ ನೀತಿಗೆ ಸವಾಲಾಗಿತ್ತು
- ವಿಭಜನೆ ಬಳಿಕ ಕೆಲವು ದೇಶಗಳು ಪಾಕಿಸ್ತಾನಕ್ಕೆ ನೆರವು ನೀಡಿದವು. ಕಾಶ್ಮೀರ ವಿಚಾರವಾಗಿ ಭಾರತದ ಮೇಲೆ ಒತ್ತಡ ಹೇರಿದವು
- ವಿಭಜನೆಯಾದ ಎರಡು ದಿನಗಳ ನಂತರ ಪಂಜಾಬ್‌ನ ಲಕ್ಷಾಂತರ ಜನರಿಗೆ ತಾವು ಯಾವ ದೇಶಕ್ಕೆ ಸೇರಿದವರು ಎಂದು ತಿಳಿದಿರಲಿಲ್ಲ
- ಜಿನ್ನಾ ಅವರು, 'ನನ್ನ ಜೀವಿತಾವಧಿಯಲ್ಲಿ ಪಾಕಿಸ್ತಾನವನ್ನು ಕಾಣುತ್ತೇನೆ ಎಂದು ಭಾವಿಸಿರಲಿಲ್ಲ' ಎಂದು ತಮ್ಮ ನಿಕಟವರ್ತಿಯೊಂದಿಗೆ ಹೇಳಿದ್ದರು
- 'ಭಾರತ ಯುದ್ಧರಂಗವಾಗಿ ಮಾರ್ಪಟ್ಟಿತ್ತು. ಯುದ್ಧ ನಡೆಯುವುದಕ್ಕಿಂತ ದೇಶವು ವಿಭಜನೆಯಾಗುವುದೇ ಸೂಕ್ತ' ಎಂದು ಸರ್ದಾರ್ ವಲ್ಲಭಬಾಯಿ ಪಟೇಲ್ ಹೇಳಿದ್ದರು
- ಮಹಾತ್ಮ ಗಾಂಧಿ ಅವರಿಗೆ ವಿಭಜನೆ ಇಷ್ಟವಿರಲಿಲ್ಲ. ಆದರೆ ಕಾಂಗ್ರೆಸ್ ನಿರ್ಧಾರವನ್ನು ವಿರೋಧಿಸಲು ಅವರಿಗೆ ಸಾಧ್ಯವಾಗಲಿಲ್ಲ

ಚೀನಾ ವಿದೇಶಾಂಗ ಸಚಿವ ಭೇಟಿ ನಾಳೆ

ವಾಂಗ್ ಯಿ

ನವದೆಹಲಿ (ಪಿಟಿಐ): ಗಡಿ ವಿಷಯ ಕುರಿತಂತೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಅವರ ಜೊತೆ ಚರ್ಚಿಸಲು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಸೋಮವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಶಾಂಘೈ ಸಹಕಾರ ಸಂಘಟನೆಯ ವಾರ್ಷಿಕ ಸಮ್ಮೇಳನದಲ್ಲಿ ಭಾಗಿಯಾಗಲು ಪ್ರಧಾನಿ ನರೇಂದ್ರ ಮೋದಿ ಚೀನಾ ಪ್ರವಾಸ ಕೈಗೊಳ್ಳಲು ಯೋಜಿಸಿದಾಗಲೇ ವಾಂಗ್ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ವಿದೇಶಾಂಗ ಸಚಿವಾಲಯವು ಶನಿವಾರ ತಿಳಿಸಿದೆ.

ಗಡಿ ವಿಷಯಕ್ಕೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳ ವಿಶೇಷ ಪ್ರತಿನಿಧಿಗಳಾಗಿ ಮಾತುಕತೆ ನಡೆಸಲು ಡೊಬಾಲ್ ಹಾಗೂ ವಾಂಗ್ ನೇಮಕಗೊಂಡಿದ್ದಾರೆ.

ವಾಂಗ್ ಎರಡು ದಿನ ಭಾರತದಲ್ಲಿರಲಿದ್ದಾರೆ. ಇದು 24ನೇ ಸುತ್ತಿನ ಮಾತುಕತೆಯಾಗಿದೆ ಎಂದು ವಿದೇಶಾಂಗ ಸಚಿವಾಲಯವು ತಿಳಿಸಿದೆ.

'ಸರಳ ತೆರಿಗೆ ಪದ್ಧತಿ ಜಾರಿಗೊಳಿಸಿ'

ನವದೆಹಲಿ (ಪಿಟಿಐ): 'ನಮಗೆ ಸರಳ ಮತ್ತು ಉತ್ತಮ ತೆರಿಗೆ ಪದ್ಧತಿ ಬೇಕು. ಅಭಿವೃದ್ಧಿಯನ್ನು ಹತ್ತಿಕ್ಕುವ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಅಲ್ಲ' ಎಂದು ಕಾಂಗ್ರೆಸ್ ಶನಿವಾರ ಹೇಳಿದೆ.

ಜಿಎಸ್‌ಟಿ 2.0 ಕುರಿತಂತೆ ಶೀಘ್ರದಲ್ಲೇ ಸಮಗ್ರ ಮಾಹಿತಿಯನ್ನು ಒಳಗೊಂಡ ಅಧಿಕೃತ ಪತ್ರವನ್ನು ಬಿಡುಗಡೆಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಂಬರುವ ದೀಪಾವಳಿ ಹಬ್ಬದ ವೇಳೆಗೆ ಜಿಎಸ್‌ಟಿಯ ದರಗಳನ್ನು ಕಡಿಮೆ ಮಾಡಲಾಗುವುದು ಎಂದು ಘೋಷಿಸಿದ ಮರುದಿನ ಕಾಂಗ್ರೆಸ್ ತನ್ನ ಬೇಡಿಕೆಯನ್ನು ಮಂಡಿಸಿದೆ.

'ಎಂಟು ವರ್ಷದಿಂದಲೂ ಜಿಎಸ್‌ಟಿ ನೀತಿಯಲ್ಲಿ ಸುಧಾರಣೆ ಆಗಿಲ್ಲದಿರುವುದರಿಂದ, ಕೇಂದ್ರ ಸರ್ಕಾರವು ನಿತ್ಯಬಳಕೆಯ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸಲು ಇದೀಗ ಯೋಚಿಸಿದೆ' ಎಂದಿದೆ.

'ಜಿಎಸ್‌ಟಿಯ ಆಮೂಲಾಗ್ರ ಸುಧಾರಣೆಗೆ ಒಂದೂವರೆ ವರ್ಷದಿಂದಲೂ ಪಕ್ಷ ಒತ್ತಾಯಿಸುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಹೇಳಿದ್ದಾರೆ.

'2024ರ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಜಿಎಸ್‌ಟಿ ನೀತಿಯಲ್ಲಿ ಸುಧಾರಣೆ ತರುವುದಾಗಿ ಕಾಂಗ್ರೆಸ್ ಘೋಷಿಸಿತ್ತು' ಎಂದಿದ್ದಾರೆ.

'ಜಿಎಸ್‌ಟಿ ನೀತಿಯಲ್ಲಿ ಬದಲಾವಣೆಗಳಾಗದಿದ್ದರೆ, ಅಂತರರಾಜ್ಯ ಪೂರೈಕೆಯನ್ನು ಹೆಚ್ಚಿಸದಿದ್ದರೆ ಬೆಳವಣಿಗೆ ವೇಗಗೊಳ್ಳುವುದಿಲ್ಲ ಎಂಬ ಅಂಶವನ್ನು ಪ್ರಧಾನಿಯು ಅಂತಿಮವಾಗಿ ಮನದಟ್ಟು ಮಾಡಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.

ಜವಳಿ, ಪ್ರವಾಸೋದ್ಯಮ, ರಫ್ತುದಾರರು, ಕರಕುಶಲ ವಸ್ತುಗಳು ಮತ್ತು ಕೃಷಿ ವಲಯದಲ್ಲಿನ ಸಮಸ್ಯೆಗಳ ಪರಿಹಾರಕ್ಕೂ ಕೇಂದ್ರ ಸರ್ಕಾರ ಮುಂದಾಗಬೇಕು. ವಿದ್ಯುತ್, ಮದ್ಯ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ರಿಯಲ್ ಎಸ್ಟೇಟ್ ವಲಯಕ್ಕೆ ಆಯಾ ರಾಜ್ಯದ ಹಂತದಲ್ಲೇ ಜಿಎಸ್‌ಟಿ ಜಾರಿಗೊಳಿಸಲು ರಾಜ್ಯ ಸರ್ಕಾರಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ಕೋಚ್ ಆಗಿಯೂ ಹೆಸರು ಮಾಡಿದ್ದ ಆಲ್‌ರೌಂಡರ್

ಆಸ್ಟ್ರೇಲಿಯಾದ ದಿಗ್ಗಜ ಸಿಂಪ್ಸನ್ ನಿಧನ

ಸಿಡ್ನಿ (ರಾಯಿಟರ್ಸ್/ ಎಎಫ್‌ಪಿ): ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಹಾಗೂ ತಂಡದ ಸುವರ್ಣ ಯುಗದ ವೇಳೆ ಕೋಚ್ ಆಗಿದ್ದ ಬಾಬ್ ಸಿಂಪ್ಸನ್ (89) ಅವರು ನಿಧನರಾಗಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಶನಿವಾರ ತಿಳಿಸಿದೆ.

ಆಲ್‌ರೌಂಡರ್ ಸಿಂಪ್ಸನ್ 1957 ರಿಂದ 1978ರ ಅವಧಿಯಲ್ಲಿ 62 ಟೆಸ್ಟ್ ಪಂದ್ಯಗಳನ್ನು ಆಡಿದ್ದರು. ಇದರಲ್ಲಿ 10 ಶತಕ, 27 ಅರ್ಧ ಶತಕ ಒಳಗೊಂಡಿವೆ. ಲೆಗ್ ಸ್ಪಿನ್ ಬೌಲಿಂಗ್‌ನಲ್ಲಿ 71 ವಿಕೆಟ್ ಪಡೆದಿದ್ದಾರೆ. 110 ಕ್ಯಾಚ್ ಹಿಡಿದಿದ್ದಾರೆ. 39 ಟೆಸ್ಟ್ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ.

1957ರಲ್ಲಿ ಜೊಹಾನೆಸ್‌ಬರ್ಗ್‌ನಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. ಓಲ್ಡ್ ಟ್ರಾಫರ್ಡ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಅವರು ಗಳಿಸಿದ 311 ರನ್‌ಗಳು ಆಗ ಆಸ್ಟ್ರೇಲಿಯಾ ಆಟಗಾರನೊಬ್ಬನ ಎರಡನೇ ಗರಿಷ್ಠ ವೈಯಕ್ತಿಕ ಮೊತ್ತ ಎನಿಸಿತ್ತು. ಬ್ರಾಡ್ಮನ್ 1930ರಲ್ಲಿ ಇಂಗ್ಲೆಂಡ್ ವಿರುದ್ಧ 334 ರನ್ ಗಳಿಸಿದ್ದು ಅತ್ಯಧಿಕವಾಗಿತ್ತು.

ಸ್ಲಿಪ್‌ನಲ್ಲಿ ಅತ್ಯಂತ ಶ್ರೇಷ್ಠ ಫೀಲ್ಡರ್ ಎನಿಸಿದ್ದ ಅವರು 1968ರಲ್ಲಿ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಆದರೆ ಆಸ್ಟ್ರೇಲಿಯಾದ ಕೆಲವು ಪ್ರಮುಖ ಆಟಗಾರರು ಕೆರಿ ಪ್ಯಾಕರ್ ಅವರ 1977ರ ವಿಶ್ವ ಸರಣಿ ಆಡಲು ಹೋದ ನಂತರ ಸಿಂಪ್ಸನ್ ತಮ್ಮ 41ನೇ ವಯಸ್ಸಿನಲ್ಲಿ ನಿವೃತ್ತಿ ತೊರೆದು ತಂಡಕ್ಕೆ ಮರಳಿದ್ದರು.

'ಸಿಂಪ್ಸನ್ ಅವರು ಆಸ್ಟ್ರೇಲಿಯಾದ ಮಹಾನ್ ಆಟಗಾರರಲ್ಲಿ ಒಬ್ಬರಾಗಿದ್ದರು. ಅವರ ಆಟ ನೋಡಿದ ಅಥವಾ ಅವರ ಕ್ರಿಕೆಟ್ ಜ್ಞಾನದ ಪ್ರಯೋಜನ ಪಡೆದವರಿಗೆ ಇದು ಬೇಸರದ ದಿನ' ಎಂದು ಕ್ರಿಕೆಟ್ ಆಸ್ಟ್ರೇಲಿಯಾದ ಅಧ್ಯಕ್ಷ ಮೈಕ್ ಬೇರ್ಡ್ ಸಂತಾಪ ಸೂಚಿಸಿದ್ದಾರೆ.

'ಆಕರ್ಷಕ ಆರಂಭ ಆಟಗಾರ, ಅಮೋಘ ಸ್ಲಿಪ್ ಫೀಲ್ಡರ್ ಮತ್ತು ಉಪಯುಕ್ತ ಸ್ಪಿನ್ ಬೌಲರ್ ಆಗಿ ಬಾಬ್ ಅವರು 1960ರ ದಶಕದ ಆಸ್ಟ್ರೇಲಿಯಾ ತಂಡದ ಪ್ರಮುಖ ಶಕ್ತಿಯಾಗಿದ್ದರು. ಅವರ ಕೋಚಿಂಗ್, ಆಸ್ಟ್ರೇಲಿಯಾದ ಸುವರ್ಣಯುಗಕ್ಕೆ ಬುನಾದಿ ಹಾಕಿತು' ಎಂದು ಅವರು ಸಂದೇಶದಲ್ಲಿ ಬಣ್ಣಿಸಿದ್ದಾರೆ.

ಕೋಚ್ ಆಗಿ ಅವರು ಆಸ್ಟ್ರೇಲಿಯಾ ತಂಡದಲ್ಲಿ ಶಿಸ್ತು ಮೂಡಿಸಿದರು. 1987ರಲ್ಲಿ ಅ್ಯಲನ್ ಬಾರ್ಡರ್ ಅವರ ನೇತೃತ್ವದ ತಂಡವು ರಿಲಯನ್ಸ್ ವಿಶ್ವಕಪ್ ಗೆದ್ದುಕೊಂಡಿತು. ಆ್ಯಷಸ್ ಸರಣಿ ಮತ್ತು ಫ್ರಾಂಕ್ ವೊರೆಲ್ ಟ್ರೋಫಿಯನ್ನೂ ತನ್ನದಾಗಿಸಿಕೊಂಡಿತ್ತು.

'ತಾವು ಕಂಡ ಶ್ರೇಷ್ಠ ಕೋಚ್ ಮತ್ತು ತಮ್ಮ ಪ್ರಗತಿಗೆ ನೆರವಾದವರು ಸಿಂಪ್ಸನ್' ಎಂದು ಲೆಗ್‌ಸ್ಪಿನ್ ದಿಗ್ಗಜ ದಿ.ಶೇನ್ ವಾರ್ನ್ ಹಿಂದೊಮ್ಮೆ ಹೇಳಿದ್ದರು.

ಸಿಂಪ್ಸನ್ ಅವರು 1990ರ ದಶಕದ ಕೊನೆಯಲ್ಲಿ ಭಾರತ ತಂಡಕ್ಕೂ ಕೋಚ್ ಆಗಿದ್ದರು. ಕೆಲಕಾಲದ ಲ್ಯಾಂಕಾಶೈರ್ ಮತ್ತು ನೆದರ್ಲೆಂಡ್ಸ್ ತಂಡಕ್ಕೂ ತರಬೇತುದಾರರಾಗಿದ್ದರು.



ಬಾಬ್ ಸಿಂಪ್ಸನ್

ಆಸ್ಟ್ರೇಲಿಯಾಕ್ಕೆ ಸರಣಿ

ಕೇರ್ನ್ಸ್ (ಆಸ್ಟ್ರೇಲಿಯಾ) (ಎಎಫ್‌ಪಿ): ಗ್ಲೆನ್ ಮ್ಯಾಕ್ಸ್‌ವೆಲ್ ಅಮೋಘ ಕ್ಯಾಚ್ ಹಿಡಿದರಲ್ಲದೇ, ನಂತರ ಬಿರುಸಿನ ಅರ್ಧ ಶತಕ (ಅಜೇಯ 62) ಸಿಡಿಸಿದರು. ಅವರ ಆಲ್‌ರೌಂಡ್ ಆಟದ ನೆರವಿನಿಂದ ಆಸ್ಟ್ರೇಲಿಯಾ, ಮೂರು ಪಂದ್ಯಗಳ ಟಿ20 ಸರಣಿಯ ಅಂತಿಮ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಶನಿವಾರ ಎರಡು ವಿಕೆಟ್‌ಗಳಿಂದ ಸೋಲಿಸಿತು.

ಆತಿಥೇಯರು ಸರಣಿಯನ್ನೂ 2–1 ರಿಂದ ಗೆದ್ದುಕೊಂಡರು. ಡೆವಾಲ್ಡ್ ಬ್ರೆವಿಸ್ ಅವರ ಅರ್ಧಶತಕದ (53 ರನ್, 26 ಎಸೆತ 4x1, 6x6) ನೆರವಿನಿಂದ ದಕ್ಷಿಣ ಆಫ್ರಿಕಾ 7 ವಿಕೆಟ್‌ಗೆ 172 ರನ್ ಬಾರಿಸಿತು. ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 19.5 ಓವರುಗಳಲ್ಲಿ 8 ವಿಕೆಟ್‌ಗೆ 173 ರನ್ ಬಾರಿಸಿತು.

ದಿಗ್ಗಜ ಆಟಗಾರ ಬಾಬ್ ಸಿಂಪ್ಸನ್ ಅವರಿಗೆ ಗೌರವ ಸಲ್ಲಿಸಲು ಆಸ್ಟ್ರೇಲಿಯಾ ಆಟಗಾರರು ತೋಳಿಗೆ ಕಪ್ಪುಪಟ್ಟಿ ಧರಿಸಿ ಆಡಿದರು.

ಉಭಯ ತಂಡಗಳು ಮೂರು ಪಂದ್ಯಗಳ ಏಕದಿನ ಸರಣಿ ಆಡಲಿದ್ದು, ಮೊದಲ ಪಂದ್ಯ ಮಂಗಳವಾರ ನಡೆಯಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಅಪರೂಪದ ಕಣಜ
ಶತಮಾನಗಳ ಹಿಂದಿನ ಅಸಂಖ್ಯ ದಿನಬಳಕೆ, ಕೃಷಿ ಉಪಕರಣಗಳ ಸಂಗ್ರಹ ಶಿರಸಿಯಲ್ಲಿರುವ 'ಕಣಜ'ದಲ್ಲಿದೆ. 12

ರಂಗದ ಮೇಲೆ ಝಗಮಗಿಸುವ ದೀಪಗಳ ನಡುವೆ ಮಿಣಮಿಣ ಮಿಂಚುವ ಪೋಷಾಕು ಧರಿಸಿ, ಬಣ್ಣ ಬಳಿದುಕೊಂಡು ಪಾತ್ರ ಮಾಡಿ, ರಂಗರಸಿಕರನ್ನು ರಂಜಿಸುವುದೇ ಈ ಕಲಾವಿದೆಯರ ಕಾಯಕ. ರಂಗದ ಮೇಲಿನ ಬಲ್ಬುಗಳು ಆರುವಷ್ಟರಲ್ಲಿ ಜಗತ್ತಿಗೆ ಬೆಳಕಾಗುತ್ತದೆ. ಆಗ ಇವರ ಬದುಕು ಕತ್ತಲೆಗೆ ಜಾರುತ್ತದೆ...

ರಂಗನಾಯಕಿಯರ ಹಾಡುಪಾಡು

• ಸಂತೋಷ ಈ. ಚಿನಗುಡಿ

ಆಗ...

ಸಂಪತ್ತಿಗೆ ಸವಾಲ್, ಅಜಾತ ನಾಗಲಿಂಗ ಲೀಲೆ, ಹೇಮರಡ್ಡಿ ಮಲ್ಲಮ್ಮ, ಸತಿ ಸಕ್ಕೂಬಾಯಿ ಮುಂತಾದ ನಾಟಕಗಳು ಸಾಮಾಜಿಕ ಸಂದೇಶ ವಾಹಕಗಳಾಗಿದ್ದವು. 'ಸಂಪತ್ತಿಗೆ ಸವಾಲ್' ನಾಟಕ ಮಾಡುವಾಗ ನಾನು ತುಂಬು ಗರ್ಭಿಣಿ. ನಾನು ಪಾತ್ರ ಒಲ್ಲೆ ಎಂದರೂ ಊರಿನ ಜನ ಕೇಳಲಿಲ್ಲ. ನೀವೇ ಪಾತ್ರ ಮಾಡಬೇಕು ಎಂದು ಹಟ ಹಿಡಿದರು. ನಟನೆಗೆ ಅಷ್ಟು ಬೆಲೆ ಇತ್ತು–ಇದು ಹುಬ್ಬಳ್ಳಿಯ ಹಿರಿಯ ಕಲಾವಿದೆ ಅನ್ನಪೂರ್ಣ ಅವರ ಮಾತು.

ಈಗ...

'ನಾನು ಒಂದು ನಾಟಕಕ್ಕೆ 20 ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇನೆ. ಗ್ರಾಮೀಣ ನಾಟಕಗಳಲ್ಲಿ ಹಣ ಗಳಿಕೆ ಚೆನ್ನಾಗಿಯೇ ಆಗುತ್ತಿದೆ. ಆದರೆ, ಆತ್ಮಗೌರವದ್ದೇ ಪ್ರಶ್ನೆ. ರಂಗದ ಮೇಲೆ ಹಾಡಿ, ಕುಣಿದು, ನಗಿಸಿ, ಮುದ್ದಿಸಿ ಮಾಡುವ ಪಾತ್ರಗಳೆಲ್ಲವೂ ಸುಳ್ಳು. ತೆರೆ ಬಿದ್ದ ಮೇಲೆ ಎದುರಾಗುವ ಆತ್ಮಗೌರವದ ಪ್ರಶ್ನೆಯೇ ನಿಜವಾದ ಬದುಕು. ನಾನು ಈ ಪಾತ್ರ ಚೆನ್ನಾಗಿ ಮಾಡುತ್ತೇನೆ ಎಂದು ಹುಮ್ಮಸ್ಸಿನಿಂದ ಹೋಗುತ್ತೇನೆ. ನಾಟಕ ಮುಗಿದ ಮೇಲೆ ನಾನೇಕೆ ಇದನ್ನು ಮಾಡಿದೆ ಎಂಬ ನೋವು ಕಾಡುತ್ತದೆ. ಇನ್ನೊಮ್ಮೆ ಇಂಥ ಪಾತ್ರಗಳನ್ನು ಒಪ್ಪುವುದು ಬೇಡ ಎಂದು ದೃಢವಾಗಿ ಅಂದು-ಕೊಂಡಿರುತ್ತೇನೆ. ಹೊಟ್ಟೆಪಾಡಿನ ಪ್ರಶ್ನೆ ಬಂದಾಗ ಮತ್ತೆ ಬಣ್ಣ ಹಚ್ಚುತ್ತೇನೆ' ಎನ್ನುವುದು ಬೆಳಗಾವಿಯ ಹದಿನೆಂಟರ ಹರೆಯದ ರೂಪಾಲಿಯ ತೊಳಲಾಟ.

ಹಿರಿಯ ಮತ್ತು ಕಿರಿಯ ಕಲಾವಿದೆಯರಿಬ್ಬರ ಮಾತು ಗ್ರಾಮೀಣ ನಾಟಕಗಳು ಮಗ್ಗಲು ಬದಲಿಸಿರುವುದನ್ನು ಸ್ಪಷ್ಟವಾಗಿ ಹೇಳುತ್ತವೆ. ಇಂತಹ ನೂರಾರು ಕಲಾವಿದೆಯರು ನಾಡಿನ ಮೂಲೆ ಮೂಲೆಯಲ್ಲಿದ್ದಾರೆ. ಅವರ ಪ್ರತಿನಿಧಿಯಂತಿದ್ದಾರೆ; ಈ ಇಬ್ಬರು ಕಲಾವಿದೆಯರು.

ಇಂಥ ಕಲಾವಿದೆಯರ ಬಾಳು ಬೆಳಗುವುದೇ ಕತ್ತಲಾದ ಮೇಲೆ. ರಂಗಸಜ್ಜಿಕೆ ಮೇಲೆ ಝಗಮಗಿಸುವ ದೀಪಗಳ ನಡುವೆ, ಮಿಣಮಿಣ ಎನ್ನುವ ಬಟ್ಟೆ ಧರಿಸಿ, ಬಣ್ಣ ಬಳಿದುಕೊಂಡು ಪಾತ್ರ ಮಾಡಿ, ರಂಗ ರಸಿಕರನ್ನು ರಂಜಿಸುವುದೇ ವೃತ್ತಿ ಧರ್ಮ. ರಂಗದ ಮೇಲಿನ ದೀಪ ಆರಿದ ಮೇಲೆ ಜಗತ್ತಿಗೆ ಬೆಳಕಾಗುತ್ತದೆ. ಆಗ ಇವರ ಬದುಕು ಕತ್ತಲೆಗೆ ಜಾರುತ್ತದೆ...

'ಗ್ರಾಮೀಣ ನಾಟಕ'ಗಳನ್ನೇ ನಂಬಿಕೊಂಡ ಅಪಾರ ಸಂಖ್ಯೆಯ ರಂಗನಟಿಯರ ಕಥನಗಳಲ್ಲಿ ಕರುಣ ರಸವೇ ಹೆಚ್ಚು. ಪ್ರೇಕ್ಷಕರ ಮುಂದೆ ಕುಣಿದು ಕುಪ್ಪಳಿಸುವ, ರಂಗೋನ್ಮಾದ ನೀಡುವ ಕಲಾವಿದೆಯರ ಬದುಕು ನಾಟಕದಲ್ಲಷ್ಟೇ ವರ್ಣರಂಜಿತ; ರಂಗದ ಹಿಂದೆ ವರ್ಣಹೀನ.

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ನಾಟಕಗಳಲ್ಲಿ 'ಡಬಲ್ ಮೀನಿಂಗ್' ಸಂಭಾಷಣೆಯೇ ಪ್ರಧಾನ. ಅಶ್ಲೀಲ ಹಾವಭಾವವೇ ಮುಖ್ಯ. ಐಟಂ ಸಾಂಗ್‌ಗಳೇ ಆಧಾರ. ಕಲಾವಿದೆಯರನ್ನು ರಂಗದ ಮೇಲೆ ಬರಸೆಳೆಯುವ, ತಬ್ಬುವ, ಮುದ್ದಿಸುವ, ಸಿನಿಮಾ ಹಾಡಿಗೆ ಕುಣಿಸುವ, ಖಾಸಗಿತನಕ್ಕೆ ಧಕ್ಕೆ ತರುವಂಥ ಯತ್ನಗಳೇ ಹೆಚ್ಚಾಗಿವೆ. ಇದೆಲ್ಲಕ್ಕೂ ಒಪ್ಪಿದರೆ ಮಾತ್ರ ಅವಕಾಶಗಳು ಸಿಗುತ್ತವೆ. ಒಪ್ಪದಿದ್ದರೆ ಹಣ ಕೊಡುತ್ತಾರೋ ಇಲ್ಲವೋ ಎಂಬ ಭಯ ಇವರನ್ನು ಮುತ್ತಿಕೊಳ್ಳುತ್ತದೆ.

ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಉತ್ಸವ, ಹಬ್ಬ, ಸಮಾರಂಭಗಳಲ್ಲಿ ನಾಟಕ ಮಾಡುವ ಉಮೇದು ಹೆಚ್ಚಾಗಿದೆ. ನಿರ್ದೇಶಕ, ನಿರ್ಮಾಪಕ, ಮ್ಯಾನೇಜರ್, ಪಾತ್ರಧಾರಿಗಳೆಲ್ಲರೂ ಹಳ್ಳಿಯವರೇ. ಇವರೆಲ್ಲ ಹವ್ಯಾಸಿಗಳು. ಆದರೆ, ಪಾತ್ರ ಮಾಡುವ ಕಲಾವಿದೆಯರೆಲ್ಲರೂ ವೃತ್ತಿಪರರು. ಹೀಗಾಗಿ, ನಾಟಕಕ್ಕೆ ಇರಬೇಕಾದ ಶಿಸ್ತು ಹಾಗೂ ಸೌಜನ್ಯವನ್ನೂ ಮೀರಿ ಯುವಜನರು ವರ್ತಿಸುವ ಘಟನೆಗಳು ಸಾಕಷ್ಟು ಸಿಗುತ್ತವೆ.

ಜೇವರ್ಗಿಯ ವಿಶ್ವಜ್ಯೋತಿ ಶ್ರೀ ಪಂಚಾಕ್ಷರಿ ನಾಟ್ಯಸಂಘದವರ 'ಗಂಗಿ ಮನ್ಯಾಗ– ಗೌರಿ ಹೊಲದಾಗ' ನಾಟಕದ ದೃಶ್ಯ

'ಕಲಾರಸಿಕರು ಕೇಳಿದ್ದನ್ನು ನೀಡುವುದೊಂದೇ ನಮ್ಮ ಕೆಲಸ. ಅವರನ್ನು ಖುಷಿಪಡಿಸಿ ಬರುತ್ತೇವೆ. ಆದರೆ, ನಾವು ನೋವು ತಿನ್ನುತ್ತೇವೆ' ಎನ್ನುತ್ತಾರೆ ಕಲಾವಿದೆ ರೂಪಾಲಿ.

ಅಂದೊಂದಿತ್ತು ಕಾಲ

ಏಣಗಿ ಬಾಳಪ್ಪ, ಸುಭದ್ರಮ್ಮ ಮನ್ಸೂರ, ಚಿಂದೋಡಿ ಲೀಲಾ ಅವರಂಥ ನೂರಾರು ಕಲಾವಿದರು ಸಮಾಜಕ್ಕೆ ದಾರಿ ತೋರಿದರು. ಉತ್ತರ ಕರ್ನಾಟಕದಲ್ಲಿ ಇವರ ನಾಟಕ ಇದ್ದ ಕಡೆ ಚಿತ್ರಮಂದಿರಗಳು ಖಾಲಿ ಬೀಳುತ್ತಿದ್ದವು ಎನ್ನುವುದನ್ನು ಹಿರಿಯರು ನೆನೆಯುತ್ತಾರೆ. ಇವರ ನಂತರದ ಜೂನಿಯರ್ ಮಾಲಾಶ್ರೀ, ಜೂನಿಯರ್ ಶ್ರೀದೇವಿ, ಜೂನಿಯರ್ ಸಿಲ್ಕ್ ಸ್ಮಿತಾ ಎಂದು ಕರೆಸಿಕೊಂಡು ಹೆಸರು ಮಾಡಿದವರೂ ಸಾಕಷ್ಟು ಕಲಾವಿದೆಯರು ಇದ್ದಾರೆ.

ರಕ್ತರಾತ್ರಿ, ಕುರುಕ್ಷೇತ್ರ, ಸತಿ ಸಾವಿತ್ರಿ ಮುಂತಾದ ಪೌರಾಣಿಕ ನಾಟಕಗಳು; ಜಗಜ್ಯೋತಿ ಬಸವೇಶ್ವರ, ಸಿದ್ಧಾರೂಢ ಮಹಾತ್ಮೆ, ಕಿತ್ತೂರು ಹುಲಿ, ವೀರ ಸಿಂಧೂರ ಲಕ್ಷ್ಮಣನಂಥ ಐತಿಹಾಸಿಕ ಪ್ರಯೋಗಗಳು; ಗೌಡರ ಗದ್ದಲ, ನನ್ನವರು ನನ್ನ ಹಡೆದವರು, ಚನ್ನಪ್ಪ ಚನ್ನೇಗೌಡ, ವರ ನೋಡಿ ಹೆಣ್ಣುಕೊಡು, ಬೆಳ್ಳಿ–ಬಂಗಾರ, ಮಾವನ ಮಗಳು, ರೈತನ ಮಕ್ಕಳು, ಕಲಿತೂ ಕತ್ತೆ, ತಾಯಿಯಂಥ ಅತ್ತಿಗೆ... ಮುಂತಾದ ಸಾಮಾಜಿಕ ನಾಟಕಗಳು ಸಮಾಜದ ಪಿಡುಗಿನ ವಿರುದ್ಧ ಅಸ್ತ್ರಗಳಾಗಿ ಪ್ರಯೋಗವಾದವು.

ಅಪ್ಪ ಮಂದ್ಯಾಗ-ಮಗಳು ಸಂದ್ಯಾಗ, ಖಾನಾವಳಿ ಚನ್ನಿ, ನೋಡ್ಯಾಳ ರೊಕ್ಕ- ಬಂದಾಳ ಪಕ್ಕ... ಈಗಿನ ಹೆಸರುಗಳು! ಇವು ಬದಲಾದ ಪ್ರೇಕ್ಷಕರ ಅಭಿರುಚಿಯನ್ನು ಸಂಕೇತಿಸುವಂತಿವೆ.

'ಬಹಳಷ್ಟು ಕಡೆ ನನ್ನನ್ನು ನಾಟಕ ಉದ್ಘಾಟನೆಗೆ ಕರೆಯುತ್ತಾರೆ. ಉದ್ಘಾಟನೆ ಬಳಿಕ ನಾಟಕ ನೋಡದೇ ಬರುತ್ತೇನೆ. ನನ್ನಂಥವರು ನೋಡಲು ಸಾಧ್ಯವೇ ಇಲ್ಲ; ಅಷ್ಟೊಂದು ಕೀಳು ಅಭಿರುಚಿ ಈಗ ಬೆಳೆದುಬಿಟ್ಟಿದೆ' ಎನ್ನುತ್ತಾರೆ ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತೆ ಕೆ.ನಾಗರತ್ನ.

'ರಂಗಭೂಮಿಗೆ ಗುಟುಕು ನೀರು ಕುಡಿಸಿ ಬದುಕಿಸಿದ್ದೇ ಗ್ರಾಮೀಣರು. ಆದರೆ, ಒಂದು ದಶಕದಿಂದ ಈಚೆಗೆ ಹವ್ಯಾಸಿಗಳ ನಾಟಕಗಳು ನಾಟಕಗಳಾಗಿ ಉಳಿದಿಲ್ಲ. ವೇದಿಕೆಯಲ್ಲಿ ಕಾಮ ಪ್ರಚೋದನೆಯೇ ಮುಖ್ಯ ಎನ್ನುವಂತಾಗಿದೆ. ಹುಡುಗಿ ಉನ್ಮಾದದಲ್ಲಿ ಕುಣಿದರೆ ಮಾತ್ರ ಪ್ರೇಕ್ಷಕರು ಹುಚ್ಚೆದ್ದು ಕುಣಿಯುತ್ತಾರೆ. ನಾಟಕ ಬದುಕಿನ ಕನ್ನಡಿಯಾಗಬೇಕು. ಪ್ರಚೋದನೆ ಆಗಬಾರದು. ಕಲಾವಿದೆಯರು ಎಲ್ಲವನ್ನೂ ಹೇಗೆ ಸಹಿಸಿಕೊಳ್ಳುತ್ತಾರೆ ಎಂಬುದೇ ನನಗೆ ಅಚ್ಚರಿ' ಎಂದು ಅವರು ಕಸಿವಿಸಿಗೊಂಡರು.

11ನೇ ಪುಟಕ್ಕೆ...

ಆಗ ಅಮೃತ ಈಗ ಅಮಲು

ಆರು ದಶಕ ರಂಗಭೂಮಿಯಲ್ಲಿದ್ದೆ. ನಾಟಕಕ್ಕೆ 25 ರೂಪಾಯಿ ಸಂಭಾವನೆ ಸಿಗುತ್ತಿತ್ತು. ನಾಟಕ ಅಮೃತ ಎನ್ನುತ್ತಿದ್ದೆವು. ಈಗ ಅಮಲು ಎನ್ನುವಂತಾಗಿದೆ. ಸತ್ಯ ಹರಿಶ್ಚಂದ್ರ ಸುಡಗಾಡು ಕಾದ ಪಾತ್ರ ಕಂಡು ಪ್ರೇಕ್ಷಕರು ಕಣ್ಣೀರು ಹಾಕಿದ್ದನ್ನು ನೋಡಿದ್ದೇನೆ. ಪರಕಾಯ ಪ್ರವೇಶ ಮಾಡಿ ನಾನೂ ಕಣ್ಣೀರು ಹಾಕಿದ್ದೇನೆ. ಅಷ್ಟೊಂದು ತನ್ಮಯತೆ ಇತ್ತು. ಆ ಪರಂಪರೆ ಮಣ್ಣಾಗಿದೆ.

ಕೆ.ನಾಗರತ್ನ,
ಬಳ್ಳಾರಿ

ಬೆಳಗಾವಿ ಜಿಲ್ಲೆಯ ಹಳ್ಳೂರ ಗ್ರಾಮದಲ್ಲಿ 'ರೈತನ ರಾಜ್ಯದಲ್ಲಿ ರಾಯಣ್ಣ' ನಾಟಕ ನೋಡಲು ಸೇರಿದ ಜನ

ಹಣ ಹೆಚ್ಚು, ಗೌರವ ಕಡಿಮೆ

ನಾನು ಐದು ವರ್ಷದವಳಿದ್ದಾಗ ಮೊದಲು ಬಣ್ಣ ಹಚ್ಚಿದೆ. ಆಗ ನಾಟಕಕಾರ ಬರೆದಿದ್ದೆಲ್ಲವನ್ನೂ ತಾಲೀಮು ನಡೆಸುತ್ತಿದ್ದೆವು. ಹಾರ್ಮೋನಿಯಂ ಮಾಸ್ತರ್ ಹೇಳುವ ಎಲ್ಲ ಹಾಡುಗಳನ್ನೂ ನಾವೇ ಹಾಡಬೇಕಿತ್ತು. ಅದಕ್ಕೆ ಸಂಗೀತ ಕಲಿಯುವುದು ಅನಿವಾರ್ಯವಾಗಿತ್ತು. ಈಗ ಹೆಣ್ಣು–ಗಂಡು ಧ್ವನಿಗಳಲ್ಲಿ ಒಬ್ಬರೇ ಹಾಡುವವರು ಸಿಗುತ್ತಾರೆ. ಕಲಾವಿದೆಯರಿಗೆ ಶ್ರಮ ಇಲ್ಲ. ಕೈ ತುಂಬ ಹಣ ಸಿಗುತ್ತದೆ. ಆದರೆ, ಗೌರವ ಸಿಗುತ್ತಿಲ್ಲ. 12ನೇ ವಯಸ್ಸಿಗೇ ಮೈ ಚಳಿ ಬಿಟ್ಟು ಕುಣಿಯುವವರೂ ನಾಟಕಕ್ಕೆ ಬರುತ್ತಿದ್ದಾರೆ.

ಭಾರತಿ ಮನೂಬಾಯಿ,
ದಾವಣಗೆರೆ

ಆಕಳು – ಎತ್ತು ಎಮ್ಮೆಗಳಿಗೂ ಹಾಸ್ಟೆಲ್!

'ಜಾನುವಾರುಗಳಿಗೂ ವಸತಿ ನಿಲಯವೇ!' ಎಂದು ಹುಬ್ಬೇರಿಸಬೇಡಿ. ಗದಗ ಸಮೀಪದ ಕುರ್ತಕೋಟಿಯಲ್ಲಿ ರಾಜ್ಯದ ಏಕೈಕ ಜಾನುವಾರುಗಳ ವಸತಿ ನಿಲಯವಿದೆ. ಇದೊಂದು ಹೈಟೆಕ್ ಹಾಸ್ಟೆಲ್ ಎನ್ನಲು ಅಡ್ಡಿಯಿಲ್ಲ. ಅಲ್ಲಿ ಏನೇನಿದೆ ಅಂದ್ರೆ...

• ಕೆ.ಎಂ. ಸತೀಶ್ ಬೆಳ್ಳಕ್ಕಿ

ಒಮ್ಮೆ ಕುರ್ತಕೋಟಿ ಗ್ರಾಮದಲ್ಲಿ ಸಂಚರಿಸುವಾಗ 'ಜಾನುವಾರುಗಳ ವಸತಿ ನಿಲಯ' ಎನ್ನುವ ಬೋರ್ಡ್ ಕಾಣಿಸಿತು! ಕುತೂಹಲದಿಂದಲೇ ವಸತಿ ನಿಲಯವನ್ನು ಪ್ರವೇಶಿಸಿದೆ. ಅದೊಂದು ದೊಡ್ಡ ಶೆಡ್. ಅಲ್ಲಿ 80ಕ್ಕೂ ಅಧಿಕ ಎತ್ತು ಎಮ್ಮೆಗಳನ್ನು ಕಟ್ಟುವ ವ್ಯವಸ್ಥೆ ಇದೆ. ಜತೆಗೆ ಮೇವಿನ ದಾಸ್ತಾನು ಕೊಠಡಿ, ಜಾನುವಾರು ಚಿಕಿತ್ಸಾ ಕೊಠಡಿ, ಸಿಬ್ಬಂದಿ ಕೊಠಡಿ, ಔಷಧಿ ದಾಸ್ತಾನು ಕೊಠಡಿ, ಉತ್ತಮ ಗಾಳಿ ಬೆಳಕಿನ ವ್ಯವಸ್ಥೆ, ಕುಡಿಯುವ ನೀರು, ಆಕಳು, ಎತ್ತು, ಎಮ್ಮೆಗಳ ಮೈತೊಳೆಯಲು ಯಂತ್ರಗಳೂ ಇದ್ದವು. ಇದನ್ನು ಸ್ಥಳೀಯರು ಆಕಳು, ಎತ್ತು, ಎಮ್ಮೆಗಳ ಹಾಸ್ಟೆಲ್ ಎಂದೂ ಕರೆಯುತ್ತಾರೆ!

ಹುಲಕೋಟಿ ಮತ್ತು ಕುರ್ತಕೋಟಿ ನಡುವೆ ಇರುವ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಶ್ಯಾಮ್‌ಪ್ರಸಾದ್ ಮುಖರ್ಜಿ ರೂರ್ಬನ್ ಮಿಷನ್ ಯೋಜನೆ ಅಡಿ ₹1 ಕೋಟಿ ವೆಚ್ಚದಲ್ಲಿ ಜಾನುವಾರುಗಳಿಗೆ 14 ಸಾವಿರ ಚದರಡಿಯ ಹೈಟೆಕ್ ವಸತಿ ನಿಲಯ ನಿರ್ಮಿಸಲಾಗಿದೆ. ಇದು ಗದಗ ತಾಲ್ಲೂಕಿನ ಕುರ್ತಕೋಟಿ ಗ್ರಾಮದಿಂದ ಅಂದಾಜು ಎರಡು ಕಿಲೋಮೀಟರ್ ದೂರದಲ್ಲಿದೆ.

'ನಮ್ ಜೀವ್ನ ನಡೀತಿರೋದೋ ಆಕಳ ಹಾಲಿನಿಂದ ಸಿಗೋ ರೊಕ್ಕದ ಮ್ಯಾಲೇ. ಮನೆಯ್ಯಾಗಿನ ಲಗ್ನ, ಹಬ್ಬ ಹರಿದಿನ ಎಲ್ಲ ಇವ್‌ಗಳ ರೊಕ್ಕದ ಮ್ಯಾಲೇ ನಡೆದ್ಯೆತಿ. ಮನ್ಯಾಗಾ ಕೊಟ್ಗೆ ಇಲ್ಲದಕ್ಕ ಮುಂಚ್ಯಾಕ ಆಕಳೆಲ್ಲಾ ಬಿಸ್ಲು, ಗಾಳಿ, ಮಳ್ಯಾಗ ನೆನೀತಿದ್ವು. ಇಲ್ಲೀ ಹಾಕ್ಸು ಆದ್‌ಮ್ಯಾಕೆ ಬಾಳ ಅನುಕೂಲ ಆಗ್ಯೆತಿ. ಆಕಳು ಈಗ ಬೆಚ್ಗೆ ಇರ್ತಾವೆ' ಎಂದು ಕುರ್ತಕೋಟಿಯ ರೈತ ಮಲ್ಲಪ್ಪ ಖುಷಿಯಿಂದ ಹೇಳಿದರು.

ಮಲ್ಲಪ್ಪ, ಇವರ ಸಹೋದರರಾದ ರೋಣಪ್ಪ, ಕರಿಯಪ್ಪ ಮತ್ತು ಮಂಜಪ್ಪ ಅವರ ಬದುಕಿಗೆ ಆರ್ಥಿಕ ಬಲ ತುಂಬಿರುವುದು ಹೈನುಗಾರಿಕೆ. ತಮ್ಮ ಬಳಿ ಇರುವ 22 ಎಮ್ಮೆಗಳನ್ನು ಕಾಳಜಿ ಮಾಡುವ ಉದ್ದೇಶದಿಂದ ಈ ಹಾಸ್ಟೆಲ್‌ನಲ್ಲಿ ಇಟ್ಟಿದ್ದಾರೆ. ಒಂದು ಎಮ್ಮೆಗೆ ತಿಂಗಳಿಗೆ ₹200ರಂತೆ ಪ್ರತಿ ತಿಂಗಳು ₹4,400 ಶುಲ್ಕ ಪಾವತಿಸುತ್ತಿದ್ದಾರೆ.

ಮುಂಡರಗಿ ತಾಲ್ಲೂಕಿನ ಜಂತ್ಲಿಶಿರೂರಿನ ಲಕ್ಷ್ಮವ್ವ ಮಾಬಡ್ಡಿ ಮತ್ತು ನಿಂಗಪ್ಪ ಮಾಬಡ್ಡಿ ಸಹೋದರಿಯರು ಕುರ್ತುಕೋಟಿ ಗ್ರಾಮದ ಅಣ್ಣ ತಮ್ಮಂದಿರನ್ನು ವರಿಸಿ 20 ವರ್ಷಗಳಾಗಿವೆ. ಮದುವೆ ಸಂದರ್ಭದಲ್ಲಿ ಉಡುಗೊರೆಯಾಗಿ ಅವರಿಗೆ ತವರು ಮನೆಯವರು ಮುರ್ರಾ ತಳಿಯ ಒಂದು ಎಮ್ಮೆ ಕೊಟ್ಟಿದ್ದರು. ಅಂದಿನಿಂದಲೂ ಹೈನುಗಾರಿಕೆಯಲ್ಲಿ ತೊಡಗಿರುವ ಈ ಸಹೋದರಿಯರ ಬಳಿ ಈಗ 14 ಎಮ್ಮೆಗಳಿವೆ. ಇವರು ಕೂಡ ಪ್ರಾರಂಭದ ಮೂರು ತಿಂಗಳು ತಮ್ಮ ಎಮ್ಮೆಗಳಿಗೆ ಈ ಹಾಸ್ಟೆಲ್‌ನ ಸೌಲಭ್ಯ ಪಡೆದುಕೊಂಡಿದ್ದಾರೆ.

'ಜಾನುವಾರು ಹಾಸ್ಟೆಲ್‌ನಿಂದ ರೈತರಿಗೆ ಉಪಯೋಗ ಆಗಿದೆ. ಪ್ರಾರಂಭದಲ್ಲಿ ಮೂರು ತಿಂಗಳು ಮೇವು, ನೀರು, ಜಾಗ ಎಲ್ಲ ಉಚಿತವಾಗಿ ಕೊಟ್ಟರು. ಆಮೇಲೆ ತಿಂಗಳಿಗೆ ಒಂದು ಆಕಳು–ಎಮ್ಮೆಗೆ ಇಷ್ಟು ಕೊಡಬೇಕು ಅಂದ್ರು. ಆದರೆ, ಎಮ್ಮೆಗಳು ಎಲ್ಲ ಸಮಯದಲ್ಲೂ ಹಾಲು ಹಿಂಡಲ್ಲ. ಹಾಲು ಹಿಂಡುವುದಕ್ಕೂ ಒಂದೇ ಶುಲ್ಕ, ಹಿಂಡದಿರುವುದಕ್ಕೂ ಒಂದೇ ಶುಲ್ಕ ಮಾಡಿದ್ರೆ ನಮಗೆ ಉಳಿಯುವುದಾದರೂ ಏನು? ಸರ್ಕಾರದ ಯಾವುದಾದರೂ ಒಂದು ಯೋಜನೆ ತಂದು ಮೊದಲು ಮಾಡಿದಂತೆ ಉಚಿತ ವ್ಯವಸ್ಥೆ ಮಾಡಿದ್ರೆ ಛಲೋ ಆಗ್ತದೆ' ಅಂದರು ಈ ಸಹೋದರಿಯರು.

ಆಕಳು, ಎತ್ತು, ಎಮ್ಮೆಗಳನ್ನು ಸಾಕಬೇಕು ಎಂಬ ಆಸೆ ಎಲ್ಲ ರೈತರಿಗೂ ಇದೆ. ಆದರೆ, ಕೆಲವು ರೈತರಿಗೆ ಜಾಗದ ಕೊರತೆ ಇದೆ. ಅಂಥವರಿಗೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಜಾನುವಾರುಗಳಿಗೆ ಸುಸಜ್ಜಿತ ವಸತಿನಿಲಯ ತೆರೆಯಲಾಗಿದೆ. ಕುರ್ತಕೋಟಿ ಗ್ರಾಮ ಪಂಚಾಯಿತಿ ಹೇಳುವಂತೆ, ಜಾನುವಾರುಗಳಿಗಾಗಿ ತೆರೆದಿರುವ ರಾಜ್ಯದ ಮೊದಲ ವಸತಿನಿಲಯ ಇದು.

ಜಾನುವಾರು ವಸತಿನಿಲಯದಲ್ಲಿರುವ ಎಮ್ಮೆಗಳು

ಚಿತ್ರಗಳು: ಬನೇಶ ಕುಲಕರ್ಣಿ

ಜಾನುವಾರು ವಸತಿನಿಲಯದ ಹೊರನೋಟ

'ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಬಲಪಡಿಸುವ ಹೈನುಗಾರಿಕೆಯನ್ನು ಉತ್ತೇಜಿಸುವುದು ಹಾಗೂ ಒಕ್ಕಲುತನ ಪರಂಪರೆ ಮುಂದುವರಿಸುವುದು ಜಾನುವಾರು ವಸತಿನಿಲಯ ಸ್ಥಾಪನೆಯ ಉದ್ದೇಶ. ಇದು ಗದಗ ಶಾಸಕ ಎಚ್‌.ಕೆ.ಪಾಟೀಲರ ಪರಿಕಲ್ಪನೆ' ಎನ್ನುತ್ತಾರೆ ಕುರ್ತಕೋಟಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಪ್ಪಣ್ಣ ಇನಾಮತಿ.

ಒಮ್ಮೆ ಅಪ್ಪಣ್ಣ ಗುಜರಾತ್‌ಗೆ ಹೋಗಿದ್ದರು. ಅಲ್ಲಿನ ಹಳ್ಳಿಯೊಂದರಲ್ಲಿ ಜಾನುವಾರು ವಸತಿನಿಲಯ ಇರುವುದು ಗೊತ್ತಾಗಿ ಅಲ್ಲಿಗೆ ಹೋದರು. ದೊಡ್ಡ ಶೆಡ್ ನಿರ್ಮಿಸಿ, ಒಳಗೆ ಅದನ್ನು ಮತ್ತೆ ವಿಭಾಗಿಸಿ ಸಣ್ಣ ಸಣ್ಣ ಶೆಡ್‌ಗಳನ್ನು ಮಾಡಿದ್ದರು. ಜಾಗದ ಕೊರತೆ ಇರುವ ರೈತರು ಜಾನುವಾರುಗಳನ್ನು ಕಟ್ಟಿ ಅಲ್ಲೇ ಪೋಷಣೆ ಮಾಡುತ್ತಿದ್ದರು. ಇದರಿಂದ ಪ್ರಭಾವಿತರಾಗಿ ಈ ಕುರಿತು ಶಾಸಕರೊಂದಿಗೆ ಚರ್ಚಿಸಿ, ಜಾನುವಾರು ವಸತಿನಿಲಯ ನಿರ್ಮಿಸುವ ಯೋಜನೆ ರೂಪಿಸಲು ಕಾರಣರಾದರು.

'ಜಾನುವಾರುಗಳಿಗೆ ಮೇವು, ನೀರು ಕೊಟ್ಟರೆ ಅದು ಗೋಶಾಲೆ ಆಗುತ್ತದೆ. ಗೋಶಾಲೆ ಬೇರೆ, ವಸತಿನಿಲಯವೇ ಬೇರೆ. ಮಕ್ಕಳಿಗೆ ಮನೆಯಲ್ಲಿ ಕಲಿಸಲು ಸಾಧ್ಯವಿಲ್ಲದಿದ್ದಾಗ ಪೋಷಕರು ಹಾಸ್ಟೆಲ್‌ಗೆ ಹಾಕುತ್ತಾರೆ. ಅದೇ ರೀತಿ, ವಸತಿನಿಯಲದಲ್ಲಿ ಜಾನುವಾರುಗಳನ್ನು ನಾವು ವರ್ಷಪೂರ್ತಿ ಪೋಷಣೆ ಮಾಡುವ ಉದ್ದೇಶ ಹೊಂದಿದ್ದೇವೆ. ಈ ಕಾರಣಕ್ಕೆ ವಸತಿನಿಲಯ ಅಂತ ಹೆಸರಿಟ್ಟಿದ್ದೇವೆ' ಎನ್ನುತ್ತಾರೆ ಅಪ್ಪಣ್ಣ ಇನಾಮತಿ.

ಜಾನುವಾರು ವಸತಿನಿಲಯ ಪರಿಕಲ್ಪನೆ ಚೆನ್ನಾಗಿದೆ. ಆದರೆ, ರೈತರು ಹೆಚ್ಚಿನ ಆಸಕ್ತಿ ತೋರುತ್ತಿಲ್ಲ ಎನ್ನುವುದು ಅವರ ಕೊರಗು.

ವಸತಿನಿಲಯವನ್ನು ಪಂಚಾಯಿತಿ ನಿರ್ವಹಣೆ ಮಾಡುತ್ತಿದೆ. ಪಶುಗಳಿಗೆ ಮೇವು, ನೀರು ಪೂರೈಕೆ, ವಿಮೆ, ಔಷಧಿ, ಚಿಕಿತ್ಸೆ, ವಿದ್ಯುತ್ ಶುಲ್ಕ, ಸಿಬ್ಬಂದಿ ವೆಚ್ಚ ಸೇರಿದಂತೆ ಒಂದು ಆಕಳಿಗೆ ತಿಂಗಳಿಗೆ ₹7 ಸಾವಿರ ನಿಗದಿಪಡಿಸಬೇಕು ಎಂದು ಪಶುಪಾಲನಾ ತಜ್ಞರು ಶಿಫಾರಸು ಮಾಡಿದ್ದರು. ಆದರೆ, ಪಂಚಾಯಿತಿ ಒಂದು ಆಕಳಿಗೆ ₹2 ಸಾವಿರ ನಿಗದಿ ಮಾಡುವುದಾಗಿ ಹೇಳಿದರೂ ರೈತರು ಸ್ಪಂದಿಸಲಿಲ್ಲ ಎನ್ನುವ ಮಾತು ಕೇಳಿಬಂದಿತು.

'ವಸತಿನಿಲಯ ಊರಿನಿಂದ ಎರಡು ಕಿಲೋಮೀಟರ್ ದೂರದಲ್ಲಿದೆ. ಹೆಣ್ಣುಮಕ್ಕಳು ಪ್ರತಿದಿನ ಅಲ್ಲಿಗೆ ಎಮ್ಮೆ ಕಟ್ಟಿ, ಹಾಲು ಹಿಂಡುವುದು ಪ್ರಾಯೋಗಿಕವಾಗಿ ಸಾಧ್ಯವಾಗುತ್ತಿಲ್ಲ. ಪ್ರಾರಂಭದಲ್ಲಿ ಮೂರು ತಿಂಗಳು ಸಚಿವ ಎಚ್‌.ಕೆ.ಪಾಟೀಲ ಅವರು ₹5 ಲಕ್ಷ ಅನುದಾನ ಕೊಟ್ಟಿದ್ದರಿಂದ ಮೇವು, ನೀರು, ಜಾಗ ಸೇರಿದಂತೆ ಎಲ್ಲ ವ್ಯವಸ್ಥೆಯನ್ನೂ ಉಚಿತವಾಗಿ ಮಾಡಿದ್ದೆವು. ರೈತರು ಈಗಲೂ ಅದೇ ರೀತಿ ವ್ಯವಸ್ಥೆ ಮಾಡಿ ಅನ್ನುತ್ತಾರೆ. ವಸತಿನಿಲಯ ನಡೆಯಬೇಕೆಂದರೆ ನಿರ್ವಹಣಾ ವೆಚ್ಚ ಪಡೆಯಲೇಬೇಕು' ಎಂದು ಅಪ್ಪಣ್ಣ ಹೇಳಿದರು.

ಸದ್ಯ ಹಾಸ್ಟೆಲ್‌ನಲ್ಲಿ 22 ಎಮ್ಮೆಗಳಿವೆ. ಒಂದಕ್ಕೆ ತಿಂಗಳಿಗೆ ₹200 ಶುಲ್ಕ ನಿಗದಿ ಮಾಡಿ, ಜಾಗವನ್ನಷ್ಟೇ ಕೊಡಲಾಗಿದೆ. ಮೇವಿನ ವ್ಯವಸ್ಥೆ ಅವರೇ ಮಾಡಿಕೊಂಡಿದ್ದಾರೆ. ವಸತಿನಿಲಯ ಸ್ಥಾಪನೆಯ ಮೂಲ ಉದ್ದೇಶ ಈಡೇರಲು ಇನ್ನಷ್ಟು ಸಮಯ ಬೇಕಾಗಬಹುದು. ಈ ನಿಟ್ಟಿನಲ್ಲಿ ಊರಿನಲ್ಲಿ ಡಂಗೂರ ಸಾರಿಸಿ, ರೈತರೊಂದಿಗೆ ಸಭೆ ನಡೆಸಿ, ಚರ್ಚಿಸಲಾಗಿದೆ. ಹೊಸದೊಂದು ಪರಿಕಲ್ಪನೆ ಯಶಸ್ವಿಯಾಗಲು ಸ್ಥಳೀಯ ಆಡಳಿತ, ಶಾಸಕರು ಮತ್ತು ರೈತರು ಮನಸ್ಸು ಮಾಡಬೇಕು. ಇದು ಫಲಪ್ರದವಾದರೆ, ಇನ್ನಷ್ಟು ಇಂತಹ ಹಾಸ್ಟೆಲ್‌ಗಳು ಆರಂಭ ಮಾಡಲು ಪ್ರೇರಣೆಯಾಗುತ್ತದೆ. ❖

ಮಕ್ಕಳೊಂದಿಗೆ ಶ್ರಿಯಾ ಶಂಕರ್ ಚರ್ಚೆ

ವಿದ್ಯಾರ್ಥಿಗಳ ಮೆಚ್ಚಿನ ಸಿತಾರಾ ಅಕ್ಕ

• ಶ್ರದ್ಧಾ ತ್ರಿವೇಣಿ

ಕುಬ್ರಾ ಚಿಕ್ಕಬಳ್ಳಾಪುರದ ವಿದ್ಯಾರ್ಥಿನಿ. ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ತೆಗೆದ ಕಾರಣಕ್ಕೆ ಶಿಕ್ಷಕರು ಆಡಿದ ಮಾತಿನಿಂದ ನಿರುತ್ಸಾಹಗೊಂಡಿದ್ದಳು. ಆದರೆ, ಕೆಲವೇ ದಿನಗಳಲ್ಲಿ ದೃಢ ನಿರ್ಧಾರಕ್ಕೆ ಬಂದಳು. ಶಿಕ್ಷಕರು ತನ್ನ ಬಗ್ಗೆ ಹೊಂದಿರುವ ಭಾವನೆಯನ್ನು ಬದಲಾಯಿಸಲೇಬೇಕು ಎನ್ನುವ ಸವಾಲನ್ನು ತನಗೆ ತಾನೇ ಹಾಕಿಕೊಂಡಳು. ಗಣಿತ ಮತ್ತು ವಿಜ್ಞಾನ ಎರಡೂ ವಿಷಯಗಳಿಗೆ 'ಸಿತಾರಾ ಅಕ್ಕ' ತರಗತಿಗಳಿಗೆ ಹಾಜರಾದಳು. ಇದರಿಂದ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನದಲ್ಲಿ ಶೇಕಡ ನೂರರಷ್ಟು ಅಂಕಗಳನ್ನು ಪಡೆದಳು. ಶಾಲೆಗೆ ಮೂರನೇ ರ‍್ಯಾಂಕ್ ಗಳಿಸಿದಳು!

ಇದು ಒಂದು ನಿದರ್ಶನವಷ್ಟೆ. ಇಂತಹ ಹತ್ತಾರು ಯಶಸ್ಸಿನ ಕತೆಗಳಿಗೆ 'ಸಿತಾರಾ ಅಕ್ಕ' ಪ್ರೇರಣೆಯಾಗಿದೆ.

ಕಡಿಮೆ ಆದಾಯವಿರುವ ಸಮುದಾಯಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸಲು ಶ್ರಿಯಾ ಶಂಕರ್ ಅವರು 'ಸಿತಾರಾ ಅಕ್ಕ' ಎನ್ನುವ ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದು ಕುಬ್ರಾ ರೀತಿಯ ಸಾವಿರಾರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮಾರ್ಗದರ್ಶಿಯಾಗಿದೆ.

ಬೆಂಗಳೂರಿನ ಜೆ.ಪಿ. ನಗರದ 'ಮಕ್ಕಳ ಮನೆ'ಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶ್ರಿಯಾ ಒಂದು ವಿಚಾರವನ್ನು ಗಮನಿಸಿದ್ದರು. ಅಲ್ಲಿನ ಮಕ್ಕಳಿಗೆ 'ನೀವು ಭವಿಷ್ಯದಲ್ಲಿ ಏನಾಗಬೇಕೆಂದಿದ್ದೀರಿ?' ಎಂದು ಪ್ರಶ್ನಿಸಿದರೆ, ಅವರಿಗೆ ಸಮರ್ಪಕವಾಗಿ ಉತ್ತರಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಮುಜುಗರ ಪಡುತ್ತಿದ್ದರು.

ಮಕ್ಕಳ ಕಲಿಕೆ ಮತ್ತು ಗ್ರಹಿಕೆಯ ನಡುವೆ ಇರುವ ಅಂತರವನ್ನು ಸೂಕ್ಷ್ಮವಾಗಿ ಗಮನಿಸಿದ ಶ್ರಿಯಾ, ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲು ನಿರ್ಧರಿಸಿದರು. ತಮ್ಮ ಸುತ್ತಮುತ್ತ ಇರುವ ಮಕ್ಕಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಸರಳವಾಗಿ ಹೇಳಿಕೊಡಲು ಆರಂಭಿಸಿದರು.

ಜೊತೆಗೆ ಐದು ವರ್ಷಗಳ ಹಿಂದೆ ಯೂಟ್ಯೂಬ್‌ನಲ್ಲಿ ಕೆಲ ವಿಡಿಯೊಗಳನ್ನು ಅಪ್ಲೋಡ್ ಮಾಡಿದರು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನ ಮತ್ತು ಗಣಿತದ ಪರಿಕಲ್ಪನೆಗಳನ್ನು ಕಂಗ್ಲಿಷ್ (ಕನ್ನಡ ಮತ್ತು ಇಂಗ್ಲಿಷ್ ಮಿಶ್ರಣ) ಭಾಷೆಯಲ್ಲಿ ವಿವರಿಸಲು ಆರಂಭಿಸಿದರು. ಒಂದು ವಾರದೊಳಗೆ ಅವರ ವಿಡಿಯೊಗಳು 20 ಸಾವಿರಕ್ಕೂ ಹೆಚ್ಚು ವೀಕ್ಷಣೆ ಕಂಡವು. ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಲಾದ ವೈಜ್ಞಾನಿಕ ಪರಿಕಲ್ಪನೆಗಳ ಸರಳ ವಿವರಣೆಗಳನ್ನು ಈ ವಿಡಿಯೊಗಳು ಒಳಗೊಂಡಿದ್ದವು ಮತ್ತು ಶಾಲೆಯಲ್ಲಿ ಕಲಿತದ್ದನ್ನು ಸ್ನೇಹಿತರೊಬ್ಬರು ವಿವರಿಸುವ ಶೈಲಿಯಲ್ಲಿ ವಿಡಿಯೊವನ್ನು ಪ್ರಸ್ತುತಪಡಿಸಿದ್ದರು.

'ಶ್ರಿಯಾ ಮತ್ತು ಅವರ ತಂಡ ಕಂಗ್ಲಿಷ್ ಬಳಸಿದ್ದರಿಂದ ಗ್ರಾಮೀಣ ಭಾಗದಲ್ಲಿ ಅವರ ಕಾರ್ಯವು ಹೆಚ್ಚಿನ ಪರಿಣಾಮ ಬೀರಿದೆ ಎಂದು ಭಾವಿಸುತ್ತೇನೆ' ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತ ವಾಸುದೇವ ಶರ್ಮಾ ಹೇಳುತ್ತಾರೆ.

'ಸಿತಾರಾ ಅಕ್ಕ' ರೂಪುಗೊಂಡಾಗ ಶ್ರಿಯಾ ಅವರಿಗೆ ಹತ್ತೊಂಬತ್ತು ವರ್ಷ. ತಮ್ಮ ಕಾರ್ಯಕ್ಕೆ ಸ್ವಯಂಸೇವಕರು ಬೇಕಾಗಿದ್ದಾರೆ ಎಂದು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದರು.

13ನೇ ಪುಟಕ್ಕೆ...

ಶ್ರಿಯಾ ಶಂಕರ್

ದೇಶದ ಕಲಾಪರಂಪರೆಯನ್ನು ಸಾಮಾನ್ಯ ಜನರಿಗೆ ಪರಿಚಯಿಸಬೇಕು ಎನ್ನುವ ಉದ್ದೇಶದಿಂದಲೇ ಏರ್ ಇಂಡಿಯಾ ಬೆಂಗಳೂರಿನ ದಿ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನಲ್ಲಿ ಕಲಾಪ್ರದರ್ಶನವನ್ನು ಆಯೋಜಿಸಿದೆ. ತನ್ನ ಸಂಗ್ರಹದಲ್ಲಿದ್ದ 200ಕ್ಕೂ ಅಧಿಕ ಕಲಾವಿದರು ರಚಿಸಿರುವ ಬಗೆ ಬಗೆಯ ಶೈಲಿಯಲ್ಲಿರುವ ಕಲಾಕೃತಿಗಳನ್ನು ಆಗಸ್ಟ್ 30ರವರೆಗೆ ಪ್ರದರ್ಶನಕ್ಕೆ ಇಟ್ಟಿದೆ.

ಇಲ್ಲಿ ಕಲಾಕೃತಿಗಳು ಪಿಸುಗುಡುತ್ತವೆ!

ಬೆಂಗಳೂರಿನ ‘ದಿ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್’ನಲ್ಲಿ ಪ್ರದರ್ಶನಗೊಳ್ಳುತ್ತಿರುವ ಏರ್ ಇಂಡಿಯಾ ಸಂಗ್ರಹದ ಕಲಾಕೃತಿಗಳು ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

• ರೂಪಾ ಕೆ.ಎಂ.

ಮೋದಕಪ್ರಿಯ ಗಣೇಶ ಒಂದು ಕೈಯಲ್ಲಿ ತಂಬೂರಿ ಹಿಡಿದು, ಕಷ್ಟಕರ ಹೆಜ್ಜೆಯನ್ನು ಇಷ್ಟಪಟ್ಟು ಹಾಕುತ್ತಿರುವಂತೆ ಕಂಡರೆ, ಮತ್ತೊಂದು ಕಡೆ ಅದೇ ಗಣೇಶ ಬಹಳ ಶಾಂತಚಿತ್ತನಾಗಿ ನೃತ್ಯ ಹಾಗೂ ಗಾನವೈಭವವನ್ನು ಆರಾಮದಾಯಕ ಭಂಗಿಯಲ್ಲಿ ಕುಳಿತು ಕೇಳುತ್ತಿದ್ದಾನೇನೋ ಅನಿಸುತ್ತದೆ. ವಿದ್ಯೆಗೂ ಬುದ್ಧಿಗೂ ಅಧಿಪತಿ ಎನಿಸಿಕೊಂಡ ಗಣಪ ನಾಟ್ಯ ಸರಸ್ವತಿಯನ್ನು ಒಲಿಸಿಕೊಳ್ಳಲು ಹರಸಾಹಸಪಡುವ ಅವನ ಮುಖಮುದ್ರೆ ಹಾಗೂ, ಗಾನವೈಭವವನ್ನು ಆಸ್ವಾದಿಸುವ ಸಂಗೀತಪ್ರಿಯನ ಭಾವಗಳೆರಡೂ ಲಾಲಿತ್ಯಪೂರ್ಣ ರೇಖೆಗಳಲ್ಲಿ ಮೂಡಿವೆ.

ಇದು ವೈ.ಡಿ.ಡಿಯೊಲಾಲಿಕರ್ ಅವರ ಕಲಾಕೃತಿಗಳು. ಶಾಸ್ತ್ರೀಯ ಆಲೋಚನೆಗಳಿಗೆ ಆಧುನಿಕ ಕಲಾಶೈಲಿಯ ಚೌಕಟ್ಟನ್ನು ಒದಗಿಸಿರುವ ಈ ಕಲಾಕೃತಿಗಳಲ್ಲಿ ಗಾಢಬಣ್ಣದ ಜತೆಗೆ ಕುಂಚವು ಅಲ್ಲಲ್ಲಿ ತನ್ನ ಒರಟುಭಾಷೆಯಲ್ಲಿಯೇ ಭಾವಾಭಿವ್ಯಕ್ತಿಯನ್ನು ಸ್ಪಷ್ಟವಾಗಿ ಮೂಡಿಸಿದೆ. ಈ ನೆಲದ ಶ್ರೀಮಂತ ಕಲಾಪರಂಪರೆ ಹಾಗೂ ಆಧುನಿಕ ಚಿಂತನೆಗಳ ಕಲಾಭಿವ್ಯಕ್ತಿಯ ನಡುವಿನ ಅಂತರವನ್ನು ತುಂಬಲೆಂದೇ ವೈ.ಡಿ. ಡಿಯೊಲಾಲಿಕರ್ ಕಲಾಕೃತಿಗಳನ್ನು ರಚಿಸಿದ್ದಾರೇನೋ ಅನ್ನುವಷ್ಟರ ಮಟ್ಟಿಗೆ ಹಿತವೆನಿಸುತ್ತದೆ.

ಅಶ್ವ ಯಾವುದರ ಸಂಕೇತ? ಉತ್ಸಾಹದ ಬುಗ್ಗೆಯಂತೆ ಕೆನೆಯುತ್ತಿರುವ ಸಪ್ತ ಅಶ್ವಗಳು ಏನನ್ನು ಹೇಳಲು ಹೊರಟಿವೆ? ಇಲ್ಲಿ ಒಂದಕ್ಕೊಂದು ಬೆಸೆದುಕೊಂಡಂತೆ ಕಾಣುವ ಈ ಅಶ್ವಗಳು ತಮ್ಮ ಬಣ್ಣದಿಂದಾಗಿಯೂ ವಿಭಿನ್ನವಾಗಿವೆ. ಎಂ.ಎಫ್. ಹುಸೇನ್ ಅವರಿಗೆ ಕುದುರೆ ವಿಶಿಷ್ಟ ಹಾಗೂ ಇಷ್ಟದ ಮೋಟಿಫ್ ಆಗಿದ್ದಿರಬೇಕು. ಹಾಗಾಗಿ ಅವರ ಹಲವು ಕಲಾಕೃತಿಗಳಲ್ಲಿ ಕುದುರೆಗಳನ್ನು ನೋಡಬಹುದು. ಕುದುರೆಗಳು ಪ್ರಾಚೀನಕಾಲದಿಂದಲೂ ಶಕ್ತಿ, ಚೈತನ್ಯ ಹಾಗೂ ವಿಮೋಚನೆಯ ದ್ಯೋತಕಗಳಾಗಿ ಗುರುತಿಸಿಕೊಂಡಿವೆ. ಬದುಕಿನ ಆತ್ಯಂತಿಕ ಉದ್ದೇಶವು ಸ್ವಾತಂತ್ರ್ಯದ ಅಪೇಕ್ಷೆಯೇ ಆಗಿರುತ್ತದೆ ಎಂಬುದನ್ನು ಸಾಂಕೇತಿಕವಾಗಿ ಎಂ.ಎಫ್. ಹುಸೇನ್ ಹೇಳಲು ಹೊರಟಿದ್ದಾರೆ ಎಂದೆನಿಸುತ್ತದೆ.

ರಾಜಸ್ತಾನದ ಬಿರುಬಿಸಿಲಿನ ಬೇಸಿಗೆ ಹೇಗಿದ್ದಿರಬಹುದು, ಕೆಮ್ಮಣ್ಣಿನ ಮೋಟು ಗೋಡೆಗಳ ಮೇಲೆ ಹಾಸುಹೊದ್ದ ಎಲೆಗರಿಯ ಚಪ್ಪರ, ಬಿಸಿಲ ಬೇಗೆಗೆ ಊಟ ರುಚಿಸದು, ಬಾಯಾರಿಕೆ ತಣಿಯದು. ನೀರು ಕುಡಿದೇ ಹೊಟ್ಟೆ ತುಂಬಿಸಿಕೊಂಡ ಮೋಟು ಗೋಡೆಯ ಮನೆಯ ಯಜಮಾನ-ಯಜಮಾನತಿಯ ನಡುವಿನ ಮಟ ಮಟ ಮಧ್ಯಾಹ್ನದ ಸಂಭಾಷಣೆಗೆ ಕಿವಿಯಾದ ಮೂರನೇ ವ್ಯಕ್ತಿ ಯಾರಿರಬಹುದು ಎಂದು ಕುತೂಹಲದ ಕಣ್ಣಾಗುವಂತೆ ಮಾಡುತ್ತದೆ ಪಿರಾಜಿ ಸಗರ ಅವರ ಈ ಕಲಾಕೃತಿ.

ಸಮುದ್ರದಾಳಕ್ಕೆ ದೋಣಿಗಳನ್ನು ಇಳಿಸಿ, ಬಲೆ ಬೀಸಿ, ಮೀನು ಹಿಡಿಯುವ ಬೆಸ್ತರ ಬದುಕನ್ನು ಬಹಳ ಸೊಗಸಾಗಿ ಕಲಾಕೃತಿಯಾಗಿಸಿದ್ದಾರೆ ಚಂದ್ರಕಾಂತ್ ಎಸ್. ಚೌಹಾಣ್. ಇದು ತೈಲವರ್ಣದಲ್ಲಿ ಮೂಡಿರುವ ಕಲಾಕೃತಿಯಾಗಿದ್ದು, ತೆಂಗಿನಗರಿಗಳಲ್ಲಿ ಹೆಣೆದ ಮಾಸಲು ಚಪ್ಪರಗಳು, ಮನೆಯ ಸಮೀಪವೇ ಲಂಗರು ಹಾಕಿದ ದೋಣಿ, ಈಗಷ್ಟೆ ಮೀನು ಹಿಡಿದು ಬಂದು ಸುಸ್ತಾಗಿ ಕುಳಿತ ಮನೆಯ ಒಡೆಯ, ಮನೆಯ ದೇಖರೇಖಿ ನೋಡುವ ಒಡತಿಯ ಕೈಯಲ್ಲಿ ತೆಂಗಿನಗರಿಯ ರಾಶಿ ಹೀಗೆ ಬೆಸ್ತರ ಬದುಕಿನ ಕತೆಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ ಚೌಹಾಣ್.

ಭಿನ್ನ ರಾಜ್ಯ, ಭಿನ್ನ ವಸ್ತು, ಭಿನ್ನ ಆಯಾಮಗಳಿರುವ ಹಲವು ಕಲಾಕೃತಿಗಳು ನೋಡುಗರೊಂದಿಗೆ ಸಂಭಾಷಣೆಗೆ ಇಳಿದಿದ್ದು ಮಾತ್ರ ಕಲಾಸಂವೇದನೆಯ ಭಾಷೆಯಲ್ಲಿ. ಇಲ್ಲಿ ರೇಖೆಗಳು, ಬಣ್ಣಗಳೇ ನವಿರು ನವಿರಾದ ಸಂವಹನಕ್ಕೆ ತೆರೆದುಕೊಂಡವು.

200ಕ್ಕೂ ಅಧಿಕ ಕಲಾವಿದರು ರಚಿಸಿರುವ ಬಗೆ ಬಗೆಯ ಶೈಲಿಯಲ್ಲಿರುವ ಅಂದರೆ, ಮ್ಯೂರಲ್, ಮರ, ಕಬ್ಬಿಣ, ಗಾಜಿನಿಂದ ತಯಾರಾದ ಕಲಾಕೃತಿಗಳು, ತೈಲವರ್ಣಗಳು, ಅಕ್ರಿಲಿಕ್ ಪೇಂಟಿಂಗ್, ಮೂರ್ತ, ಅಮೂರ್ತ, ಶಾಸ್ತ್ರೀಯ, ಆಧುನಿಕ... ಹೀಗೆ ನಾನಾ ಪ್ರಕಾರಗಳಲ್ಲಿರುವ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಪ್ರಗತಿ ಪಥ, ಬರೋಡ ಸ್ಕೂಲ್, ಮಥಾಯ್ಸ್ ಸ್ಕೂಲ್ ಹೀಗೆ ನಾನಾ ಶೈಲಿಯ ಕಲಾವಿದರ ಕಲಾಕೃತಿಗಳನ್ನು ಇಲ್ಲಿ ಕಾಣಬಹುದು.

ಕನ್ನಡಿಗ ಎಸ್.ಜಿ. ವಾಸುದೇವ ಅವರ ಕಲಾಕೃತಿಯೂ ಈ ಪ್ರದರ್ಶನದಲ್ಲಿ ಕಾಣಬಹುದು. ವಿಷಯಾಧಾರಿತ ಸರಣಿ ಕಲಾಕೃತಿಗಳಿಗೆ ಹೆಸರಾದ ವಾಸುದೇವ ಅವರ ‘ಜೀವನ ವೃಕ್ಷ’ ಕಲಾಕೃತಿಯೂ ಪ್ರದರ್ಶನಗೊಂಡಿದೆ. ಜೀವನವೆಂಬುದು ಅನುಭವ ದ್ರವ್ಯವನ್ನು ಉಂಡು, ಒಂದು ಗತಿಯಲ್ಲಿಯೇ ಎತ್ತರಕ್ಕೆ ಬೆಳೆಯಬಲ್ಲ ವೃಕ್ಷದಂತೆ. ಬೆಳವಣಿಗೆಯೆಂಬುದು ನಿರಂತರ ಎಂಬುದನ್ನು ಅಳವಾಗಿ ಸೂಚಿಸುತ್ತದೆ ಈ ಕಲಾಕೃತಿ.

ದೊಡ್ಡ ಕುಟ್ಟಣಿಗೆ ಹಿಡಿದು, ಬಗೆ ಬಗೆಯ ಧಾನ್ಯಗಳನ್ನು ಕುಟ್ಟುತ್ತ ಹೆಣ್ಣುಮಕ್ಕಳು ಹಾಡಿಕೊಳ್ಳುವ ಲಾವಣಿಗೆ ಅವರ ಜೀವನದ ನೋವಿನ ರಾಗವು ಸೇರಿಕೊಳ್ಳುತ್ತದೆ. ಲಾವಣಿ ಪದಗಳು ಹೊಸ ನಾದವನ್ನೂ ವೇದವನ್ನೂ ಅರಹುತ್ತಿರುತ್ತವೆ. ಕುಟ್ಟಣಿಗೆಯನ್ನು ಎಡಗೈನಿಂದ, ಬಲಗೈಗೆ ಬದಲಿಸುವಾಗ ಬಿಟ್ಟ ನಿಟ್ಟುಸಿರಿನ ಆತಂಕಗಳನ್ನು ಅಷ್ಟೇ ಮುಚ್ಚಟೆಯಿಂದ ಚಿತ್ರಿಸಿದ್ದಾರೆ ಶಕುಂತಲಾ ಎಸ್. ಸಾತ್ಪುತೆ.

ಹೀಗೆ ಹೆಸರಾಂತ ಕಲಾವಿದರ ಹಲವು ಕಲಾಕೃತಿಗಳು ಆಡುವ ಪಿಸುಮಾತುಗಳನ್ನು ಇಲ್ಲಿ ಆಲಿಸಬಹುದು!

ದೀವರ ಕನ್ನಡ ಸೊಗಡಿನ ಕ್ರಾಂತಿಯ ಕಿಡಿ

• ಕನ್ನೇಶ್ ಕೋಲಶಿರ್ಸಿ

‘ಕ್ರಾಂತಿಯ ಕಿಡಿ’ ನಾಟಕದ ದೃಶ್ಯ

ಕನ್ನಡದ ವೈವಿಧ್ಯತೆ ಅಪಾರ. ಉತ್ತರ ಕರ್ನಾಟಕ, ಹಳೆ ಮೈಸೂರು ಭಾಗ, ಮಲೆನಾಡು, ಕರಾವಳಿ... ಹೀಗೆ ರಾಜ್ಯದಲ್ಲಿ ಪ್ರಾದೇಶಿಕ ವೈವಿಧ್ಯತೆಗಳಿಗೆ ಅನುಗುಣವಾಗಿ ಭಾಷಾ ವೈವಿಧ್ಯತೆಯು ಕನ್ನಡದ ಸೊಬಗು. ಇಂಥ ಭಾಷಾ ವೈವಿಧ್ಯತೆ ನಡುವೆ ಕೆಲವು ಪ್ರದೇಶ, ಜನಾಂಗ, ಸಮುದಾಯಗಳೂ ವಿಶಿಷ್ಟವಾಗಿ ತಮ್ಮದೇ ಕನ್ನಡ ಮಾತನಾಡುತ್ತವೆ. ಅವುಗಳಲ್ಲಿ ಹವ್ಯಕ, ದೀವರು/ನಾಮಧಾರಿ, ನಾಡವ, ಹಸ್ಲರ, ಕೊಮಾರಪಂಥ ಸೇರಿದ ವಿಶಿಷ್ಟ ಕನ್ನಡಗಳಿವೆ. ಇವುಗಳಲ್ಲಿ ಮಲೆನಾಡಿನ ದೀವರ ಕನ್ನಡ ಆಡುಭಾಷೆ ತನ್ನ ಅನನ್ಯತೆಯಿಂದ ವೈಶಿಷ್ಟ್ಯಪೂರ್ಣ ಎನಿಸಿದೆ.

ಈ ಭಾಷೆಯ ರಂಗ ಪ್ರಯೋಗವೊಂದು ಈಗ ಹೆಸರು ಮಾಡುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ರಂಗಸೌಗಂಧ ಪ್ರಸ್ತುತಪಡಿಸಿದ ‘ಕ್ರಾಂತಿಯ ಕಿಡಿ’ ನಾಟಕ ಕೆಲವು ವಿಶೇಷತೆಗಳಿಂದ ಮಹತ್ವದ ರಂಗ ಪ್ರಸ್ತುತಿಯಾಗಿ ಗಮನಸೆಳೆಯುತ್ತಿದೆ. ಈ ರಂಗ ಪ್ರಸಂಗದ ವಿಷಯ ವಸ್ತು ಸ್ವಾತಂತ್ರ್ಯ ಹೋರಾಟ.

ಸಿದ್ದಾಪುರದ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅಗ್ರಗಣ್ಯರೂ, ಮೊದಲ ರಾಜಕೈದಿಯೂ ಆಗಿದ್ದ ಚೌಡಾ ನಾಯ್ಕ ಬೇಡ್ಕಣಿ, ರಾವ್ ಬಹದ್ದೂರ್ ಆಗಿದ್ದ ಅಪ್ಪ ಕನ್ನಾ ನಾಯ್ಕರ ದರ್ಪ-ದೌಲತ್ತು ಬ್ರಿಟಿಷ್ ಪರ ವಕಾಲತ್ತಿನ ನಡುವೆ ಸ್ವಾತಂತ್ರ್ಯ ಹೋರಾಟಕ್ಕಿಳಿದು ಅಪ್ಪನ ವಿರೋಧ ಕಟ್ಟಿಕೊಳ್ಳುತ್ತಾರೆ. ನಂತರದ್ದು ದುರಂತ ಕಥೆ. ಈ ಕಥಾ ಹಂದರದೊಂದಿಗೆ ಈ ಭಾಗದ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಪರಿಚಯಿಸುವಲ್ಲಿ ಎಸ್.ವಿ. ಹೆಗಡೆ ಮಘೇಗಾರರ ಮೂಲ ನಾಟಕ ‘ಕ್ರಾಂತಿಯ ಕಿಡಿ’ಯಶಸ್ವಿಯಾಗಿದೆ.

ಈ ಕಥೆ ಆಧಾರಿತ ‘ಕ್ರಾಂತಿಯ ಕಿಡಿ’ ನಾಟಕ ನಿರ್ದೇಶಿಸಿರುವ ರಂಗಕರ್ಮಿ ಗಣಪತಿ ಹೆಗಡೆ ಹುಲಿಮನೆ ಮೂಲ ಕಥೆಗೆ ಧಕ್ಕೆಯಾಗದಂತೆ ಇದೇ ಕೃತಿಕಾರರ ಇನ್ನೊಂದು ನಾಟಕದ ಅಂಕವೊಂದನ್ನು ಸೇರಿಸಿ ಈ ರಂಗ ಪ್ರಯೋಗದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಒಂದು ಅಂಕದಲ್ಲಿ ಬರುವ ಪುರಾಣಿಕರ ಸ್ವಾತಂತ್ರ್ಯ ಹೋರಾಟದ ಕಥೆ ಬಿಟ್ಟರೆ, ಇಡೀ ನಾಟಕದ ಹೈಲೈಟ್ ದೀವರ ಗ್ರಾಮ್ಯ ಭಾಷೆ. ಅಪ್ಪಟ ಸ್ಥಳೀಯ ಕಮಟಿನ ದೀವರ ಭಾಷೆ ಮಾತನಾಡುವ ಪಾತ್ರಗಳು ‘ಇದೇ ಮಾತನ....., ಅದಕ್ಕೆ ಉತ್ತರವಾಗಿ ‘ಹೂಂ...ವಾ...’, ‘ಮನಿಂದ ಹೊರಗ ಹಾಕಬೈದು ದೇಸದಿಂದ ಹೊರಗಹಾಕಕಾಕೈತನ’ ‘ಏ ಹುಡ್ಗ, ಯಾರಹತ್ರ ಮಾತಾಡಕಿಡದಿಯೆ ಗೊತ್ತೈತ, ನಾಕಕ್ಷರ ಕಲ್ತು ಇಂಗ್ಲಿಸಗೆ ಟಸ್-ಪುಸ್ ಅಂತ ಚೊಗರಹಾರಸಬಡ...’ ಎನ್ನುವ ನೆಲಮೂಲದ ಭಾಷೆ, ಭಾವನೆಗಳ ಪ್ರತಿಬಿಂಬದ ತೀವ್ರತೆಯನ್ನು ಹೆಚ್ಚಿಸಿದೆ.

ಹಾಗೆ ನೋಡಿದರೆ ಈ ನಾಟಕದ ತಂಡದ ನಿರ್ದೇಶಕರಾಗಲಿ, ನಟರಾಗಲಿ, ಯಾರೂ ದೀವರ ಸಮೂದಾಯದವರೇ ಅಲ್ಲ. ಆದರೆ ದೀವರ ಭಾಷೆಯ ಪ್ರಯೋಗದಲ್ಲಿ ಇಡೀ ತಂಡ ಹೊಸದೊಂದು ದಾಖಲೆಗೆ ಕಾರಣವಾಗಿದೆ. ಇದು ಮೊಟ್ಟ ಮೊದಲಿಗೆ ದೀವರ ಭಾಷೆ ಪ್ರಯೋಗಿಸಲ್ಪಟ್ಟ ಆಧುನಿಕ (ಹೊಸ ಅಲೆ) ನಾಟಕದ ದಾಖಲೆಯೂ ಹೌದು. (ಹೌದೇನೊ) ಇಂಥ ಐತಿಹಾಸಿಕ ಕಥೆಯ, ಕೃಷಿ ಸಂಸ್ಕೃತಿಯ ದೀವರ ಭಾಷೆಯ ನಾಟಕ ಪ್ರದರ್ಶನವನ್ನು ಕೈಗೆತ್ತಿಕೊಂಡ ರಂಗಸಂಸ್ಥೆಯ ನಿರ್ದೇಶಕ, ಕಲಾವಿದರ ಹಿನ್ನೆಲೆ ಸಣ್ಣದಲ್ಲ. ಉತ್ತರ ಕನ್ನಡ ಜಿಲ್ಲೆಯ ಮೊದಲ ಮತ್ತು ಕೊನೆಯ ಏಕೈಕ ವೃತ್ತಿ ನಾಟಕ ಕಂಪನಿ ಶ್ರೀ ಜಯಕರ್ನಾಟಕ ನಾಟಕ ಸಂಘದ ಪ್ರಸಿದ್ಧ ನಾಟಕಕಾರ ದಿವಂಗತ ಸೀತಾರಾಮ ಶಾಸ್ತ್ರಿ ಹುಲಿಮನೆಯವರ ಸ್ಮರಣೆಯಲ್ಲಿ ಹುಟ್ಟಿಕೊಂಡ ರಂಗಸೌಗಂಧ. ಪ್ರತಿವರ್ಷ ನಾಟಕೋತ್ಸವ, ವಿಚಾರ ಸಂಕಿರಣ, ಮಕ್ಕಳ ರಂಗ ತರಬೇತಿ ಶಿಬಿರ ನಡೆಸುವ ಸಂಸ್ಥೆ. ಈ ಸಂಸ್ಥೆ ರಂಗಭೂಮಿ ಇತಿಹಾಸದ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತ ಶ್ರೀಧರ ಹೆಗಡೆ ಹುಲಿಮನೆ ಮಾರ್ಗದರ್ಶನದಲ್ಲಿ ಕ್ರಿಯಾಶೀಲ ಕೃಷಿಕ ಗಣಪತಿ ಹೆಗಡೆ ಹುಲಿಮನೆಯವರ ನೇತೃತ್ವದಲ್ಲಿ ನಡೆಯುತ್ತಿದೆ.

ರಂಗಭೂಮಿಗಾಗಿ ಸಮರ್ಪಿಸಿಕೊಂಡ ಹುಲಿಮನೆ ಕುಟುಂಬದ ಕುಡಿ ಗಣಪತಿ ಹೆಗಡೆ ನೇತೃತ್ವದಲ್ಲಿ ನಡೆಯುತ್ತಿರುವ ಈ ಸಂಸ್ಥೆಯ ಕಲಾವಿದರ್ಯಾರೂ ವೃತ್ತಿಪರರಲ್ಲ. ಮಲೆನಾಡಿನ ಕೃಷಿ-ಕೃಷಿ ಸಂಬಂಧಿತ ಕೆಲಸಗಳು, ಮನೆ ವಾರ್ತೆ, ವೈದಿಕ ವೃತ್ತಿ, ಸರ್ಕಾರಿ ನೌಕರಿ ಸೇರಿದಂತೆ ನಾನಾ ಕ್ಷೇತ್ರಗಳ ವೈವಿಧ್ಯಮಯ ವ್ಯಕ್ತಿ-ವ್ಯಕ್ತಿತ್ವಗಳನ್ನು ಸೇರಿಸಿ ರಂಗತಂಡ ಕಟ್ಟಿಕೊಂಡಿರುವ ಹುಲಿಮನೆ ಕುಟುಂಬ, ಈ ಭಾಗದಲ್ಲಿ ಪ್ರಸಿದ್ಧವಾಗಿರುವ ಸಾಮಾಜಿಕ ನಾಟಕಗಳಿಗೆ ಪರ್ಯಾಯವಾಗಿ ಐತಿಹಾಸಿಕ, ಪೌರಾಣಿಕ, ನವೀನ ಸಾಹಿತ್ಯ ಪ್ರಕಾರಾಧಾರಿತ ರಂಗವಸ್ತುಗಳನ್ನು ಪರಿಚಯಿಸುವಲ್ಲಿ ಮುಂಚೂಣಿಯಲ್ಲಿದೆ. ನಾನಾ ಭಾಷಾ ಸೊಗಡಿನ ಹಲವು ನಾಟಕಗಳನ್ನು ಪ್ರದರ್ಶಿಸಿ ಪ್ರೇಕ್ಷಕರಿಂದ ಭೇಷ್ ಎನಿಸಿಕೊಂಡಿರುವ ರಂಗಸೌಗಂಧದ ದೀವರ ಭಾಷೆಯ ‘ಕ್ರಾಂತಿಯ ಕಿಡಿ’ ನಾಟಕ ಈ ಸಂಸ್ಥೆಯ ಪ್ರಯೋಗಶೀಲತೆಯ ವೈಶಿಷ್ಟ್ಯಕ್ಕೂ ಕನ್ನಡಿ ಹಿಡಿದಿದೆ.

ರಂಗನಾಯಕಿಯರ ಹಾಡುಪಾಡು

10ನೇ ಪುಟದಿಂದ...

ಈಗ ಕಾಲ ಬದಲಾಗಿದೆ. ಹರೆಯದ ಹುಡುಗಿಯರಿಗೆ ಮಾತ್ರ ಬೇಡಿಕೆ. ಕೆಲವರು ಒಂದೇ ನಾಟಕಕ್ಕೆ ಕನಿಷ್ಠ 10 ಸಾವಿರದಿಂದ ಗರಿಷ್ಠ 30 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ. ಅಭಿನಯ ಗೊತ್ತಿಲ್ಲದಿದ್ದರೂ ಚಿಂತೆಯಿಲ್ಲ; ಮೈ ಚಳಿ ಬಿಟ್ಟು ಕುಣಿಯಬೇಕು. ಹಸಿಹಸಿ ದೃಶ್ಯಗಳನ್ನು ಮಾಡಬೇಕು. ಲಂಗ ಹಾರಿಸಬೇಕು. ಕೆಟ್ಟ ಡೈಲಾಗುಗಳನ್ನು ಹೇಳಬೇಕು ಎನ್ನುವ ನಿರೀಕ್ಷೆಗಳೇ ಹೆಚ್ಚಾಗಿವೆ’ ಎನ್ನುತ್ತಾರೆ ಕಲಾವಿದೆ ಅನ್ನಪೂರ್ಣ.

ಹುಡುಗಿಯರು ತಂಡ ಮಾಡಿಕೊಂಡು ಓಡಾಡುತ್ತಾರೆ. ಇದರಿಂದ ಪ್ರಯಾಣದ ಹಣ ಉಳಿಯುತ್ತದೆ. ಒಬ್ಬರಿಗೊಬ್ಬರು ಅವಕಾಶಗಳನ್ನು ಹಂಚಿಕೊಳ್ಳುತ್ತಾರೆ. ಸಮಾನ ಮನಸ್ಕರು ಜತೆಯಾಗಿದ್ದರೆ ನಿರ್ಭಯವಾಗಿ ಪಾತ್ರ ಮಾಡಿ ಬರಬಹುದು. ಆದರೆ, ಪಾತ್ರ ಮಾಡಲು ಹೋದಾಗಲೇ ಕೆಲವರು ಇವಳು ಬೇಡ, ಅವಳು ನಟಿಸಬೇಕು ಎಂದು ಒತ್ತಾಯ ಮಾಡುತ್ತಾರೆ. ಕೆಲವರಂತೂ ಇವರ ಫೋಟೊಗಳನ್ನು ನೋಡಿ ಕರೆದಿರುತ್ತಾರೆ. ಅಲ್ಲಿಗೆ ಹೋದ ಮೇಲೆ ಅಂದುಕೊಂಡ ರೀತಿ ಇಲ್ಲ ಎಂದು ಇರಿಸುಮುರಿಸು ಮಾಡುತ್ತಾರೆ ಎನ್ನುವುದು ಹುಬ್ಬಳ್ಳಿಯ ಅಪ್ಸರಾ ಅವರ ನೋವು.

ಕಂಪನಿ ನಾಟಕಗಳಲ್ಲಿಯೂ ಸಿನಿಮಾ ಹಾಡುಗಳನ್ನೇ ಹಾಕಿ ಕುಣಿಸುವ ದಿನಗಳು ಬಂದಿವೆ. ಹುಗ್ಗಿಯಲ್ಲಿನ ಸಂಡಿಗೆ ಹಾಗೆ; ಅಲ್ಲೊಂದು ಮಿತಿ ಇದೆ. ಆದರೆ, ಹವ್ಯಾಸಿಗಳ ನಾಟಕಗಳಲ್ಲಿ ಹದ್ದು ಮೀರಿದೆ. ಇದು ಪಾತ್ರಧಾರಿಗೆ ಮಾತ್ರವಲ್ಲ; ಪಾತ್ರಕ್ಕೂ ಮಾಡುವ ಅನ್ಯಾಯ. ಅಲ್ಲಿ ನಾಟಕಕಾರರಿಂದ ಹಿಡಿದು ಪಾತ್ರಧಾರಿಯವರೆಗೆ ಎಲ್ಲರೂ ಅದನ್ನೇ ಬಯಸುತ್ತಿದ್ದಾರೆ ಎನ್ನುವುದು ವಾಸ್ತವ.

ಕಣ್ಮರೆಯಾದ ರಾಜಹಾಸ್ಯ

ನಾಟಕಗಳಲ್ಲಿ ಹಾಸ್ಯ ಪಾತ್ರಧಾರಿಗಳಿಗೆ ಸಿಕ್ಕಷ್ಟು ಸಿಳ್ಳೆ-ಚಪ್ಪಾಳೆ ಇನ್ನಾರಿಗೂ ಸಿಗುವುದಿಲ್ಲ. ಹಿಂದೆ ‘ರಾಜಹಾಸ್ಯ’ ಎಂದು ಕರೆಯುತ್ತಿದ್ದರು. ಈಗ ‘ಅಪಹಾಸ್ಯ’ವಾಗಿದೆ. ಕಾಮ ಭಾವನೆ ಕೆರಳಿಸುವ ದ್ವಂದ್ವಾರ್ಥದ ಹಾಸ್ಯಕ್ಕೆ ಮಿತಿಯಿಲ್ಲ. ಇದು ರೋಗಗ್ರಸ್ಥ ಹಾಸ್ಯ. ನಟಿಯರೂ ಲೀಲಾಜಾಲವಾಗಿ ಇದನ್ನೇ ಮಾಡುತ್ತಿದ್ದಾರೆ. ಅಭಿನಯ ಗೊತ್ತಿಲ್ಲದಿದ್ದರೂ ಡಬಲ್ ಮೀನಿಂಗ್ ಹಾಸ್ಯ ಮಾಡಲು ಸಿದ್ಧಳಾದರೆ ಸಾಕು ಎನ್ನುವ ಮನೋಭಾವನೆ ಬೆಳೆದಿದೆ.

ರಾತ್ರಿ ನಾಟಕ ನೋಡಿದ ಜನ ಬೆಳಿಗ್ಗೆ ತಮ್ಮ ವೈಮನಸ್ಸು ಮರೆಯುತ್ತಿದ್ದರು. ಜಗಳವಾಡಿದ ಸಹೋದರರು ಒಂದಾಗುತ್ತಿದ್ದರು. ಮುನಿಸಿಕೊಂಡು ತವರಿಗೆ ಹೋದ ಹೆಂಡತಿಯನ್ನು ಕರೆತರುತ್ತಿದ್ದರು. ಹೆತ್ತವರು ಎಷ್ಟು ಮುಖ್ಯ ಎಂದು ಅರಿಯುತ್ತಿದ್ದರು. ಆದರೆ, ಈಗ ಸಾಮಾಜಿಕ ನಾಟಕಗಳು ಸಾಮಾಜಿಕ ಆರೋಗ್ಯಕ್ಕೂ ಮಾರಕವಾಗಿವೆ. ಸಾಮಾಜಿಕ ಬದಲಾವಣೆಗಳ ಜತೆಗೆ ಆಟ-ಮಾಟ-ನೋಟ ಎಲ್ಲವೂ ಬದಲಾಗಿವೆ. ರಸಗ್ರಹಣ ಎಂಬುದು ನೆಪ ಮಾತ್ರ.

ಸಾಮಾಜಿಕ ಜಾಲತಾಣಗಳು ಕ್ರಿಯಾಶೀಲವಾದ ಮೇಲೆ ಪಾತ್ರಧಾರಿಗಳಿಗೆ ಗೊತ್ತಿಲ್ಲದೆಯೇ ಶೋಷಣೆ ನಡೆಯುತ್ತಿದೆ. ಒಂದೂರಿನಲ್ಲಿ ಎರಡು ಸಾವಿರ ಜನ ನಾಟಕ ನೋಡುತ್ತಾರೆ ಎಂದಿಟ್ಟುಕೊಳ್ಳಿ. ಆದರೆ, ಕಲಾವಿದೆಯ ಹಸಿಹಸಿ ದೃಶ್ಯಗಳನ್ನು ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯುಟ್ಯೂಬ್ ಚಾನೆಲ್‌ಗಳಲ್ಲಿ ಅಪ್ಲೋಡ್ ಮಾಡಿ ಲಕ್ಷ-ಲಕ್ಷ ವೀಕ್ಷಣೆಗಳನ್ನು ಪಡೆಯುತ್ತಿದ್ದಾರೆ. ತನ್ನ ದೃಶ್ಯ ಎಲ್ಲೆಲ್ಲಿ ಹರಿದಾಡುತ್ತಿದೆ, ಅದರಿಂದ ಯಾರು ಎಷ್ಟು ಗಳಿಸುತ್ತಿದ್ದಾರೆ ಎಂಬುದು ಆ ನಟಿಗೇ ಗೊತ್ತಿರುವುದಿಲ್ಲ.

ಇಷ್ಟೆಲ್ಲದರ ಮಧ್ಯೆ ಸಮಾಧಾನಕರ ಸಂಗತಿಯೆಂದರೆ; ಮೊಬೈಲ್ ಬಂದ ಮೇಲೆ ನಾಟಕಗಳು ಕಡಿಮೆಯಾಗುತ್ತವೆ, ಪ್ರೇಕ್ಷಕರು ಕಡಿಮೆಯಾಗುತ್ತಾರೆ ಎಂಬ ಆತಂಕವಿತ್ತು. ಆದರೆ, ಅದು ಉಲ್ಟಾ ಆಗಿದೆ. ನಾಟಕಗಳ ಸಂಖ್ಯೆಯೂ, ಪ್ರೇಕ್ಷಕರ ಸಂಖ್ಯೆಯೂ ಹೆಚ್ಚುತ್ತ ಸಾಗಿದೆ. ಆದರೆ, ಸಿನಿಮಾಗಳ ಪ್ರಭಾವ ಹಳ್ಳಿಗಳಲ್ಲಿ ನಾಟಕಗಳನ್ನು ಪ್ರದರ್ಶಿಸುವ ಹವ್ಯಾಸಿ ಕಲಾವಿದರ ಮೇಲೆ ದೊಡ್ಡ ಪರಿಣಾಮ ಬೀರಿವೆ ಎನ್ನುವುದೂ ಸತ್ಯ.

ಆ ಕಾಲ, ಈ ಕಾಲ ಎಲ್ಲ ಕಾಲಕ್ಕೂ ನಾಟಕಗಳು ಸಲ್ಲುತ್ತವೆ. ಆದರೆ, ಸದಭಿರುಚಿಯನ್ನು ಉಳಿಸಿಕೊಳ್ಳುವುದೇ ದೊಡ್ಡ ಸವಾಲು. ಈ ಸವಾಲಿಗೆ ಪ್ರತಿ ಸವಾಲನ್ನು ಉತ್ತಮ ಅಭಿರುಚಿಯುಳ್ಳ ಪ್ರೇಕ್ಷಕರು ಮಾತ್ರ ಹಾಕಲು ಸಾಧ್ಯ.



‘ಪುಟ್ಟರಾಜ ಗವಾಯಿ’ ನಾಟಕದ ಸನ್ನಿವೇಶ

ಹುಬ್ಬಳ್ಳಿಯ ಗಣೇಶ ಪೇಟೆ

ಹುಬ್ಬಳ್ಳಿಯ ಗಣೇಶ ಪೇಟೆ ಕಲಾವಿದೆಯರಿಂದಲೇ ತುಂಬಿತ್ತು. ಉತ್ತರ ಕರ್ನಾಟಕದಲ್ಲಿ ಎಲ್ಲೇ ನಾಟಕವಿದ್ದರೂ ಇಲ್ಲಿಗೆ ಬಂದು ಜನ ಕರೆಯುತ್ತಿದ್ದರು. ಸದ್ಯ ಇಲ್ಲಿ ಐದಾರು ಕುಟುಂಬಗಳು ಮಾತ್ರ ಉಳಿದಿವೆ. ಉಳಿದವರು ತಮ್ಮಿಷ್ಟದ ಊರುಗಳಿಗೆ ವಲಸೆ ಹೋಗಿದ್ದಾರೆ.

ದಾವಣಗೆರೆ, ತುಮಕೂರು, ಬಾದಾಮಿ, ಬಳ್ಳಾರಿ, ಹೊಸಪೇಟೆ, ಮೈಸೂರು ಸೇರಿದಂತೆ ಅಲ್ಲಲ್ಲಿ ನಟಿಯರು ವಾಸವಾಗಿದ್ದಾರೆ.

ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ ಕಲಾವಿದರ ಸಂಘ ಇತ್ತು. ಈಗ ಅದು ಇಲ್ಲ. ಕೆಲವರು ತಮಗೆ ಅನುಕೂಲವಾದ ಕಲಾ ಬಳಗ ಮಾಡಿಕೊಂಡಿದ್ದಾರೆ. ಕಲಾವಿದೆಯರದ್ದೇ ಎನ್ನುವ ಒಂದು ಸಂಘ ಇಲ್ಲ. ಹೀಗಾಗಿ, ಅವರ ಒಡಲಾಳದ ಧ್ವನಿ ಕೇಳುವವರು ದಿಕ್ಕಿಲ್ಲ. ಹೇಳುವುದಕ್ಕೆ ‘ಮೈಕೂ’ ಇಲ್ಲ.

> **ಗ್ರಾಮೀಣ ರಂಗಭೂಮಿ ಬಹಳ ಸಮೃದ್ಧವಾಗುತ್ತ ಸಾಗಿದೆ. ರಾಜ್ಯದಲ್ಲಿ ಆರು ಸಾವಿರಕ್ಕೂ ಹೆಚ್ಚು ಗ್ರಾಮಗಳಿವೆ. ವರ್ಷಕ್ಕೆ ಏನಿಲ್ಲವೆಂದರೂ ಹದಿನೈದು ಸಾವಿರ ನಾಟಕಗಳು ಪ್ರದರ್ಶನವಾಗುತ್ತವೆ. ಪ್ರತಿ ನಾಟಕಕ್ಕೂ ಕನಿಷ್ಠ 5 ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆ. ಅಂದಾಜು 75 ಕೋಟಿಯಿಂದ 100 ಕೋಟಿ ರೂಪಾಯಿ ವ್ಯವಹಾರ ನಡೆಯುತ್ತದೆ. ಸರ್ಕಾರ ಅಮೆಚೂರ್ ನಾಟಕಗಳನ್ನು ನಿರ್ಲಕ್ಷ್ಯ ಮಾಡಬಾರದು.**
> **ಮಲ್ಲಿಕಾರ್ಜುನ ಕಡಕೋಳ,**
> ವೃತ್ತಿ ರಂಗಾಯಣ ನಿರ್ದೇಶಕ, ದಾವಣಗೆರೆ

> **ಚಿಮಣಾ ಪರಂಪರೆ ನಾಟಕ ಕಲಾವಿದೆಯರಿಗೆ ಮುಂಬೈ ಕರ್ನಾಟಕ ಭಾಗದಲ್ಲಿ ‘ಚಿಮಣಾ’ ಎಂದು ಕರೆಯುವುದು ರೂಢಿ. ಚಿಮಣಾ ಎನ್ನುವುದು ಮರಾಠಿಯ ರಾಧಾನಾಟದಲ್ಲಿ ಬರುವ ಒಂದು ಪಾತ್ರದ ಹೆಸರು. ಈ ಭಾಗದಲ್ಲಿ ರಾಧಾನಾಟ ಎಷ್ಟು ಪ್ರಸಿದ್ಧವಾಗಿತ್ತೆಂದರೆ; ಇದೂವರೆಗಿನ ಎಲ್ಲ ಕಲಾವಿದೆಯರಿಗೂ ಚಿಮಣಾ ಎಂದೇ ಹೆಸರುಬಿದ್ದಿದೆ. ಮರಾಠಿಯಲ್ಲಿ ‘ಚಿಮಣಿ’ ಎಂದರೆ ಗುಬ್ಬಿ. ಅಂಗಳಕ್ಕೆ ಬಂದು ಕಾಳು ಎತ್ತಿಕೊಂಡು ಹಾರಿಹೋಗುವ ಗುಣವಿದೆ ಅದಕ್ಕೆ. ಅದೇ ಪದ ಚಿಮಣಾ ಆಗಿ ಬಳಕೆ ಆಗಿರುವ ಸಾಧ್ಯತೆ ಇದೆ.**
> **ಡಿ.ಎಸ್.ಚೌಗಲೆ,** ನಾಟಕಕಾರ ಬೆಳಗಾವಿ

ಮುನ್ನೋಟ 17-08-2025 ರಿಂದ 23-08-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಮನಸ್ಸಿನಲ್ಲಿ ಹುಮ್ಮಸ್ಸಿನ ಜತೆಗೆ ಮುನ್ನುಗ್ಗುವ ಶಕ್ತಿ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಗುರು ಹಿರಿಯರ ಸಹಕಾರ ನಿಮಗೆ ದೊರೆಯುತ್ತದೆ. ಸಂಸಾರದಲ್ಲಿ ಜಾಣ್ಮೆಯಿಂದ ಮಾತನಾಡಿ ಕೆಲಸ ಸಾಧಿಸುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಬೆಂಕಿಯೊಂದಿಗೆ ಕೆಲಸ ಮಾಡುವವರು ಈಗ ಹೆಚ್ಚು ಎಚ್ಚರದಿಂದ ಮಾಡಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ತಾಯಿಯ ಜತೆಗಿನ ಸಂಬಂಧ ಬಹಳ ಸುಧಾರಿಸುತ್ತದೆ. ಈಗ ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಬುದ್ಧಿವಂತಿಕೆಯಿಂದ ಎಲ್ಲರ ಸಹಕಾರ ಪಡೆದು ಮುನ್ನಡೆಯುವಿರಿ. ಭೂಮಿ ವ್ಯವಹಾರಗಳಲ್ಲಿ ನಿಮಗೆ ಮುನ್ನಡೆ ಇರುತ್ತದೆ. ಸೈನ್ಯದಲ್ಲಿ ಬಡ್ತಿಗಾಗಿ ಪರೀಕ್ಷೆ ತೆಗೆದುಕೊಂಡವರಿಗೆ ಶುಭ ವಾರ್ತೆ ಲಭಿಸುತ್ತದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬುದ್ಧಿವಂತಿಕೆಯಿಂದ ಮಾತನಾಡಿ ಹಣದ ಒಳಹರಿವನ್ನು ಹೆಚ್ಚು ಮಾಡಿಕೊಳ್ಳುವಿರಿ. ಹಿರಿಯರು ನಿಮ್ಮ ಉತ್ತಮ ಕೆಲಸಗಳಿಗೆ ಸಹಕಾರ ನೀಡುವರು. ಸ್ಥಿರಾಸ್ತಿಯನ್ನು ಹೆಚ್ಚು ಮಾಡಿಕೊಳ್ಳುವ ಯೋಗವಿದೆ. ಕೃಷಿಯಿಂದ ಹೆಚ್ಚು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಹರಿತವಾದ ಆಯುಧಗಳ ಜತೆ ಕೆಲಸ ಮಾಡುವವರು ಎಚ್ಚರದಿಂದಿರಿ. ಸಂಗಾತಿ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬುದ್ಧಿವಂತಿಕೆ ನಿಮ್ಮಲ್ಲಿ ಮೈದುಂಬಿರುತ್ತದೆ. ಆದಾಯವು ಸಾಮಾನ್ಯ ಮಟ್ಟದಲ್ಲಿರುತ್ತದೆ. ಸರ್ಕಾರದಿಂದ ಆದಾಯ ಹೆಚ್ಚುತ್ತದೆ. ಧಾರ್ಮಿಕ ಕೆಲಸಗಳನ್ನು ಮಾಡುವವರ ಆದಾಯ ಕೂಡ ಹೆಚ್ಚುತ್ತದೆ. ಒಡಹುಟ್ಟಿದವರಿಂದ ಪ್ರತಿರೋಧಗಳು ಎದುರಾಗುವ ಸಾಧ್ಯತೆಗಳಿವೆ. ಸಂಗಾತಿಯ ಜೊತೆ ಮಾಡಿದ ಹಣಕಾಸಿನ ವ್ಯವಹಾರಗಳಲ್ಲಿ ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಕ್ರೀಡಾಪಟುಗಳಿಗೆ ಉತ್ತಮ ಪ್ರೋತ್ಸಾಹ ಸಿಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ನಿಮ್ಮ ಮಾತೇ ನಡೆಯಬೇಕೆಂಬ ಹಠ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಈ ವಾರ ಹೆಚ್ಚು ಚಟುವಟಿಕೆಯಿಂದ ಇರುವಿರಿ. ಸ್ಥಿರಾಸ್ತಿ ಮಾಡಲು ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಸಿಗುತ್ತದೆ. ಕಾಲು ನೋವು ಕೆಲವರನ್ನು ಕಾಡಬಹುದು. ವಿವಾಹಿತರಿಗೆ ವಿದೇಶದಲ್ಲಿರುವ ತಮ್ಮ ಸಂಗಾತಿಯನ್ನು ಹೋಗಿ ಸೇರಿಕೊಳ್ಳಲು ಅವಕಾಶ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲಿ ನಿಮ್ಮಲ್ಲಿ ಸ್ವಲ್ಪ ಆಕ್ರೋಶ ತುಂಬಿರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಅತ್ಯಂತ ಚುರುಕಾದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಸಂಗಾತಿಯ ಒರಟು ಉತ್ತರಗಳು ಸ್ವಲ್ಪ ಸಮಸ್ಯೆಯನ್ನು ತರಬಹುದು. ಕೃಷಿಯಿಂದ ಅನಿರೀಕ್ಷಿತ ಲಾಭ ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಸಾಮಾಜಿಕ ಗೌರವವನ್ನು ಉಳಿಸಿಕೊಳ್ಳಲು ಸಾಕಷ್ಟು ಎಚ್ಚರಿಕೆಯ ಹೆಜ್ಜೆಯನ್ನು ಇಡುವಿರಿ. ಆದಾಯ ಮತ್ತು ಖರ್ಚು ಸಮನಾಗಿರಬಹುದು. ನಿಮ್ಮ ನಡವಳಿಕೆಯು ಹೆಚ್ಚು ವ್ಯಾವಹಾರಿಕತೆಯಿಂದ ಕೂಡಿರುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ನಷ್ಟವಾಗುವ ಸಂದರ್ಭವಿದೆ. ವಿದೇಶದಲ್ಲಿ ಓದುತ್ತಿರುವವರಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಸಂಗಾತಿಯ ಕಠಿಣ ಮಾತುಗಳು ಸ್ವಲ್ಪ ಚಿಂತೆಯುಂಟು ಮಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ಮೂಡಿ, ಬಹುಮಾನ ಪಡೆಯುವ ಯೋಗವಿದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮಗೆ ಸಾರ್ವಜನಿಕರ ಸಹಕಾರ ಕಡಿಮೆಯಾಗಬಹುದು. ವಿದೇಶದಲ್ಲಿರುವವರು ಸ್ಥಿರಾಸ್ತಿಯನ್ನು ಮಾಡಿಕೊಳ್ಳುವ ಅವಕಾಶವಿದೆ. ಮಕ್ಕಳಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ಕೃಷಿಯಿಂದ ಆದಾಯ ಕಡಿಮೆ ಎನಿಸಿದರೂ, ಇರುವ ಫಸಲಿಗೆ ಹೆಚ್ಚು ಬೆಲೆ ದೊರೆಯುತ್ತದೆ. ಪ್ರೀತಿ, ಪ್ರೇಮದ ವಿಷಯದಲ್ಲಿ ಯಶಸ್ಸು ಸಿಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಸುಸಂಸ್ಕೃತ ನಡವಳಿಕೆಯನ್ನು ಪ್ರದರ್ಶನ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಭಾಷಣಕಾರರು ಮಾತನಾಡುವಾಗ ಎಚ್ಚರಿಕೆ ವಹಿಸಬೇಕು. ಬಂಧುಗಳಿಂದ ವಿರೋಧ ಹೆಚ್ಚಾಗಬಹುದು. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಕೆಲವು ಕ್ರೀಡಾಪಟುಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಶೀತಬಾಧೆ ಕೆಲವರನ್ನು ಬಾಧಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾರದ ಆರಂಭದಲ್ಲಿ ಸ್ವಲ್ಪ ಆಲಸಿತನ ಕಂಡರೂ, ನಂತರ ಸರಿಯಾಗುತ್ತದೆ. ವಿದೇಶಿ ಮೂಲಗಳಿಂದ ಹಣದ ಒಳಹರಿವನ್ನು ಹೆಚ್ಚಿಸಿಕೊಳ್ಳಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಶತ್ರುಗಳನ್ನು ಯಾರೆಂದು ಪತ್ತೆ ಹಚ್ಚಿ ಸರಿಯಾಗಿ ಮಟ್ಟ ಹಾಕುವಿರಿ. ಹಿರಿಯರ ಆಸ್ತಿಯನ್ನು ಪಡೆದುಕೊಳ್ಳಬಹುದು. ಕಟ್ಟಡ ನಿರ್ಮಾಣಕಾರರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಲ್ಲಿ ಆಕ್ರೋಶ ಹೆಚ್ಚಾಗಿರುತ್ತದೆ. ಆದಾಯವು ಕಡಿಮೆಯಿರುತ್ತದೆ. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಬಹಳ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಕ್ತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಮಹಿಳೆಯರ ಜೊತೆಯ ನಡೆಸುವ ಹಣಕಾಸಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗುತ್ತವೆ. ಸಂಗಾತಿಯಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಅನುಕೂಲವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹೆಚ್ಚು ಶ್ರಮಪಟ್ಟು ಕೆಲಸ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಬರಬಹುದು. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಸಂಗಾತಿಯ ಸಹಾಯದೊಂದಿಗೆ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ನಿಮ್ಮ ಕೆಲಸ ಕಾರ್ಯಗಳಿಗೆ ತಾಯಿಯ ಸಹಕಾರ ಸಂಪೂರ್ಣವಾಗಿ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರ ಆದಾಯ ಸಾಕಷ್ಟು ಹೆಚ್ಚುತ್ತದೆ.

ಪದಬಂಧ 2905

ಮೇಲಿನಿಂದ ಕೆಳಕ್ಕೆ
1. ದಿನ ಬೆಳಗಾದರೆ ಪ್ಯಾಕೆಟಲ್ಲಿ ಹಾಲು ಕೊಡುವ ದೇವಲೋಕದ ಹಸು 3
2. ಚಿಹ್ನೆಯಾಗಿ ಹಾರಿಸುವ ಧ್ವಜ 3
3. ವಿಜ್ಞಾನವನ್ನು ಅಳವಡಿಸುವ ಅರವಳಿಕೆ 4
4. ಸಮಾಜದಲ್ಲಿ ತುಳಿಯಲ್ಪಟ್ಟವ 3
7. ಉತ್ತರಕರ್ನಾಟದವ ‘ತಂದುಕೊಡುವ’ ಎಂದಾಗ ಹಾಕಬಹುದಾದ ತಕಿಟತಧಿಮಿ ಹೆಜ್ಜೆ 3
9. ಕುಲವನ್ನು ಬೆಳಸಿ ಬೆಳಗುವವ 5
10. ಪಕ್ಕದಲ್ಲೇ ಬಂದು ಹಾರುವ ವೈಭವದ ವರ್ಣಾಲಂಕಾರದ ಚಿಟ್ಟೆ 5
12. ಮದುಮಗನಿಗೆ ವಸ್ತ್ರ, ಒಡವೆ, ಹಣಕೊಟ್ಟು ಮಾಡುವ ಆತಿಥ್ಯ 5
16. ಮತ್ಸ್ಯಗಂಧಿಯನ್ನು ಕೈಹಿಡಿದ ಮಹಾಭಾರತದ ಮಹಾನುಭಾವ 3
17. ಯಾವುದೇ ಆಕೃತಿಯಿಲ್ಲದ ದೈವ ರೂಪ 4
18. ಕಾಡಿನಲ್ಲೇ ನಡೆಯುವ ಯಜ್ಞವೇ ಇದು? 3
19. ಧರ್ಮಸ್ಥಳದಲ್ಲಿ ನಡೆಯುತ್ತಿರುವ ಮಣ್ಣು ತೆಗೆಯುವ ಕಾರ್ಯ 3
20 ತೋರಣದ ಹಸಿರು ಚಿಗುರು 3

ಎಡದಿಂದ ಬಲಕ್ಕೆ
1. ಆರದೆ ಸದಾ ಬೆಳಗುವ ಹಣತೆ 4
3. ವೀಣೆಯ ತಂತುವಿನಿಂದ ಹೊಮ್ಮುವ ಮಧುರ ಸ್ವರ 4
5. ಆಕಾಶದ ನಕ್ಷತ್ರವನ್ನು ಮುಟ್ಟಬಲ್ಲ ರಾಮನಾಮವೆಂಬ ಘೋಷ 6
6. ಭಯ, ತವಕ, ಕಳವಳ ಯಾವುದೂ ಇಲ್ಲದ ನಿರಾಳ ಸ್ಥಿತಿ 4
8. ಎಲ್ಲಾ ತಿಳಿದವನನ್ನು ಹೀಗೆ ಅನ್ನುತ್ತಾರೆ 4
10. ನೋಡುಕೊಳ್ಳುವಿಕೆ 3
11. ಪುಣ್ಯ ಸ್ವರೂಪಿಯಾದವ ಇತಿಹಾಸ ಪ್ರಸಿದ್ಧ 6
13. ಸಿದ್ಧಿ ಪಡೆದುಕೊಂಡವ ಹಿಂದು ಮುಂದಾದರೆ ಒತ್ತುಪಡೆದ ದಾಸಿ 2
14. ಅಯ್ಯೋ ಎಂದಾಗ ಕಾಣಿಸುವ ಕಂದಮ್ಮ 2
15. ಬೆಟ್ಟದಿಂದ ಹುಟ್ಟಿದವಳ ಕೈ ಹಿಡಿದ ಶಿವ 6
17. ವೃತ್ತಿಯಿಂದ ಹೊರಬರುವಿಕೆ 3
18. ಶ್ರೀ ಚೆನ್ನ ಸೋಮೇಶ್ವರನ ಪೂರ್ವೋಕ್ತಿ 4
19. ಸಮಯಕ್ಕೆ ಸೂಕ್ತವಲ್ಲದ್ದು ಉಚಿತವಲ್ಲದ್ದು 4
21. ತೆಂಗು ಹೂರಣದ ಒಬ್ಬಟ್ಟು 5
22. ದೇಹಕ್ಕಿರುವ ಒಂಬತ್ತು ಬಾಗಿಲುಗಳು ಎಂದೂ ಹೊಸದೇ! 5
23. ಹೆಂಡತಿಯ ತಾಯಿ ಮನೆ ಇರುವ ಸ್ಥಳ 4

1			2	■	■	■	3			4
	■	■	5					■	■	
6		7		■	■	■	8		9	
■	■		■	■	10			■		■
11	12					■	■	■	13	
■		■	■	■		■	■	■		■
14		■	■	■	15			16		
■		■	17			■	■		■	■
18				■	■	■	19			20
	■	■	21					■	■	
22				■	■	■	23			

ಪದಬಂಧ ಉತ್ತರ -2904

ಮೇಲಿಂದ ಕೆಳಕ್ಕೆ
2.ಪಾಕಡ 3.ಮಮಕಾರ 4. ಆತುರಗಾರ 5. ದಿಟ್ಟತನ 7.ಬಡ್ಡಿಮಗ 8.ವಸುಮತಿ 10.ಕಮಲನಾಭ 14.ಪರಂತಪ 15.ಕ್ಷಣಕ್ಷಣ 16.ಸುಮನೋಹರ 17.ಹವಣಿಸು 19.ಯತಿವರ 21.ಯಗಚಿ

ಎಡದಿಂದ ಬಲಕ್ಕೆ
1.ಜಪಾಕುಸುಮ 4.ಆಶಾವಾದಿ 6. ಮನೆಮಾತು 7.ಬಡವ 9. ಸುಧಾರಕ 11. ಗಾಢಮೌನ 12.ಮಧುರ 13.ಗಣತಿ 14.ಪರೋಕ್ಷ 16.ಸುಮನಾ 17.ಹರಿನಾಮ 18.ಭಯಭೀತ 20.ಪಯಣ 22.ಹಯಗ್ರೀವ 23.ಸುರನರ 24.ರತ್ನಖಚಿತ

ಶಿರಸಿಯ ಅಪರೂಪದ ಕಣಜ

• ರಾಜೇಂದ್ರ ಹೆಗಡೆ

'ರಿಮ್ ಜಿಮ್ ಗಿರೇ ಸಾವನ್... ಸುಲಗ್ ಸುಲಗ್ ಜಾಯೇ ಮನ್... ಭಿಗೆ ಆಜ್ ಇಸ್ ಮೌಸಮ್ ಮೇ...ಲಗಿ ಕೈಸಿ ಯೇ ಅಗನ್.....' ಹೊರಗಡೆ ಮಳೆ ರಭಸವಾಗಿ ಸುರಿಯುತ್ತಿದ್ದರೆ ಪುರಾತನ ಗ್ರಾಮೋಫೋನ್ ಹಿಂದಿಯ 'ಮಂಜಿಲ್' ಸಿನಿಮಾದ ಕಿಶೋರ್ ಕುಮಾರ್ ಹಾಡಿದ ಹಾಡನ್ನು ಹೊರಸೂಸುತ್ತಿತ್ತು. ಅಲ್ಲಿ ನೆರೆದವರು ಹಳೆಯ ಕಾಲದ ಗ್ರಾಮೋಫೋನ್ ನೋಡುತ್ತ ಮಂತ್ರಮುಗ್ಧರಾಗಿದ್ದರು.

ಪಕ್ಕದಲ್ಲೇ 'ಈ ಗದೆ ಯಾರದ್ದು?' ಎಂದು ಮಗು ತನ್ನ ಅಜ್ಜನ ಬಳಿ ಕೇಳಿತು. ಅದಕ್ಕವರು 'ಪುಟ್ಟಾ, ಇದು ಗದೆಯಲ್ಲ, ಮಜ್ಜಿಗೆ ಕಡೆಯುವ ಬಳಸುವ ಕಡಗೋಲು' ಎಂದು ವಿವರಿಸಿದರು. ಆಗ ಮಗು, ಕಲ್ಲಿನ ಪಾತ್ರೆಯೊಂದರತ್ತ ಕಣ್ಣರಳಿಸಿ ನೋಡುತ್ತಾ 'ನಮ್ಮ ಮನೆಯಲ್ಲಿ ಇದು ಇಲ್ಲವಲ್ಲ' ಎಂದಾಗ, 'ನಿನಗೂ, ನನಗೂ ಗೊತ್ತಿಲ್ಲದ್ದು ಸಾಕಷ್ಟಿದೆ. ಅದಕ್ಕಾಗಿಯೇ ಇಲ್ಲಿ ಬಂದು ನೋಡುತ್ತಿದ್ದೇವೆ' ಎಂದು ಮುಗುಳ್ನಕ್ಕರು.

ಹೀಗೆ ಇಂದಿನ ಪೀಳಿಗೆಗೆ ಪರಿಚಯವೇ ಇಲ್ಲದ ಶತಮಾನಗಳ ಹಿಂದಿನ ಅಸಂಖ್ಯ ದಿನಬಳಕೆ, ಕೃಷಿ ಉಪಕರಣಗಳು ಕಾಲಗರ್ಭದಲ್ಲಿ ಹುದುಗಿ ಹೋಗುತ್ತಿವೆ. ಅವುಗಳನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಸವಾಲು ಇಂದಿದೆ. ಆದರೆ ಅಂಥ ಸವಾಲನ್ನು ಸ್ವೀಕರಿಸಿ ನೂರಾರು ವಸ್ತುಗಳನ್ನು ಸಂಗ್ರಹಿಸಿರುವ 'ಕಣಜ' ಹೆಸರಿನ ವಸ್ತುಸಂಗ್ರಹಾಲಯವೊಂದು ಶಿರಸಿ ನಗರದಲ್ಲಿದೆ.

ಇಲ್ಲಿನ 'ವಿದ್ಯಾನಗರ ರುದ್ರಭೂಮಿ ಸಮಿತಿ'ಯಡಿ ವಸ್ತುಸಂಗ್ರಹಾಲಯವು ಸಾರ್ವಜನಿಕರಿಗೆ ಹಳೆಯ ವಸ್ತುಗಳ ಬಗ್ಗೆ ಇರುವ ಕುತೂಹಲ ತಣಿಸುವ ಕೆಲಸ ಮಾಡುತ್ತಿದೆ. ಸುಮಾರು 600 ಚದರಡಿ ವಿಸ್ತೀರ್ಣದ ಕಟ್ಟಡದಲ್ಲಿ ವೈವಿಧ್ಯಮಯ ವಸ್ತುಗಳ ಜತೆ ಜ್ಞಾನ ತೃಷೆ ತಣಿಸುವ ಮಾಹಿತಿ ಹಾಗೂ ಮಾರ್ಗದರ್ಶನವೂ ಲಭ್ಯವಿದೆ. ಪುರಾತನವಾಗಿ ಲಭ್ಯವಿದ್ದ ನಮ್ಮ ನೆಲಮೂಲದ ಜ್ಞಾನದ ಸಂಗ್ರಹ, ಪರಿಷ್ಕಾರ ಮತ್ತು ಹೊಸ ಜ್ಞಾನದ ಸೃಷ್ಟಿ ಇವು 'ಕಣಜ'ದ ಸ್ಥೂಲ ಚಟುವಟಿಕೆಗಳಾಗಿವೆ.

ಶಿರಸಿ ಸೇರಿದಂತೆ ಸುತ್ತಮುತ್ತಲ ತಾಲ್ಲೂಕುಗಳ ಹವ್ಯಕ ಮನೆತನಕ್ಕೆ ಸಂಬಂಧಿಸಿ ಎರಡು, ಮೂರು ತಲೆಮಾರಿನ ಹಿಂದೆ ಬಳಸುತ್ತಿದ್ದ ದಿನ ಬಳಕೆ ವಸ್ತುಗಳು ಈಗ ಎಲ್ಲಿಯೂ ಕಾಣ ಸಿಗುವುದಿಲ್ಲ. ಆದರೆ, ಕಣಜದಲ್ಲಿ ಈಗಲೂ ಅತಿ ಪುರಾತನವಾದ ಎರಡು ಬತ್ತಿಯ ಮೇಜು ದೀಪಗಳು, ಹಿತ್ತಾಳೆ ಚಿಮಣಿಗಳು, ತಾಮ್ರದ ಚಿಮಣಿಗಳು, ಮೈಯಾಸ ಬೀಗಗಳು, ಲೋಟ ಸಹಿತ ತಿರುಗಣಿ ತಂಬಿಗೆಗಳು, ವಿವಿಧ ಆಕೃತಿಯ ಕಡಗೋಲು, ತಗಡಿನ ಕಂದೀಲುಗಳು, ನಳಿಕೆ ಇಲ್ಲದ ತೀರ್ಥ ತಟ್ಟೆ, ಬೆತ್ತದ ಪೆಟ್ಟಿಗೆ, ಬೆತ್ತದ ಕೋಲುಗಳು, ಸೇರು ಮಾಪುಗಳು, ನಳಿಕೆ ಇರುವ ಗಿಚಿಡಿ, ಒನಕೆ, ಗಾಜಿನ ದೀಪ, ಚನ್ನೆಮಣೆ, ಕೂರ್ಮಪೀಠ, ಬೌದ್ಧ ಧರ್ಮೀಯರ ಘಂಟೆ, ಕೂರ್ಮಾರತಿ, ಗಂಧಾಕ್ಷತೆ ಬಟ್ಟಲು, ವಿವಿಧ ಬಗೆಯ ಚಮಚಗಳು ನೋಡುಗರ ಉತ್ಸಾಹ ಇಮ್ಮಡಿಸುತ್ತವೆ.

ಬೈನೆ ಮರದಿಂದ ಮಾಡಿದ ಕೊಳಗ, ಕದಿರು ತಕಲಿ, ಗಂಧಾಕ್ಷತೆ ದೀವಟಿಗೆ, ಗದೆ, ಗಂದಾಕ್ಷತೆ ಬಟ್ಟಲು, ನಾಲ್ಕು ಹಣತೆ ಇರುವ ಹಿತ್ತಾಳೆ ದೀಪ, ಬಿದಿರು ಶಿದ್ದೆ, ರೊಟ್ಟಿಮಣೆ, ಉರಟಣಿ ದೋಣಿ, ಕಟ್ಟಿಗೆ ಮರಿಗೆ, ಸಣ್ಣ ಕಲ್ಲು ಮರಿಗೆ, ಕಲ್ಲಿನ ದೋಸೆ ಬಂಡಿ, ಹಾಲಿನ ಪಾತ್ರೆ, ಮಣ್ಣಿನ ಮಡಿಕೆ, ಪಾತ್ರೆಗಳು, ಹುಟ್ಟುಗಳು, ಅಡ್ಡ ಕತ್ತರಿಗಳು, ಕುಟಾಣಿ, ಅರೆಯುವ ಕಲ್ಲು, ಬಾಚಣಿಕೆಗಳು, ತಾಮ್ರದ ಹರಿವಾಣ, ಹಳೆಯ ತಾಮ್ರದ ಕೊಡಗಳು ಸೇರಿದಂತೆ ಸಾವಿರಕ್ಕೂ ಹೆಚ್ಚಿನ ವಸ್ತುಗಳು ನೋಡುಗರನ್ನು ಆಕರ್ಷಿಸುತ್ತಿವೆ. ಇವುಗಳ ಜತೆಗೆ 1934ರ ಗ್ರಾಮೋಫೋನ್ ಕೂಡ ಇದ್ದು, ಇಂದಿಗೂ ಸುಸ್ಥಿತಿಯಲ್ಲಿದ್ದು, ಹಾಡನ್ನು ಗುನುಗನಿಸುತ್ತದೆ!

'ಹಳೆಯ ವಸ್ತುಗಳ ಜತೆ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡ ಬಹುತೇಕ ಸಾಹಿತಿಗಳ ಸಾವಿರಾರು ಪುಸ್ತಕಗಳು ಲಭ್ಯವಿವೆ. ಜತೆಗೆ, 30ಕ್ಕೂ ಹೆಚ್ಚು ವಿವಿಧ ಜಿಲ್ಲಾ ಹಂತದ ಪತ್ರಿಕೆಗಳು ಓದುಗರ ಜ್ಞಾನ ದಾಹ ತಣಿಸುತ್ತಿವೆ' ಎನ್ನುತ್ತಾರೆ ಇಲ್ಲಿಗೆ ಓದಲು ಬರುವ ರಮೇಶ ಹೆಗಡೆ.

'ವಸ್ತುಸಂಗ್ರಹಾಲಯದಲ್ಲಿರುವ ಎಲ್ಲ ವಸ್ತುಗಳು ದಾನಿಗಳು ಕೊಡುಗೆ ನೀಡಿದ್ದಾಗಿವೆ. ಈಗಲೂ ಹಲವರು ಅಮೂಲ್ಯ ವಸ್ತುಗಳನ್ನು ಕೊಡುತ್ತಾರೆ. ಅವುಗಳನ್ನು ಜೋಡಿಸಿ, ಅದರ ಮಾಹಿತಿ ಪಡೆದು ನೀಡುವ ಕೆಲಸ ಮಾಡಲಾಗುತ್ತದೆ. ಕಣಜವು ನಿತ್ಯ ಸಂಜೆ 4 ರಿಂದ 6 ಗಂಟೆಯವರೆಗೆ ತೆರೆದಿರುತ್ತದೆ. ಯಾರು ಬೇಕಿದ್ದರೂ ಬಂದು ಓದಬಹುದು. ಪೂರ್ವಜರು ಬಳಸುತ್ತಿದ್ದ ವಸ್ತುಗಳನ್ನು ನೋಡಿ ಆನಂದಿಸಬಹುದು. ಪ್ರತಿ ವಸ್ತುವಿನ ಮೇಲೆ ಅದರ ಹೆಸರಿನ ಲೇಬಲ್ ಅಳವಡಿಸಲಾಗಿದೆ. ಅವುಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಅಲ್ಲಿಯೇ ವೀಕ್ಷಕರಿಗೆ ವಿವರಿಸಲಾಗುತ್ತದೆ. ವೀಕ್ಷಣೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ' ಎಂದು ಇಲ್ಲಿನ ಉಸ್ತುವಾರಿ ವಿ.ಪಿ. ಹೆಗಡೆ ವೈಶಾಲಿ ಹೇಳಿದರು. ❖

ಕಣಜದೊಳಗಿರುವ ಅಮೂಲ್ಯ ವಸ್ತುಗಳು

ಅಡ್ಡಕತ್ತರಿಗೆ ಮಾರುಹೋಗುವ ಮನಸ್ಸು

ರಾಜರ ಕಾಲದಲ್ಲಿ ತಾಂಬೂಲಕ್ಕೆ ಬೇಕಾದ ಅಡಿಕೆಗಳನ್ನು ತುಂಡರಿಸಲು ಉಪಯೋಗಿಸುವ ಅಡ್ಡಕತ್ತರಿಗಳು, ವಸ್ತು ಸಂಗ್ರಹಾಲಯದ ಸೌಂದರ್ಯ ಹೆಚ್ಚಿಸಿವೆ. ಬ್ರಿಟಿಷ್ ಕಾಲದಲ್ಲಿ ಬಳಕೆಯಲ್ಲಿದ್ದ ಬೂಟಿನ ಆಕಾರದ ಪುಟ್ಟ ಆ್ಯಶ್ ಟ್ರೇಗಳು ಆಗಿನ ಕಾಲದ ಚಿತ್ರಣವನ್ನು ಕಟ್ಟಿಕೊಡುತ್ತವೆ.

ಕಣಜದ ಹೊರನೋಟ

ಓದುಗರ ಸಾಗರದಲ್ಲಿ ರವೀಂದ್ರ ಪುಸ್ತಕಾಲಯ

ಮಲೆನಾಡಿನ ಸಣ್ಣ ಊರಿನಲ್ಲಿ ಸಾಹಿತ್ಯವನ್ನು ಸಾಗರೋಪಾದಿಯಲ್ಲಿ ಪೋಷಿಸುತ್ತಿರುವ ರವೀಂದ್ರ ಪುಸ್ತಕಾಲಯಕ್ಕೀಗ 60ರ ಸಂಭ್ರಮ. ಕೆಲ ದಶಕಗಳ ಕೆಳಗೆ ಹೊರರಾಜ್ಯಗಳ ಓದುಗರು ಇಲ್ಲಿಂದ ಪುಸ್ತಕ ಎರವಲು ಪಡೆದು ಓದುತ್ತಿದ್ದ ಕಥೆ ವಿಶಿಷ್ಟವಾಗಿದೆ. 18,000ಕ್ಕಿಂತ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಈ ಪುಸ್ತಕಾಲಯದ ಬಾಗಿಲು ವರ್ಷಪೂರ್ತಿ ತೆರೆದಿರುತ್ತದೆ. ಜತೆಗೆ ಪುಸ್ತಕ ಪ್ರಕಾಶನದಲ್ಲಿಯೂ ತನ್ನದೇ ಆದ ಛಾಪು ಮೂಡಿಸಿದೆ...

• ಜಯಪ್ರಕಾಶ ತಲವಾಟ

'ತುಂಬಾ ಹಿಂದೆ ಮದ್ರಾಸಿನಲ್ಲಿ ಕೆಲಸ ಮಾಡುತ್ತಿದ್ದವರ ಮನೆ ಸಾಗರದಲ್ಲಿತ್ತು. ಒಮ್ಮೆ ನಮ್ಮ ಪುಸ್ತಕಾಲಯಕ್ಕೆ ಬಂದವರು, ತಮಗೆ ಇಷ್ಟವಾದ ಪುಸ್ತಕಗಳನ್ನು ರೈಲಿನಲ್ಲಿ ಆಗಾಗ್ಗೆ ಪಾರ್ಸಲ್ ಮೂಲಕ ಕಳುಹಿಸಿಕೊಡಿ. ನಾನು ಓದಿ ಹಿಂದಕ್ಕೆ ಕಳುಹಿಸಿಕೊಡುತ್ತೇನೆ. ಒಟ್ಟಿಗೆ ಹತ್ತು ಹದಿನೈದು ಪುಸ್ತಕಗಳನ್ನು ಕಳುಹಿಸಿಕೊಡಿ ಎಂದು ವಿನಂತಿಸಿದ್ದರು. ನಾನು ಒಪ್ಪಿಕೊಂಡೆ. ಅವರಿಗೆ ಕಾಲಕಾಲಕ್ಕೆ ಪುಸ್ತಕಗಳನ್ನು ಕಳುಹಿಸಿಕೊಡುತ್ತಿದ್ದೆ. ಹೀಗೆಯೇ ಹಲವು ವರ್ಷಗಳು ನಡೆಯಿತು' ಎಂದು ಸಾಗರದಲ್ಲಿರುವ ರವೀಂದ್ರ ಪುಸ್ತಕಾಲಯದ ಸ್ಥಾಪಕ ವೈ.ಎ.ದಂತಿ ಖುಷಿಯಿಂದಲೇ ಹೇಳುತ್ತಿದ್ದರು.

ಅವರ ಉತ್ಸಾಹ ತುಸು ಹೆಚ್ಚಾಗಿಯೇ ಇತ್ತು. ಮತ್ತೊಂದು ಪ್ರಸಂಗವನ್ನು ಹೇಳಲು ಶುರು ಮಾಡಿದರು. ಸಾಗರದಲ್ಲಿ ಕೆಲಸ ಮಾಡುತ್ತಿದ್ದ ಫಾರೆಸ್ಟರ್ ಒಬ್ಬರು ಅಜ್ಜಂಪುರಕ್ಕೆ ವರ್ಗವಾದರು. ಅವರು ಅಂಚೆ ಮೂಲಕ ಪುಸ್ತಕಗಳನ್ನು ತರಿಸಿಕೊಂಡು ಓದಿ ಹಿಂದಿರುಗಿಸುತ್ತಿದ್ದರು. ಇದೇ ರೀತಿ ಸಾಗರದಿಂದ ಬೇರೆಡೆಗೆ ವರ್ಗಾವಣೆಯಾಗಿ ಹೋದಾಗಲೂ ನಮ್ಮಿಂದ ಪುಸ್ತಕ ತರಿಸಿಕೊಂಡು ಅದರ ಉಪಯೋಗ ಪಡೆದವರು ಇದ್ದಾರೆ ಎಂದು ನಿದರ್ಶನಗಳ ಸಹಿತ ವಿವರಿಸಿದರು.

ದಂತಿ ಅವರು ಓದುಗರ ಅಭಿಲಾಷೆಗೆ ತಕ್ಕ ಹಾಗೆ ಪುಸ್ತಕಗಳನ್ನು ಒದಗಿಸುತ್ತಿದ್ದರು. ಓದುಗರ ಆಸಕ್ತಿಯನ್ನು ತಿಳಿದು ಅವರಿಗೆ ಹೇಗಾದರೂ ಮಾಡಿ ಪುಸ್ತಕಗಳನ್ನು ತಲುಪಿಸುವ ಕೆಲಸ ಮಾಡುತ್ತಿದ್ದರು. ಇದೂ ಕೂಡ ದೂರದ ಊರಿನವರು ಇಲ್ಲಿಂದಲೇ ಪುಸ್ತಕಗಳನ್ನು ತರಿಸಿ ಓದುವುದಕ್ಕೆ ಕಾರಣವಿರಬಹುದು.

ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕಡಿಮೆ ಎಂಬುದು ಸಾಮಾನ್ಯ ಆಕ್ಷೇಪ. ಕೊಂಡೋ, ಕೊಳ್ಳದೆಯೋ ಓದುವವರು ಹೆಚ್ಚಿದಷ್ಟು ಪುಸ್ತಕಗಳ ಪ್ರಕಟಣೆಗೆ ಒಳ್ಳೆಯ ಭವಿಷ್ಯ ಪ್ರಾಪ್ತವಾದೀತು. ಪುಸ್ತಕಗಳನ್ನು ಓದುವವರಿಲ್ಲ, ಕೊಳ್ಳುವವರು ಇಲ್ಲ ಎಂಬ ಮಾತುಗಳ ಮಧ್ಯೆ ಸಾಗರದ ಚಾಮರಾಜಪೇಟೆಯಲ್ಲಿರುವ ರವೀಂದ್ರ ಪುಸ್ತಕಾಲಯವು ಅರವತ್ತು ವರ್ಷಗಳನ್ನು ಪೂರೈಸಿದೆ.

ಆರಂಭವೇ ಸ್ವಾರಸ್ಯಕರ

1960 ಶರಾವತಿ ನದಿಗೆ ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣದ ಕಾಲ. ಬೆಳಗಾವಿ ಜಿಲ್ಲೆಯ ಅಥಣಿಯ ಯಲ್ಲಣ್ಣ ಅಪ್ಪಾರಾವ್ ದಂತಿ (ವೈ. ಎ. ದಂತಿ) ಅವರಿಗಿನ್ನೂ ಇಪ್ಪತ್ತೈದರ ಪ್ರಾಯ. ಸಹಾಯಕರಾಗಿ ಕಾರ್ಗಲ್‌ಗೆ ಬಂದವರು. ಆಗಿನ ಅವರ ವಿದ್ಯಾಭ್ಯಾಸದ ಅರ್ಹತೆಯಿಂದಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಗುಮಾಸ್ತರಾದರು. ಆ ವೇಳೆಗೆ ಪುಟ್ಟ ಊರಾಗಿದ್ದ ಕಾರ್ಗಲ್‌ನಲ್ಲಿ ದಂತಿ, ವಿದ್ಯಾರ್ಥಿಗಳಿಗಾಗಿ ಹಿಂದಿ ಪಾಠವನ್ನು ಉಚಿತವಾಗಿ ಹೇಳಿಕೊಡುತ್ತಿದ್ದರು. ಶಿಷ್ಯರು ಗುರು ಕಾಣಿಕೆಯಾಗಿ ತ. ರಾ. ಸು ಅವರ ವಿಜಯೋತ್ಸವ ಭಾಗ 1 ಮತ್ತು 2 ಪುಸ್ತಕ ಕೊಟ್ಟರು. ಪುಸ್ತಕ ಪ್ರೇಮಿಯಾಗಿದ್ದ ದಂತಿ ಅವರು ತಾವು ಓದಿದ್ದಲ್ಲದೇ ಇವುಗಳನ್ನು ಎಲ್ಲರೂ ಓದಲಿ ಎಂದು ಆ ಪುಸ್ತಕಗಳೊಂದಿಗೆ ತಾವೇ ಇನ್ನಷ್ಟು ಪುಸ್ತಕಗಳನ್ನು ಖರೀದಿಸಿ ಓದಲು ಒದಗಿಸಿದರು. ಶರಾವತಿ ಪ್ರಾಜೆಕ್ಟ್ ಕೆಲಸ ಮುಗಿದು ಜನವಸತಿ ಕಡಿಮೆ ಆಯಿತು. ಆಗ ಇನ್ನಷ್ಟು ಜನರು ಓದಲಿ ಎಂಬ ಕಾರಣದಿಂದ 1965ರಲ್ಲಿ ಮೂವತ್ತು ಕಿಲೋಮೀಟರ್ ದೂರದ ಸಾಗರ ಪಟ್ಟಣದಲ್ಲಿ ರವೀಂದ್ರ ಪುಸ್ತಕಾಲಯವನ್ನು ತೆರೆದರು. ಪ್ರತಿ ಗುರುವಾರ ಸಾಗರಕ್ಕೆ ಬಂದು ಸಂಜೆ 6.30 ರಿಂದ 8 ರವರೆಗೆ ಹಾಗೂ ಭಾನುವಾರ ಮಧ್ಯಾಹ್ನದಿಂದ ಸಂಜೆವರೆಗೆ ಪುಸ್ತಕಾಲಯ ತೆರೆದು ಸಾಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಓದಿನ ರುಚಿ ಹತ್ತಿಸಿದರು. ಕೂಲಿ ಕೆಲಸಕ್ಕೆ ಹೋಗುವವರೂ ಸಹ ಪುಸ್ತಕಾಲಯಕ್ಕೆ ಬಂದು ಪುಸ್ತಕ ಓದಲು ಕೊಂಡೊಯ್ಯುತ್ತಿದ್ದರು. ಪ್ರತಿ ಭಾನುವಾರ 75 ಕಿಲೋಮೀಟರ್ ದೂರದ ಹೊನ್ನಾವರದಿಂದ ಸಾಗರಕ್ಕೆ ಬಂದು ಪುಸ್ತಕಗಳನ್ನು ಓದಲು ಒಯ್ಯುತ್ತಿದ್ದವರನ್ನು ದಂತಿ ನೆನಪಿಸಿಕೊಳ್ಳುತ್ತಾರೆ.

ಮುಂದೆ ಇವರು ಸಗಟು ಪುಸ್ತಕ ವ್ಯಾಪಾರಿ ಶುರು ಮಾಡಿದರು. ಸುತ್ತಮುತ್ತಲಿನ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲದೇ ದೂರದ ಬೀದರ್ ತುದಿಯಿಂದ ಕಾಸರಗೋಡಿನ ಕಡಂದಲೆವರೆಗೂ ತಲೆಯ ಮೇಲೆ ಪುಸ್ತಕಗಳನ್ನು ಹೊತ್ತು ಮಾರಾಟ ಮಾಡಿದ್ದರು. ಕಹಿ-ಸಿಹಿ ಅನುಭವಗಳ ನಡುವೆ ಪ್ರಕಾಶಕರಾಗಿಯೂ ಸಾಧನೆ ಮಾಡಿರುವುದು ಇವರ ಹೆಗ್ಗಳಿಕೆ. 'ಇಲ್ಲಿ ಸಿಗುವ ಜ್ಞಾನಾರ್ಜನೆಯ ಪುಸ್ತಕಗಳನ್ನು ಓದಿ ಡಾಕ್ಟರೇಟ್ ಪದವಿ ಪಡೆದವರೂ ಇದ್ದಾರೆ. ದೂರದ ಊರಿನವರು ಓದಲು ಕೇಳಿದ ಪುಸ್ತಕಗಳನ್ನು ಮುಂದಿನ ತಿರುಗಾಟದಲ್ಲಿ ನೆನಪಿಟ್ಟು ಅವರಿಗೆ ಒದಗಿಸುತ್ತಿದ್ದೆ. ಕೇಳಿದವರಿಗೆ ಪುಸ್ತಕ ಕೊಡುವುದೇ ನನ್ನ ಕರ್ತವ್ಯ. ಓದುವವರಿಗೆ ಪುಸ್ತಕ ತಲುಪಿಸಿದ ಮೇಲೆಯೇ ನನಗೆ ಸಮಾಧಾನ, ಸಂತೃಪ್ತಿ. ನನ್ನ ಸೇವೆಯನ್ನು ಕಂಡ ಜನ ಅಲ್ಲಿಗೆ ಹೋದಾಗ ತಮ್ಮ ಮನೆಯ ಸದಸ್ಯರಂತೆ ನನ್ನನ್ನು ಉಪಚರಿಸಿದ್ದಾರೆ. ಇದು ನನಗೆ ಸಿಕ್ಕ ದೊಡ್ಡ ಗೌರವ-ಸನ್ಮಾನ' ಎಂದು ದಂತಿ ಭಾವುಕರಾಗುತ್ತಾರೆ.

ಪುಸ್ತಕಾಲಯದಲ್ಲಿ 18,000ಕ್ಕೂ ಹೆಚ್ಚು ಕನ್ನಡ, ಇಂಗ್ಲಿಷ್ ಪುಸ್ತಕಗಳು ಇವೆ. ನಾಲ್ಕಾರು ದಶಕಗಳಿಂದಲೂ ಇರುವ ಓದುಗರಿದ್ದಾರೆ. ಪುಸ್ತಕಗಳನ್ನು ಓದಿ ವಾಪಸ್ ಮಾಡದಿರುವ ಪುಸ್ತಕಗಳ ಸಂಖ್ಯೆಯೂ ಸಾಕಷ್ಟಿದೆ. ಅವರಿಗೆ ನೆನಪೋಲೆಗಳನ್ನು ಬರೆದು ಓದು ಚಾಲ್ತಿಯಲ್ಲಿರುವಂತೆ ದಂತಿ ಪ್ರಯತ್ನಿಸುತ್ತಲೇ ಇರುತ್ತಾರೆ. ಪುಸ್ತಕ ಪ್ರೀತಿ ಮತ್ತು ಉದ್ಯಮ ಎರಡನ್ನೂ ಹದವಾಗಿ ಸಂತುಲಿಸಿಕೊಂಡು ತಮ್ಮ ಸುತ್ತಲಿನ ಪರಿಸರದಲ್ಲಿ ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕಿ ಮಕ್ಕಳಂತೆ ಪೋಷಿಸಿಕೊಂಡು ಬಂದಿದ್ದಾರೆ.

ಪುಸ್ತಕಾಲಯದ ಸದಸ್ಯರಾಗಿ ಸದಭಿರುಚಿಯ ಗ್ರಂಥಗಳನ್ನು ಓದಿಕೊಂಡು ಬಂದವರಿದ್ದಾರೆ. ದಂತಿ ತಮ್ಮ ವಾಚಕ ಸದಸ್ಯರ ಹಿತಾಸಕ್ತಿಗಳನ್ನು ಗೌರವಗಳನ್ನು ಕಾಪಾಡಬಲ್ಲವರು. ಮುದ್ರಣ ಪ್ರಪಂಚದಲ್ಲಿ ಮಾನವೀಯ ಸಂಬಂಧವಿರಿಸಿಕೊಂಡು ಇಳಿವಯಸ್ಸಿನಲ್ಲಿಯೂ ಕನ್ನಡ ಪುಸ್ತಕಗಳ ಬಗ್ಗೆ ಅವರಿಗೆ ಇರುವ ಕಾಳಜಿ, ಪ್ರೀತಿ ಅಚ್ಚರಿ ಪಡುವಂತಹದು.

ಸಾಗರದ ಸಾಂಸ್ಕೃತಿಕ ಚಟುವಟಿಕೆಗಳ ಬೆಳವಣಿಗೆಗೆ ಸಹಕಾರಿಯಾಗಿ ಈ ಪುಸ್ತಕಾಲಯದ ವತಿಯಿಂದ ಕನ್ನಡದ ಸಾಹಿತ್ಯ ದಿಗ್ಗಜರಾದ ಗೋಪಾಲಕೃಷ್ಣ ಅಡಿಗ, ಚಂದ್ರಶೇಖರ ಕಂಬಾರ, ಗಿರಡ್ಡಿ ಗೋವಿಂದರಾಜು, ವಿ. ಎಂ. ಇನಾಂದಾರ್, ಕೆ.ಶಿವರಾಮ ಕಾರಂತ, ಬಿ. ವಿ. ಕಾರಂತ, ಎಂ.ಕೆ. ಇಂದಿರಾ, ನೀಳಾದೇವಿ, ಪಂಕಜ, ಹಾ. ಮಾ. ನಾಯಕ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ಎಲ್. ಭೈರಪ್ಪ, ಜಿ.ಪಿ. ರಾಜರತ್ನಂ, ಯಂಡಮೂರಿ ವೀರೇಂದ್ರನಾಥ್, ಯು.ಆರ್. ಅನಂತಮೂರ್ತಿ, ಗಂಗೂಬಾಯಿ ಹಾನಗಲ್, ಎಚ್. ಎಸ್. ವೆಂಕಟೇಶಮೂರ್ತಿ ಮೊದಲಾದವರನ್ನು ಆಹ್ವಾನಿಸಿ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ.

ನಾ. ಡಿಸೋಜಾ ಅವರ 'ಮುಳುಗಡೆ', ಸಾಯಿಸುತೆಯವರ 125ನೇ ಹಾಗೂ 150ನೇ ಕೃತಿಗಳು, ಎನ್.ಪಂಕಜ, ಎಂ.ಕೆ. ಇಂದಿರಾ, ಶ್ರೀರಂಗ, ಶ್ರೀನಿವಾಸ ಉಡುಪ, ಭಾರತೀಸುತ, ಟಿ. ಪಿ. ಅಶೋಕ, ಜಯಪ್ರಕಾಶ ಮಾವಿನಕುಳಿ... ಹೀಗೆ ಕನ್ನಡದ ಖ್ಯಾತ ಲೇಖಕರ 195 ಪುಸ್ತಕಗಳನ್ನು ಪ್ರಕಾಶನಗೊಳಿಸಿದ ಕೀರ್ತಿ ರವೀಂದ್ರ ಪುಸ್ತಕಾಲಯದ್ದು.

ಆರು ದಶಕಗಳಲ್ಲಿ ಮನೆಯಲ್ಲಿ ನೆಂಟರಿಷ್ಟರಿರಲಿ, ಅನಾರೋಗ್ಯವಿರಲಿ, ಹಬ್ಬ ಹರಿದಿನವಿರಲಿ 85 ವರ್ಷದ ದಂತಿಯವರು ಪುಸ್ತಕಾಲಯದ ಬಾಗಿಲು ಹಾಕಿದ್ದೇ ಇಲ್ಲ. ಸರ್ಕಾರದ ಸೂಚನೆಯಂತೆ ಕೋವಿಡ್ ಕಾಲದಲ್ಲಿ ಮಾತ್ರ ಬಾಗಿಲು ಹಾಕಿತ್ತು. ಪುಸ್ತಕಗಳನ್ನು ಕೊಳ್ಳಲು ಶಿಕ್ಷಕಿಯಾಗಿದ್ದ ಮಡದಿ ನೀಡಿದ ಆರ್ಥಿಕ ಸಹಾಯವನ್ನು ಮರೆಯದೇ ನೆನಪು ಮಾಡಿಕೊಳ್ಳುವ ದಂತಿ ಅವರು, 'ಓದುಗರನ್ನು ಖುಷಿ ಪಡಿಸುವುದೇ ನನ್ನ ಗುರಿ' ಎನ್ನುತ್ತಾರೆ. ❖



ರವೀಂದ್ರ ಪುಸ್ತಕಾಲಯದ ಸ್ಥಾಪಕ ವೈ.ಎ.ದಂತಿ

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೃಪಾಕೇತು

ಕೃಪಾಕೇತು (ನಾ). ಕರುಣೆಯ ಕಿರಣ

ರಾಮ ಸೀತೆ ಲಕ್ಷ್ಮಣರನ್ನು ಹುಡುಕಿ ಕರೆತರಲು ಭರತನು ಹೊರಟಾಗ ಅವನ ಜೊತೆ ತಾಯಂದಿರು ಹೋಗುವರು. ರಾಮಚಂದ್ರನು ಕೌಸಲ್ಯೆ, ಸುಮಿತ್ರೆಯರಿಗೆ ವಂದಿಸುವನು. ದೂರದಲ್ಲಿ ಪಶ್ಚಾತ್ತಾಪದಿಂದ ತಲೆಬಾಗಿ ನಿಂತಿದ್ದ ಕೈಕೆಯನ್ನು ಕರುಣಿ ರಾಮ ನೋಡುವನು. ಅವನ ಉನ್ನತ ಆದರ್ಶ ವ್ಯಕ್ತಿತ್ವವನ್ನು ಚಿತ್ರಿಸುತ್ತ ಕುವೆಂಪು ಅವನನ್ನು ಕರುಣೆಯಿಂದ ಕೂಡಿದ ಬೆಳಕಿನ ಕಿರಣ 'ಕೃಪಾಕೇತು' ಎಂದು ಕರೆದು ಹೀಗೆ ರೇಖಿಸಿದ್ದಾರೆ:

'ಪಾಪಿಯಂ ಬೆಂಬಿಡದೆ
ಹಿಂಬಾಲಿಸಟ್ಟಿ ಹಿಡಿಯುವ ಕೃಪಾಕೇತುವೋಲ್
ಮುಟ್ಟಿ ಹಿಡಿದನು ಪಾದಯುಗ್ಮಮಂ'

ಹೆಗ್ಗಣ್ಣು

ಹೆಗ್ಗಣ್ಣು (ನಾ). ದೊಡ್ಡದಾದ ಕಣ್ಣು; ವಿಶಾಲವಾದ ಅಕ್ಷಿ

ದಂಡಕಾರಣ್ಯದಲ್ಲಿ ರಾಮಸೀತೆ ಲಕ್ಷ್ಮಣರಿಗೆ ಎದುರಾದ ವಿರಾಧ ರಾಕ್ಷಸನನ್ನು ಬಣ್ಣಿಸುವಾಗ ಹೆಗ್ಗಣ್ಣು, ಹೆಬ್ಬಾಯಿ, ಹೇರೊಡಲು ನುಡಿಗಳನ್ನು ಪ್ರಯೋಗಿಸಿದ್ದಾರೆ.

'ಬಂದುದಯ್
ಹೆಗ್ಗಣ್ಣ ಹೆಬ್ಬಾಯ ಹೇರೊಡಲ ರಕ್ಕಸನ
ಬೀಭತ್ಸ ಛಾಯೆಯ ಭೀಮಭೀತಿ!'

ಮಿಣಿಯೇಣಿ

ಮಿಣಿಯೇಣಿ (ನಾ). ಚರ್ಮದಿಂದ ಮಾಡಿದ ಏಣಿ.

ಚಂದ್ರನಖಿಯು ಅಣ್ಣ ರಾವಣನಿಗೆ ಸೀತೆಯನ್ನು ಅಪಹರಿಸಲು ಉಪದೇಶಿಸುವಳು. ಅದನ್ನು ಕೇಳಿದ ಅವನ ಆಗಿನ ದುಷ್ಟ ಆಲೋಚನೆಯನ್ನು ಚಿತ್ರಿಸುವಾಗ ಕುವೆಂಪು ಅವರು 'ಮಿಣಿಯೇಣಿ' ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

'ಲಭಿಸಿದುದು ರಾವಣನ
ಸಹಜಕಾಮದ ಕಪಿಗೆ ರಾಜಕಾರಣ ಫಣಿಯ
ಮಿಣಿಯೇಣಿ.'

ಕಥೆ
ಮೂಲ : ಜ್ಯೋತಿಷ್ ಜಾನಿ
ಕನ್ನಡಕ್ಕೆ: ಡಿ. ಎನ್. ಶ್ರೀನಾಥ್
ಅವರ
ಹೆಸರಿಲ್ಲ
prajavani.net/short-story

ಕವನ
ಕೆ.ಎನ್.ಲಾವಣ್ಯ ಪ್ರಭಾ
ಅವರ
ಒಂದು ಪ್ರೇಮ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ಉರಿಯುಂಡ ಕರ್ಪೂರ ವಿಜಯಾ ದಬ್ಬೆ

ನೆನಪಿನಂಗಳದಲ್ಲಿ ವಿಜಯಾ ದಬ್ಬೆ
ಸಂ: ಸಬಿಹಾ ಭೂಮಿಗೌಡ
ಪ್ರ: ಸಮತಾ ಅಧ್ಯಯನ ಕೇಂದ್ರ (ರಿ),

ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಕ್ಕೆ ತಾತ್ವಿಕ ಚೌಕಟ್ಟು ಹಾಕಿಕೊಟ್ಟವರಲ್ಲಿ ವಿಜಯಾ ದಬ್ಬೆ ಅಗ್ರಗಣ್ಯರು. ಸ್ತ್ರೀವಾದವು ಮೊಳಕೆಯೊಡೆಯುತ್ತಿದ್ದ ಕಾಲಘಟ್ಟದಲ್ಲಿ ಅವರು ಬಿತ್ತಿದ ಮೌಲ್ಯಗಳು ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆಯ ಸ್ವರೂಪ ಹಾಗೂ ಸ್ತ್ರೀ ಸಂಸ್ಕೃತಿಯ ಪುನರ್ ರಚನೆಗೆ ಸ್ಪಷ್ಟ ಹಾದಿಯನ್ನು ಕಲ್ಪಿಸಿವೆ. ಸೌಮ್ಯ ಸ್ವಭಾವ, ಮೆಲುದನಿಯ ಮೂಲಕವೇ ಸ್ತ್ರೀವಾದವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದ ಚಿಂತಕಿ ವಿಜಯಾ ದಬ್ಬೆ ಅವರ ಹೋರಾಟದ ಬದುಕನ್ನು 'ನೆನಪಿನಂಗಳದಲ್ಲಿ ವಿಜಯಾ ದಬ್ಬೆ' ಕೃತಿ ಬಿಚ್ಚಿಡುತ್ತದೆ. ವಿಜಯಾ ಅವರ ಚಿಂತನೆಗಳಿಂದ ಪ್ರಭಾವಿತರಾದ, ಅಲ್ಪಕಾಲದ ಒಡನಾಡಿ ಲೇಖಕಿ ಸಬಿಹಾ ಭೂಮಿಗೌಡ ಅವರು ಸಂಗ್ರಹಿಸಿರುವ ಈ ಕೃತಿಯಲ್ಲಿ ವಿಜಯಾ ಅವರ ಒಡನಾಡಿಗಳು, ಚಳವಳಿಯ ಸಂಗಾತಿಗಳು, ವಿದ್ಯಾರ್ಥಿಗಳು ತಮ್ಮ ನೆನಪುಗಳನ್ನು ಹಂಚಿಕೊಂಡಿದ್ದಾರೆ.

35 ಬರಹಗಳಿರುವ ಈ ಕೃತಿಯಲ್ಲಿ ಕನ್ನಡ ಸಾಹಿತ್ಯ ಕಲಿಕೆಗೆ ಹೊಸ ದೃಷ್ಟಿ ನೀಡಿದ್ದ ವಿಜಯಾ ಅವರ ಚಿಂತನೆಗಳು ಹರಳುಗಟ್ಟಿವೆ. ಮುಖ್ಯವಾಗಿ ನಮ್ಮ ನೆಲಕ್ಕೆ ಹೊಂದುವಂಥ ಸ್ತ್ರೀವಾದ ತಾತ್ವಿಕತೆ ಕಟ್ಟುವಲ್ಲಿ ಅವರು ವಹಿಸಿದ್ದ ಎಚ್ಚರ, ವಾಸ್ತವ ದೃಷ್ಟಿಕೋನ ಹೇಗಿದ್ದವು ಎಂಬುದನ್ನು ಅವರ ನಿಕಟವರ್ತಿಗಳು ನೆನಪಿಸಿಕೊಂಡಿದ್ದಾರೆ. ಮೈಸೂರಿನಲ್ಲಿ ಸಮತಾ ಅಧ್ಯಯನ ಕೇಂದ್ರ, ಶಕ್ತಿಧಾಮದ ಸ್ಥಾಪನೆಗೆ ಕಾರಣಕರ್ತರಾಗಿದ್ದ ವಿಜಯಾ ಅವರ ತಾತ್ವಿಕ ಚಿಂತನೆಗಳು ಕನ್ನಡ ಸಾಹಿತ್ಯ, ಮಹಿಳಾ ಚಳವಳಿ, ಕರ್ನಾಟಕ ಲೇಖಕಿಯರ ಸಂಘವಷ್ಟೇ ಅಲ್ಲದೇ, ಮುಂದಿನ ತಲೆಮಾರಿನ ಲೇಖಕಿಯರಿಗೆ ತೋರಿದ ಸ್ಪಷ್ಟ ಹಾದಿಯನ್ನೂ ಕೃತಿ ಮನಗಾಣಿಸುತ್ತದೆ. ಕರ್ಪೂರವು ತನ್ನನ್ನು ದಹಿಸಿಕೊಳ್ಳುತ್ತಲೇ ಸುತ್ತಲಿನ ಜಗತ್ತಿಗೆ ಪರಿಮಳ ಬೀರುತ್ತಾ ಕರಗುವ ಪರಿಯಂತೆ ವಿಜಯಾ ಅವರ ಬದುಕು– ಬರಹ ಇಲ್ಲಿ ಚಿತ್ರಣವಾಗಿದೆ. ನೋವು, ನಿರಾಸೆಯ ನಡುವೆಯೂ ಅದಮ್ಯ ಜೀವನ ಪ್ರೀತಿಯ ಪ್ರತೀಕವಾಗಿದ್ದ ವಿಜಯಾ ದಬ್ಬೆ ಇಹಲೋಕ ತೊರೆದಿದ್ದರೂ, ಅವರ ತಾತ್ವಿಕ ಚಿಂತನೆಗಳಿಗೆ ಸಾವಿಲ್ಲ ಎಂಬುದನ್ನು ಕೃತಿ ಪ್ರತಿಪಾದಿಸುತ್ತದೆ.

ಪುಟ: 282 ₹300

ಜಾತಿ-ಧರ್ಮಗಳ ಗಡಿ ದಾಟಿಸುವ ಕಥೆಗಳು

ಮಸೀದಿ ಬಾವಿ ಮತ್ತು ಇತರ ಕಥೆಗಳು
ಸಂ: ಬಿ.ಎಲ್. ವೇಣು
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್
ಸಂ: 9740066842

ಕನ್ನಡದ ಪ್ರಮುಖ ಕಥೆಗಾರ ಹಾಗೂ ಕಾದಂಬರಿಕಾರರಾಗಿ ಗುರುತಿಸಿಕೊಂಡಿರುವ ಬಿ.ಎಲ್.ವೇಣು ಅವರ ಹದಿನಾಲ್ಕನೇ ಕಥಾಸಂಕಲನ 'ಮಸೀದಿ ಬಾವಿ ಮತ್ತು ಇತರ ಕಥೆಗಳು'. ಈ ಕಥಾ ಸಂಕಲನದಲ್ಲಿ ಒಟ್ಟು 15 ಸಣ್ಣ ಕಥೆಗಳಿವೆ.

ಸಂಕಲನದ ಬಹುತೇಕ ಕಥೆಗಳು ಜಾತಿ, ಧರ್ಮಗಳ ಸಂಕೋಲೆಗಳ ಸುತ್ತಲೇ ಸುತ್ತುತ್ತವೆ. ಈ ಕಥೆಗಳ ಪಾತ್ರಗಳು ಅಲ್ಲಿಂದ ಬಿಡುಗಡೆ ಪಡೆಯಲು ನಡೆಸುವ ಹೋರಾಟಗಳೇ, ಕಥೆಗಳಾಗಿ ರೂಪುಗೊಂಡಿವೆ.

'ಮಸೀದಿ ಬಾವಿ' ಕಥೆಯು ವಿಡಂಬನಾತ್ಮಕವಾಗಿ ಧರ್ಮಗಳ ನಡುವಿನ ಕಿತ್ತಾಟವನ್ನು ತೋರಿಸಿಕೊಡುತ್ತದೆ. ಮಸೀದಿ ಬಾವಿಯಲ್ಲಿ ನಾಯಿಯೊಂದು ಬೀಳುವ ಮೂಲಕ ಆರಂಭವಾಗುವ ಕಥೆಯು, ಧರ್ಮಗಳ ಹೆಸರಲ್ಲಿ ಕೊಳೆತು ನಾರುವ ಮನುಷ್ಯ ಸಂಬಂಧಗಳನ್ನು ಸೂಚ್ಯವಾಗಿ ನಿರೂಪಿಸುತ್ತದೆ.

'ಒಂದು ಸಾವಿನ ಸುತ್ತಾ', 'ಅಗೋಚರ' ಕಥೆಗಳು ಧರ್ಮದ ಅಮಲಿನಲ್ಲಿರುವವರ ಸುತ್ತ ಸುತ್ತುವ ಕಥೆಗಳಾಗಿವೆ. 'ಜೆಸಿಬಿ ಮಾಲಿಂಗ', 'ಅಜಗಜಾಂತರ', 'ನಾಳೆಗಳಿಲ್ಲದವರು', 'ಕರುಣಾಳು ಬಾ ಬೆಳಕೆ' ಕಥೆಗಳು ಹಳ್ಳಿಯ ಜನರಲ್ಲಿ ಬೇರೂರಿರುವ ಜಾತೀಯತೆಯನ್ನು ತೆರೆದಿಡುತ್ತದೆ.

'ಹೀಗೊಂದು ಪ್ರೇಮಾಯಣ', 'ಮದುವೆಯ ಈ ಬಂಧ', 'ಸಂಗಾತಿ' ಕಥೆಗಳು ಪ್ರೀತಿ, ಪ್ರೇಮ, ಮದುವೆಗಳ ಕಥೆಗಳಾಗಿವೆ. 'ಯಲಕ್ಷನ್ಗೆ ನಿಂತ್ರು ಕಾವಿ ಶೂರರು!', 'ಸ್ವಾಮೀಜಿ' ಕಥೆಗಳು ಮಠಾಧೀಶರೆನಿಸಿಕೊಂಡವರ ಪುರಾಣಗಳನ್ನು ಬಿಚ್ಚಿಡುತ್ತವೆ.

ವಿಡಂಬನಾತ್ಮಕ ನಿರೂಪಣೆಯ ಮೂಲಕ ಪ್ರಚಲಿತ ಸಂಗತಿಗಳು ಹಾಗೂ ಸಮಕಾಲೀನ ಘಟನೆಗಳನ್ನು ಕಥಾವಸ್ತುಗಳನ್ನಾಗಿಸುವ ವೇಣು ಅವರ ಬರವಣಿಗೆಯಲ್ಲಿ ಓದಿಸಿಕೊಂಡು ಹೋಗುವ ಗುಣವಿದೆ. ಇಲ್ಲಿನ ಕಥೆಗಳ ಪಾತ್ರಗಳು ನಮ್ಮೊಳಗಿನ ಸಮಾಜದಿಂದಲೇ ಜೀವತಾಳಿದಂತಿವೆ.

ಪುಟ: 136 ₹150

ಮನುಷ್ಯ ಸ್ವಭಾವಗಳನ್ನು ತೆರೆದಿಡುತ್ತಾ...

ಲಚ್ಮನ ಸೈಕಲ್ ಪುರಾಣ ಮತ್ತು ಇತರ ಕಥೆಗಳು
ಲೇ: ಮೋಹನ ಬಣಕಾರ
ಪ್ರ: ಬೆನಕ ಬುಕ್ಸ್ ಬ್ಯಾಂಕ್
ಸಂ: 7338437666

'ಲಚ್ಮನ ಸೈಕಲ್ ಪುರಾಣ ಮತ್ತು ಇತರ ಕಥೆಗಳು' ಮೋಹನ ಬಣಕಾರ ಅವರ ಚೊಚ್ಚಲ ಕಥಾ ಸಂಕಲನ. ಈ ಸಂಕಲನದ ಹಸ್ತಪ್ರತಿಯು 2024-25ನೇ ಸಾಲಿನ 'ಛಂದ ಪುಸ್ತಕ ಬಹುಮಾನ' ಸ್ಪರ್ಧೆಯಲ್ಲಿ ಮೆಚ್ಚುಗೆ ಬಹುಮಾನಕ್ಕೆ ಕೂಡ ಪಾತ್ರವಾಗಿದೆ.

ರಾಣೆಬೆನ್ನೂರು ಮೂಲದ ಇವರು ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದಾರೆ. ಇವರ ಕಥೆಗಳಲ್ಲಿ ಹಳ್ಳಿ ಹಾಗೂ ನಗರ ಸಮುದಾಯಗಳೆರಡೂ ಇಣುಕುತ್ತವೆ.

ವಾಸ್ತವ ಜಗತ್ತಿನಲ್ಲಿ ನಮ್ಮ ಸುತ್ತಲೂ ನಡೆಯುವ, ನಡೆಯುತ್ತಿರುವ ಅತಿ ಸಾಮಾನ್ಯ ಎನಿಸುವ ಘಟನೆಗಳನ್ನು ಕೂಡ ಕಥೆಯಾಗಿಸುವ ಗುಣವನ್ನು ಕಥೆಗಾರ ಹೊಂದಿದ್ದಾರೆ. ಮನುಷ್ಯ ಸ್ವಭಾವದ ವಿವಿಧ ಮಗ್ಗುಲುಗಳನ್ನು ಇಲ್ಲಿನ ಕಥೆಗಳು ತೆರೆದಿಡುತ್ತವೆ.

ಆಚಾರ ಹೇಳುವ ನಾಲಿಗೆ, ಅವಲಕ್ಕಿ ಸರ, ಒಂದು ಬಾಟಲಿನ ಕಥೆ, ಎಬಿಸಿಡಿ, ರಾಜು ಕಾಕಾ ಹೋಗಿಬಿಟ್ಟ ಕಥೆಗಳು ಮನುಷ್ಯನ ವಿಚಿತ್ರ ಸ್ವಭಾವಗಳನ್ನು ತೆರೆದಿಡುವ ಮೂಲಕ ನೀತಿ ಬೋಧೆಯನ್ನು ಕೂಡ ಮಾಡುತ್ತವೆ.

ಹೀಗೊಂದು ಮದುವೆ, ಪೊಲೀಸ್ ಅಜ್ಜಿ ಕಥೆಗಳು ಬದಲಾದ ಕಾಲಘಟ್ಟದ ಜೀವನ ಶೈಲಿಯ ಸುತ್ತ ಸುತ್ತುವ ಕಥೆಗಳಾಗಿವೆ. ಲೈಟ್ಸ್ ಆಫ್ ಪ್ಲೇಸ್, ನಾಟಕ ಕಂಪನಿ ಕಥೆಗಳು ಕಾರ್ಪೊರೇಟ್ ಲೋಕದೊಳಗಿನ ಕಥೆಗಳನ್ನು ಹೇಳುತ್ತವೆ. ಲಚ್ಮನ ಸೈಕಲ್ ಪುರಾಣ ಕಥೆಯು ಉಳ್ಳವರು ಮತ್ತು ಕೆಲಸದಾಳುವಿನ ನಡುವಿನ ವಿಶಿಷ್ಟ ಸಂಬಂಧವನ್ನು ಕಟ್ಟಿಕೊಡುತ್ತದೆ.

'ಲಚ್ಮನ ಸೈಕಲ್ ಪುರಾಣ ಮತ್ತು ಇತರ ಕಥೆಗಳು' ಕಥಾ ಸಂಕಲನದಲ್ಲಿ ಹತ್ತು ಕಥೆಗಳಿವೆ. ಸರಳ ನಿರೂಪಣಾ ಶೈಲಿಯ, ಓದಿಸಿಕೊಂಡು ಹೋಗುವ ಗುಣ ಇಲ್ಲಿನ ಕಥೆಗಳಲ್ಲಿವೆ. ವೈವಿಧ್ಯಮಯ ಕಥಾ ವಸ್ತುಗಳಿಂದ ಕೂಡಿರುವ ಈ ಕಥೆಗಳು ನಮ್ಮವೇ ಎನಿಸುವಷ್ಟು ಸಹಜತೆಯಿಂದ ಕೂಡಿವೆ.

ಪುಟ: 198 ₹230

ಬೋಟ್‌ನಿಂದ ಹೀಗೆ ಕಾಣುತ್ತದೆ ಸೇಂಟ್ ಮೇರೀಸ್ ದ್ವೀಪ

ಪ್ರಕೃತಿ ವಿಸ್ಮಯ ತಾಣ ಸೇಂಟ್ ಮೇರೀಸ್ ದ್ವೀಪ

ಉಡುಪಿ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುವ ದ್ವೀಪ ಪ್ರದೇಶವಿದು. ಅಪರೂಪದ ಶಿಲಾ ರಚನೆಗಳು ಇಲ್ಲಿನ ಮುಖ್ಯ ಆಕರ್ಷಣೆ. ಬೇಸಿಗೆಯಲ್ಲಿ ಪ್ರವಾಸಿಗರಿಂದ ತುಂಬಿರುವ ಈ ದ್ವೀಪದ ವಿವರ ಇಲ್ಲಿದೆ...

• ನವೀನ್ ಕುಮಾರ್ ಜಿ.

ಅರಬ್ಬಿ ಸಮುದ್ರ ನಡುವಿನಲ್ಲೊಂದು ಶಿಲೆಗಳಿಂದ ಸುತ್ತುವರಿದ ಭೂ ಪ್ರದೇಶ. ಮಳೆಗಾಲದಲ್ಲಿ ಭೋರ್ಗರೆಯುವ ಕಡಲಿನ ನಡುವೆ ನಿರ್ಜನವಾಗುವ ಈ ದ್ವೀಪವು ಸಮುದ್ರ ಶಾಂತವಾಗುತ್ತಿದ್ದಂತೆ ಪ್ರವಾಸಿಗರ ಕಲರವಕ್ಕೆ ಸಾಕ್ಷಿಯಾಗುತ್ತದೆ.

ದೇಶ, ವಿದೇಶದ ಪ್ರವಾಸಿಗರನ್ನು ಆಕರ್ಷಿಸುವ ಈ ಸುಂದರ ತಾಣವೇ ಉಡುಪಿ ಜಿಲ್ಲೆಯ ಮಲ್ಪೆ ಸಮೀಪದ ಸೇಂಟ್ ಮೇರೀಸ್ ದ್ವೀಪ. ಕರಾವಳಿ ಜಿಲ್ಲೆ ಉಡುಪಿಗೆ ಭೇಟಿ ನೀಡುವ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುವ ಇದು ತನ್ನ ಒಡಲಿನಲ್ಲಿರುವ ಅಪರೂಪದ ಶಿಲಾ ರಚನೆಗಳಿಂದ ಪ್ರವಾಸಿಗರ ಜೊತೆ ಅಧ್ಯಯನಾಸಕ್ತರನ್ನೂ ಆಕರ್ಷಿಸುತ್ತಿದೆ.

ಸ್ತಂಭಾಕಾರದ ಬಸಾಲ್ಟ್ ಶಿಲಾರಚನೆಗಳಿರುವ ಈ ದ್ವೀಪವು ಹಲವು ಅಚ್ಚರಿ, ಸೋಜಿಗದ ಕೇಂದ್ರ ಬಿಂದು. ಜ್ವಾಲಾಮುಖಿಯ ಲಾವಾರಸ ಹರಿದು ಹಾಸುಗಲ್ಲಾಗಿ ಮಾರ್ಪಟ್ಟಿದೆ ಎನ್ನಲಾದ ಬಸಾಲ್ಟ್ ಶಿಲೆಗಳೇ ಈ ದ್ವೀಪದ ತುಂಬೆಲ್ಲಾ ಕಾಣ ಸಿಗುತ್ತದೆ.

ಆಯತಾಕಾರದ ಸಾಲುಗಳು ಮೇಲಕ್ಕೆ ಎದ್ದು ನಿಂತಂತೆ ಕಾಣುವ ಅಪರೂಪದ ಶಿಲಾ ರಚನೆಗಳೇ ಇದರ ಪ್ರಮುಖ ಆಕರ್ಷಣೆಯಾಗಿದೆ.

ಈ ಶಿಲಾ ರಚನೆಗಳು ಜ್ವಾಲಾಮುಖಿ ಚಟುವಟಿಕೆಗಳಿಂದ ರೂಪುಗೊಂಡಿವೆ ಎಂದು ಭೂ ವೈಜ್ಞಾನಿಕ ಸಮೀಕ್ಷೆ ಮತ್ತು ವೈಜ್ಞಾನಿಕ ಅಧ್ಯಯನಗಳ ಆಧಾರದಲ್ಲಿ ಹಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ದ್ವೀಪದ ಶಿಲಾ ರಚನೆಯನ್ನು ಕೊಲಮ್ನರ್ ಬಸಾಲ್ಟಿಕ್ ರಾಕ್ ಎಂದು ಕರೆಯಲಾಗುತ್ತದೆ.

ಸೇಂಟ್ ಮೇರೀಸ್ ದ್ವೀಪದ ಶಿಲಾ ರಚನೆಗಳು

ಸೇಂಟ್ ಮೇರೀಸ್ ದ್ವೀಪದಲ್ಲಿ ಪ್ರವಾಸಿಗರು

ಸೇಂಟ್ ಮೇರೀಸ್ ದ್ವೀಪದಲ್ಲಿ ಕಂಡು ಬರುವ ಶಿಲಾರಚನೆಗಳು ಆಫ್ರಿಕಾದ ಮಡ್‌ಗಾಸ್ಕರ್‌ನಲ್ಲಿರುವ ಶಿಲಾರಚನೆಗಳನ್ನು ಹೋಲುತ್ತವೆ ಎಂದೂ ಹಲವರು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿನ ಬಂಡೆಗಳ ವಯಸ್ಸಿನ ಬಗ್ಗೆ ಹಲವು ತಜ್ಞರು ಹಲವು ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ಇಂತಹ ಶಿಲಾರಚನೆಗಳು ಸಮೀಪದಲ್ಲಿ ಬೇರೆಲ್ಲೂ ಕಾಣಸಿಗದಿರುವುದರಿಂದ ಇದು ಅಧ್ಯಯನಾಸಕ್ತರಲ್ಲಿ ಕುತೂಹಲ ಕೆರಳಿಸುತ್ತದೆ.

ಸೇಂಟ್ ಮೇರೀಸ್ ದ್ವೀಪವು ನಾಲ್ಕು ಸಣ್ಣ ದ್ವೀಪಗಳ ಸಮೂಹವಾಗಿದೆ. ಮಲ್ಪೆ ಬೀಚ್‌ನಿಂದ ಬೋಟ್‌ನಲ್ಲಿ ಸುಮಾರು 20 ನಿಮಿಷ ಕ್ರಮಿಸಿದರೆ ಈ ದ್ವೀಪವನ್ನು ತಲುಪಬಹುದಾಗಿದೆ. ಇದರ ಸನಿಹದಲ್ಲಿ ಉತ್ತರ ದ್ವೀಪ, ದಕ್ಷಿಣ ದ್ವೀಪ ಮತ್ತು ದರಿಯಾ ಬಹದ್ದೂರ್‌ಗಢ ದ್ವೀಪಗಳಿವೆ. ನಾಲ್ಕು ದ್ವೀಪಗಳಲ್ಲಿ ಉತ್ತರ ತುದಿಯಲ್ಲಿರುವ ದ್ವೀಪದಲ್ಲಿ ಷಡ್ಭುಜಾಕೃತಿಯ ಶಿಲಾರಚನೆ ಇದ್ದು ಹೆಚ್ಚು ಗಮನ ಸೆಳೆಯುತ್ತದೆ.

ಮಲ್ಪೆ ಬೀಚ್‌ನಿಂದ ಬರಿಗಣ್ಣಿಗೆ ಕಾಣುವ ಸೇಂಟ್ ಮೇರೀಸ್ ದ್ವೀಪವು 1,640 ಅಡಿ ಉದ್ದ ಮತ್ತು 328.1 ಅಡಿ ಅಗಲವಿದೆ. ಈ ದ್ವೀಪದಲ್ಲಿ ಸಾಕಷ್ಟು ತೆಂಗಿನಮರಗಳಿವೆ. ಇದೇ ಕಾರಣಕ್ಕೆ ಈ ದ್ವೀಪವನ್ನು ತೆಂಗಿನಕಾಯಿ ದ್ವೀಪ ಎಂದೂ ಕರೆಯುತ್ತಾರೆ. ಥೋನ್ಸೆಪರ್ ಎಂಬ ಮತ್ತೊಂದು ಸ್ಥಳೀಯ ಹೆಸರೂ ಇದಕ್ಕಿದೆ. ಅಪರೂಪದ ಶಂಖಗಳು, ಚಿಪ್ಪುಗಳು ಈ ದ್ವೀಪದ ಮರಳಿನಲ್ಲಿ ಕಾಣಸಿಗುತ್ತವೆ. ದ್ವೀಪದಲ್ಲಿ ಮಂಟಪಗಳು ಮತ್ತು ಬೆಂಚುಗಳನ್ನು ಬಿಟ್ಟರೆ ಬೇರೇನೂ ಇರುವುದಿಲ್ಲ.

ಇತಿಹಾಸಕ್ಕೆ ಸಂಬಂಧಪಟ್ಟ ವಿಚಾರಗಳೂ ಈ ಪುಟ್ಟ ದ್ವೀಪದ ಜೊತೆಗೆ ತಳುಕು ಹಾಕಿಕೊಂಡಿವೆ. ಪೋರ್ಚುಗಲ್‌ನಿಂದ ಕೇರಳದ ಕೋಯಿಕ್ಕೋಡ್‌ಗೆ ಪ್ರಯಾಣ ಬೆಳೆಸುತ್ತಿದ್ದಾಗ ಪೋರ್ಚುಗೀಸ್ ನಾವಿಕ ವಾಸ್ಕೊ ಡ ಗಾಮ ಈ ದ್ವೀಪದಲ್ಲಿ ಇಳಿದಿದ್ದ ಎಂದೂ ನಂಬಲಾಗಿದೆ. ವಾಸ್ಕೊ ಡ ಗಾಮನೇ ಪೋರ್ಚುಗೀಸ್ ಭಾಷೆಯಲ್ಲಿ ‘ಒ ಪಾಡ್ರಾವೊ ಡಿ ಸಾಂತಾ ಮಾರಿಯಾ’ ಎಂದು ಈ ದ್ವೀಪಕ್ಕೆ ನಾಮಕರಣ ಮಾಡಿದ ಎಂದೂ ಹೇಳಲಾಗುತ್ತದೆ.

ಮನುಷ್ಯರು ವಾಸ ಮಾಡದ ಸೇಂಟ್ ಮೇರೀಸ್ ದ್ವೀಪವು ಹಲವಾರು ಪಕ್ಷಿ ಪ್ರಭೇದಗಳ ಆವಾಸಸ್ಥಾನವೂ ಹೌದು. ನೀರುಕಾಗೆ, ಸ್ಯಾಂಡ್ ಪೈಪರ್, ಸೀಗಲ್, ಬ್ರಾಹ್ಮಿನಿ ಕೈಟ್ ಮತ್ತು ಬೆಳ್ಳಕ್ಕಿಗಳು ಈ ದ್ವೀಪದಲ್ಲಿ ಕಂಡು ಬರುತ್ತವೆ. ಪ್ರವಾಸಿಗರಿಗೆ ನಿರ್ಬಂಧವಿರುವ ಅವಧಿಯಲ್ಲಿ ಇವುಗಳ ಸ್ವಚ್ಛಂದ ವಿಹಾರಕ್ಕೆ ಅಡೆತಡೆ ಇರುವುದಿಲ್ಲ. ❖

ಹೀಗೆ ತಲುಪಬಹುದು...

ಉಡುಪಿಯಿಂದ ಸುಮಾರು 6 ಕಿ.ಮೀ. ದೂರದಲ್ಲಿರುವ ಮಲ್ಪೆ ಬೀಚ್‌ಗೆ ಬಂದರೆ, ಮಲ್ಪೆ ಬೀಚ್ ಹಾಗೂ ಸೀವಾಕ್ ಬಳಿಯಿಂದ ಈ ದ್ವೀಪಕ್ಕೆ ಬೋಟ್ ಸೇವೆ ಲಭ್ಯವಿರುತ್ತದೆ. ಮಲ್ಪೆ ಕಡಲತೀರದಿಂದ ಈ ದ್ವೀಪಕ್ಕೆ ಸುಮಾರು 4.5 ಕಿ.ಮೀ. ಅಂತರವಿದೆ.

ದ್ವೀಪ ಪ್ರವೇಶಕ್ಕೆ ಪ್ರತಿ ವರ್ಷ ಮೇ 15 ರಿಂದ ಸೆಪ್ಟೆಂಬರ್ 15ರ ವರೆಗೆ ನಿಷೇಧ ಹೇರಲಾಗುತ್ತದೆ. ಮಳೆಗಾಲದಲ್ಲಿ ಕಡಲು ಪ್ರಕ್ಷುಬ್ಧವಾಗುವುದರಿಂದ ಬೋಟ್ ಮೂಲಕ ಸಾಗುವುದು ಅಪಾಯಕಾರಿಯಾದ ಕಾರಣ ಈ ಅವಧಿಯಲ್ಲಿ ಪ್ರವಾಸಿಗರಿಗೆ ನಿರ್ಬಂಧ ಹೇರಲಾಗುತ್ತದೆ.

ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯ ನಡುವೆ ಬೋಟ್‌ಗಳು ಪ್ರವಾಸಿಗರನ್ನು ಈ ದ್ವೀಪಕ್ಕೆ ಕರೆದೊಯ್ಯುತ್ತವೆ. ದ್ವೀಪದಲ್ಲಿ ಸುಮಾರು ಒಂದು ಗಂಟೆ ಇರಲು ಪ್ರವಾಸಿಗರಿಗೆ ಅವಕಾಶ ನೀಡಲಾಗುತ್ತದೆ. ಈ ದ್ವೀಪಕ್ಕೆ ಭೇಟಿ ನೀಡಲು ಅಕ್ಟೋಬರ್‌ನಿಂದ ಫೆಬ್ರುವರಿವರೆಗೆ ಸೂಕ್ತ ಕಾಲ.

ಬೇಸಿಗೆ ಕಾಲದ ರಜಾದಿನಗಳಲ್ಲಿ ಪ್ರವಾಸಿಗರ ದಂಡೇ ಸೇಂಟ್ ಮೇರೀಸ್‌ಗೆ ತೆರಳಲು ಮಲ್ಪೆ ಬೀಚ್‌ನಲ್ಲಿ ಸರದಿಯಲ್ಲಿ ನಿಂತಿರುವುದನ್ನು ಕಾಣಬಹುದಾಗಿದೆ. ಮಲ್ಪೆ ಬೀಚ್ ಮತ್ತು ಸೇಂಟ್ ಮೇರೀಸ್ ದ್ವೀಪದ ನಡುವಿನ ಕಡಲಲ್ಲಿ ಜಲ ಸಾಹಸ ಕ್ರೀಡೆಗಳೂ ಗರಿಗೆದರುತ್ತವೆ. ಬೋಟ್ ಮೂಲಕ ನಡೆಸುವ ಪ್ಯಾರ ಸೈಲಿಂಗ್, ಜೆಟ್‌ಸ್ಕಿ, ಸ್ಪೀಡ್ ಬೋಟ್‌ಗಳ ಸಾಹಸ ಪ್ರವಾಸಿಗರಿಗೆ ಹೆಚ್ಚು ಮುದ ನೀಡುತ್ತವೆ.

ಮಲ್ಪೆ ಸೀವಾಕ್‌ನಿಂದ ಬೋಟ್‌ನಲ್ಲಿ ಹೋಗುವುದಿದ್ದರೆ ಒಬ್ಬರಿಗೆ ₹360, ಮಲ್ಪೆ ಬೀಚ್‌ನಿಂದ ಹೋಗುವುದಿದ್ದರೆ ಒಬ್ಬರಿಗೆ ₹400 ಶುಲ್ಕವಿದೆ. ಉಡುಪಿಯ ಕೃಷ್ಣಮಠ, ಮಲ್ಪೆ ಬೀಚ್‌ಗೆ ರಜಾದಿನಗಳಲ್ಲಿ ಭೇಟಿ ನೀಡುವ ಹೆಚ್ಚಿನ ಪ್ರವಾಸಿಗರು ಈ ದ್ವೀಪದ ಸೌಂದರ್ಯವನ್ನು ಸವಿಯುತ್ತಾರೆ. ದ್ವೀಪದಲ್ಲಿ ಅಂಗಡಿ, ಹೋಟೆಲ್‌ಗಳಾಗಲಿ ಇಲ್ಲ. ಆದ್ದರಿಂದ ಪ್ರವಾಸಿಗರೇ ನೀರು, ಆಹಾರ ಜೊತೆಗೆ ಕೊಂಡೊಯ್ಯುವುದು ಉತ್ತಮ. ದ್ವೀಪಕ್ಕೆ ಪ್ಲಾಸ್ಟಿಕ್ ಚೀಲಗಳನ್ನು ಕೊಂಡುಹೋಗುವುದನ್ನು ನಿಷೇಧಿಸಲಾಗಿದೆ.

ದ್ವೀಪದ ಅಪಾಯಕಾರಿ ಸ್ಥಳಗಳೆಂದು ಗುರುತಿಸಿರುವ ಪ್ರದೇಶಗಳಲ್ಲಿ ಸಮುದ್ರದ ನೀರಿಗಿಳಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಈ ದ್ವೀಪದಲ್ಲಿ ಪ್ರವಾಸಿಗರಿಗೆ ಶೌಚಾಲಯದ ವ್ಯವಸ್ಥೆ ಇದೆ.

ವಿದ್ಯಾರ್ಥಿಗಳ ಮೆಚ್ಚಿನ ‘ಸಿತಾರಾ ಅಕ್ಕ’

ಮಕ್ಕಳೊಂದಿಗೆ ಶ್ರಿಯಾ ಶಂಕರ್ ಮಾತು

10ನೇ ಪುಟದಿಂದ...

ಮೂರರಿಂದ ನಾಲ್ಕು ಮಂದಿ ಪರಿಚಯದವರು ಮಾತ್ರ ಪ್ರತಿಕ್ರಿಯಿಸಿದರು. ‘ಇದ್ದಕ್ಕಿದ್ದಂತೆ ಹೊಸತೊಂದು ಜಗತ್ತು ನನ್ನೆದುರು ತೆರೆದುಕೊಂಡಿತು. ಬೋಧನೆಯನ್ನೇ ಪ್ರೀತಿಸಲು ಆರಂಭಿಸಿದೆ’ ಎಂದು ಸಂಸ್ಥೆಯ ಸಹ-ಸಂಸ್ಥಾಪಕ ಅದ್ವೈತ್ ಕಲುವೆ ಹೇಳುತ್ತಾರೆ.

ಕೋವಿಡ್ ಇಡೀ ಜಗತ್ತನ್ನು ಆವರಿಸಿದಾಗ ‘ಸಿತಾರಾ ಅಕ್ಕ’ ಮತ್ತಷ್ಟು ದೊಡ್ಡದಾಗಿ ಬೆಳೆಯಿತು. ಪ್ರಯೋಗಾಲಯಗಳು ಮತ್ತು ಆಫ್‌ಲೈನ್ ತರಗತಿಗಳಿಗೆ ಹೋಗಲಾಗದ ಸ್ಥಿತಿಯು ವೈಜ್ಞಾನಿಕ ಪರಿಕಲ್ಪನೆಗಳನ್ನು ಆನ್‌ಲೈನ್ ಮೂಲಕ ಹೇಳಿಕೊಡುವ ಅಗತ್ಯವನ್ನು ಸೃಷ್ಟಿಸಿತು. ವಿಡಿಯೊಗಳಿಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ವೀಕ್ಷಕರು ಇದ್ದರು. ಹೀಗಾಗಿ ಶಾಲಾ ಸಮಯದ ನಂತರವೂ ಅಭ್ಯಾಸದಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳನ್ನು ಬೆಂಬಲಿಸಲು ತಮ್ಮ ಸಂಪನ್ಮೂಲಗಳನ್ನು ರಾಜ್ಯದಾದ್ಯಂತ ವಿಸ್ತರಿಸಲು ಶ್ರಿಯಾ ಮುಂದಾದರು.

‘ಮೊದ ಮೊದಲು ಎಂಜಿನಿಯರಿಂಗ್ ಪದವೀಧರೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಗಂಭೀರವಾಗಿ ಪರಿಗಣಿಸಲು ಯಾರೂ ಸಿದ್ಧರಿರಲಿಲ್ಲ’ ಎಂದು ತಾವು ಸಾಗಿಬಂದ ಹಾದಿಯನ್ನು ಶ್ರಿಯಾ ನೆನಪಿಸಿಕೊಂಡರು.

ಈ ಕಷ್ಟಗಳ ಹೊರತಾಗಿಯೂ, ವಿದ್ಯಾರ್ಥಿ ಉಪಕ್ರಮವಾಗಿ ಪ್ರಾರಂಭವಾದ ಈ ಸಂಸ್ಥೆಯು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಾಡತೂರ್ ಎಸ್.ರಾಘವನ್ ಸೆಂಟರ್ ಫಾರ್ ಎಂಟರ್‌ಪ್ರೆನ್ಯೂರಿಯಲ್ ಲರ್ನಿಂಗ್ (ಎನ್‌ಎಸ್‌ಆರ್‌ಸಿಇಎಲ್) ನಲ್ಲಿ ಸ್ಥಾನವನ್ನು ಪಡೆದುಕೊಂಡಾಗ ತಂತ್ರಜ್ಞಾನ ಸಕ್ರಿಯಗೊಳಿಸಿದ ಸಂಸ್ಥೆಯಾಗಿ ವಿಕಸನಗೊಂಡಿತು.

‘ಶ್ರಿಯಾ ನಮ್ಮನ್ನು ಸಂಪರ್ಕಿಸಿದಾಗ ಅದು ಇನ್ನೂ ಪೈಲಟ್ ಯೋಜನೆಯಾಗಿತ್ತು. ಆದರೆ, ಆ ಸಮಯದಲ್ಲಿ ಬೇರೆ ಯಾರೂ ಕನ್ನಡದಲ್ಲಿ ಶೈಕ್ಷಣಿಕ ವಿಷಯದ ವಿಡಿಯೊ ಮಾಡುತ್ತಿರಲಿಲ್ಲ’ ಎಂದು ಎನ್‌ಎಸ್‌ಆರ್‌ಸಿಇಎಲ್‌ನ ಸಹಾಯಕ ಉಪಾಧ್ಯಕ್ಷ ನಚಿಕೇತ್ ಕುಲಕರ್ಣಿ ಹೇಳುತ್ತಾರೆ.

ರಾಜ್ಯದಾದ್ಯಂತ ಸಾವಿರಾರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಹಂತದಲ್ಲಿ ಸಹಾಯ ಮಾಡಲು ಶ್ರಿಯಾ ಅವರಿಗೆ ಈ ಕೇಂದ್ರವು ಸಹಾಯ ಮಾಡಿತು. ‘ಸಿತಾರಾ ಅಕ್ಕ’ ಈಗ ಯೂಟ್ಯೂಬ್‌ನಲ್ಲಿ 35 ಸಾವಿರ ಚಂದಾದಾರರನ್ನು ಹೊಂದಿದೆ. ಎಸ್‌ಎಸ್‌ಎಲ್‌ಸಿ ಸಂಬಂಧಿತ ಅಧ್ಯಯನ ಸಾಮಗ್ರಿಗಳು-ಟಿಪ್ಪಣಿಗಳು, ಸೂತ್ರಗಳು, ವಿಡಿಯೊಗಳು ಮತ್ತು ಹಿಂದಿನ ಪ್ರಶ್ನೆಪತ್ರಿಕೆಗಳ ಸುಲಭ ಲಭ್ಯತೆಗಾಗಿ ಆ್ಯಪ್ ಅನ್ನು ಸಹ ಅಭಿವೃದ್ಧಿಪಡಿಸಲಾಗಿದೆ. ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಈ ಆ್ಯಪ್ ಬಳಸುತ್ತಾರೆ. ಯೂಟ್ಯೂಬ್ ವಿಡಿಯೊ ನೋಡಿದ ಬಳಿಕ ಸಂದೇಹಗಳಿದ್ದರೆ ವಿದ್ಯಾರ್ಥಿಗಳು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಈ ಸಂಸ್ಥೆಯು ಐದು ಪೂರ್ಣಾವಧಿ ಮತ್ತು ಮೂವರು ಅರೆಕಾಲಿಕ ಉದ್ಯೋಗಿಗಳನ್ನು ಹೊಂದಿದೆ. 250ಕ್ಕೂ ಹೆಚ್ಚು ಅಕ್ಕಂದಿರು ಮತ್ತು ಅಣ್ಣಂದಿರು ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದಾರೆ. ಕನಿಷ್ಠ 15 ಸ್ವಯಂಸೇವಕರು ಯಾವುದೇ ಸಮಯದಲ್ಲಿ ಸಕ್ರಿಯರಾಗಿರುತ್ತಾರೆ.

ಐಐಎಂ-ಬಿ ಹಾಗೂ ಶಿಕ್ಷಣ-ಆಧಾರಿತ ಸರ್ಕಾರೇತರ ಸಂಸ್ಥೆ ‘ದಿ ಸರ್ಕಲ್ ಇಂಡಿಯಾ’ ಸಂಪನ್ಮೂಲ ಮತ್ತು ನಿಧಿಯ ಮೂಲಕ ‘ಸಿತಾರಾ ಅಕ್ಕ’ ಸಂಸ್ಥೆಯನ್ನು ಬೆಂಬಲಿಸುತ್ತಿವೆ.

ಇಫೆಲ್ ಎಜುಕೇಷನಲ್ ಸರ್ವಿಸಸ್ (ಇಎಫ್ ಐಎಲ್) ನೊಂದಿಗೂ ‘ಸಿತಾರಾ ಅಕ್ಕ’ ಪಾಲುದಾರಿಕೆಯನ್ನು ಹೊಂದಿದೆ. ಮಕ್ಕಳಿಗೆ ಎಸ್‌ಎಸ್‌ಎಲ್‌ಸಿ ನಂತರ ಜೀವನಕ್ಕೆ ಅಗತ್ಯವಿರುವ ಕೌಶಲಗಳನ್ನು ಹೇಳಿಕೊಡಲು ‘ಸಿತಾರಾ ಅಕ್ಕ’ ಮೆಂಟರ್‌ಗಳಿಗೆ ಇಎಫ್‌ಐಎಲ್ ಉಚಿತ ತರಬೇತಿ ನೀಡುತ್ತಿದೆ.

ಸಂಪತ್, ಕಲ್ಪನಾ ಮತ್ತು ಕುಲದೀಪ್ ಡಾಂಟೇವಾಡಿಯಾ ಅವರು ಸಾಂಸ್ಥಿಕ ಮತ್ತು ವೈಯಕ್ತಿಕ ಬೆಳವಣಿಗೆಗೆ ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ನೀಡುವ ಮೂಲಕ ಸಂಸ್ಥೆಯ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದಾರೆ.

ಕಳೆದ ವರ್ಷ ಮೈಸೂರು ಬ್ಲಾಕ್ ಶಿಕ್ಷಣ ಕಚೇರಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ ನಂತರ ‘ಸಿತಾರಾ ಅಕ್ಕ’ ತಂಡವು ಮೈಸೂರಿನ ಸಾವಿರಾರು ವಿದ್ಯಾರ್ಥಿಗಳಿಗೆ ತನ್ನ ಜಾಲವನ್ನು ವಿಸ್ತರಿಸಿದೆ.

ಬಾಗಲಕೋಟೆ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿದ್ದ ವಿವೇಕಾನಂದ ಅವರ ಸಹಕಾರದೊಂದಿಗೆ ಬಾಗಲಕೋಟೆಯ 500 ಶಾಲೆಗಳಲ್ಲಿ, ಕಲಬುರಗಿಯ 800 ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡಲು ವಿಶ್ಲೇಷಣಾ ವಿಧಾನವನ್ನು ಪ್ರಾರಂಭಿಸಲಾಗಿದೆ. ಇದು 35 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿದೆ. ಈ ವ್ಯವಸ್ಥೆಯು ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು ಅವರ ಗ್ರೇಡ್ ಅಂಕಗಳ ಮೂಲಕ ಮುಂಚಿತವಾಗಿ ಗುರುತಿಸಲು ಸಹಾಯ ಮಾಡುತ್ತದೆ. ಈ ಮೂಲಕ ಶಾಲೆಗಳು ಸಕಾಲಿಕವಾಗಿ ಕ್ರಮಕೈಗೊಳ್ಳಲು ಅನುವು ಮಾಡಿಕೊಡುತ್ತದೆ.

‘ಸಿತಾರಾ ಅಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಆತ್ಮವಿಶ್ವಾಸವನ್ನು ಮೂಡಿಸುತ್ತದೆ’ ಎಂದು ಮೈಸೂರು ಜಿಲ್ಲೆಯ ವರುಣ ತಾಲ್ಲೂಕಿನ ಸರ್ಕಾರಿ ಶಾಲೆಯ ಹಿರಿಯ ಶಿಕ್ಷಕಿ ಉಮಾ ಎಂ. ಹೇಳುತ್ತಾರೆ.

‘ಬದಲಾವಣೆಗಳನ್ನು ತರಲು ಚಿಂತನೆ ಮತ್ತು ಕಲಿಕೆಯ ವಿಧಾನಗಳನ್ನು ಮರುಶೋಧಿಸುವುದಕ್ಕಾಗಿಯೇ ನಾನು ಈ ಕೆಲಸ ಆಯ್ಕೆ ಮಾಡಿಕೊಂಡಿದ್ದೇನೆ’ ಎನ್ನುತ್ತಾರೆ ಶ್ರಿಯಾ.

ಶಿಕ್ಷಣವು ಕಾಲದೊಂದಿಗೆ ಬದಲಾಗುತ್ತಲೇ ಇರಬೇಕು ಎಂಬುದೇ ಅವರ ಆಶಯ.

(ಅನುವಾದ: ಕೀರ್ತಿಕುಮಾರಿ ಎಂ.)

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

+ — × % ÷

ಗುಣಾಕಾರದಲ್ಲಿ ‘ತ್ರಿವಳಿ’ ರೂಪ!

ಇಲ್ಲಿರುವ ಲೆಕ್ಕಗಳನ್ನು ಮಾಡಿ ನೋಡಿ. ತ್ರಿವಳಿ ರೂಪದ ಗುಣಲಬ್ಧವನ್ನು ಕಾಣುವಿರಿ

1	15873X7	=	
2	17316X7	=	
3	18759X7	=	
4	20202X7	=	
5	21645X7	=	
6	23088X7	=	

ಮಳೆಯು ಬಂದಿತು

ಮಳೆಯು ಬಂದಿತು
ಬಿಸಿಲ ಕೊಂದಿತು
ಭುವಿಗೆ ನೀಡಿತು ಸಾಂತ್ವನ
ಕೊಳೆಯು ತೊಳೆಯಿತು
ಹೊಳೆಯು ಹರಿಯಿತು
ಇಳೆಗೆ ಬಂದಿತು ಚೇತನ
ಬೀದ ಬಿದ್ದವು
ಮೊಳಕೆಯೊಡೆದವು
ಭೂಮಿ ತಾಯಿಯು ನಕ್ಕಳು
ಕೃಷಿಯ ಗೈಯಲು
ಖುಷಿಯ ಹೊಂದ್ವರು
ರೈತ ಸಮೂಹದ ಮಕ್ಕಳು

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕಡ	+	ನಾರಿ	+	ಚೇ	=	
2	ಕೇಡಿ	+	ಗರ	+	ಳ	=	
3	ಕೆಡು	+	ಸಲ	+	ಮಾ	=	
4	ಬೆರೆ	+	ಅಲೆ	+	ತ್ತ	=	
5	ಹಾರ	+	ನಾವು	+	ಗ	=	

ಪದ-ಚೌಕ

ಇಲ್ಲಿ ಕೊಟ್ಟಿರುವ ಪದಗಳನ್ನು ಎಡದಿಂದಲಾದರೂ ಓದಿ ಮೇಲಿನಿಂದ ಕೆಳಗಾದರೂ ಓದಿ, ಅವೇ ಪದಗಳು ಆಗುತ್ತವೆ. ನೀವು ಕೊಟ್ಟ ಅಕ್ಷರಗಳನ್ನು ಬಳಸಿಕೊಂಡು ಅಂಥ ಒಂದು ಪದ ಚೌಕ ರಚಿಸಿ.

1.

ವ	ಸ	ತಿ
ಸ	ರ	ಳ
ತಿ	ಳ	ಕ

2.

ರ	ಚ	ನೆ
ಚ	ದ	ರ
ನೆ	ರ	ಳು

3.

ಅ	ಸ	ಮ
ಸ	ಮ	ರ
ಮ	ರ	ಡಿ

ನೀವೇ ಮಾಡಿ

ಅಕ್ಷರ ಪಟ್ಟಿ

ತಿ	ರ	ಕ
ಕ್ಷ	ರ	ಗ
ಳಿ	ಕ	ತಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ MP ಅಕ್ಷರಗಳ ಹಿಂದೆ ಇನ್ನೆರಡು ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ರಚಿಸಿ

1			M	P
2			M	P
1			M	P
4			M	P
5			M	P

ಕಾಗದ ಹಕ್ಕಿಗೆ ಬಂತು ಜೀವ

ಗುಂಡನಿಗೆ ಶಾಲೆಯ ಟೀಚರ್ ಹೋಂವರ್ಕ್ ನೀಡಿದ್ದರು. ಕ್ರಾಫ್ಟ್ ತರಗತಿಯಲ್ಲಿ ಪ್ರದರ್ಶನಕ್ಕಾಗಿ ಬಣ್ಣಬಣ್ಣದ ಕಾಗದಗಳಿಂದ ಹಕ್ಕಿಯನ್ನು ತಯಾರಿಸಿ ತರಬೇಕು ಎಂಬ ಸೂಚನೆ ನೀಡಿದ್ದರು. ಗುಂಡ ಇದಕ್ಕಾಗಿ ಬಣ್ಣದ ಕಾಗದಗಳನ್ನು ಖರೀದಿಸಿ ತಂದು ಕತ್ತರಿ ಹಿಡಿದು ಹಕ್ಕಿಯ ಆಕಾರದಲ್ಲಿ ಅವುಗಳನ್ನು ಕತ್ತರಿಸಿ, ಅಂಟು ಬಳಸಿ ಅವುಗಳನ್ನು ಜೋಡಿಸಿದ. ಹೀಗೆ ಚೆಂದವಾದ ಒಂದು ಹಕ್ಕಿಯನ್ನು ತಯಾರಿಸಿ ನೆಲದ ಮೇಲೆ ಇಟ್ಟ. ತಕ್ಷಣದಲ್ಲೇ ಆ ಹಕ್ಕಿಗೆ ಜೀವಬಂದು ಅದು ಕೂಗುತ್ತಾ ಹಾರಿ ಹೋಯಿತು. ಇದನ್ನು ಕಂಡ ಗುಂಡ ಆಶ್ಚರ್ಯಗೊಂಡ.



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕರಡುಪಟ್ಟಿ 2.ಪಶುಪಾಲಕ 3.ನೀರಿನಗುಳ್ಳೆ 4.ಕಳೆದವಾರ 5.ಹಬ್ಬದದಿನ

ಅಕ್ಷರಚ್ಯುತಿ: 1.ಇಟಲಿ 2.ಬೀದರ 3.ಕೊಡಗು 4.ಹಾವೇರಿ 5.ಗದಗ 6.ಜಪಾನ 7.ಕೊಪ್ಪಳ 8.ಗುರುವಾಯುರು 9.ಸಾಗರ 10.ಶಿರಸಿ

ಅದಲು-ಬದಲು: 1.ಗಡಿಯಾರ 2.ರಾಜಧಾನಿ 3.ಮಹಾಗುರು 4.ಜನಜೀವನ 5.ಮಾತನಾಡು

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸಮನ್ವಿತ ಎಸ್.
ಮಂಡ್ಯ

ಸಾಹಿತ್ಯ ಶೆಟ್ಟರ್
ಹೂವಿನಹಡಗಲಿ

ಸಮರ್ಥ ಪಿ.
ರಾಮನಗರ

ಪ್ರಯಾಗ್ ಬಿ.
ಕೋಲಾರ

ಚಿರಾಯು ಆರ್.ಪೂಜಾರಿ
ಹೆಬ್ರಿ

ಋಗ್ವೇದ ಎಸ್.ಎಂ.
ಬೆಂಗಳೂರು

ಲವನೀತ್ ಅಬ್ಬರ: ಲಯನ್ಸ್ ತತ್ತರ

ಮಹಾರಾಜ ಟ್ರೋಫಿ: ಗುಲ್ಬರ್ಗ ಮಿಸ್ಟಿಕ್ಸ್‌ಗೆ ಹತ್ತು ವಿಕೆಟ್‌ಗಳ ಭರ್ಜರಿ ಜಯ

● ಆರ್. ಜಿತೇಂದ್ರ

ಮೈಸೂರು: ಗುಲ್ಬರ್ಗ ಮಿಸ್ಟಿಕ್ಸ್ ಪರ ಅಬ್ಬರಿಸಿದ ಲವನೀತ್ ಸಿಸೋಡಿಯಾ (ಔಟಾಗದೇ 58) ಹಾಗೂ ನಿಕಿನ್ ಜೋಸ್ (ಔಟಾಗದೇ 34) ಜೋಡಿಯು ಶಿವಮೊಗ್ಗ ಲಯನ್ಸ್‌ಗೆ ಟೂರ್ನಿಯಲ್ಲಿ ಸತತ ನಾಲ್ಕನೇ ಸೋಲಿನ ರುಚಿ ತೋರಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಶನಿವಾರ ಮಳೆಯಿಂದಾಗಿ ಓವರ್‌ಗಳು ಮೊಟಕುಗೊಂಡ ಪಂದ್ಯದಲ್ಲಿ ಗುಲ್ಬರ್ಗ ತಂಡವು ಇನ್ನೂ 15 ಎಸೆತ ಬಾಕಿ ಇರುವಂತೆಯೇ 10 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡವು 15.5 ಓವರ್‌ಗಳಲ್ಲಿ 5 ವಿಕೆಟ್‌ಗೆ 127 ರನ್ ಗಳಿಸಿದ್ದಾಗ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಎರಡು ಗಂಟೆ ತರುವಾಯ ಮರು ಆರಂಭಗೊಂಡ ಪಂದ್ಯದಲ್ಲಿ ಗುಲ್ಬರ್ಗಕ್ಕೆ ವಿಜೆಡಿ (ವಿ.ಜಯದೇವನ್) ನಿಯಮದಂತೆ 9 ಓವರ್‌ಗಳಲ್ಲಿ 92 ರನ್‌ಗಳ ಗುರಿ ನೀಡಲಾಯಿತು.

ಗುರಿ ಬೆನ್ನತ್ತಿದ ಗುಲ್ಬರ್ಗ ತಂಡದ ಲವನೀತ್ ಹಾಗೂ ನಿಕಿನ್ ಜೋಡಿಯು ಆರಂಭದಿಂದಲೇ ಅಬ್ಬರಿಸಿತು. ವಿದ್ವತ್ ಕಾವೇರಪ್ಪ ಅವರ ಮೊದಲ ಎಸೆತದಲ್ಲೇ ಲವನೀತ್ ಸಿಕ್ಸರ್ ಬಾರಿಸಿದರು. ಕೇವಲ 24 ಎಸೆತ ಎದುರಿಸಿದ ಅವರು 5 ಬೌಂಡರಿ ಹಾಗೂ 4 ಸಿಕ್ಸರ್ ಸಿಡಿಸಿ ಅಜೇಯರಾಗಿ ಉಳಿದರು. ಕ್ರೀಸ್‌ನ ಮತ್ತೊಂದೆಡೆ ಉತ್ತಮ ಸಾಥ್ ನೀಡಿದ ನಿಕಿನ್ 15 ಎಸೆತದಲ್ಲಿ 5 ಬೌಂಡರಿ ಹಾಗೂ 1 ಸಿಕ್ಸರ್ ಬಾರಿಸಿದರು. ವಿದ್ವತ್ 2 ಓವರ್‌ನಲ್ಲೇ 40 ರನ್ ನೀಡಿ ದುಬಾರಿ ಆದರು.

ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡವು ಆರಂಭದ ಮೂರು ಓವರ್‌ನಲ್ಲಿ 30 ರನ್‌ಗಳ ಉತ್ತಮ ಆರಂಭ ಪಡೆಯಿತಾದರೂ ನಂತರದಲ್ಲಿ ಮಂದಗತಿಯಲ್ಲಿ ರನ್ ಗಳಿಸಿತು. ಆರಂಭಿಕ ಧ್ರುವ್ ಪ್ರಭಾಕರ್ 27 ಎಸೆತದಲ್ಲಿ 44 ರನ್ ಗಳಿಸಿದರು. ಗುಲ್ಬರ್ಗ ಪರ ಸ್ಪಿನ್ನರ್ ಶಶಿಕುಮಾರ್ ಕಾಂಬ್ಳೆ 2 ವಿಕೆಟ್ ಉರುಳಿಸಿದರು.

ಇಂದಿನ ಪಂದ್ಯಗಳು

ಮಂಗಳೂರು ಡ್ರ್ಯಾಗನ್ಸ್–ಬೆಂಗಳೂರು ಬ್ಲಾಸ್ಟರ್ಸ್, ಮಧ್ಯಾಹ್ನ 3.15

ಮೈಸೂರು ವಾರಿಯರ್ಸ್–ಶಿವಮೊಗ್ಗ ಲಯನ್ಸ್, ರಾತ್ರಿ 7.15

ಅರ್ಧಶತಕ ದಾಖಲಿಸಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಲವನೀತ್ ಸಿಸೋಡಿಯಾ ಬ್ಯಾಟಿಂಗ್ ವೈಖರಿ. ಪ್ರಜಾವಾಣಿ ಚಿತ್ರ/ಅನೂಪ್ ರಾಘ .ಟಿ.

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್: 15.5 ಓವರ್‌ಗಳಲ್ಲಿ 127ಕ್ಕೆ 5 (ಧ್ರುವ್ ಪ್ರಭಾಕರ್ 44, ತುಷಾರ್ ಸಿಂಗ್ 22, ನಿಹಾಲ್ ಉಲ್ಲಾಳ್ 17, ಶಶಿಕುಮಾರ್ ಕಾಂಬ್ಳೆ 22ಕ್ಕೆ 2, ಮೊನಿಶ್ ರೆಡ್ಡಿ 14ಕ್ಕೆ 1, ವೈಶಾಖ ವಿಜಯಕುಮಾರ್ 17ಕ್ಕೆ 1). ಗುಲ್ಬರ್ಗ ಮಿಸ್ಟಿಕ್ಸ್: 6.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 93 (ಲವನೀತ್ ಸಿಸೊಡಿಯಾ ಔಟಾಗದೇ 58, ನಿಕಿನ್ ಔಟಾಗದೇ 34).
ಪಂದ್ಯದ ಆಟಗಾರ: ಲವನೀತ್ ಸಿಸೋಡಿಯಾ

ಎರಡನೇ ಪಂದ್ಯ: ಮೈಸೂರು ವಾರಿಯರ್ಸ್: 18.5 ಓವರ್‌ಗಳಲ್ಲಿ 177 (ಎಸ್.ಯು. ಕಾರ್ತಿಕ್ 71, ಸಿ.ಎ. ಕಾರ್ತಿಕ್ 37, ಎಂ. ವೆಂಕಟೇಶ್ 26, ಕೆ. ಗೌತಮ್ ಔಟಾಗದೇ 15. ಯಶ್‌ರಾಜ್ ಪೂಂಜ 32ಕ್ಕೆ 3, ನಿತಿನ್ ನಾಗರಾಜ್ 17ಕ್ಕೆ 3, ಮನ್ವಂತ್‌ಕುಮಾರ್ 27ಕ್ಕೆ 2). ಹುಬ್ಬಳ್ಳಿ ಟೈಗರ್ಸ್: 8.2 ಓವರ್‌ಗಳಲ್ಲಿ 3 ವಿಕೆಟ್‌ಗೆ 86 (ಪ್ರಖರ್ ಚತುರ್ವೇದಿ 45, ಮೊಹಮ್ಮದ್ ತಾಹಾ ಔಟಾಗದೇ 16 , ಅಭಿನವ್ ಮನೋಹರ್ 20 , ಗೌತಮ್ ಮಿಶ್ರ 9ಕ್ಕೆ 3)

ಟೈಗರ್ಸ್‌ಗೆ ಜಯ

ಮೈಸೂರು: ಆರಂಭಿಕರಾದ ಪ್ರಖರ್ ಚತುರ್ವೇದಿ ಹಾಗೂ ಮೊಹಮ್ಮದ್ ತಾಹಾ ಅವರ ಉತ್ತಮ ಜೊತೆಯಾಟದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮೈಸೂರು ವಾರಿಯರ್ಸ್ ಅನ್ನು 7 ವಿಕೆಟ್ ಅಂತರದಿಂದ ಮಣಿಸಿತು.

ಶನಿವಾರ ರಾತ್ರಿ ನಡೆದ ಎರಡನೇ ಪಂದ್ಯದಲ್ಲಿ ವಾರಿಯರ್ಸ್ ನೀಡಿದ 178 ರನ್‌ಗಳ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 4 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 43 ರನ್ ಗಳಿಸಿದ್ದ ವೇಳೆ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. 80 ನಿಮಿಷದ ತರುವಾಯ ಮತ್ತೆ ಪಂದ್ಯ ಆರಂಭಗೊಂಡು, ವಿಜೆಡಿ ನಿಯಮದಂತೆ ಹುಬ್ಬಳ್ಳಿ ಗೆಲುವಿಗೆ 9 ಓವರ್‌ಗಳಲ್ಲಿ 86 ರನ್‌ಗಳ ಗುರಿ ಪರಿಷ್ಕರಿಸಲಾಯಿತು.

ಪ್ರಖರ್ ಹಾಗೂ ತಾಹಾ ಮೊದಲ ವಿಕೆಟ್‌ಗೆ 55 ರನ್ ಜೊತೆಯಾಟವಾಡಿದರು. ಪ್ರಖರ್ 20 ಎಸೆತದಲ್ಲಿ 45 ರನ್ ಸಿಡಿಸಿದರು. ಮೈಸೂರು ಪರ ಗೌತಮ್ ಮಿಶ್ರ 9ಕ್ಕೆ 3 ವಿಕೆಟ್ ಪಡೆದರು.

ಮೊದಲು ಬ್ಯಾಟ್ ಮಾಡಿದ ವಾರಿಯರ್ಸ್ ತಂಡವು ಎಸ್.ಯು. ಕಾರ್ತಿಕ್ ಅವರ ಬ್ಯಾಟಿಂಗ್ (71) ನೆರವಿನಿಂದ 177 ರನ್ ಕಲೆ ಹಾಕಿತು. ಯಶ್‌ರಾಜ್ ಪೂಂಜ ಹಾಗೂ ನಿತಿನ್ ನಾಗರಾಜ್ ತಲಾ 3 ವಿಕೆಟ್ ಪಡೆದರು.

ಚೆಸ್: ಗುಕೇಶ್‌ಗೆ ಜಂಟಿ 6ನೇ ಸ್ಥಾನ

ಆರೋನಿಯನ್‌ಗೆ ಪ್ರಶಸ್ತಿ

ಲೆವೋನ್ ಆರೋನಿಯನ್

ಸೇಂಟ್ ಲೂಯಿ (ಅಮೆರಿಕ) (ಪಿಟಿಐ): ಅಮೆರಿಕದ ಲೆವೋನ್ ಅರೋನಿಯನ್ ಅವರು ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಈ ಟೂರ್ನಿಯ ಕಣದಲ್ಲಿದ್ದ ಭಾರತದ ಏಕೈಕ ಆಟಗಾರ ಡಿ.ಗುಕೇಶ್ ಜಂಟಿ ಆರನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.

ವಿಶ್ವ ಚಾಂಪಿಯನ್ ಗುಕೇಶ್ ಟೂರ್ನಿಯ ಅಂತಿಮ ದಿನ ಮೊದಲ ನಾಲ್ಕು ಬ್ಲಿಟ್ಜ್ ಪಂದ್ಯಗಳಲ್ಲಿ 3.5 ಅಂಕ ಪಡೆದು ಪುನರಾಗಮನ ಮಾಡುವಂತೆ ಕಂಡರು. ಆದರೆ ಕೊನೆಯ ಐದು ಪಂದ್ಯಗಳಲ್ಲಿ ಮೂರನ್ನು ಡ್ರಾ ಮಾಡಿಕೊಂಡ ಅವರು ಎರಡರಲ್ಲಿ ಸೋತು ಉತ್ತಮ ಆರಂಭದ ಲಾಭ ಪಡೆಯಲಾಗಲಿಲ್ಲ.

ರ್‍ಯಾಪಿಡ್ ಮತ್ತು ಬ್ಲಿಟ್ಜ್‌ನಲ್ಲಿ ಒಟ್ಟು 24.5 ಅಂಕ ಕಲೆಹಾಕಿದ ಅರೋನಿಯನ್ ಚಾಂಪಿಯನ್ ಆಗಿ ಟ್ರೋಫಿ ಜೊತೆ ₹35 ಲಕ್ಷ ನಗದು ಬಹುಮಾನ ಪಡೆದರು.

ಅಮೆರಿಕದ ಇನ್ನೊಬ್ಬ ಆಟಗಾರ ಫ್ಯಾಬಿಯಾನೊ ಕರುವಾನ (21.5) ಎರಡನೇ ಹಾಗೂ ಅರ್ಧ ಪಾಯಿಂಟ್ ಅಂತರದಿಂದ ಹಿಂದೆಬಿದ್ದ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (21) ಮೂರನೇ ಸ್ಥಾನ ಗಳಿಸಿದರು. ನದಿರ್ಬೆಕ್ ಅಬ್ದುಸತ್ತಾರೋವ್ (20.5) ಮತ್ತು ವೆಸ್ಲಿ ಸೊ (19) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು.

ಗುಕೇಶ್ 18 ಪಾಯಿಂಟ್‌ಗಳೊಡನೆ ಸವಾಲು ಮುಗಿಸಿದರು. ವಿಯೆಟ್ನಾಮಿನ ಲೀಮ್ ಲೆ ಕ್ವಾಂಗ್ ಸಹ ಇಷ್ಟೇ ಅಂಕ ಸಂಪಾದಿಸಿದರು. ಶುಕ್ರವಾರ ಮೊದಲ ಪಂದ್ಯ ಡ್ರಾ ಮಾಡಿಕೊಂಡಿದ್ದ ಗುಕೇಶ್, ನಂತರ ಶಂಕ್ಲಾಂಡ್, ವೆಸ್ಲಿ ಸೊ ಮತ್ತು ಅಬ್ದುಸತ್ತಾರೋವ್ ಅವರನ್ನು ಮಣಿಸಿದ್ದರು. ಆದರೆ ಅದೇ ಲಯದಲ್ಲಿ ಸಾಗಲು ಸಾಧ್ಯವಾಗಲಿಲ್ಲ.

ಗುಕೇಶ್ ತಮ್ಮ ಮುಂದಿನ ಟೂರ್ನಿಯನ್ನು ಇನ್ನು ಎರಡೇ ದಿನಗಳಲ್ಲಿ ಸಿಂಕ್ವೆಫೀಲ್ಡ್ ಕಪ್ ಟೂರ್ನಿಯಲ್ಲಿ ಆಡಲಿದ್ದಾರೆ. ಅಲ್ಲಿ ಅವರ ಅಚ್ಚುಮೆಚ್ಚಿನ ಸಾಂಪ್ರದಾಯಿಕ ಮಾದರಿಯ ಪಂದ್ಯಗಳು ನಡೆಯಲಿವೆ. ಭಾರತದ ಪ್ರಜ್ಞಾನಂದ ಅವರೂ ಸ್ಪರ್ಧಾ ಕಣದಲ್ಲಿದ್ದಾರೆ.

ಇನ್ನಷ್ಟು ಕ್ರೀಡಾ ಸುದ್ದಿ 9

ಚಿಟಿಕೆ ಸುದ್ದಿ

ತಾನ್ಯಾ ಹೇಮಂತ್ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತದ ತಾನ್ಯಾ ಹೇಮಂತ್ ಅವರು ಸೈಫಾನ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಜಪಾನ್‌ನ ಕನೆ ಸಕೈ ಅವರನ್ನು ನೇರ ಗೇಮ್‌ಗಳಿಂದ ಮಣಿಸಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಮೈಸೂರಿನ 21 ವರ್ಷದ ತಾನ್ಯಾ, ಉತ್ತರ ಮರಿಯಾನ ದ್ವೀಪದ ಒಲ್ಲೈ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ 15-10, 15-8ರಿಂದ ಸಕೈ ಅವರನ್ನು ಮಣಿಸಿದರು. ಇದರೊಂದಿಗೆ ನಾಲ್ಕನೇ ಇಂಟರ್‌ನ್ಯಾಷನಲ್ ಪ್ರಶಸ್ತಿಗೆ ಮುತ್ತಿಕ್ಕಿದರು.

ಸೆಮಿಗೆ ಶಿಲ್ಲಾಂಗ್, ನಾರ್ತ್‌ಈಸ್ಟ್

ಶಿಲ್ಲಾಂಗ್ (ಪಿಟಿಐ): ಆತಿಥೇಯ ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ತಂಡವು 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಸೆಮಿಫೈನಲ್ ಪ್ರವೇಶಿಸಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶಿಲ್ಲಾಂಗ್ ತಂಡವು 2–1 ಗೋಲುಗಳಿಂದ ಇಂಡಿಯನ್ ನೇವಿ ಎಫ್‌ಟಿ ತಂಡವನ್ನು ಮಣಿಸಿತು.

ಮಂಗಳವಾರ ನಡೆಯುವ ಸೆಮಿಫೈನಲ್‌ನಲ್ಲಿ ಶಿಲ್ಲಾಂಗ್ ತಂಡವು ಹಾಲಿ ಚಾಂಪಿಯನ್ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ. ದಿನದ ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ನಾರ್ತ್‌ಈಸ್ಟ್ ತಂಡವು 4–0 ಯಿಂದ ಬೋಡೋಲ್ಯಾಂಡ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

'ನಿಯಮ ಪ್ರಕಾರ ಬ್ರೆವಿಸ್ ಸೇರ್ಪಡೆ'

ಚೆನ್ನೈ (ಪಿಟಿಐ): 2025ರ ಐಪಿಎಲ್ ಟೂರ್ನಿಯ ಮಧ್ಯದಲ್ಲಿ ಡೆವಾಲ್ಡ್ ಬ್ರೆವಿಸ್ ಅವರನ್ನು ಲೀಗ್‌ನ ನಿಯಮ ಮತ್ತು ನಿಬಂಧನೆಗಳ ಅನುಸಾರ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೇರ್ಪಡೆ ಮಾಡಲಾಗಿತ್ತು ಎಂದು ಫ್ರಾಂಚೈಸಿಯು ಶನಿವಾರ ಸ್ಪಷ್ಟೀಕರಣದಲ್ಲಿ ತಿಳಿಸಿದೆ.

ಬ್ರೆವಿಸ್ ಅವರ ಸೇವೆ ಪಡೆಯಲು ಐದು ಬಾರಿಯ ಚಾಂಪಿಯನ್ ತಂಡ 'ಅಧಿಕ' ಹಣ ಪಾವತಿಗೆ ಸಿದ್ಧವಿತ್ತು ಎಂದು ಸಿಎಸ್‌ಕೆ ತಂಡದಲ್ಲಿರುವ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ತಿಳಿಸಿದ್ದರು.

ಈಜು ತಾರೆ ಬೂಲಾ ಪದಕಗಳ ಕಳವು

ಕೋಲ್ಕತ್ತ (ಪಿಟಿಐ): ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಂತರರಾಷ್ಟ್ರೀಯ ಈಜು ತಾರೆ ಬೂಲಾ ಚೌಧರಿ ಅವರು ಗೆದ್ದ ಪದಕಗಳು ಬಂಗಾಳದ ಹೂಗ್ಲಿ ಜಿಲ್ಲೆಯ ಅವರ ಪೂರ್ವಜರ ಮನೆಯಿಂದ ಕಳವಾಗಿವೆ. ಕ್ರೀಡಾ ಜೀವನದಲ್ಲಿ ಸಂಪಾದಿಸಿದ ಪದಕಗಳೆಲ್ಲವನ್ನೂ ಕಳೆದುಕೊಂಡಿರುವುದಾಗಿ ಬೂಲಾ ತಿಳಿಸಿದ್ದಾರೆ.

'ತಾವು ಸಂಪಾದಿಸಿದ ಪದಕಗಳೆಲ್ಲವನ್ನೂ ಕಳ್ಳರು ಒಯ್ದಿದ್ದಾರೆ. ಸ್ಯಾಫ್ (ದಕ್ಷಿಣ ಏಷ್ಯಾ ಫೆಡರೇಷನ್) ಕ್ರೀಡೆಗಳಲ್ಲಿ ಗೆದ್ದ ಆರು ಚಿನ್ನದ ಪದಕಗಳು, ಪದ್ಮಶ್ರೀ ಪೆಂಡೆಂಟ್ ಎಲ್ಲವೂ ಕಳವಾಗಿವೆ' ಎಂದು ಅವರು ಅಲವತ್ತುಗೊಂಡಿದ್ದಾರೆ.

ಕರ್ನಾಟಕ ತಂಡಕ್ಕೆ ಸುಲಭ ಜಯ

ಜಲಂಧರ್ (ಪಿಟಿಐ): ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ಹಾಕಿ ಇಂಡಿಯಾ ಜೂನಿಯರ್ ಪುರುಷರ ಚಾಂಪಿಯನ್‌ಷಿಪ್ ಟೂರ್ನಿಯ 'ಎ' ಡಿವಿಷನ್ ಪಂದ್ಯದಲ್ಲಿ ಶನಿವಾರ 10–1ರಿಂದ ಆಂಧ್ರಪ್ರದೇಶ ತಂಡವನ್ನು ಸುಲಭವಾಗಿ ಮಣಿಸಿತು.

ಕರ್ನಾಟಕ ತಂಡದ ಪರ ಹರಪಾಲ್ (12 ಮತ್ತು 35ನೇ ನಿ.) ಹಾಗೂ ತನೀಷ್ ಆರ್. ಎಚ್.(17 ಮತ್ತು 35ನೇ ನಿ.) ತಲಾ ಎರಡು ಗೋಲು ಗಳಿಸಿದರೆ, ನಾಯಕ ಧ್ರುವ ಬಿ.ಎಸ್. (25ನೇ ನಿ.), ಅಚ್ಚಯ್ಯ ಎಂ.ಎಂ. (24ನೇ ನಿ.), ಕುಶಲ್ ಸಿ.ಬಿ.(51ನೇ ನಿ.), ರಾಜು ಎಂ. (5ನೇ ನಿ.), ನಿತೇಶ್ ಶರ್ಮಾ (10ನೇ ನಿ.) ಹಾಗೂ ಪೂಜಿತ್ ಕೆ.ಆರ್. (58ನೇ ನಿ.) ತಲಾ ಒಂದು ಗೋಲು ಹೊಡೆದರು.

ಫೈನಲ್‌ಗೆ ಅನಾಹತ್



ಬೇಗಾ (ಆಸ್ಟ್ರೇಲಿಯಾ) (ಪಿಟಿಐ): ಭಾರತದ ಅನಾಹತ್ ಸಿಂಗ್ ಅವರು ಎನ್‌ಎಸ್ ಡಬ್ಲ್ಯು ಬೇಗ ಓಪನ್ ಸ್ಕ್ವಾಷ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಶನಿವಾರ ಫೈನಲ್ ತಲುಪಿದರು.

17 ವರ್ಷದ ಅನಾಹತ್ ಸೆಮಿಫೈನಲ್ ಪಂದ್ಯದಲ್ಲಿ 3–2ರಿಂದ (10–12, 11–5, 11–5, 10–12, 11–7) ಈಜಿಪ್ಟ್‌ನ ನೂರ್ ಖಫಾಜಿ ಎದುರು ಗೆಲುವು ಸಾಧಿಸಿದರು.

ದೇಶಿ ಕ್ರಿಕೆಟ್ ನಿಯಮ: ಬಿಸಿಸಿಐ ಮಹತ್ವದ ಬದಲಾವಣೆ

ಗಾಯಾಳುವಿಗೆ ಬದಲೀ ಆಟಗಾರ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್‌ನ ದೀರ್ಘ ಮಾದರಿಯ ಟೂರ್ನಿಗಳಲ್ಲಿ ಗಾಯಾಳುವಿಗೆ ಬದಲೀ ಆಟಗಾರ ನಿಯಮದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಮಹತ್ವದ ಬದಲಾವಣೆ ತಂದಿದೆ.

ಪಂದ್ಯದಲ್ಲಿ ಯಾವುದೇ ಆಟಗಾರ ಗಂಭೀರ ಗಾಯಗೊಂಡರೆ ಆತನ ಸ್ಥಾನಕ್ಕೆ ಬದಲೀ ಆಟಗಾರನನ್ನು ನೀಡಲಾಗುವುದು. ಈಚೆಗೆ ಇಂಗ್ಲೆಂಡ್ ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಭಾರತದ ರಿಷಭ್ ಪಂತ್ ಮತ್ತು ಅತಿಥೇಯ ತಂಡದ ಕ್ರಿಸ್ ವೋಕ್ಸ್ ಗಂಭೀರವಾಗಿ ಗಾಯಗೊಂಡರೂ ಕ್ರೀಸ್‌ಗಿಳಿದು ತಮ್ಮ ಹೊಣೆಗಾರಿಕೆ ನಿಭಾಯಿಸಿದ್ದರು. ಆ ಸಂದರ್ಭದಲ್ಲಿ ಗಾಯಾಳುವಿಗೆ ಬದಲೀ ಆಟಗಾರನನ್ನು ನೀಡುವ ನಿಯಮದ ಕುರಿತು ಭಾರೀ ಚರ್ಚೆಗಳು ನಡೆದಿದ್ದವು.

'ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ (ಎರಡು ಅಥವಾ ಎರಡಕ್ಕಿಂತ ಹೆಚ್ಚು ದಿನಗಳ ಪಂದ್ಯ) ಆಟಗಾರ ಗಂಭೀರವಾಗಿ ಗಾಯಗೊಂಡಾಗ ಬದಲೀ ಆಟಗಾರನನ್ನು ನಿಯೋಜಿಸಬೇಕು. ಗಾಯಾಳು ಆಟಗಾರ ಹೊಣೆಯನ್ನು ನಿಭಾಯಿಸಲು ಬದಲೀ ಆಟಗಾರನಿಗೆ ಅವಕಾಶ ನೀಡಲಾಗುವುದು' ಎಂದು ಬಿಸಿಸಿಐ ನೂತನ ನಿಯಮಾವಳಿಯಲ್ಲಿ ಉಲ್ಲೇಖಿಸಲಾಗಿದೆ.

'ನಿಯಮದ (1.2.5.2) ಪ್ರಕಾರ ಪಂದ್ಯದಲ್ಲಿ ಆಡುವ ಸಂದರ್ಭದಲ್ಲಿ ಗಾಯಗೊಂಡಿರಬೇಕು. ಮೂಳೆಮುರಿತ, ಆಳವಾದ ತರಚುಗಾಯ ಅಥವಾ ಸ್ನಾಯು ಜೋಡಣೆ ತಪ್ಪಿದ ಗಾಯಗಳನ್ನು ಗಂಭೀರ ಎಂದು ಪರಿಗಣಿಸಲಾಗುತ್ತದೆ. ಪಂದ್ಯದ ಉಳಿದ ಭಾಗದಲ್ಲಿ ಗಾಯಾಳು ಆಟಗಾರನು ಆಡಲು ಅಸಮರ್ಥ ಎಂದಾದರೆ ಮಾತ್ರ ಬದಲೀ ಆಟಗಾರನನ್ನು ನೀಡಲಾಗುವುದು' ಎಂದೂ ನಿಯಮದಲ್ಲಿ ಹೇಳಲಾಗಿದೆ.

ಆದರೆ ದೇಶಿ ಕ್ರಿಕೆಟ್‌ನ ಸೀಮಿತ ಓವರ್‌ಗಳ ಟೂರ್ನಿಯಲ್ಲಿ ಈ ನಿಯಮ ಅನ್ವಯವಾಗುವುದಿಲ್ಲ. ದುಲೀಪ್ ಟ್ರೋಫಿ, ರಣಜಿ ಟ್ರೋಫಿ ಸೇರಿದಂತೆ ದೀರ್ಘ ಮಾದರಿಯ ಟೂರ್ನಿಗಳಲ್ಲಿ ಅನ್ವಯವಾಗಲಿದೆ.

ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳಲ್ಲಿ ತಲೆಗೆ ಪೆಟ್ಟು ಬಿದ್ದಾಗ (ಕಂಕಷನ್ ನಿಯಮ) ಮಾತ್ರ ಬದಲೀ ಆಟಗಾರನನ್ನು ನೀಡಲಾಗುತ್ತದೆ. ಆದರೆ ಉಳಿದ ಗಾಯಗಳಿಂದ ಬಳಲಿದ ಆಟಗಾರರಿಗೆ ಈ ಅವಕಾಶವಿಲ್ಲ. ಆದ್ದರಿಂದಲೇ ಇಂಗ್ಲೆಂಡ್ ಸರಣಿಯ ಟೆಸ್ಟ್‌ನಲ್ಲಿ ರಿಷಭ್ ಅವರು ಕಾಲಿನ ಮೂಳೆಮುರಿತವಾಗಿದ್ದರೂ ಬ್ಯಾಟಿಂಗ್ ಮಾಡಿದರು. ಕೊನೆಯ ಟೆಸ್ಟ್‌ನ ಕಡೆ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್‌ನ ಕೊನೆಯ ಬ್ಯಾಟರ್ ಕ್ರಿಸ್ ವೋಕ್ಸ್ ತಮ್ಮ ಮುರಿದ ಕೈಗೆ ಬ್ಯಾಂಡೇಜ್ ಹಾಕಿಕೊಂಡೇ ಕ್ರೀಸ್‌ಗೆ ಬಂದು ಆಡಿದ್ದರು. ಅವರಿಗೆ ಫೀಲ್ಡಿಂಗ್ ರಿಪ್ಲೇಸ್‌ಮೆಂಟ್ ಆಟಗಾರನನ್ನು ಮಾತ್ರ ನೀಡಲಾಗಿತ್ತು. ಬ್ಯಾಟಿಂಗ್ ಅಥವಾ ಬೌಲಿಂಗ್ ಮಾಡಲು ಅವರಿಗೆ ಅವಕಾಶವಿರಲಿಲ್ಲ.

ಏಷ್ಯಾ ಕಪ್: ಸೂರ್ಯ ಫಿಟ್

ನವದೆಹಲಿ (ಪಿಟಿಐ): ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಏಷ್ಯಾ ಕಪ್ ಟೂರ್ನಿಗೆ ಭಾರತ ತಂಡವನ್ನು ಆಯ್ಕೆ ಮಾಡಲು ಇದೇ 19ರಂದು ಸಭೆ ಸೇರಲಿದೆ. ಈ ನಡುವೆ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್, ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಫಿಟ್ನೆಸ್ ಪರೀಕ್ಷೆಯಲ್ಲಿ ಶನಿವಾರ ತೇರ್ಗಡೆಯಾಗಿದ್ದಾರೆ.

ಐಪಿಎಲ್‌ನಲ್ಲಿ 'ಸರಣಿಯ ಸರ್ವೋತ್ತಮ'ರಾದ ಸೂರ್ಯ ನಂತರ ಯಾವುದೇ ಟೂರ್ನಿಯಲ್ಲಿ ಆಡಿರಲಿಲ್ಲ. ಹೊಟ್ಟೆಯ ಕೆಳ ಬಲಭಾಗದಲ್ಲಿ 'ಸ್ಪೋರ್ಟ್ಸ್ ಹರ್ನಿಯಾ'ಕ್ಕೆ ಅವರು ಜರ್ಮನಿಯ ಮ್ಯೂನಿಕ್‌ನಲ್ಲಿ ಜೂನ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಸೂರ್ಯ ಅವರು ಫಿಟ್ನೆಸ್ ಟೆಸ್ಟ್‌ನಲ್ಲಿ ಯಶಸ್ವಿ ಆಗಿದ್ದಾರೆ ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

34 ವರ್ಷ ವಯಸ್ಸಿನ ಸೂರ್ಯ ಅವರು ಮುಂಬೈನಲ್ಲಿ ಮಂಗಳವಾರ ಆಯ್ಕೆಸಮಿತಿ ಸಭೆಗೆ ಹಾಜರಾಗುವುದು ಖಚಿತವಾಗಿದೆ. ಏಷ್ಯಾ ಕಪ್ ಸೆಪ್ಟೆಂಬರ್ 9 ರಿಂದ 28ರವರೆಗೆ ಯುಎಇಯಲ್ಲಿ ನಡೆಯಲಿದೆ. ಭಾರತ ಸೆ. 10ರಂದು ಆತಿಥೇಯ ತಂಡವನ್ನು ಎದುರಿಸುವ ಮೂಲಕ ಅಭಿಯಾನ ಆರಂಭಿಸಲಿದೆ. ಬಹುನಿರೀಕ್ಷಿತ ಭಾರತ–ಪಾಕ್ ಪಂದ್ಯ ಸೆ. 14ರಂದು ದುಬೈನಲ್ಲಿ ನಡೆಯಲಿದೆ.

ಎಐಎಫ್‌ಎಫ್‌ಗೆ ಕ್ಲಬ್‌ಗಳ ಎಚ್ಚರಿಕೆ

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಬಿಕ್ಕಟ್ಟನ್ನು ಶೀಘ್ರ ಬಗೆಹರಿಸದೇ ಹೋದಲ್ಲಿ ಕ್ಲಬ್‌ಗಳನ್ನು ಸಂಪೂರ್ಣವಾಗಿ ಮುಚ್ಚಬೇಕಾಗುವ ಸಂಭವ ಎದುರಾಗಬಹುದು ಎಂದು ಲೀಗ್‌ನ 11 ತಂಡಗಳು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ಎಚ್ಚರಿಕೆ ನೀಡಿವೆ.

ರಾಷ್ಟ್ರೀಯ ಫೆಡರೇಷನ್ ಮತ್ತು ಐಎಸ್‌ಎಲ್ ಆಯೋಜಕರಾದ ಎಫ್‌ಎಸ್‌ಡಿಎಲ್ ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣಗೊಳ್ಳದ ಕಾರಣ ಐಎಸ್‌ಎಲ್ ಭವಿಷ್ಯ ತೂಗುಯ್ಯಾಲೆಯಲ್ಲಿದೆ. ಇದರಿಂದಾಗಿ ಭಾರತದಲ್ಲಿ ವೃತ್ತಿಪರ ಫುಟ್‌ಬಾಲ್ ಅಯೋಮಯ ಗೊಂಡಿದೆ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರಿಗೆ ಬರೆದ ಪತ್ರದಲ್ಲಿ ಕ್ಲಬ್‌ಗಳು ಬೇಸರ ವ್ಯಕ್ತಪಡಿಸಿವೆ.

ನೇಷನ್ಸ್ ಕಪ್: ಸುನಿಲ್ ಚೆಟ್ರಿಗೆ ಕೊಕ್

ಸುನಿಲ್ ಚೆಟ್ರಿ

ನವದೆಹಲಿ (ಪಿಟಿಐ): ಸಿಎಎಫ್‌ಎ ನೇಷನ್ಸ್ ಕಪ್ ಟೂರ್ನಿಗೆ ಭಾರತ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಖಾಲಿದ್ ಜಮೀಲ್ 35 ಸಂಭಾವ್ಯ ಆಟಗಾರರ ಪಟ್ಟಿಯನ್ನು ಪ್ರಕಟಿಸಿದ್ದು, ಅನುಭವಿ ಸುನಿಲ್ ಚೆಟ್ರಿ ಅವರನ್ನು ಕೈಬಿಡಲಾಗಿದೆ.

ಅಂತರರಾಷ್ಟ್ರೀಯ ನಿವೃತ್ತಿಯಿಂದ ಹಿಂತಿರುಗಿದ ನಂತರ 41 ವರ್ಷದ ಚೆಟ್ರಿ ಆಡಿದ ನಾಲ್ಕು ಪಂದ್ಯಗಳಲ್ಲಿ ನಿರೀಕ್ಷಿತ ಪ್ರದರ್ಶನ ನೀಡದ ಕಾರಣ ಅವರನ್ನು ಕೈಬಿಡಲಾಯಿತು ಎನ್ನಲಾಗಿದೆ. ತಜಿಕಿಸ್ತಾನ ಮತ್ತು ಉಜ್ಬೇಕಿಸ್ತಾನದಲ್ಲಿ ಈ ತಿಂಗಳ ಅಂತ್ಯದಲ್ಲಿ ನಡೆಯುವ ನೇಷನ್ಸ್ ಕಪ್ ಟೂರ್ನಿ ಜಮೀಲ್ ಪಾಲಿಗೆ ಮೊದಲ ಸವಾಲಾಗಿದೆ.